ಸಂಪುಟ: 9 ಸಂಚಿಕೆ: 333 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮೊದಲ ದಿನ 17 ವಿಕೆಟ್ ಪತನ

ಆಸ್ಟ್ರೇಲಿಯಾ ಏಟಿಗೆ ತಿರುಗೇಟು ಕೊಟ್ಟ ಟೀಮ್ ಇಂಡಿಯಾ

ಭಾರತ 150ಕ್ಕೆ ಆಲೌಟ್

ಆಸ್ಟ್ರೇಲಿಯ 7ಕ್ಕೆ 67

ಪುಟ ತೆರೆದಂತೆ...

ಅಮೆರಿಕದ 'ಇಕನಾಮಿಕ್ ಹಿಟ್‌ಮ್ಯಾನ್'
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಬಲವೃದ್ಧಿಗಾಗಿ ಸೇವಿಸಿ ಷಡ್ರಸ ಭೋಜನ
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ಮಾತಂದ್ರೆ ಮಾತು

ಸಿಎಂ ಸ್ಥಾನದ ವಿಚಾರವಾಗಿ ನನ್ನ ಆಸೆಯ ಪ್ರಶ್ನೆಯೆ ಇಲ್ಲ. ಐದು ವರ್ಷ ಕೂಡಾ ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ. ಅವರೇ ಸಿಎಂ ಅಂದ ಮೇಲೆ ನನ್ನನ್ನು ಪದೇ ಪದೇ ಏಕೆ ಕೇಟಲೆ ಮಾಡುತ್ತೀರಿ ? ಸಂಪುಟ ಪುನರಚನೆ ಸಿಎಂಗೆ ಬಿಟ್ಟಿದ್ದು. ನನ್ನ ಇಲಾಖೆ ಬಗ್ಗೆಯು ರಿಪೋರ್ಟ್ ಕಾರ್ಡ್ ಕೊಟ್ಟಿದ್ದೇನೆ. ರಿಪೋರ್ಟ್ ಕೇಳುವುದು ಪಕ್ಷದ ಆಂತರಿಕ ವಿಚಾರ.

– ಜಿ. ಪರಮೇಶ್ವರ್
ಗೃಹಸಚಿವ

ದಾರಿದೀಪೋಕ್ತಿ

ಅನೇಕ ಸಲ ಬೇರೆಯವರು ನಿಮ್ಮನ್ನು ನಂಬುತ್ತಾರೆ. ಆದರೆ ನಿಮ್ಮ ಬಗ್ಗೆ ನಿಮಗೇ ನಂಬಿಕೆ ಇರುವುದಿಲ್ಲ. ನೀವು ನಿಮ್ಮಲ್ಲಿ ನಂಬಿಕೆ ಇಟ್ಟುಕೊಂಡರೆ ಸಾಕು, ಬೇರೆಯವರು ನಂಬದಿದ್ದರೂ ಪರವಾಗಿಲ್ಲ. ಯಾವ ಕಾರಣಕ್ಕೂ ನಿಮ್ಮನ್ನು ನೀವು ಬಿಟ್ಟುಕೊಡಬಾರದು.

ವಕ್ರತುಂಡೋಕ್ತಿ

ಸಾಲ ಕೊಡುವವರು ಶ್ರೀಮಂತರೇ ಆಗಿರುತ್ತಾರೆ ಎಂದು ಭಾವಿಸಬೇಕಿಲ್ಲ. ಕಾರಣ ಶ್ರೀಮಂತರು ಯಾರಿಗೂ ಸಾಲ ಕೊಡುವುದಿಲ್ಲ.

ಬಿವೈವಿ ತಂಡದಿಂದ ರಾಜ್ಯವ್ಯಾಪಿ ಹೋರಾಟ | ದೂರ ಉಳಿದ ಯತ್ನಾಳ ಬಳಗ

ವಕ್ಫ್ ಹೋರಾಟ; ಬಣ ಬಡಿದಾಟ

ಬೆಂಗಳೂರು: ಅಧಿವೇಶನಕ್ಕೆ ದಿನ ನಿಗದಿಯಾಗಿರುವ ನಡುವೆಯೇ ರಾಜ್ಯ ಬಿಜೆಪಿಯು ವಕ್ಫ್ ವಿರುದ್ಧ ಹೋರಾಟವನ್ನು ತೀವ್ರಗೊಳಿಸಿದ್ದು, ಶುಕ್ರವಾರ ರಾಜ್ಯವ್ಯಾಪಿ ಬೀದಿಗಿಳಿದು ಪ್ರತಿಭಟನೆ ನಡೆಸಿದೆ.

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಈ ಹೋರಾಟ ನಡೆಯುತ್ತಿದ್ದು, ಬಸನಗೌಡ ಯತ್ನಾಳ ಬಣ ಇದರಿಂದ ದೂರ ಉಳಿದಿದೆ. ಇದೀಗ ಒಡೆದ ಮನೆಯಾಗಿರುವ ಬಿಜೆಪಿಯಲ್ಲಿ ಮೂರು ಬಣಗಳಾಗಿದ್ದು, ವಿಜಯೇಂದ್ರ ಬಣ ಉತ್ಸಾಹದಿಂದ ಪ್ರತಿಭಟನೆಯಲ್ಲಿ ಭಾಗವಹಿಸಿದೆ. ತಟಸ್ಥ ಬಣ ಯಾರನ್ನೂ ವಹಿಸಿಕೊಳ್ಳದ ಸಂದಿಗ್ಧದಲ್ಲಿಯೇ ಪ್ರತಿಭಟನೆಯಲ್ಲಿ ಭಾಗವಹಿಸಿದೆ. ಈ ನಡುವೆ ಯತ್ನಾಳ ಬಣದ ಸದಸ್ಯರು ಪ್ರತಿಭಟನೆಯಿಂದ ದೂರ ಉಳಿದಿದೆ.

ಈ ರೀತಿ ಪ್ರತ್ಯೇಕ ಬಣಗಳಿಂದ ನಡೆಯುತ್ತಿರುವ ಹೋರಾಟಗಳಿಂದ ಪ್ರತಿಪಕ್ಷ ಕಾಂಗ್ರೆಸ್‌ಗೆ ಆಗುತ್ತಿರುವ ಸಮಸ್ಯೆಗಿಂತ ಪಕ್ಷದಲ್ಲಿರುವ ಕೆಲ ನಾಯಕರಿಗೇ ಹೆಚ್ಚು ಸಮಸ್ಯೆಯಾಗುತ್ತಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ. ಯಾವುದೇ ಬಣದೊಂದಿಗೆ ಗುರುತಿಸಿಕೊಳ್ಳಲು ಇಚ್ಛಿಸದ ಹಲವು ನಾಯಕರು, ಯಾರ ಹೋರಾಟದಲ್ಲಿ ಭಾಗವಹಿಸಬೇಕು ಎನ್ನುವ ಗೊಂದಲಕ್ಕೆ ಬಿದ್ದಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷರಾಗಿರುವ ಕಾರಣ ವಿಜಯೇಂದ್ರ ಅವರ ನೇತೃತ್ವದಲ್ಲಿ ನಡೆಯುವ ಹೋರಾಟಗಳಲ್ಲಿ ಭಾಗವಹಿಸುವುದು ಎಲ್ಲ ನಾಯಕರಿಗೆ ಅನಿವಾರ್ಯವಾಗಿದೆ. ಆದರೆ ಭವಿಷ್ಯದಲ್ಲಿ ಏನಾಗುವುದೋ ಎಂಬ ಗೊಂದಲದಲ್ಲಿರುವ ಕೆಲವರು, 'ಯತ್ನಾಳ ಬಣ ಮೇಲುಗೈ ಸಾಧಿಸಿದರೆ' ಎನ್ನುವ ಕಾರಣಕ್ಕೆ ಅವರನ್ನೂ ಎದುರು ಹಾಕಿಕೊಳ್ಳಲು ಇಚ್ಛಿಸುತ್ತಿಲ್ಲ. ಆದ್ದರಿಂದ ಕೆಲ ನಾಯಕರು ಸಂಪೂರ್ಣವಾಗಿ ತಟಸ್ಥರಾಗಿದ್ದರೆ, ಇನ್ನು ಕೆಲ ನಾಯಕರು ಎರಡೂ ಬಣಗಳ ಹೋರಾಟದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಗೋವಿಂದ ಕಾರಜೋಳ, ವಿ.ಸೋಮಣ್ಣ ಸೇರಿ ಅನೇಕರಿಗೆ ಯತ್ನಾಳ ಬಣದಲ್ಲಿರುವ ನಾಯಕರೊಂದಿಗೆ ಆಪ್ತತೆ ಹಾಗೂ ಯಡಿಯೂರಪ್ಪ ಕುಟುಂಬದ ವಿರುದ್ಧ ಒಂದಿಲ್ಲೊಂದು ಕಾರಣಕ್ಕೆ ಅಸಮಾಧಾನವಿದೆ. ಆದರೆ ವಿಜಯೇಂದ್ರ ಸದ್ಯ ರಾಜ್ಯಾಧ್ಯಕ್ಷರಾಗಿರುವುದರಿಂದ ಅವರನ್ನು ಎದುರು ಹಾಕಿಕೊಳ್ಳುವ ಮನಸ್ಥಿತಿಯಲ್ಲಿ ಈ ನಾಯಕರಿಲ್ಲ. ಆದ್ದರಿಂದ ಯತ್ನಾಳ್ ನೇತೃತ್ವದಲ್ಲಿ ನಡೆಯುವ ಹೋರಾಟದಲ್ಲಿಯೂ ಭಾಗವಹಿಸಿ, ಇತ್ತ ರಾಜ್ಯ ಬಿಜೆಪಿಯಿಂದ ನಡೆಯುವ ಹೋರಾಟಗಳಲ್ಲಿಯೂ ಭಾಗವಹಿಸುತ್ತಿದ್ದಾರೆ.

ಎರಡೂ ಕಡೆ ಬಾಂಧವ್ಯಕ್ಕೆ ಯತ್ನ

ಬಿಜೆಪಿ ಅನೇಕ ನಾಯಕರು, ವಿಜಯೇಂದ್ರ ಅಥವಾ ಯತ್ನಾಳ್ ಗುಂಪಿನೊಂದಿಗೆ ಗುರುತಿಸಿಕೊಳ್ಳುವ ಬದಲು ಎರಡೂ ಕಡೆ ಉತ್ತಮ ಬಾಂಧವ್ಯವಿಟ್ಟುಕೊಳ್ಳುವ ಲೆಕ್ಕಾಚಾರದಲ್ಲಿದ್ದಾರೆ. ಆ ಕಾರಣಕ್ಕಾಗಿಯೇ ಅನೇಕರು, ಆರ್.ಅಶೋಕ ಹಾಗೂ ವಿಜಯೇಂದ್ರ ಹೋರಾಟದಲ್ಲಿಯೂ ಭಾಗವಹಿಸುತ್ತಾರೆ. ಅತ್ತ ಯತ್ನಾಳ, ಅರವಿಂದ ಲಿಂಬಾವಳಿ ಅವರು ನಡೆಸುವ ಸಭೆ ಹಾಗೂ ಹೋರಾಟದಲ್ಲಿ ಭಾಗವಹಿಸುತ್ತಿದ್ದಾರೆ. ಇದರೊಂದಿಗೆ ಸದ್ಯದ ಪರಿಸ್ಥಿತಿಯಲ್ಲಿ ರಾಜ್ಯ ಬಿಜೆಪಿಯಲ್ಲಿ ಬಲಾಢ್ಯರಾರು ಎನ್ನುವ ಗೊಂದಲವಿರುವುದರಿಂದ ಎರಡೂ ಬಣದೊಂದಿಗೆ ಸಮಾನವಾಗಿ ಗುರುತಿಸಿಕೊಳ್ಳುವುದೇ 'ಸುರಕ್ಷಿತ' ಎನ್ನುವ ಕಾರಣಕ್ಕೆ ಈ ರೀತಿ ಮಾಡುತ್ತಿದ್ದಾರೆ ಎಂದು ಬಿಜೆಪಿ ನಾಯಕರು ಹೇಳಿದ್ದಾರೆ.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪ್ರತಿಪಕ್ಷ ನಾಯಕ ಆರ್.ಅಶೋಕ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮತ್ತಿತರರು ಭಾಗವಹಿಸಿದ್ದರು.

ಸಚಿವೆ ಶೋಭಾ ಕರಂದ್ಲಾಜೆ ಕಿಡಿ

ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಆಯೋಜಿಸಿದ್ದ ನಮ್ಮ ಭೂಮಿ-ನಮ್ಮ ಹಕ್ಕು ಪ್ರತಿಭಟನೆಯಲ್ಲಿ ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕಾಂಗ್ರೆಸ್ ಬಹಿರಂಗ ತುಷ್ಟೀಕರಣ ಮಾಡುತ್ತಿದೆ. ಅರ್ಧ ಭಾರತದಷ್ಟು ಜಮೀನು ವಕ್ಫ್ ಬೋರ್ಡ್ ಹೆಸರಿನಲ್ಲಿದೆ ಎಂದು ಆರೋಪಿಸಿದರು. ಮೊದಲು ವಕ್ಫ್ ಬಳಿ ಇದ್ದಿದ್ದು 10 ಸಾವಿರ ಆಸ್ತಿಗಳು, ಈಗ 38 ಲಕ್ಷ ಎಕರೆ ಜಮೀನು ಆಗಿದೆ. ಅರ್ಧ ಭಾರತದಷ್ಟು ಜಮೀನು ಈಗ ವಕ್ಫ್ ಹೆಸರಲ್ಲಿದೆ. ವಕ್ಫ್ ನಿಂದ ಅಲ್ಲಾನ ಹೆಸರಲ್ಲಿ ಎಷ್ಟು ಬಡವರಿಗೆ ದಾನ ಕೊಟ್ಟಿದ್ದಾರೆ ಹೇಳಲಿ. ರೈತರ, ಮಠ, ಮಂದಿರಗಳ ಜಮೀನಿನ ಮೇಲೆ ವಕ್ಫ್ ಕಣ್ಣು ಹಾಕಿದೆ, ಇದಕ್ಕೆ ನಮ್ಮ ತಕರಾರು ಇದೆ ಎಂದರು.

ವಕ್ಫ್ ಟ್ರಿಬ್ಯೂನಲ್ ನಲ್ಲಿ ಯಾರಿಗೂ ನ್ಯಾಯ ಸಿಕ್ಕಿಲ್ಲ. ಯಾಕಂದರೆ ಅವರು ಕೇಸ್ ನಡೆಸುವುದಿಲ್ಲ. ಒಂದು ಧರ್ಮದ ಮತ ರಾಜಕಾರಣಕ್ಕಾಗಿ ಕಾಂಗ್ರೆಸ್ ಓಲೈಕೆ ರಾಜಕೀಯ ಮಾಡುತ್ತಿದೆ. ಎಂ.ಬಿ.ಪಾಟೀಲ್ ವಕ್ಫ್ ಅನ್ಯಾಯ ವಿಚಾರದಲ್ಲಿ ಹಗುರವಾಗಿ ಮಾತಾಡುತ್ತಾರೆ. ಅವರ ಕ್ಷೇತ್ರದಲ್ಲೂ ಊರಿಗೆ ಊರೇ ವಕ್ಫ್ ಆಸ್ತಿ ಆಗಿದೆ. ರಾಜ್ಯದಲ್ಲಿ ಚಾಲುಕ್ಯರು, ಚೋಳರು, ಹೊಯ್ಸಳರ ಕಾಲದ ದೇವಸ್ಥಾನಗಳ ಆಸ್ತಿ ವಕ್ಫ್ ತನ್ನ ಹೆಸರಲ್ಲಿ ಮಾಡಿಕೊಂಡಿದ್ದು, ಇದು ಒಂದು ಖತರ್ನಾಕ್ ಬೋರ್ಡ್ ಎಂದು ಆಕ್ರೋಶ ಹೊರಹಾಕಿದರು.

ರಾಜ್ಯದ ವಿವಿಧೆಡೆ ಹೋರಾಟ

ಬೆಂಗಳೂರಿನಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸೇರಿದಂತೆ ಪ್ರಮುಖರು ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆಯಲ್ಲಿ ನಡೆಸಿ ಜಮೀರ್ ರಾಜೀನಾಮೆಗೆ ಒತ್ತಾಯಿಸಿದರು. ಮೈಸೂರಲ್ಲಿ ಸಂಸದ ಯದುವೀರ್ ಒಡೆಯರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ ಸಿಂಹ ಸೇರಿ ಹಲವು ಮುಖಂಡರು ಭಾಗಿಯಾಗಿದ್ದರು. ಚಿಕ್ಕೋಡಿಯ ಎ.ಸಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಂಡಿದ್ದು, ಸಂಪಾದನಾ ಚರಮೂರ್ತಿ ಮಠದ ಶ್ರೀಗಳ ನೇತೃತ್ವದಲ್ಲಿ ಕಾಂಗ್ರೆಸ್ ವಿರುದ್ಧ ಹೋರಾಟ ನಡೆಯಿತು. ಪ್ರತಿಭಟನೆಯಲ್ಲಿ ನಿಪ್ಪಾಣಿ ಶಾಸಕಿ ಮಾಜಿ ಸಚಿವೆ ಶಶಿಕಲಾ ಜೊಲ್ಲೆ ಹಾಗೂ ಸ್ಥಳೀಯ ನಾಯಕರು ಭಾಗಿಯಾಗಿದ್ದರು.

ಮಂಗಳೂರಿನಲ್ಲಿ ವಕ್ಫ್ ಅಕ್ರಮದ ವಿರುದ್ಧ ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ವತಿಯಿಂದ ನಗರದ ಟೌನ್‌ಹಾಲ್ ಮುಂಭಾಗ ಗಾಂಧಿ ಪ್ರತಿಮೆ ಎದುರು ಹೋರಾಟ ನಡೆಯಿತು. ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಸ್ಥಳೀಯ ಮುಖಂಡರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ದಾವಣಗೆರೆ ಮಹಾನಗರ ಪಾಲಿಕೆ ಕಚೇರಿ ಮುಂಭಾಗ ಪ್ರತಿಭಟನೆ ನಡೆಯಿತು. ಸಂತ ಸೇವಾಲಾಲ್ ಸ್ವಾಮೀಜಿ, ಮಾಜಿ ಸಚಿವರಾದ ಎಂ ಪಿ ರೇಣುಕಾಚಾರ್ಯ, ರವೀಂದ್ರನಾಥ, ಬಿಜೆಪಿ ಜಿಲ್ಲಾಧ್ಯಕ್ಷ ಎನ್ ರಾಜಶೇಖರ್, ಮಾಜಿ ಶಾಸಕ ಬಸವರಾಜ್ ನಾಯ್ಕ್ ಸೇರಿದಂತೆ ಸ್ಥಳೀಯ ಮುಖಂಡರು, ಕಾರ್ಯಕರ್ತರು ಭಾಗಿಯಾಗಿದ್ದರು.

ಡಿಸೆಂಬರ್ ಮೊದಲ ವಾರದಲ್ಲಿ ಪ್ರವಾಸ

ವಕ್ಫ್ ವಿವಾದ ಸಂಬಂಧ ಬಿಜೆಪಿಯಲ್ಲಿ 3 ತಂಡ ಈಗಾಗಲೇ ರಚಿಸಿಲಾಗಿದೆ. ಕೇಂದ್ರದ ಸಚಿವರು, ಮಾಜಿ ಮುಖ್ಯಮಂತ್ರಿಗಳು, ಹಿರಿಯರು, ವರಿಷ್ಠರು ಸೇರಿ 3 ತಂಡಗಳು ಕಾರ್ಯ ನಿರ್ವಹಿಸುತ್ತವೆ. ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರತಿಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಈ 3 ತಂಡಗಳ ನೇತೃತ್ವ ವಹಿಸುತ್ತಿದ್ದಾರೆ. ಈ ತಂಡಗಳು ಡಿಸೆಂಬರ್ ಮೊದಲ ವಾರದಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಲಿವೆ. ರೈತರು, ಮಠಾಧೀಶರು ಸೇರಿ ತೊಂದರೆಗೆ ಒಳಗಾದವರಿಂದ ಮಾಹಿತಿ ಪಡೆಯಲಿವೆ. ಚಳಿಗಾಲದ ಅಧಿವೇಶನದಲ್ಲಿ ವಿವರ ಮಂಡಿಸಿ, ಜನರ ಸಮಸ್ಯೆ ಪರಿಹಾರಕ್ಕೆ ಪ್ರಯತ್ನ ಮಾಡಲಿದೆ.

ಸಂಸತ್ ಅಧಿವೇಶನದಲ್ಲಿ ನ್ಯಾಯ: ಸಂಸತ್ ಅಧಿವೇಶನದಲ್ಲಿ ವಕ್ಫ್ ವಿಚಾರ ಚರ್ಚೆಗೆ ಬಂದೇ ಬರುತ್ತೆ, ಆಗ ನ್ಯಾಯ ಸಿಕ್ಕೇ ಸಿಗುತ್ತದೆ. ಭೂಮಿ ಸರ್ವರ್ ಡೌನ್ ಉದ್ದೇಶಪೂರ್ವಕ. ಪಹಣಿ ದಾಖಲೆ ಹುಡುಕುತ್ತಿದ್ದಾರೆ ರೈತರು ಅಂತ ಸರ್ಕಾರ ಸರ್ವರ್ ಡೌನ್ ಮಾಡಿಸಿದೆ. ಲ್ಯಾಂಡ್ ಜಿಹಾದ್, ಲ್ಯಾಂಡ್ ಟೆರರಿಸಂ ವಿರುದ್ಧ ನಮ್ಮ ಹೋರಾಟ ಮುಂದುವರೆಯಲಿದೆ ಎಂದು ಶೋಭಾ ಕರಂದ್ಲಾಜೆ ಹೇಳಿದರು.

ಚನ್ನಪಟ್ಟಣ, ಶಿಗ್ಗಾವಿ, ಸಂಡೂರು ಅಭ್ಯರ್ಥಿಗಳ ಭವಿಷ್ಯ ನಿರ್ಧಾರ

ಮಹಾ, ಜಾರ್ಖಂಡ್: ಇಂದು ಫಲಿತಾಂಶ

ದೆಹಲಿ: ಮಹಾರಾಷ್ಟ್ರ, ಜಾರ್ಖಂಡ್ ರಾಜ್ಯಗಳ ವಿಧಾನಸಭಾ ಚುನಾವಣೆ ಫಲಿತಾಂಶ ಸೇರಿ ದಂತೆ ದೇಶದ ವಿವಿಧ ರಾಜ್ಯಗಳಲ್ಲಿನ ವಿಧಾನ ಸಭೆ ಮತ್ತು ಲೋಕಸಭೆ ಉಪಚುನಾವಣೆಯ ಫಲಿತಾಂಶ ಇಂದು ಪ್ರಕಟವಾಗಲಿದೆ.

ಶನಿವಾರ ಬೆಳಗ್ಗೆ 8 ಗಂಟೆಗೆ ಮಹಾರಾಷ್ಟ್ರ ಹಾಗೂ ಜಾರ್ಖಂಡ್ ರಾಜ್ಯಗಳ ವಿಧಾನ ಸಭೆಯ ಚುನಾವಣೆ ಮತ ಎಣಿಕೆ ನಡೆಯಲಿದೆ. ಮಹಾರಾಷ್ಟ್ರಕ್ಕೆ ನವೆಂಬರ್ 20ರಂದು ಏಕಕಾಲಕ್ಕೆ ಚುನಾವಣೆ ನಡೆದಿತ್ತು. ಜಾರ್ಖಂಡ್ ರಾಜ್ಯದಲ್ಲಿ ನವೆಂಬರ್ 13 ಮತ್ತು 20ರಂದು 2 ಹಂತದಲ್ಲಿ ಮತದಾನ ನಡೆದಿತ್ತು.

ಕೇರಳದ ವಯನಾಡ್ ಮತ್ತು ಮಹಾರಾಷ್ಟ್ರದ ನಾಂದೇಡ್ ಲೋಕಸಭಾ ಕ್ಷೇತ್ರಕ್ಕೆ ಉಪಚುನಾವಣೆ ನಡೆದಿತ್ತು. ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ಸ್ಪರ್ಧೆ ಮಾಡಿರುವುದರಿಂದ ಈ ಕ್ಷೇತ್ರ ಗಮನ ಸೆಳೆದಿದೆ.

ದೇಶದ 14 ರಾಜ್ಯಗಳಲ್ಲಿನ 48 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಮತ ಎಣಿಕೆ ಸಹ ನಾಳೆ ನಡೆಯಲಿದೆ. ಕರ್ನಾಟಕದ ಚನ್ನಪಟ್ಟಣ, ಶಿಗ್ಗಾವಿ ಹಾಗೂ ಸಂಡೂರು ಕ್ಷೇತ್ರಗಳು ಇದರಲ್ಲಿ ಸೇರಿವೆ.

ಉತ್ತರಪ್ರದೇಶ 9, ರಾಜಸ್ಥಾನ 7, ಪಶ್ಚಿಮ ಬಂಗಾಳ 6, ಅಸ್ಸಾಂ 5, ಬಿಹಾರ 4, ಪಂಜಾಬ್ 4, ಕರ್ನಾಟಕ 3, ಕೇರಳ 2, ಮಧ್ಯಪ್ರದೇಶ 2, ಸಿಕ್ಕಿಂ 2 ಹಾಗೂ ಛತ್ತೀಸ್‌ಗಢ, ಗುಜರಾತ್, ಮೇಘಾಲಯ, ಉತ್ತರಾಖಂಡ್ ರಾಜ್ಯಗಳ ತಲಾ ಒಂದು ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ.

ಪ್ರಜ್ವಲ್ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಬೆಂಗಳೂರು: ಹಾಸನ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಶುಕ್ರವಾರ ವಜಾಗೊಳಿಸಿತು.

ನಿರೀಕ್ಷಣಾ ಜಾಮೀನು ಕೋರಿ ಪ್ರಜ್ವಲ್ ಸಲ್ಲಿಸಿದ್ದ ಅರ್ಜಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾ.ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಪ್ರಕಟಿಸಿತು.

ಪ್ರಕರಣದ ಹಿನ್ನೆಲೆ: ಹಾಸನದಲ್ಲಿ 2021ರಲ್ಲಿ ಬಿಸಿಎಂ ಹಾಸ್ಟೆಲ್‌ನಲ್ಲಿ ಬಾಲಕಿಯರಿಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸುವ ಕುರಿತು ಚರ್ಚಿಸಲು ನಾನು ಪ್ರಜ್ವಲ್ ಅವರ ಕಚೇರಿಗೆ ತೆರಳಿದ್ದೆ. ಆ ವೇಳೆ ಅವರು ನನಗೆ ಗನ್ ತೋರಿಸಿ, ಬೆದರಿಸಿ ಅತ್ಯಾಚಾರ ಎಸಗಿದ್ದರು. ಈ ಕೃತ್ಯವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಆನಂತರ ಹಲವು ಬಾರಿ ವಿಡಿಯೊ ಕರೆ ಮಾಡಿ ನಗ್ನವಾಗುವಂತೆ ಸೂಚಿಸಿ, ವಿಡಿಯೊ ರೆಕಾರ್ಡ್ ಮಾಡಿ ಕೊಂಡಿದ್ದರು. ಈ ವಿಚಾರವನ್ನು ಬಹಿ ರಂಗಪಡಿಸಿದರೆ ಗಂಭೀರ ಕ್ರಮದ ಬೆದರಿಕೆ ಹಾಕಿದ್ದರು ಎಂದು ಸಂತ್ರಸ್ತೆ ದೂರು ನೀಡಿದ್ದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂಬಂಧ ವೇದಿಕೆ ನಿರ್ಮಾಣ ಸಂಬಂಧ ಕಾಮಗಾರಿ ಕೈಗೊಳ್ಳಲು ಮಂಡ್ಯ ಸ್ಯಾಂಜೋ ಆಸ್ಪತ್ರೆ ಹಾಗೂ ಅಮರಾವತಿ ಹೋಟೆಲ್ ಹಿಂಭಾಗದ 60 ಎಕರೆ ಜಾಗದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.

ನಬಾರ್ಡ್‌ನಿಂದ ರಾಜ್ಯದ ರೈತರಿಗೆ ಪರಮ ಅನ್ಯಾಯ: ಸಿಎಂ ಸಿದ್ದರಾಮಯ್ಯ

ಅದಾನಿಯನ್ನು ಏಕೆ ಬಂಧಿಸುತ್ತಿಲ್ಲ?

ಮೈಸೂರು: ಅರೆಸ್ಟ್ ವಾರೆಂಟ್ ಬಂದಿದ್ದರೂ ಅದಾನಿಯನ್ನು ಏಕೆ ಬಂಧಿಸುತ್ತಿಲ್ಲ? ಅವರನ್ನು ರಕ್ಷಿಸುತ್ತಿರುವವರು ಯಾರು? ಅದಾನಿಯನ್ನು ತಕ್ಷಣ ಬಂಧಿಸಬೇಕು. ತಪ್ಪಿಸಿಕೊಳ್ಳಲು ಬಿಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅದಾನಿಗೆ ರಕ್ಷಣೆ ಕೊಡುತ್ತಿರುವವರು ಯಾರು ಎನ್ನುವುದು ದೇಶಕ್ಕೇ ಗೊತ್ತಿದೆ. ನಿಮಗೆ ಗೊತ್ತಿಲ್ವಾ? ಈ ಸತ್ಯವನ್ನು ಮಾಧ್ಯಮಗಳು ದೇಶದ ಜನರಿಗೆ ಏಕೆ ತೋರಿಸುತ್ತಿಲ್ಲ? ಎಂದು ಪ್ರಶ್ನಿಸಿದರು. ರೈತರಿಗೆ ರಿಯಾಯಿತಿ ಬಡ್ಡಿದರದಲ್ಲಿ ಕೊಡುವ ಸಾಲದ ಮೊತ್ತವನ್ನು ನಬಾರ್ಡ್ ಈ ಬಾರಿ ರಾಜ್ಯಕ್ಕೆ ಶೇ.58ರಷ್ಟು ಕಡಿತಗೊಳಿಸಿದೆ. ಇದು ರಾಜ್ಯದ ರೈತರಿಗೆ ಮಾಡಿದ ಪರಮ ಅನ್ಯಾಯ ಎಂದು ದೂರಿದರು.

- ಮೊದಲಿಗೆ ರಾಜ್ಯದ ಜನರಿಗೆ ಏಳು ಕೆಜಿ ಅಕ್ಕಿ ಕೊಟ್ಟವರು ನಾವು. ಇದನ್ನು ಐದು ಕೆಜಿಗೆ ಇಳಿಸಿದ್ದು ಯಡಿಯೂರಪ್ಪ. ಈಗ ಯಡಿಯೂರಪ್ಪ ಅವರ ಮಗ ವಿಜಯೇಂದ್ರನಿಗೆ ಈ ಬಗ್ಗೆ ಮಾತಾಡಲು ಯಾವ ನೈತಿಕತೆ ಇದೆ?
- ಸರ್ಕಾರಿ ನೌಕರರಿಗೆ, ಆದಾಯ ತೆರಿಗೆ ಪಾವತಿಸುವವರಿಗೆ ಬಿಪಿಎಲ್ ಕಾರ್ಡ್ ಕೊಡಬಾರದು ಅಂತ ನಿಯಮಾವಳಿ, ಮಾನದಂಡ ರಚಿಸಿದ್ದೇ ಬಿಜೆಪಿ. ಈಗ ಇವರೇ ಪ್ರತಿಭಟನೆ ಅಂತ ಫೋಟೊ ತೆಗೆಸಿಕೊಳ್ತಾ ಇದಾರೆ.

ರಾಜ್ಯದ ರೈತರಿಗೆ ಕೇಂದ್ರ ಸರಕಾರ ಅನ್ಯಾಯ ಮಾಡಿದ್ದು ಸರಿ ಎಂದು ಜೋಶಿ ಹೇಳಿದ್ದರೆ ಮಣ್ಣಿನ ಮಗ, ರೈತರ ಮಗ ಅಂದುಕೊಂಡಿರುವ ಕುಮಾರಸ್ವಾಮಿಯವರು ಉಸಿರೇ ಬಿಡುತ್ತಿಲ್ಲವಲ್ಲ ಏಕೆ? ಎಂದು ಕೇಳಿದರು.

6 ಕೋಟಿ ರು. ಮೌಲ್ಯದ ಮಾದಕ ವಸ್ತು ಜಪ್ತಿ

ಬೆಂಗಳೂರು: ಮಾದಕ ವಸ್ತು ಸಾಗಾಟ ಜಾಲ ಪತ್ತೆ ಹಚ್ಚಲಾಗಿದ್ದು, ಪ್ರತ್ಯೇಕ ಪ್ರಕರಣದಲ್ಲಿ ಒಟ್ಟು 6 ಕೋಟಿ ರು. ಮೌಲ್ಯದ ಮಾದಕ ವಸ್ತುವನ್ನು ಪೊಲೀಸರು ಮತ್ತು ಸಿಸಿಬಿ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಹೊಸ ವರ್ಷಾಚರಣೆಗೆ ಕ್ವಿಂಟಾಲ್‌ಗಟ್ಟಲೇ ಗಾಂಜಾ ಪೂರೈಕೆ ಮಾಡುತ್ತಿದ್ದ ಆರೋಪಿಗಳಾದ ಚ್ಚು, ಜಮೀರ್ ಮತ್ತು ರೇಷ್ಮಾ ದಂಪತಿಯನ್ನು ಬೆಂಗಳೂರಿನ ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿ, 3.25 ಕೋಟಿ ರು. ಮೌಲ್ಯದ 318 ಕೆಜಿ ಗಾಂಜಾ ಜಪ್ತಿ ಮಾಡಿದ್ದಾರೆ.

ಛತ್ತೀಸಗಢದಲ್ಲಿ ಮತ್ತೆ 10 ನಕ್ಸಲೀಯರ ಹತ್ಯೆ

ಸುಕ್ಮಾ: ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಶುಕ್ರವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ 10 ನಕ್ಸಲರು ಹತರಾಗಿದ್ದಾರೆ.ನಕ್ಸಲರ ಮೃತದೇಹಗಳನ್ನು ಹೊರತೆಗೆಯಲಾಗಿದೆ. ಅಲ್ಲದೆ ಇನ್ಸಾಸ್ ರೈಫಲ್, ಎಕೆ-47 ರೈಫಲ್, ಎಸ್‌ಎಲ್‌ಆರ್ ರೈಫಲ್ ಸೇರಿದಂತೆ ಶಸ್ತ್ರಾಸ್ತ್ರ ಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರದೇಶದಲ್ಲಿ ಜಿಲ್ಲಾ ಪೊಲೀಸ್ ಮೀಸಲು ಪಡೆ ಹಾಗೂ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಕಾರ್ಯಾಚರಣೆ ಮುಂದುವರಿದಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಉಪಚುನಾವಣೆ – ಚುನಾವಣೋತ್ತರ ಸಮೀಕ್ಷೆ

ಹೆಡ್‌ಮಾಸ್ತರ್, ಬಿಇಒ ಮೇಲೆ ಕ್ರಮ ಕೈಗೊಳ್ಳಿ ಅಂದಿದ್ದೆ: ವರಸೆ ಬದಲಿಸಿದ ಸಚಿವ

ವಿದ್ಯಾರ್ಥಿ ವಿರುದ್ಧ ಕ್ರಮಕ್ಕೆ ಸೂಚಿಸಿಲ್ಲ

ಬೆಂಗಳೂರು: 'ಶಿಕ್ಷಣ ಸಚಿವರಿಗೆ ಕನ್ನಡ ಬರಲ್ಲ' ಎಂದ ವಿದ್ಯಾರ್ಥಿ ವಿರುದ್ಧ ಕ್ರಮ ಕೈಗೊಳ್ಳಲು ಸೂಚನೆ ನೀಡಿದ ಸಚಿವ ಮಧು ಬಂಗಾರಪ್ಪ ಕ್ರಮಕ್ಕೆ ರಾಜ್ಯಾದ್ಯಂತ ಭಾರಿ ವಿರೋಧ ವ್ಯಕ್ತವಾಗುತ್ತಿದ್ದಂತೆ, ತಾವು ವಿದ್ಯಾರ್ಥಿ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಮಾತನಾಡಿಲ್ಲ, ಪ್ರಾಂಶುಪಾಲರು, ಬಿಇಒ ಮೇಲೆ ಕ್ರಮ ಕೈಗೊಳ್ಳಿ ಎಂದಿದ್ದೆ ಎಂದು ವರಸೆ ಬದಲಿಸಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರು, ಈ ಸಂಬಂಧ ಪ್ರಶ್ನಿಸಿದಾಗ, ಗರಂ ಆಗಿಯೇ ಪ್ರತಿಕ್ರಿಯಿಸಿದ ಸಚಿವರು, ''ನಾನು ವಿದ್ಯಾರ್ಥಿ ಮೇಲೆ ಕ್ರಮ ಕೈಗೊಳ್ಳಿ ಎಂದು ಎಲ್ಲಿ ಹೇಳಿದ್ದೆ, ನಾನು ಹೇಳಿರೋದು ಹೆಡ್ ಮಾಸ್ಟರ್, ಬಿಇಒ ಮೇಲೆ, ಅವರು ಜವಾಬ್ದಾರಿ ತೆಗೆದುಕೊಳ್ಳ ಬೇಕು, ವಿದ್ಯಾರ್ಥಿ ಮೇಲೆ ಕ್ರಮ ತಗೊಳ್ಳೋಕೆ ನನಗೇನು ಅಧಿಕಾರ ಇದೆ, ಪ್ರಾಂಶುಪಾಲರು, ಉಪನ್ಯಾಸಕರು ಮಕ್ಕಳನ್ನು ಹತೋಟಿಯಲ್ಲಿ ಡಬೇಕು, ಅಂದು 640 ಶಾಲೆಗಳು ಲೈವ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವು. 50 ಸಾವಿರ ಮಕ್ಕಳು ಲೈವ್‌ನಲ್ಲಿ ನೋಡುತ್ತಿದ್ದರು. ಸರಕಾರದಿಂದ ಮಕ್ಕಳ ಭವಿಷ್ಯಕ್ಕೆ ಮಾಡುತ್ತಿರುವ ಒಂದು ದೊಡ್ಡ ಯೋಜನೆಯದು. ಆ ಯೋಜನೆ ಬಗ್ಗೆ ದೊಡ್ಡ ಮಟ್ಟದಲ್ಲಿ ಪ್ರಚಾರ ನೀಡುವ ಬದಲು ಯಾರೋ ಒಬ್ಬ ವಿದ್ಯಾರ್ಥಿ, ವಿದ್ಯಾಮಂತ್ರಿಗೆ ಕನ್ನಡ ಮಾತನಾಡಲು ಬರೋದಿಲ್ಲ ಎಂದು ಹೇಳಿದ್ದನ್ನೇ ಹೈಲೈಟ್ ಮಾಡ್ತೀರಾ, ನಿಮ್ಮ ಮಕ್ಕಳು ಈ ರೀತಿ ಮಾಡಿದ್ದರೆ ಮನೆಯಲ್ಲಿ ಬುದ್ಧಿ ಹೇಳುತ್ತಿರಲಿಲ್ಲವೇ, ನಾನಾದ್ರೆ ನನ್ನ ಮಗನಿಗೆ ಬುದ್ಧಿ ಹೇಳುತ್ತಿದ್ದೆ ಎಂದು ಹೇಳಿದರು.

ಸಚಿವರ ನಡೆಗೆ ಸಾಮಾಜಿಕ ಜಾಲತಾಣದಲ್ಲಿ ಬಂದ ಟೀಕೆಗೆ ಪ್ರತಿಕ್ರಿಯಿಸಿದ ಅವರು, ''ನೀವು ಟ್ರೋಲ್ ಮಾಡಿದರೆ ನನಗೇನು? ಅದಕ್ಕೆಲ್ಲ ನಾನ್ ತಲೆ ಕೆಡಿಸಿಕೊಳ್ಳುವುದಿಲ್ಲ. ಟ್ರೋಲ್ ಮಾಡೋರಿಗೆ ಉದ್ಯೋಗ ಇಲ್ಲ, ಅದಕ್ಕೆಲ್ಲ ತಲೆ ಕೆಡಿಸಿಕೊಳ್ಳೋ ನಾನಲ್ಲ, ನಾನೊಬ್ಬ ಶಿಕ್ಷಣ ಸಚಿವ. ನಾಗೇಶ್ ನನ್ನನ್ನು ದಡ್ಡ ಅಂದರು. ಈ ದಡ್ಡನನ್ನು ಜನ ಗೆಲ್ಲಿಸಿದರು, ಬುದ್ಧಿವಂತರನ್ನು ಸೋಲಿಸಿದರು ಎಂದರು. ಆದರೆ ನಿಮ್ಮ ಮಕ್ಕಳು ಈ ರೀತಿ ಮಾಡೋದು ಸರಿಯೇ? ನನ್ನ ಸ್ವಂತ ಮಕ್ಕಳಂತೆ ಶಾಲಾ ಮಕ್ಕಳನ್ನು ನೋಡ್ತೇನೆ. ಸಿಇಟಿ ಕಾರ್ಯಕ್ರಮ ಎಂತಹ ದೊಡ್ಡದು. ಅಂತಹದ್ದನ್ನು ನೀವು ತೋರಿಸಿ, ಟ್ರೋಲ್ ಮಾಡಿ ನನ್ನನ್ನು ಬಗ್ಗಿಸೋಕೆ ಸಾಧ್ಯವಿಲ್ಲ''ಎಂದರು.

ಪದೇ ಪದೇ ಈ ರೀತಿ ನನಗೆ ಕನ್ನಡ ಬರೋದಿಲ್ಲ ಎಂದು ಹೇಳೋದನ್ನು ನಿಲ್ಲಿಸಬೇಕು, ನನಗೆ ಸರಕಾರದಲ್ಲಿ ಜವಾಬ್ದಾರಿಯುತ ಶಿಕ್ಷಣ ಮಂತ್ರಿ ಸ್ಥಾನ ಕೊಟ್ಟಿದ್ದಾರೆ. ನೀವು ಪುಕ್ಸಟೆ ಟ್ರೋಲ್ ಮಾಡಿದ್ರೆ ನನಗೇನಾಬೇಕಾಗಿದೆ, ಮಧು ಬಂಗಾರಪ್ಪ ಮಧು ಬಂಗಾರಪ್ಪನೇ ಆಗಿರ್ತಾನೆ, ವಿಪಕ್ಷದವರು ಯಾರು ಏನೇ ಟೀಕೆ ಮಾಡಿದ್ರೂ, ಐ ಡೋಂಟ್ ಕೇರ್, ನಿನ್ನೆ ಬಸವರಾಜ ಹೊರಟ್ಟಿಯವರು ನನಗೆ ಫೋನ್ ಮಾಡಿ ಕರೆಕ್ಟ್ ಮಾಡಿದ್ದೀಯ ಮಧು ಎಂದರು. ನಾನು ನನ್ನ ಅಧಿಕಾರವನ್ನು ಇಲ್ಲಿ ಚಲಾಯಿಸಿದ್ದೇನೆ.

– ಮಧು ಬಂಗಾರಪ್ಪ, ಶಿಕ್ಷಣ ಸಚಿವ

ಶಾಸಕರಿಗೆ ಅಸಮಾಧಾನವಿಲ್ಲ

ಅನುದಾನ ವಿಚಾರದಲ್ಲಿ ಶಾಸಕರ ಅಸಮಾಧಾನ ವಿಚಾರವಾಗಿ ಪ್ರತಿಕ್ರಿಯಿಸಿ, ಯಾವ ಅಸಮಾಧಾನವೂ ಇಲ್ಲ. ನಮ್ಮ ಸರಕಾರ ಹೆಚ್ಚಿನ ಅನುದಾನ ಕೊಟ್ಟಿದೆ. ನಾನು ಸೊರಬಕ್ಕೆ ಹೆಚ್ಚಿನ ಬಸ್ ತಂದಿದ್ದೇನೆ. ಸಾರಿಗೆ ಇಲಾಖೆ ಹೆಚ್ಚು ಬಸ್ ಖರೀದಿಸಿದೆ. ಅನುದಾನವಿಲ್ಲದೇ ಇದನ್ನು ಮಾಡೋಕೆ ಆಗುತ್ತಾ? ಗ್ಯಾರಂಟಿಗಳಿಗೆ ನಾವು ಎಲ್ಲ ಲೆಕ್ಕಾಚಾರ ಹಾಕಿದ್ದೆವು. ನಾನು ಗ್ಯಾರಂಟಿ ಉಪಾಧ್ಯಕ್ಷನಾಗಿದ್ದೆ. ಆಗ ಯಾವುದಕ್ಕೆ ಎಷ್ಟು ಅಂತ ಲೆಕ್ಕ ಹಾಕಿದ್ದೆವು. ಹಾಗಾಗಿ ಅದರ ಮೇಲೆ ಏನೂ ಸಮಸ್ಯೆಯಾಗುವುದಿಲ್ಲ, ಶಾಸಕರಿಗೂ ಹೆಚ್ಚಿನ ಅನುದಾನ ಸಿಗುತ್ತಿದೆ ಎಂದರು.

ಪ್ರಾಸಿಕ್ಯೂಷನ್: ಡಿ.5ಕ್ಕೆ ವಿಚಾರಣೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ತಮ್ಮ ಕುಟುಂಬಸ್ಥರಿಗೆ ಬದಲಿ ನಿವೇಶನ ಪಡೆದ ಪ್ರಕ್ರಿಯೆಯಲ್ಲಿ ಅಕ್ರಮ ಎಸಗಿದ ಆರೋಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ರಾಜ್ಯಪಾಲರ ಕ್ರಮ ಎತ್ತಿ ಹಿಡಿದಿದ್ದ ಹೈಕೋರ್ಟ್ ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿರುವ ಮೇಲ್ಮನವಿ ಅರ್ಜಿ ವಿಚಾರಣೆಯು ಡಿಸೆಂಬರ್ 5ರಂದು ನಡೆಯಲಿದೆ.

ವಾಲ್ಮೀಕಿ ಹಗರಣ ಸಿಬಿಐಗೆ ನೋಟಿಸ್

ಬೆಂಗಳೂರು: ವಾಲ್ಮೀಕಿ ನಿಗಮದ ಹಗರಣದ ತನಿಖೆಯನ್ನು ಹೈಕೋರ್ಟ್ ಮೇಲ್ವಿಚಾರಣೆಯಲ್ಲಿ ನಡೆಸುವಂತೆ ಸಿಬಿಐಗೆ ನಿರ್ದೇಶನ ನೀಡಬೇಕು ಎಂದು ಕೋರಿ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಸಿಬಿಐಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ಮುಂದೂಡಿದೆ.

1300 ಪುಟಗಳ ಮತ್ತೊಂದು ಆರೋಪಪಟ್ಟಿ ಸಿದ್ಧ

ರೇಣುಕಾಸ್ವಾಮಿ ಕೊಲೆ: ಹೆಚ್ಚುವರಿ ಆರೋಪಪಟ್ಟಿ ಸಲ್ಲಿಸಲು ಸಿದ್ಧತೆ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, ನಟ ದರ್ಶನ್ ಮತ್ತು ಸಹವರ್ತಿಗಳ ವಿರುದ್ಧ ಹೆಚ್ಚುವರಿ ಆರೋಪ ಪಟ್ಟಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಪ್ರಕರಣದ ಸಂಬಂಧ ಈಗಾಗಲೇ 4 ಸಾವಿರ ಪುಟಗಳ ಆರೋಪಪಟ್ಟಿ ಸಲ್ಲಿಸಿರುವ ಪೊಲೀಸರು, ಇದೀಗ 30ಕ್ಕೂ ಹೆಚ್ಚು ಜನರ ಸಾಕ್ಷಿಗಳು, ಎಫ್‌ಎಸ್‌ಎಲ್ ಹಾಗೂ ಇತರ ತಾಂತ್ರಿಕ ತನಿಖೆಯ ದಾಖಲೆಗಳು ಸೇರಿ 40ಕ್ಕೂ ಹೆಚ್ಚು ಸಾಕ್ಷ್ಯಗಳನ್ನೊಳಗೊಂಡ 1300 ಪುಟಗಳ ಹೆಚ್ಚುವರಿ ಆರೋಪಪಟ್ಟಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಹತ್ಯೆ ನಡೆದ ಶೆಡ್‌ನಲ್ಲಿ ನಟ ದರ್ಶನ್, ಪವಿತ್ರಾ ಗೌಡ ಹಾಗೂ ಇತರರು ಇದ್ದರು ಎಂಬುದಕ್ಕೆ ಹೆಚ್ಚುವರಿ ಆರೋಪಪಟ್ಟಿಯಲ್ಲಿ ಸಾಕ್ಷ್ಯಗಳನ್ನು ಉಲ್ಲೇಖಿಸಲಾಗಿದೆ. ಆರೋಪಿ ಪವನ್ ಎಂಬಾತನ ಮೊಬೈಲ್‌ನಲ್ಲಿದ್ದ ಕೆಲವು ಫೋಟೋಗಳನ್ನು ರಿಟ್ರೀವ್ ಮಾಡಲಾಗಿದ್ದು, ಅವುಗಳ ಮೂಲಕ ಘಟನಾ ಸ್ಥಳದಲ್ಲಿ ದರ್ಶನ್ ಇದ್ದರು ಎಂಬುದು ಸಾಬೀತಾಗಿದೆ. ಘಟನೆ ಬಳಿಕ ಪವನ್ ತನ್ನ ಮೊಬೈಲ್‌ನಲ್ಲಿದ್ದ ಫೋಟೋ ಗಳನ್ನು ಡಿಲೀಟ್ ಮಾಡಿದ್ದ. ಆದರೆ, ಆತನ ಮೊಬೈಲ್ ವಶಕ್ಕೆ ಪಡೆದು ರಿಟ್ರೀವ್ ಮಾಡಿದಾಗ ಫೋಟೋಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದರು.

ಪ್ರಕರಣದ ಹಿನ್ನೆಲೆ

ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ ನಟ ದರ್ಶನ್, ಪವಿತ್ರಾಗೌಡ ಸೇರಿದಂತೆ ಹಲವರ ವಿರುದ್ಧ ಪೊಲೀಸರು ಈಗಾಗಲೇ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. ಬಳ್ಳಾರಿ ಜೈಲಿನಲ್ಲಿದ್ದ ನಟ ದರ್ಶನ್‌ಗೆ ಬೆಂಗಳೂರಿನ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯಗಳು ಜಾಮೀನು ತಿರಸ್ಕರಿಸಿದ್ದ ಹಿನ್ನೆಲೆಯಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಬೆನ್ನುಹುರಿ ನೋವಿನಿಂದ ಬಳಲುತ್ತಿದ್ದು, ಅಗತ್ಯ ಚಿಕಿತ್ಸೆ ಪಡೆಯಲು ಜಾಮೀನು ಮಂಜೂರು ಮಾಡಬೇಕು ಎಂದು ಅರ್ಜಿಯಲ್ಲಿ ಕೋರಿದ್ದರು. ಬಳಿಕ ದರ್ಶನ್ ಆರೋಗ್ಯ ತಪಾಸಣೆಗಾಗಿ ಹೈಕೋರ್ಟ್ 6 ವಾರಗಳ ಕಾಲ ಷರತ್ತುಬದ್ಧ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಸದ್ಯ ಜಾಮೀನಿನ ಮೇಲೆ ದರ್ಶನ್ ಹೊರಗಿದ್ದಾರೆ.

ಸಮಾಚಾರ ಸಣ್ಣದಲ್ಲ

ಜ್ಞಾನಸಿರಿ ಕ್ಯಾಂಪಸ್‌ಗೆ ಸಾರಿಗೆ ಬಸ್ ಸೌಲಭ್ಯ

ತುಮಕೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆಯ ನೂತನ ಜ್ಞಾನಸಿರಿ ಕ್ಯಾಂಪಸ್‌ಗೆ ಸಾರಿಗೆ ಸೇವೆ ಕಲ್ಪಿಸಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ. ತುಮಕೂರು ನಗರ ಬಸ್ ನಿಲ್ದಾಣದಿಂದ ಜ್ಞಾನಸಿರಿ ಕ್ಯಾಂಪಸ್‌ಗೆ ಬೆಳಿಗ್ಗೆ 8:30ರಿಂದ ಸಂಜೆ 5:30ರವರೆಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ಸಾರಿಗೆ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬೇಕೆಂದು ಅವರು ಮನವಿ ಮಾಡಿದ್ದಾರೆ.

ಪದಾಧಿಕಾರಿಗಳ ಅಧಿಕಾರ ಸ್ವೀಕಾರ



ಮದ್ದೂರು: ತಾಲೂಕು ಸರಕಾರಿ ನೌಕರ ಸಂಘದ ತಾಲೂಕು ರವೀಶ್ (ಅಧ್ಯಕ್ಷ), ಟಿ.ಡಿ.ಸತೀಶ್‌ಕುಮಾರ್ (ಕಾರ್ಯದರ್ಶಿ), ಟಿ.ಎಲ್.ಸುರೇಶ್ (ಖಜಾಂಚಿ), ಪಿ.ಪೂರ್ಣಚಂದ್ರ (ರಾಜ್ಯ ಪರಿಷತ್ ಕಾರ್ಯದರ್ಶಿ) ಪದಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸಿದರು. ಸಂಘದ ಕಚೇರಿಯಲ್ಲಿ ಆಯೋಜಿಸಿದ್ದ ಪದಗ್ರಹಣದಲ್ಲಿ ಶಾಸಕ ಕೆ.ಎಂ.ಉದಯ ಅವರ ಅಧ್ಯಕ್ಷತೆಯಲ್ಲಿ ಅಧಿಕಾರ ಸ್ವೀಕರಿಸಿದರು. ಅಭಿನಂದಿಸಿ ಮಾತನಾಡಿದ ಶಾಸಕರು, ಸರಕಾರಿ ನೌಕರರು ಸಾರ್ವಜನಿಕರ ಕೆಲಸ ಕಾರ್ಯಗಳನ್ನು ತ್ವರಿತ ಗತಿಯಲ್ಲಿ ನಿರ್ವಹಿಸಬೇಕೆಂದು ಕಿವಿಮಾತು ಹೇಳಿದರು. ನಿರ್ಗಮಿತ ಅಧ್ಯಕ್ಷ ರವಿ, ಸಂಘದ ಜಿಲ್ಲಾಧ್ಯಕ್ಷ ನಾಗೇಶ್ ಮಾತನಾಡಿದರು. ಈ ವೇಳೆ ಬಿಇಒ ಸಿ.ಎಚ್.ಕಾಳೀರಯ್ಯ, ವಿವಿಧ ಇಲಾಖೆ ಅಧಿಕಾರಿಗಳಾದ ಶಿವನಂಜೇಗೌಡ, ತಮ್ಮೇಗೌಡ, ಪರಮೇಶ್, ನಾರಾಯಣ್, ರಮೇಶ್, ಉಮೇಶ್, ಮಂಜುನಾಥ್ ಇದ್ದರು.

ಕನ್ನಡ ರಾಜ್ಯೋತ್ಸವ ಆಚರಣೆ ಇಂದು

ತುಮಕೂರು: ಶ್ರೀಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಶನ್(ಸಾಹೇ) ಅಂಗ ಸಂಸ್ಥೆಯ ಸಿದ್ಧಾರ್ಥ ಮಹಾವಿದ್ಯಾಲಯದ ವತಿಯಿಂದ ನ.23ರಂದು ಕನ್ನಡ ರಾಜ್ಯೋತ್ಸವನ್ನು ಎಸ್‌ಎಸ್‌ಐಟಿ ಕಾಲೇಜು ಕ್ಯಾಂಪಸ್‌ನಲ್ಲಿ ಆಯೋಜಿಸಿದೆ. ಬೆಳಗ್ಗೆ 9.30ಕ್ಕೆ ಕನ್ನಡ ಧ್ವಜಾರೋಹಣ ಮತ್ತು ವಿವಿಧ ಸ್ಪರ್ಧೆಗಳ ಉದ್ಘಾಟನೆ ನಡೆಯಲಿದ್ದು, ಕುಲಾಧಿಪತಿ ಡಾ.ಜಿ. ಪರಮೇಶ್ವರ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಪ್ರಾಧ್ಯಾಪಕ ಡಾ.ನಾಗಭೂಷಣ ಬಗ್ಗನಡು ಹಾಗೂ ಮಿಸ್ ಯೂನಿವರ್ಸ್ ಪೆಟೀಟ್ -2024ರ ಡಾ. ಶೃತಿ ಹೆಗಡೆ ವಿಶೇಷ ಆಹ್ವಾನಿತರಾಗಲಿದ್ದಾರೆ. ಉಪಕುಲಪತಿ ಡಾ. ಕೆ.ಬಿ ಲಿಂಗೇಗೌಡ, ಸಾಹೇ ವಿ.ವಿಯ ಕುಲಸಚಿವ ಡಾ.ಎಂ.ಝಡ್ ಕುರಿಯನ್, ಪರೀಕ್ಷಾಂಗ ನಿಯಂತ್ರಕ ಡಾ.ಜಿ. ಗುರುಶಂಕರ್, ಕುಲಾಧಿಪತಿಗಳ ಸಲಹೆಗಾರರಾದ ಡಾ.ವಿವೇಕ್ ವೀರಯ್ಯ, ಪ್ರಾಂಶುಪಾಲ ಡಾ.ಎಂ.ಎಸ್.ರವಿಪ್ರಕಾಶ, ಭಾಗವಹಿಸಲಿದ್ದಾರೆ.

ರಾಜ್ಯ ಪತ್ರಕರ್ತರ ಕ್ರೀಡಾಕೂಟ ನಾಳೆ

ತುಮಕೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಮಹಾನಗರಪಾಲಿಕೆ ಹಾಗೂ ಕರ್ನಾಟಕ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಸಹಯೋಗದಲ್ಲಿ ನವೆಂಬರ್ 24ರಂದು ಬೆಳಿಗ್ಗೆ 10 ಗಂಟೆಗೆ ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ಪತ್ರಕರ್ತರ ಕ್ರೀಡಾಕೂಟವಿದೆ. ಬೆಳಗ್ಗೆ 8 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯದಿಂದ ಕ್ರೀಡಾಜ್ಯೋತಿಯ ಭವ್ಯ ಮೆರವಣಿಗೆ ನಡೆಯಲಿದೆ. ರೈಲ್ವೆ ಖಾತೆ ಕೇಂದ್ರ ಸಚಿವ ವಿ.ಸೋಮಣ್ಣ ಅವರ ಘನ ಉಪಸ್ಥಿತಿಯಲ್ಲಿ ಗೃಹ ಸಚಿವ ಡಾ.ಜಿ. ಪರಮೇಶ್ವರ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ. ಸಹಕಾರ ಸಚಿವ ಕೆ.ಎನ್.ರಾಜಣ್ಣ ಸಾಧಕರನ್ನು ಸನ್ಮಾನಿಸಲಿದ್ದು, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಕ್ರಿಕೆಟ್ ತಂಡದ ಮಾಜಿ ಆಟಗಾರ ದೊಡ್ಡಗಣೇಶ್, ನವದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ರಾಜ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಶಾಸಕ ಎಸ್.ಆರ್.ಶ್ರೀನಿವಾಸ್, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಸಂಘದ ಜಿಲ್ಲಾಧ್ಯಕ್ಷ ಚಿ.ನಿ. ಪುರುಷೋತ್ತಮ್ , ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪಾಲ್ಗೊಳ್ಳಲಿದ್ದಾರೆ.

ಸೋಮವಾರ

{ ಸಿದ್ದರಾಮಯ್ಯ } ಮುಖ್ಯಮಂತ್ರಿ

ಕೇಂದ್ರ ಸರಕಾರವೇ ಬಿಪಿಎಲ್ ಕಾರ್ಡ್ ರದ್ದುಗೊಳಿಸಿದೆ. ಈಗ ಅವರೇ ರಾಜ್ಯದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಇದೆಂಥಾ ದ್ವಂದ್ವ? ಆಹಾರ ಭದ್ರತಾ ಕಾಯಿದೆ ಜಾರಿ ಮಾಡಿದ್ದು ಪ್ರಧಾನಿ ಮನಮೋಹನ್ ಸಿಂಗ್. ಆಗ ಇದನ್ನು ಬಿಜೆಪಿ ವಿರೋಧಿಸಿತ್ತು. ಈಗ ಬಿಜೆಪಿಯವರೇ ಅನ್ಯಾಯ - ಅನ್ಯಾಯ ಎಂದು ನಾಟಕವಾಡುತ್ತಿದ್ದಾರೆ.

ಸಾಧನೆಗೆ ಪರಿಶ್ರಮ, ಸ್ಪಷ್ಟತೆ ಅಗತ್ಯ

ವಿಷ್ಣುಪ್ರಿಯ ಕಾಲೇಜಿನಲ್ಲಿ 'ಗ್ರಾಜ್ಯುಯೇಷನ್ ಡೇ' | ಶಾಸಕ ಪ್ರದೀಪ್ ಈಶ್ವರ್‌ಚಾಲನೆ

ಚಿಕ್ಕಬಳ್ಳಾಪುರ: ವಿದ್ಯಾರ್ಥಿಗಳೇ ಆಗಿರಲಿ, ಯುವಕರೇ ಆಗಿರಲಿ ತಾನು ಏನಾಗಬೇಕು ಎಂಬ ಬಗ್ಗೆ ಸ್ಪಷ್ಟತೆ ಇಟ್ಟುಕೊಂಡು ಪರಿಶ್ರಮದ ಜತೆಗೆ ಗುರುಗಳ ಮಾರ್ಗದರ್ಶನವಿದ್ದರೆ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ ಎಂದು ಶಾಸಕ ಪ್ರದೀಪ್ ಈಶ್ವರ್ ತಿಳಿಸಿದರು.

ನಗರದ ಹೊರವಲಯ ವಿಷ್ಣುಪ್ರಿಯ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ಗ್ರಾಜುಯೇಷನ್ ಡೇ ಮತ್ತು ಫ್ರೆಶ್ಸ್ ಡೇ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನದಲ್ಲಿ ಸುಖವನ್ನು ಅಪೇಕ್ಷಿಸಿದರೆ ಸಾಧಕರ ಸಾಲಿನಲ್ಲಿ ನಿಲ್ಲಲ್ಲು ಸಾಧ್ಯವಾಗುವುದಿಲ್ಲ. ಶೈಕ್ಷಣಿಕ ಜೀವನ ಹೂವಿನ ಹಾಸಿಗೆಯಂತಲ್ಲ, ಬದಲಿಗೆ ಮುಳ್ಳಿನ ಹಾದಿಯಂತಿರುತ್ತದೆ.ಯಾರು ಇಂತಹ ಕಠಿಣ ಹಾದಿಯನ್ನು ಯಶಸ್ವಿಯಾಗಿ ಕ್ರಮಿಸಿ ಮುಂದೆ ಸಾಗುತ್ತಾರೋ ಅವರಿಗೆ ಮಾತ್ರ ಗೋಲ್ಡ್‌ನ್ ಲೈಫ್ ದೊರೆಯಲಿದೆ ಎಂದರು.

ವಿದ್ಯಾರ್ಥಿಗಳೇ ಉನ್ನತ ಶಿಕ್ಷಣದ ನಂತರ ಉದ್ಯೋಗ ಹುಡುಕಿಕೊಂಡು ಕಂಪನಿಗಳ ಬಳಿ ಉದ್ಯೋಗಕ್ಕೆ ಅಲೆಯದೆ ಸ್ವಯಂ ಉದ್ಯೋಗ ಕೈಗೊಂಡು ಉಧ್ಯಮಪತಿಗಳಾಗಲು ಗುರಿಯಿಟ್ಟುಕೊಳ್ಳಿ.ನನ್ನಂತೆ ಹಳ್ಳಿಯಿಂದ ಬಂದು ನಗರ ಸೇರಿ ಸಂಸ್ಥೆಯನ್ನು ಕಟ್ಟಿದಂತೆ ನೀವೂ ಕೂಡ ಮಾಡಲು ಸಾಧ್ಯವಿದೆ. ನೀವೇ ನಾಲ್ಕು ಮಂದಿಗೆ ಉದ್ಯೋಗ ಕೊಟ್ಟಾಗ ಸಿಗುವ ನೆಮ್ಮದಿ ಕೆಲಸ ಮಾಡಿದಾಗ ದೊರೆಯುವುದಿಲ್ಲ.ಈ ಸಾಮರ್ಥ್ಯವನ್ನು ಬೆಳೆಸಿಕೊಳ್ಳಿ ಎಂದರು.

ಮಕ್ಕಳೇ ಅಪ್ಪ ಅಮ್ಮನ ಕಷ್ಟವನ್ನು ಅರ್ಥಮಾಡಿಕೊಂಡು ಅವರಿಗೆ ಗೌರವ ಬರುವ ಹಾಗೆ ನಡೆದುಕೊಳ್ಳಿ.ಪೋಷಕರ ಪರಿಶ್ರಮ ಗೌರವಿಸುವುದು ಭಾರತೀಯ ಸಂಸ್ಕೃತಿಯಾಗಿದೆ.

ಕಾಲೇಜು ಶಿಕ್ಷಣ ಮುಗಿಯುತ್ತಿದ್ದಂತೆ ಉದ್ಯೋಗಕ್ಕೆ ಸಾಕಷ್ಟು ಅವಕಾಶಗಳಿವೆ. ಪ್ರೀತಿ ಪ್ರೇಮದಲ್ಲಿ ಬಿದ್ದು ಭವಿಷ್ಯ ಹಾಳು ಮಾಡಿಕೊಳ್ಳದೆ,ಸಮಾಜಕ್ಕೆ ಆದರ್ಶವಾಗುವ ಹಾಗೆ ಬದುಕುವುದು ಕಲಿಯಿರಿ.ನಾನು ಪರಿಶ್ರಮ ಅಕಾಡೆಮಿಯಲ್ಲಿ ದುಡಿದ ನನ್ನ ಸ್ವಂತ ಸಂಪಾದನೆಯಲ್ಲಿ ಬಡಮಕ್ಕಳಿಗೆ ವಿದ್ಯಾದಾನ ಮಾಡುತ್ತಿದ್ದೇನೆ.ಇದರ ಬಗ್ಗೆ ನನಗೆ ಹೆಮ್ಮೆಯಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ನಟರಾಜ್, ಕಾರ್ಯಕಾರಿ ನಿರ್ದೇಶಕ ರಕ್ಷಿತ್‌ರೆಡ್ಡಿ,ಸಂಸ್ಥೆಯ ಅಧ್ಯಕ್ಷ ರಾಮಚಂದ್ರರೆಡ್ಡಿ, ಕಾರ್ಯದರ್ಶಿ ಶ್ಯಾಮಲಾರೆಡ್ಡಿ ಬೋಧಕ ಬೋಧಕೇತರ ಸಿಬ್ಬಂದಿ ಇದ್ದರು.

ನಗರದ ವಿಷ್ಣು ಪ್ರಿಯ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ಗ್ರಾಜುಯೇಷನ್ ಡೇ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಶಾಸಕ ಪ್ರದೀಪ್ ಈಶ್ವರ್ ಮಾತನಾಡಿದರು.

ಪ್ರೀತಿಸಿ ಕೈ ಕೊಡುವವರ ಸಂಖ್ಯೆಯೇ ಅಧಿಕ...!

ಅಪ್ಪ ಹೆಣ್ಣು ಮಕ್ಕಳನ್ನು ಸದಾಕಾಲ ಗಾಡಿಯಲ್ಲಿ ಮುಂದೆ ಕೂಡಿಸಿಕೊಂಡು ಜಗತ್ತನ್ನು ಕಾಣಿಸಿದರೆ, ಮದುವೆಯಾದ ಮೇಲೆ ಗಂಡ ಹಿಂದೆ ಕೂರಿಸಿಕೊಂಡು ನೀನು ಯಾವಾಗಲೂ ನನ್ನ ಹಿಂದೆಯೇ ಇರಬೇಕು ಎನ್ನುತ್ತಾರೆ. ಇದನ್ನು ಅರ್ಥ ಮಾಡಿಕೊಂಡು ಜೀವನದಲ್ಲಿ ಮುನ್ನಡೆಯುವುದನ್ನು ಕಲಿಯಬೇಕು. ಪ್ರೀತಿ ಪ್ರೇಮದಲ್ಲಿ ವಿಫಲವಾದ ತಕ್ಷಣ ತಂದೆತಾಯಿಗಳಿಗೆ ನೋವು ಕೊಡಬೇಡಿ. ಪ್ರೀತಿಸಿ ನಂತರ ಕೈ ಕೊಡುವವರರೇ ಅಧಿಕ. ಈ ಸತ್ಯ ಮನಗಂಡು ಯಾವ ಬದುಕು ಬೇಕೋ ಅದನ್ನು ಆರಿಸಿಕೊಳ್ಳಿ ಎಂದು ಪ್ರದೀಪ್ ಈಶ್ವರ್ ಕಿವಿಮಾತು ಹೇಳಿದರು.

ಅಗ್ರಹಾರ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಪುಷ್ಪ ಆಯ್ಕೆ

ಕೊರಟಗೆರೆ: ತಾಲೂಕಿನ ಜೆಟ್ಟಿಅಗ್ರಹಾರ ಗ್ರಾಪಂ ಅಧ್ಯಕ್ಷರ ಚುನಾವಣೆಯಲ್ಲಿ ಪುಷ್ಪ ರವಿಕುಮಾರ್‌ಅವರು ಸರ್ವ ಸದಸ್ಯರ ಒಮ್ಮತದಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾದ ತಹಸೀಲ್ದಾರ್ ಕೆ.ಮಂಜುನಾಥ್

ಘೋಷಣೆ ಮಾಡಿದರು. ಪುಷ್ಪ ಅವರು ಒಬ್ಬರೆ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷೆಯಾಗಿ ಸರಸ್ವತಿ ಮಂಜುನಾಥ್ ಮುಂದುವರೆಯಲಿದ್ದಾರೆ.

ನೂತನ ಅಧ್ಯಕ್ಷೆ ಪುಷ್ಪರವಿಕುಮಾರ್ ಮಾತನಾಡಿ, ನಮ್ಮಗ್ರಾಪಂ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮಗಳ ಅಭಿವೃದ್ಧಿಗಾಗಿ ಸರ್ವ ಸದಸ್ಯರ ಜೊತೆಗೂಡಿ ಶ್ರಮಿಸುತ್ತೇವೆ. ಊರಿನ ಗ್ರಾಮಸ್ಥರ ಸಹಕಾರದಿಂದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದ್ದು, ಇದೇರೀತಿ ಎಲ್ಲರ ಸಹಕಾರ ಪಡೆದು ಗ್ರಾಮಗಳ ಅಭಿವೃದ್ಧಿಯತ್ತ ಗಮನ ಹರಿಸುತ್ತೇನೆಎಂದು ತಿಳಿಸಿದರು.

ಗ್ರಾಪಂ ಸದಸ್ಯ ಸಿ.ಡಿ. ಪ್ರಭಾ ಕರ್ ಮಾತನಾಡಿದರು. ತಹಶೀಲ್ದಾರ್ ಮಂಜುನಾಥ್ ಮಾತನಾಡಿ, ಎಲ್ಲಾ ಸದಸ್ಯರ ಒಪ್ಪಿಗೆಯಂತೆ ಪುಷ್ಪರವಿ ಕುಮಾರ್ ಅಧ್ಯಕ್ಷರನ್ನಾಗಿ ಅವಿರೋಧವಾ ಆಯ್ಕೆ ಮಾಡಿದ್ದಾರೆ ಎಂದು ತಿಳಿಸಿದರು.

ಗ್ರಾಪಂ ಪಿಡಿಒ ಮುನಿಯಪ್ಪ, ಮಾಜಿ ಅಧ್ಯಕ್ಷೆ ಗೀತಾ ಮಂಜುನಾಥ್, ರತ್ನಮ್ಮ ರಮೇಶ್, ಸದಸ್ಯರಾದ ದ್ರಾಕ್ಷಣಮ್ಮ, ಕರಿಯಣ್ಣ, ನರಸಿಂಹ ಮೂರ್ತಿ, ಸಿದ್ದಗಂಗಮ್ಮ, ರುದ್ರಣಮ್ಮ, ನವೀನ್‌ಕುಮಾರ್, ಮಾರುತಿ, ಶೈಲಾಜ, ಗೋವಿಂದಪ್ಪ, ಮಧುಸೂದನ್, ಎ ಆರ್ ಬಸವರಾಜು, ಮಹೇಶ್, ಮಂಜುನಾಥ್ ಇದ್ದರು.

ಕೊರಟಗೆರೆ ತಾಲೂಕಿನ ಜೆಟ್ಟಿ ಅಗ್ರಹಾರ ಗ್ರಾಪಂ ಅಧ್ಯಕ್ಷರಾಗಿ ಪುಷ್ಪ ರವಿಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಕ್ಫ್ : ಬಿಜೆಪಿಯಿಂದ ಜಾಗೃತಿ ಆಂದೋಲನ

ಹಾಸನ: ವಕ್ಫ್ ಆಸ್ತಿ ಕಬಳಿಕೆ ವಿರೋಧಿಸಿ, ಇದಕ್ಕೆ ರಾಜ್ಯ ಸರಕಾರವೇ ನೇರ ಹೊಣೆ ಎಂದು ಆರೋಪಿಸಿ ನಗರದಲ್ಲೂ ಜಿಲ್ಲಾ ಬಿಜೆಪಿ ವತಿಯಿಂದ ನಮ್ಮ ಭೂಮಿ, ನಮ್ಮ ಹಕ್ಕು ಶೀರ್ಷಿಕೆಯಡಿ ಜನ ಜಾಗೃತಿ ಆಂದೋಲನ ಹಮ್ಮಿಕೊಳ್ಳಲಾಗಿತ್ತು.

ನಗರದ ಡಿಸಿ ಕಚೇರಿ ಆವರಣದಲ್ಲಿ ಧರಣಿ ನಡೆಸಿ ವಕ್ಫ್ ನ ಸಮಸ್ಯೆಗೆ ಸಿಲುಕಿರುವವರಿಂದ ಅಹವಾಲು ಸ್ವೀಕರಿಸಲಾಯಿತು.

ಈ ವೇಳೆ ಮಾತನಾಡಿದ ಮಾಜಿ ಅಧ್ಯಕ್ಷರಾದ ನವಿಲೆ ಅಣ್ಣಪ್ಪ, ರೇಣುಕುಮಾರ್, ಸರಕಾರ ಒಂದು ಸಮುದಾಯವನ್ನು ಓಲೈಸಲು ಹಿಂದೂಗಳಿಗೆ ತೊಂದರೆ ಕೊಡುತ್ತಿದೆ ಎಂದು ಆರೋಪಿಸಿದರು.

ಇಷ್ಟೆಲ್ಲಾ ಗೊಂದಲಗಳಿಗೆ ಕಾರಣರಾಗಿರುವ ವಕ್ಫ್ ಸಚಿವ ಜಮೀರ್ ಅವರನ್ನು ಕೂಡಲೇ ಸಚಿವ ಸಂಪುಟದಿಂದ ವಜಾ ಮಾಡಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಹಾಸನದಲ್ಲಿ ಜಿಲ್ಲಾ ಬಿಜೆಪಿ ವತಿಯಿಂದ ನಮ್ಮ ಭೂಮಿ, ನಮ್ಮ ಹಕ್ಕು ಶೀರ್ಷಿಕೆಯಡಿ ಜನ ಜಾಗೃತಿ ಆಂದೋಲನ ನಡೆಯಿತು.

ಸಿಎಂ ಸಿದ್ದರಾಮಯ್ಯ ಅವರು ಇಡೀ ನಾಡಿಗೆ, ಸಮಸ್ತ ಜನರಿಗೆ ಮುಖ್ಯಮಂತ್ರಿ ಎಂಬುದನ್ನು ಮರೆತು ಕೆಲ ಸಚಿವರ ತಾಳಕ್ಕೆ ಕುಣಿಯುವ ಮೂಲಕ ಹಿಂದೂ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ ಎಂದು ದೂರಿದರು. ಬಿಜೆಪಿ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ ಮಾತನಾಡಿ, ಭೂಮಿ ನಂಬಿ ಬದುಕುತ್ತಿರುವ ರೈತರು, ಇಂದು ಪಹಣಿ ಯಾರ ಹೆಸರಿನಲ್ಲಿದೆ ಎಂದು ಹುಡುಕುವಂತೆ ಮಾಡಿರುವುದು ನಿಜಕ್ಕೂ ದುರದೃಷ್ಟಕರ ಎಂದರು. ತಣ್ಣೀರುಹಳ್ಳ ಮಠದ ಶ್ರೀವಿಜಯಕುಮಾರ ಸ್ವಾಮೀಜಿ, ನುಗ್ಗೇಹಳ್ಳಿಯ ಅಮ್ಮೇನಹಳ್ಳಿ ಪುರವರ್ಗ ಹಿರೇಮಠದ ಡಾ. ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಬೆಂಬಲ ಸೂಚಿಸಿದ್ದರು. ಪ್ರತಿಭಟನೆಯಲ್ಲಿ ರೈತಮೋರ್ಚಾ ಜಿಲ್ಲಾಧ್ಯಕ್ಷ ನಾರಾಯಣಗೌಡ,' ಅಮಿತ್ ಶೆಟ್ಟಿ, ಗಿರೀಶ್, ಮುಖಂಡರಾದ ವೇಣುಗೋಪಾಲ್, ಆರ್.ಮೋಹನ್ ಕುಮಾರ್, ಮಂಜು, ವೇದಾವತಿ ಇದ್ದರು.

ಜಿಲ್ಲೆಯ 800 ಎಕರೆ ಜಮೀನು ಪಹಣಿ ವಕ್ಫ್‌ಗೆ ಸೇರಿದೆ

ವಕ್ಫ್: ಸಿಬಿಐ ತನಿಖೆಗೆ ಬಿಜೆಪಿ ಆಗ್ರಹ

ಕೋಲಾರ: ಜಿಲ್ಲೆಯಲ್ಲಿ 800 ಎಕರೆ ರೈತರ ಜಮೀನನ್ನು ವಕ್ಫ್‌ಗೆ ಪಹಣಿ ಮಾಡಿರುವ ಡಿಸಿ ಅಕ್ರಂಪಾಷ ರುದ್ಧ ಕ್ರಮ ಕೈಗೊಳ್ಳಬೇಕೆಂದು ಕೂಡಾ ಮಾಜಿ ಅಧ್ಯಕ್ಷ ಓಂಶಕ್ತಿ ಚಲಪತಿ ಆಗ್ರಹಿಸಿದರು.

ನಗರದ ತಾಲೂಕು ಪಂಚಾಯತಿ ಕಚೇರಿ ಮುಂದೆ ನಡೆದ ಪ್ರತಿಭಟನೆಯಲ್ಲಿ ಮಾತನಾಡಿ, ಜಿಲ್ಲಾಧಿಕಾರಿಗಳು ಜಿಲ್ಲೆಯ ಎಲ್ಲ ಅಧಿಕಾರಿಗಳ ಮೇಲೆ ಒತ್ತಡ ತಂದು ವಕ್ಫ್ ಎಂದು ನಮೂದು ಮಾಡಿದ್ದು ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕೆಂದರು. ಜಿಲ್ಲೆಗೆ ಡಿಸಿಯವರು ಬಂದ ದಿನದಿಂದಲೂ ಒಂದು ಧರ್ಮದ ಪರವಾಗಿ ಕೆಲಸ ಮಾಡುತ್ತಿದ್ದು ಇವರ ಅಧಿಕಾರಾವಧಿಯಲ್ಲಿ ಮಂಜೂರಾಗಿರುವ ಭೂ ಪ್ರಕರಣಗಳ ಕುರಿತು ಸಮಗ್ರ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ವಕ್ಫ್ ಚಾರವಾಗಿ ಜಿಲ್ಲೆಯ ಜನರು ದಂಗೆ ಏಳುವ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಡಿಸಿಯವರು ನಕಲಿ ದಾಖಲೆಗಳ ಸುಳ್ಳನ್ನು ಜನರ ಮುಂದಿರಿಸಿ ನಿಜ ಎಂದು ನಂಬಿಸಲು ಮುಂದಾಗಿರುವುದು ಹಾಸ್ಯಾಸ್ಪದ ಎಂದು ಟೀಕಿಸಿದರು.

ರೈತರ ಜಮೀನನ್ನು ಕಿತ್ತು ಕೊಳ್ಳುತ್ತಿರುವುದನ್ನು ಖಂಡಿಸಿ ಮಠ-ಮಂದಿರಗಳ ಪ್ರಮುಖರೂ ಹೋರಾಟಕ್ಕೆ ಬಂದಿದ್ದಾರೆ. ಡಿಜೆ ಹಳ್ಳಿ, ಕೆಜಿ ಹಳ್ಳಿ, ಹುಬ್ಬಳ್ಳಿ ಕೇಸುಗಳನ್ನು ವಾಪಸ್ ಪಡೆದಿದ್ದು ಸರಿಯಲ್ಲ ಎಂದು ಖಂಡಿಸಿದರು.

ಮಾಜಿ ಸಂಸದ ಎಸ್.ಮುನಿಸ್ವಾಮಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ಡಾ.ವೇಣುಗೋಪಾಲ್ ರೆಡ್ಡಿ,ಮಾಜಿ ಶಾಸಕ ಸಂಪಂಗಿ, ವೆಂಕಟಮುನಿಯಪ್ಪ, ಮುಖಂಡರಾದ ಮಲ್ಲನಾಯಕನಹಳ್ಳಿ ವಾಸುದೇವ್, ಕೆಂಬೋಡಿ ನಾರಾಯಣಸ್ವಾ,ರಾಜೇಶ್ ಸಿಂಗ್, ಮಾಗೇರಿ ನಾರಾಯಣಸ್ವಾ, ಮಹೇಶ್, ಕೂಡಾ ಮಾಜಿ ಅಧ್ಯಕ್ಷ ಜಯಕುಮಾರ್, ಮಾಧ್ಯಮ ಪ್ರಮುಖ್ ಪ್ರೇಣ್ ಗೌಡ ಇದ್ದರು.

ಕೋಲಾರದಲ್ಲಿ ವಕ್ಫ್‌ವಾದ ಖಂಡಿಸಿ ಬಿಜೆಪಿಯಿಂದ ಪ್ರತಿಭಟನೆ ನಡೆಯಿತು.

ನರೇಗಾ ಕಾಮಗಾರಿಗಳಿಗೆ ಶಾಸಕ ಚಾಲನೆ

ಚಿಕ್ಕನಾಯಕನಹಳ್ಳಿ: ಸಮೀಪದ ಮೇಲನಹಳ್ಳಿ ಮೊರಾರ್ಜಿ ವಸತಿಶಾಲೆಯ ಅಭಿವೃದ್ದಿಗೆ ನರೇಗ ಯೋಜನೆಯಡಿ 36 ಲಕ್ಷ ರೂ ವೆಚ್ಚದ ವಿವಿಧ ಕಾಮಗಾರಿಗೆ ಶಾಸಕ ಸಿ.ಬಿ. ಸುರೇಶ್‌ಬಾಬು ಚಾಲನೆ ನೀಡಿದರು.

ಕಸಬಹೋಬಳಿ ಹೊನ್ನೆಬಾಗಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಮೊರಾರ್ಜಿ ವಸತಿ ಶಾಲೆಗೆ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿಯಡಿ ಕಾಂಪೌಂಡ್ ನಿರ್ಮಾಣಕ್ಕಾಗಿ 30 ಲಕ್ಷ ರು, ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಶೌಚಾಲಯ ನಿರ್ಮಿಸಲು 4 ಲಕ್ಷ ಹಾಗೂ 2 ಲಕ್ಷರೂ. ಅನುದಾನದಲ್ಲಿ ಆಟದ ಮೈದಾನದ ಕಾಮಗಾರಿಗೆ ಶಾಸಕ ಸಿ. ಸುರೇಶ್‌ಬಾಬು ಭೂಮಿ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ನಂತರ ಅವರು ಮಾತನಾಡಿ ನರೇಗ ಯೋಜನೆಯಡಿ ಸರಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳ ಕೊರತೆಯನ್ನು ನೀಗಿಸಲು ಅವಕಾಶವಿದೆ. ಗ್ರಾಮ ಪಂಚಾಯಿತಿಗಳು ಸರಕಾರಿ ಶಾಲೆಗಳನ್ನು ಗುರುತಿಸಿ ಅದಕ್ಕೆ ಬೇಕಾದ ಶೌಚಾಲಯ, ಆಟದ ಮೈದಾನ ದಂತಹ ಸೌಕರ್ಯಗಳನ್ನು ನಿರ್ವಹಿಸಬೇಕೆಂದರು.

ಈ ವೇಳೆ ಹೊನ್ನೇಬಾಗಿ ಪಂಚಾಯಿತಿ ಅಧ್ಯಕ್ಷರಾದ ಶೈಲಶಿಧರ್, ಪಿಡಿಒ ಭೈರಪ್ಪ, ಸದಸ್ಯರಾದ ನವಿಲೆಕುಮಾರ್, ಹೊನ್ನೇಬಾಗಿಯ ಎಚ್.ಎಸ್. ಸುಹಾಸ್ ಇತರರಿದ್ದರು.

ನರೇಗ ಯೋಜನೆಯಡಿ ವಿವಿಧ ಕಾಮಗಾರಿಗೆ ಶಾಸಕ ಸಿ.ಬಿ. ಸುರೇಶ್‌ಬಾಬು ಚಾಲನೆ ನೀಡಿದರು.

ಪೋಷಕರು ಮಕ್ಕಳಲ್ಲಿ ವ್ಯಕ್ತಿತ್ವ ಬೆಳೆಸಲಿ

ಚಿಕ್ಕಬಳ್ಳಾಪುರ: ವಿದ್ಯಾರ್ಥಿಗಳಲ್ಲಿ ಉತ್ತಮ ವ್ಯಕ್ತಿತ್ವ ಬೆಳೆಸುವಲ್ಲಿ ಗುರುಗಳಷ್ಟೇ ಪ್ರಧಾನ ಪಾತ್ರವನ್ನು ವಹಿಸುವವರು ಪೋಷಕರೇ ಆಗಿದ್ದಾರೆ. ಮನೆಯ ಪರಿಸರವನ್ನು ಮಕ್ಕಳಿಗೆ ಪೂರಕವಾಗಿರುವಂತೆ ನೋಡಿಕೊಳ್ಳಬೇಕು ಎಂದು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಮಂಗಳನಾಥ ಸ್ವಾಮೀಜಿ ಸಲಹೆ ನೀಡಿದರು.

ನಗರ ಹೊರವಲಯ ಬಿಜಿಎಸ್ ಕ್ಯಾಂಪಸ್ ಆವರಣದ ಪದವಿ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಸಾಂಸ್ಕೃತಿಕ ಹಾಗೂ ಸಾಂಪ್ರದಾಯಿಕ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದರು.

ನಮ್ಮ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯಲ್ಲಿ ಓದುವ ಪ್ರತಿಯೊಂದು ಮಗುವಿನಲ್ಲಿ ಭಾರತೀಯ ಜೀವನದ ಉದಾತ್ತ ಮೌಲ್ಯಗಳನ್ನು ತುಂಬಲು ಮೊದಲ ಆಧ್ಯತೆ ನೀಡಲಾಗುತ್ತಿದೆ. ಮಕ್ಕಳಲ್ಲಿ ಉತ್ತಮ ವ್ಯಕಿತ್ವವನ್ನು ಬೆಳೆಸುವುದೇ ಶಿಕ್ಷಣದ ಪ್ರಮುಖ ಉದ್ದೇಶ. ಇದು ಓದು ಬರಹಕ್ಕೆ ಮಾತ್ರ ಸೀಮಿತವಾಗಿಲ್ಲ. ಕ್ರೀಡೆಗಳು, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸೇರಿದಂತೆ ಮೌಲ್ಯಾಧಾರಿತ ಚಟುವಟಿಕೆ ಒಳಗೊಂಡಿದೆ ಎಂದರು. ಬಿಜಿಎಸ್ ಶಿಕ್ಷಣ ಸಂಸ್ಥೆಗಳ ಮುಖ್ಯ ಆಡಳಿತಾಧಿಕಾರಿ ಎನ್.ಶಿವರಾಮರೆಡ್ಡಿ ಮಾತನಾಡಿ, ವಿದ್ಯಾರ್ಥಿಗಳು ಓದಿನ ಜತೆಗೆ ಕಲೆ,ಸಾಹಿತ್ಯ, ಸಂಸ್ಕೃತಿ, ಕ್ರೀಡೆ ಪರಂಪರೆ, ಸಾಂಪ್ರದಾಯಿಕ ಚಟುವಟಿಕೆ ಮಹತ್ವ ಅರಿಯಬೇಕು.ಹಾಗೆಯೇ ಇಂತಹ ಸ್ಪರ್ಧೆಗಳಲ್ಲಿ ಸ್ವಯಂ ಪ್ರೇರಣೆಯಿಂದ ಭಾಗವಹಿಸಬೇಕು ಎಂದು ಸಲಹೆ ನೀಡಿದರು. ನಾನಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ಬಿ.ಆರ್.ವೆಂಕಟೇಶಬಾಬು ಸಿಬ್ಬಂದಿ ಇದ್ದರು.

ನಗರದ ಬಿಜಿಎಸ್ ಕ್ಯಾಂಪಸ್ ಆವರಣದ ಪದವಿ ಕಾಲೇಜಿನಲ್ಲಿ ಸಾಂಸ್ಕೃತಿಕ, ಸಾಂಪ್ರದಾಯಿಕ ದಿನಾಚರಣೆ ಕಾರ್ಯಕ್ರಮ ನಡೆಯಿತು.

28ರಂದು ಸಾರ್ವಜನಿಕ ಸಭೆ

ತುಮಕೂರು: ತಿಪಟೂರು ನಗರಸಭೆಯ 2025-26ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿ ತಯಾರಿಸಲು ಅಧ್ಯಕ್ಷ ಯಮುನಾ ಎ.ಎಸ್. ಅವರ ಅಧ್ಯಕ್ಷತೆಯಲ್ಲಿ ನ. 28ರಂದು ಬೆಳಿಗ್ಗೆ 11 ಗಂಟೆಗೆ ತಿಪಟೂರು ನಗರಸಭಾ ಸಭಾಂಗಣದಲ್ಲಿ ಸಮಾಲೋಚನಾ ಸಭೆ ಏರ್ಪಡಿಸಲಾಗಿದೆ. ನಗರದ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಹೋಟೆಲ್ ಅಸೋಸಿಯೇಷನ್, ಛತ್ರಗಳ ಮಾಲೀಕರ ಸಂಘ, ಸಿನಿಮಾ ಮಂದಿರಗಳ ಮಾಲೀಕರ ಸಂಘ, ನರ್ಸಿಂಗ್ ಹೋಮ್ಸ್ ಸಂಘ, ಶಿಕ್ಷಣ ಸಂಸ್ಥೆಯ ಸಂಘಗಳ ಪದಾಧಿಕಾರಿಗಳು, ವಕೀಲರ ಅಸೋಸಿಯೇಷನ್, ನಾಗರಿಕ ಹಿತರಕ್ಷಣಾ ಸೇವಾ ಸಮಿತಿ, ಕೈಗಾರಿಕೋದ್ಯಮಿಗಳು ಭಾಗವಹಿಸಿ, ಆಯವ್ಯಯ ತಯಾರಿಕೆಗೆ ಸಲಹೆ/ಅಭಿಪ್ರಾಯಗಳನ್ನು ನೀಡಬೇಕೆಂದು ಪೌರಾಯುಕ್ತರು ತಿಳಿಸಿದ್ದಾರೆ.

ದಾಸನಪುರ ಹೋಬಳಿ ಬಿಜೆಪಿಗೆ ನೇಮಕ

ನೆಲಮಂಗಲ: ಹೊರವಲಯದ ದಾಸನಪುರ ಹೋಬಳಿ ಬಿಜೆಪಿ ಸಮಿತಿಯ ಪ್ರಧಾನ ಕಾರ್ಯ ದರ್ಶಿಯಾಗಿ ಗಂಗೊಂಡನಹಳ್ಳಿ ಲಕ್ಷ್ಮಣ್ ಗೌಡ ಅವರನ್ನು ಯಲಹಂಕ ಗ್ರಾಮಾಂತರ ಬಿಜೆಪಿ ಅಧ್ಯ ಕ್ಷ ಎಂಜಿ ರಾಮಮೂರ್ತಿ ನೇಮಕ ಮಾಡಿ ಆದೇಶ ಪತ್ರ ನೀಡಿದರು. ಯಲಹಂಕ ಬಿಜೆಪಿ ಕಚೇರಿ ಯಲ್ಲಿ ಆದೇಶ ಪತ್ರವನ್ನು ನೀಡಿ ಅಭಿನಂದನೆ ಸಲ್ಲಿಸಲಾಯಿತು. ನೂತನ ಪ್ರಧಾನ ಕಾರ್ಯ ದರ್ಶಿ ಲಕ್ಷ್ಮಣ್ ಗೌಡ ಮಾತನಾಡಿ, ಜನಪ್ರಿಯ ಶಾಸಕರಾದ ಎಚ್ ಆರ್ ವಿಶ್ವನಾಥ್ ಹಾಗೂ ಮಂಡಲ ಅಧ್ಯಕ್ಷರಾದ ರಾಮಮೂರ್ತಿ, ಕೊಳ್ಳಿಗಾ ನಹಳ್ಳಿ ವೆಂಕಟೇಶ್ ರವರ ಮಾರ್ಗದರ್ಶನದಲ್ಲಿ ನಮ್ಮ ಹೋಬಳಿಯಲ್ಲಿ ಪಕ್ಷವನ್ನು ಮತ್ತಷ್ಟು ಸಂಘಟಿಸಲಾಗುವುದು ಎಂದರು.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ತುಮಕೂರು: ರುಡ್‌ಸೆಟ್ ಸಂಸ್ಥೆಯು ಡಿಸೆಂಬರ್ ಎರಡನೇ ವಾರದಲ್ಲಿ ಹಸು ಸಾಕಾಣಿಕೆ(ಹೈನುಗಾರಿಕೆ) ಹಾಗೂ ಎರೆಹುಳು ಗೊಬ್ಬರ ತಯಾರಿಕೆ ಕುರಿತ 10 ದಿನಗಳ ಉಚಿತ ತರಬೇತಿ ನಡೆಯಲಿದ್ದು ಗ್ರಾಮೀಣ ನಿರುದ್ಯೋಗಿ ಯುವಕರು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಡಿಸೆಂಬರ್ 6 ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊ: 9380162042 ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆ ನಿರ್ದೇಶಕ ರವಿಕುಮಾರ ತಿಳಿಸಿದ್ದಾರೆ.

ಸಾರಿಗೆ ನೌಕರರೂ ಕನ್ನಡದ ರಾಯಭಾರಿಗಳು

ಡಾ.ರಾಜ್‌ಕುಮಾರ್ ಸಂಸ್ಮರಣೆ, 69ನೇ ರಾಜ್ಯೋತ್ಸವ | ಡಾ.ಮನುಬಳಿಗಾರ್ ಚಾಲನೆ

ಚಿಕ್ಕಬಳ್ಳಾಪುರ: ವರನಟ ಡಾ.ರಾಜ್‌ಕುಮಾರ್ ಮತ್ತು ಅವರ ಕುಟುಂಬದಂತೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರು ಕೂಡ ಕನ್ನಡದ ನಿಜವಾದ ರಾಯಭಾರಿಗಳಾಗಿದ್ದಾರೆ. ಕನ್ನಡ ಕಟ್ಟುವ ಕೆಲಸ ಮಾಡುತ್ತಿದ್ದಾರೆ ಎಂದು ಕಸಾಪ ಮಾಜಿ ಅಧ್ಯಕ್ಷ ಡಾ.ಮನುಬಳಿಗಾರ್ ಹೇಳಿದರು

ನಗರದ ಕ.ರಾ.ರ.ಸಾ ಸಂಸ್ಥೆ, ಕೇಂದ್ರ ಕನ್ನಡ ಕ್ರಿಯಾ ಘಟಕ ಕಚೇರಿಯ ಆವರಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಡಾ.ರಾಜ್‌ಕುಮಾರ್ ಸಂಸ್ಮರಣೆ ಸಮಾರಂಭ ಹಾಗೂ 69ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಚಿಕ್ಕಬಳ್ಳಾಪುರ ಸಾರಿಗೆ ಸಂಸ್ಥೆಯ ಬಂಧುಗಳು ರಾಜ್‌ಕುಮಾರ್ ಬದುಕಿನ ಸ್ಮರಣೋತ್ಸವದ ಮೂಲಕ ರಾಜ್ಯೋತ್ಸವ ಆಚರಿಸುತ್ತಿರುವುದು ವಿಶೇಷ ಎಂದರು.

ರಾಜ್ಯದಲ್ಲಿ ಏನಾದರೂ ಕನ್ನಡ ಕೆಲಸ ಆಗಬೇಕಾದರೆ ರಾಜ್ ಕುಮಾರ್ ಅವರ ಅವರ ಹೆಸರಿನಲ್ಲಿ ಸಂಗೀತ ಸಂಜೆ ಕಾರ್ಯಕ್ರಮ ನಡೆಸಿದರೆ ಸಾಕಿತ್ತು. ಕುಮಾರಗಂಧರ್ವರ ರಂಗಮಂದಿರ ಕಟ್ಟಲು ಅವರನ್ನು ಬೆಳಗಾವಿಗೆ ಕರೆಸಿ ಕಾರ್ಯಕ್ರಮ ಮಾಡಿದಾಗ ನಿಮ್ಮ ಸಂಭಾವನೆ ಎಷ್ಟು ಸರ್? ಎಂದು ಕೇಳಿದರೆ, ನಯಾಪೈಸೆ ತೆಗೆದುಕೊಳ್ಳದೆ ಸಾಧಕರಿಗೆ ಗೌರವ ಸಲ್ಲಿಸಿದರು.ಇದು ನನ್ನ ಜೀವನದಲ್ಲಿ ಬಹಳ ದೊಡ್ಡ ತಿರುವನ್ನು ಕೊಟ್ಟ ಘಟನೆ ಎಂದು ಹೇಳಿದರು. ಡಾ.ರಾಜ್‌ಕುಮಾರ್ ಭಾಮೈದ ಎಸ್.ಎ.ಚೆನ್ನೇಗೌಡರು, ಡಾ.ರಾಜ್ ರಂಗ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ಮಾತೃಭಾಷೆಗೆ ನವಚೈತನ್ಯ ಮೂಡಿಸಿದ ಕನ್ನಡದ ಅನಭಿಷಿಕ್ತ ದೊರೆ ಎಂದರೆ ಡಾ.ರಾಜ್‌ಕುಮಾರ್ ಮಾತ್ರ ಎನ್ನುವುದು ಎಂದೆಂದಿಗೂ ಸತ್ಯ ಎಂದರು. ಕೇಂದ್ರ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ವ.ಚ.ಚನ್ನೇಗೌಡ ಮಾತನಾಡಿ, ಡಾ.ರಾಜ್ ಕುಮಾರ್ ಜೀವಂತವಾಗಿರುವಷ್ಟು ದಿನ ನಾಡಿನಲ್ಲಿ ಕನ್ನಡದ ಮೇಲಿನ ಪರಭಾಷಿಕರ ಆಕ್ರಮ,ಕನ್ನಡಿಗರಿಗೆ ಉದ್ಯೋಗ ವಂಚನೆ ಆಗುತ್ತಿರಲಿಲ್ಲ. ಸದಾಶಿವನಗರದಲ್ಲಿನ ದೈತ್ಯ ಪ್ರತಿಭೆ ಹೊರಗೆ ಬರುತ್ತದೆ ಎಂಬ ಭಯ ಹೊರರಾಜ್ಯದವರಿಗೆ ಇತ್ತು. ಕನ್ನಡದ ವಜ್ರ ಕವಚವಾಗಿದ್ದ ದೈತ್ಯ ಶಕ್ತಿ ಆಗಿದ್ದರು ಎಂದರು. ಈ ವೇಳೆ 13 ಮಂದಿಗೆ ಡಾ.ರಾಜ್ ರಂಗ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಘಟಕದ ಅಧ್ಯಕ್ಷ ಜಿ.ಪ್ರಕಾಶ್, ವಿಭಾಗೀಯ ಅಧ್ಯಕ್ಷ ಸುರೇಶ್ ಬಾಬು,ಗೌರವಾಧ್ಯಕ್ಷ ಎನ್.ಶ್ರೀನಿವಾಸಯ್ಯ, ಉಪಾಧ್ಯಕ್ಷ ತಿಮ್ಮೇಗೌಡ, ಮಂಜುನಾಥ್ ಇದ್ದರು.

ಚಿಕ್ಕಬಳ್ಳಾಪುರ ನಗರದ ಕ.ರಾ.ರ.ಸಾ.ಸಂಸ್ಥೆ ಆಶ್ರಯದಲ್ಲಿ ನಡೆದ ರಾಜ್ ಸ್ಮರಣೆ ಮತ್ತು ಕನ್ನಡ ರಾಜ್ಯೋತ್ಸವವನ್ನು ಮನುಬಳಿಗಾರ್ ಉದ್ಘಾಟಿಸಿದರು.

ಕನ್ನಡದಲ್ಲಿ ಡಾ.ರಾಜ್ ಮಾರ್ಗವೂ ಇದೆ

ಅವರು ಇದ್ದಿದ್ದರೇ ಕಾವೇರಿ ಗಲಾಟೆಯಾಗಲಿ, ಭಾಷಾವಿವಾದ, ಉದ್ಯೋಗ ಸಮಸ್ಯೆ, ಭಾಷಾ ಸಮಸ್ಯೆ ಬರುತ್ತಿರಲಿಲ್ಲ. ಕನ್ನಡದಲ್ಲಿ ಡಾ.ರಾಜ್ ಮಾರ್ಗವೊಂದಿದೆ. ಅವರ ಹೆಸರಿನಲ್ಲಿ ಸಂಸ್ಥೆಯ ನೌಕರರಿಗೆ ಡಾ.ರಾಜ್ ರಂಗ ಪ್ರಶಸ್ತಿ ನೀಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಚನ್ನೇಗೌಡರು ಹೇಳಿದರು.

ಅಂಬಿ ಅಭಿಮಾನಿಗಳ ಸಂಘದ ಅಧ್ಯಕ್ಷ ನಿಧನ

ಕುಣಿಗಲ್: ಪುರಸಭಾ ಸದಸ್ಯರು ಹಾಗೂ ಜಿಲ್ಲಾ ಅಂಬರೀಷ್ ಅಭಿಮಾನಿಗಳ ಸಂಘದ ಅಧ್ಯಕ್ಷರು ಆದ ಕೋಟೆ ನಾಗಣ್ಣ(52) ಹೃದಯಘಾತದಿಂದ ನಿಧನರಾಗಿದ್ದಾರೆ.

ಪಟ್ಟಣದ ಕೋಟೆ ಪ್ರದೇಶದ 15ನೇ ವಾರ್ಡಿನ ಪುರಸಭಾ ಸದಸ್ಯ ಕೋಟೆ ನಾಗಣ್ಣ(52) ಹಾಗೂ ಜಿಲ್ಲಾ ಅಂಬರೀಶ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಗಿದ್ದ ನಾಗಣ್ಣ ಹೃದಯಘಾತದಿಂದ ನಿಧನರಾದರು. ಇವರಿಗೆ ತಾಯಿ, ಪತ್ನಿ, ಇಬ್ಬರು ಮಕ್ಕಳಿದ್ದು ಅಪಾರ ಬಂದು ಬಳಗ ಅಗಲಿದ್ದಾರೆ. ಇವರಿಗೆ ನಟ ದಿ.ಅಂಬರೀಶ್ ಕುಟುಂಬದೊಂದಿಗೆ ವಿಕಟ ಬಾಂಧವ್ಯವಿದ್ದು ಪ್ರತಿ ವರ್ಷವೂ ಅಂಬರೀಶ್ ಹುಟ್ಟುಹಬ್ಬವನ್ನು ವೈಭವವಾಗಿ ಆಚರಿಸುತ್ತಿದ್ದರು.

ಶಾಸಕ ಡಾ.ಎಚ್ ಡಿ ರಂಗನಾಥ್, ಮಾಜಿ ಸಚಿವ ಡಿ ನಾಗರಾಜಯ್ಯ, ಬಿಜೆಪಿ ಮುಖಂಡ ಡಿ ಕೃಷ್ಣಕುಮಾರ್, ಎಚ್ ಡಿ ರಾಜೇಶ್ ಗೌಡ, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಏ ಸಂತೋಷ್, ಗ್ರಾಮ ದೇವತೆ ದೇವಾಲಯ ಟ್ರಸ್ಟ್ ಅಧ್ಯಕ್ಷರಾದ ಕೋಟೆ ತಿಮ್ಮಣ್ಣ , ಮಾಜಿ ಪುರಸಭಾ ಅಧ್ಯಕ್ಷ ರಂಗಸ್ವಾಮಿ, ಕೆ ಎಲ್ ಹರೀಶ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ವಿದ್ಯಾವಂತರಲ್ಲೇ ಮೌಢ್ಯ ಕಂದಾಚಾರ: ಸಿಎಂ ಬೇಸರ

'ಕ್ವೆಸ್ಟ್ ಶಿಕ್ಷಣ ಅಕಾಡೆಮಿ'ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

ಸಿಎಂ ಸಿದ್ದರಾಮಯ್ಯ ನಗರದ ಸಿದ್ದಾರ್ಥ ಎಜುಕೇಷನ್ ಸೊಸೈಟಿಯ 'ಕ್ವೆಸ್ಟ್ ಶಿಕ್ಷಣ ಅಕಾಡೆಮಿ'ಗೆ ಶುಕ್ರವಾರ ಚಾಲನೆ ನೀಡಿದರು.

ಮೈಸೂರು: ವಿದ್ಯಾವಂತರಿಂದಲೇ ಮೌಢ್ಯ, ಕಂದಾಚಾರ ಆಚರಣೆಗಳು ಹೆಚ್ಚುತ್ತಿವೆ. ಇಂಥಾ ಶಿಕ್ಷಣ ಬೇಕಾ? ಎಂದು ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು.

ನಗರದ ಸಿದ್ದಾರ್ಥ ಎಜುಕೇಷನ್ ಸೊಸೈಟಿಯ 'ಕ್ವೆಸ್ಟ್ ಶಿಕ್ಷಣ ಅಕಾಡೆಮಿ'ಗೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು.

ಬರೀ ಶಿಕ್ಷಣ ಸಿಕ್ಕರೆ ಸಾಲದು. ವೈಜ್ಞಾನಿಕತೆ, ವೈಚಾರಿಕತೆ ಇಲ್ಲದ ಶಿಕ್ಷಣದಿಂದ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ವಿಕಾಸ ಆಗಲು, ಸ್ವಾಭಿಮಾನಿಗಳಾಗಲು ಶಿಕ್ಷಣ ಅತ್ಯಗತ್ಯ. ಬಹಳ ಮಂದಿ ಶಿಕ್ಷಣ ಪಡೆದಿರುತ್ತಾರೆ, ಆದರೆ ಅವರಲ್ಲಿ ಸಾಮಾಜಿಕ ಸ್ಪಂದನೆ, ಮಾನವೀಯ ಸ್ಪಂದನೆ ಇರುವುದಿಲ್ಲ. ಶಿಕ್ಷಣ ಕಲಿತೂ ಜಾತಿವಾದಿಗಳಾಗುವುದು, ಧಾರ್ಮಿಕ ತಾರತಮ್ಯ ಪಾಲಿಸುವುದು ಮಾಡಿದರೆ ಅಂಥಾ ಶಿಕ್ಷಣದಿಂದ ಏನು ಪ್ರಯೋಜನ ಎಂದು ಪ್ರಶ್ನಿಸಿದರು.

ಶಿಕ್ಷಣ ಪ್ರತಿಯೊಬ್ಬರ ಹಕ್ಕು. ಈ ಹಕ್ಕು ಸುಮ್ಮನೆ ಬರಲಿಲ್ಲ. ಶೂದ್ರರ ರೀತಿ, ಮಹಿಳೆಯರನ್ನೂ ಸಂಪೂರ್ಣವಾಗಿ ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿ ಮೂಲೆಯಲ್ಲಿ ಇರಿಸಲಾಗಿತ್ತು. ಆದರೆ ಈಗ ನಿರಂತರ ಹೋರಾಟದ ಫಲವಾಗಿ ಶಿಕ್ಷಣದ ಹಕ್ಕು ಬಂದಿದೆ. ಈ ಶಿಕ್ಷಣ ವೈಚಾರಿಕವಾಗಿರಬೇಕು, ವೈಜ್ಞಾನಿಕವಾಗಿರಬೇಕು ಎಂದು ಆಶಿಸಿದರು.

ಬಸವಣ್ಣನವರು ಕರ್ಮ ಸಿದ್ಧಾಂತ ತಿರಸ್ಕರಿಸಿದ್ದರು. ಹಣೆಬರಹ ಅನ್ನೋದನ್ನೆಲ್ಲಾ ಧಿಕ್ಕರಿಸಿದ್ದರು. ಆದರೂ ಈಗಲೂ ಬಸವಣ್ಣನವರ ಹೆಸರಲ್ಲಿ ಕರ್ಮಸಿದ್ಧಾಂತ ಪಾಲಿಸುವ ಶಿಕ್ಷಿತರಿದ್ದಾರೆ. ಇಂಥಾ ಶಿಕ್ಷಣ ಬೇಡವೇ ಬೇಡ ಎಂದರು.

ಸವಲತ್ತುಗಳು ಎಲ್ಲರಿಗೂ ಸಿಗಬೇಕು ತಾನೇ?

ಕೆಲವರು ಮಾತ್ರ ಸಮಾಜದ ಸವಲತ್ತು ಅನುಭವಿಸಬೇಕಾ? ಪ್ರತಿಯೊಬ್ಬರಿಗೂ ಈ ಸವಲತ್ತುಗಳು ಸಿಗಬೇಕು ತಾನೇ? ಸಾಮಾಜಿಕ ತಾರತಮ್ಯ ಹೋಗಬೇಕಲ್ಲವಾ? ಬಸವಣ್ಣ ಜಾತಿ ವ್ಯವಸ್ಥೆ ವಿರುದ್ಧ ಸಂದೇಶ ಕೊಟ್ಟು 850 ವರ್ಷಗಳಾಗಿವೆ. ಆದರೆ ಇವತ್ತೂ ಅವರೆಲ್ಲಾ ಜಾತಿ ಮಾಡ್ತಾನೇ ಇದಾರೆ. ಇದು ತಪ್ಪಲ್ವಾ ಎಂದು ಸಿಎಂ ಪ್ರಶ್ನಿಸಿದರು.

ಹೇಳಿಕೊಳ್ಳೋಕೆ ವಿದ್ಯಾವಂತರು. ಆದರೆ, ಇವನು ನಮ್ ಜಾತಿಯವನಲ್ಲ, ಓಟು ಹಾಕೋದು ಬೇಡ ಅಂತಾರೆ. ಮತ್ತೆ ಕೆಲವರು ಇವನು ನಮ್ಮ ಜಾತಿಯವನು ಅದಕ್ಕೇ ಓಟು ಹಾಕಿ ಅಂತಾರೆ. ಅವನಿಗೆ ರಾಜಕೀಯ ಪ್ರಜ್ಞೆ , ತಿಳಿವಳಿಕೆ ಇದೆಯೊ, ಇಲ್ವೋ ಗೊತ್ತಿಲ್ಲ. ಕಾಳಜಿ ಇದೆಯೋ, ಇಲ್ವೋ ಗೊತ್ತಿಲ್ಲ. ಜಾತಿ ನೋಡು, ಓಟು ಹಾಕು ಅಷ್ಟೆ. ಇದಕ್ಕೆ ವಿದ್ಯೆ ಕಲಿಬೇಕಾ ಎಂದು ಪ್ರಶ್ನಿಸಿದರು.

ಸಿದ್ದಾರ್ಥ ಸಂಸ್ಥೆಯ ಅಧ್ಯಕ್ಷ, ಗೃಹ ಸಚಿವ ಜಿ.ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ , ಶಾಸಕರಾದ ತನ್ವೀರ್ ಸೇಠ್ , ಕೃಷ್ಣಮೂರ್ತಿ, ಸಂಸ್ಥೆಯ ಮುಖ್ಯಸ್ಥೆ ಕನ್ನಿಕಾ ಪರಮೇಶ್ವರ್ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ವಕ್ಫ್ ಹಿಂಪಡೆಗೆ ಬಿಜೆಪಿ ಆಗ್ರಹ

ಕೊಡಗು ಜಿಲ್ಲಾ ಬಿಜೆಪಿಯಿಂದ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಯಿತು.

ಮಡಿಕೇರಿ: ರಾಜ್ಯದಲ್ಲಿ ಗೊಂದಲ ಸೃಷ್ಟಿಸಿರುವ 'ವಕ್ಫ್ ಕಾಯಿದೆ' ಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿ ಕೊಡಗು ಜಿಲ್ಲಾ ಬಿಜೆಪಿ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ನಗರದ ಚೌಡೇಶ್ವರಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಪಕ್ಷದ ಪ್ರಮುಖರು ಹಾಗೂ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.ವಕ್ಫ್ ಕಾಯ್ದೆಗೆ ಸಂಬಂಧಿಸಿದಂತೆ ಕೇಂದ್ರ ಜಂಟಿ ಸಮಿತಿಯನ್ನು ರಚಿಸಿದ್ದು, ಅದು ಸೂಚಿಸುವ ಬದಲಾವಣೆಗಳಿಗೆ ರಾಜ್ಯ ಒಪ್ಪಿಗೆ ನೀಡಬೇಕು. ಮಡಿಕೇರಿಯ ರಾಜರ ಗದ್ದುಗೆ ಆಸ್ತಿಯ ಅತಿಕ್ರಮಣವನ್ನು ತೆರವುಗೊಳಿಸಬೇಕು. ಜಿಲ್ಲೆಯ ಸಿ ಮತ್ತು ಡಿ ಜಮೀನನ್ನು ಅರಣ್ಯವೆಂದು ಘೋಷಣೆ ಮಾಡುವ ಪ್ರಯತ್ನವನ್ನು ಕೈಬಿಡಬೇಕೆಂದು ಆಗ್ರಹಿಸಿದರು. ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರಕಾರ ಅಲ್ಪಸಂಖ್ಯಾತರನನ್ನು ಓಲೈಸಲು ವಕ್ಫ್ ಮೂಲಕ ರೈತರ ಆಸ್ತಿಯನ್ನು ಕಬಳಿಸುತ್ತಿದೆ ಎಂದು ಆರೋಪಿಸಿದರು.

ತಮ್ಮ ಮೊದಲ ಅವಧಿಯ ತಪ್ಪುಗಳನ್ನು ಸಿದ್ದರಾಮಯ್ಯ ಅವರು ದ್ವಿತೀಯ ಅವಧಿಯಲ್ಲಿ ತಿದ್ದಿ ಕೊಳ್ಳಬಹುದೆನ್ನುವ ಅನಿಸಿಕೆಗಳು ಹುಸಿಯಾಗಿದೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಬಿಜೆಪಿ ಹೋರಾಟ ರೂಪಿಸಿದ್ದು, ಪ್ರತಿ ಹಿಂದೂ ಸಂಘಟಿತರಾಗಬೇಕೆಂದು ಮನವಿ ಮಾಡಿದರು. ಮಾಜಿ ಶಾಸಕ ಕೆ.ಜಿ. ಬೋಪಯ್ಯ, ವಕ್ಫ್ ಕಾಯ್ದೆ ಸಂವಿಧಾನಕ್ಕೆ ವಿರುದ್ಧವಾದುದು. ಈ ಕಾಯ್ದೆಗೆ ತಿದ್ದುಪಡಿಗಳನ್ನು ಮಾಡಬೇಕು ಇಲ್ಲವೆ ಕಿತ್ತು ಹಾಕಬೇಕು ಎಂದು ಒತ್ತಾಯಿಸಿದರು. ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ಎಂಎಲ್‌ಸಿ ಸುಜಾತ ಕುಶಾಲಪ್ಪ ಮಾತನಾಡಿ, ವಕ್ಫ್ ಕಾಯ್ದೆ ಹಿಂಪಡೆಯುವವರೆಗೆ ಹೋರಾಟ ನಡೆಯಲಿದೆ ಎಂದರು. ಮೆರವಣಿಗೆಯ ಬಳಿಕ ಕಾಂಗ್ರೆಸ್ ಪ್ರಮುಖರು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ, ಸಂಜೆಯವರೆಗೆ ಧರಣಿ ನಡೆಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಕ್ತಾರರಾದ ಬಿ.ಕೆ.ಅರುಣ್ ಕುಮಾರ್, ತಳೂರು ಕಿಶೋರ್ ಕುಮಾರ್, ಕಾಂಗೀರ ಸತೀಶ್, ನಗರಾಧ್ಯಕ್ಷ ಉಮೇಶ್ ಸುಬ್ರಮಣಿ, ಮಹಿಳಾ ಬಿಜೆಪಿ ಅಧ್ಯಕ್ಷೆ ಅನಿತಾ ಪೂವಯ್ಯ, ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಪಿ.ಎಂ. ರವಿ, ಪ್ರಮುಖರಾದ ಸುವಿನ್ ಗಣಪತಿ, ಮನು ಮುತ್ತಪ್ಪ, ರೀನಾ ಪ್ರಕಾಶ್, ಅರುಣ್ ಶೆಟ್ಟಿ, ಆರ್.ಕೆ.ಚಂದ್ರು, ನಾಗೇಶ್ ಕುಂದಲ್ಪಾಡಿ, ಸತೀಶ್ ಜೋಯಪ್ಪ, ನೆಲ್ಲೀರ ಚಲನ್, ಕೆ.ಎಂ.ಲೋಕೇಶ್, ಬಿ.ಕೆ.ಅರುಣ್ ಕುಮಾರ್, ಬಿ.ಕೆ.ಜಗದೀಶ್, ಇದ್ದರು.

ಸಮಾಚಾರ ಸಣ್ಣದಲ್ಲ

ವಕೀಲರ ಹತ್ಯೆ ಖಂಡಿಸಿ ಪ್ರತಿಭಟನೆ

ಮಡಿಕೇರಿ: ಹೊಸೂರು ನ್ಯಾಯಾಲಯದ ವಕೀಲರ ಹತ್ಯೆ ಖಂಡಿಸಿ ಮಡಿಕೇರಿ ವಕೀಲರ ಸಂಘದಿಂದ ಪ್ರತಿಭಟನೆ ನಡೆಸಿ ಇಂಥ ಪ್ರಕರಣಗಳು ಮರುಕಳಿಸದಂತೆ ಸೂಕ್ತ ರೀತಿಯ ಕಾನೂನು ರಕ್ಷಣೆ ನೀಡುವಂತೆ ಆಗ್ರಹಿಸಲಾಯಿತು. ನಗರದ ನ್ಯಾಯಾ ಲಯದ ಮುಂದೆ ಪ್ರತಿಭಟನೆ ನಡೆಸಿದ ವಕೀಲರನ್ನುದ್ದೇಶಿಸಿ ಮಾತನಾಡಿದ ವಕೀಲರ ಸಂಘದ ಅಧ್ಯಕ್ಷ ಎಂ ಎ ನಿರಂಜನ್, ಎರಡು ದಿನಗಳ ಹಿಂದೆ ರಾಜ್ಯದ ಗಡಿಯ ಹೊಸೂರು ನ್ಯಾಯಲಯದ ಆವರಣದಲ್ಲಿ ವಕೀಲ ಕಣ್ಣನ್ ಅವರನ್ನು ಕೊಲೆ ಮಾಡಲಾಗಿದೆ. ಇದರಿಂದ ವಕೀಲರು ಭಯದಲ್ಲಿ ಕೆಲಸ ನಿರ್ವಹಿಸುವಂತಾಗಿದೆ. ವಕೀಲರಿಗೆ ಸೂಕ್ತ ರಕ್ಷಣೆಯ ಕೊರತೆಗೆ ಇಂಥ ಘಟನೆಗಳು ನಡೆಯುತ್ತಿವೆ. ಈ ಕೃತ್ಯ ಎಸಗಿದ ಅಪರಾಧಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿದರು. ಮಡಿಕೇರಿ ವಕೀಲರ ಸಂಘದ ಕಾರ್ಯದರ್ಶಿ ಡಿ ಎಂ ಕೇಶವ, ಉಪಾಧ್ಯಕ್ಷ ಎಂ ಪಿ ನಾಗರಾಜ್, ಜಂಟಿ ಕಾರ್ಯದರ್ಶಿ ಪವನ್ ಪೆಮ್ಮಯ್ಯ, ಖಜಾಂಜಿ ಜಿ ಆರ್ ರವಿಶಂಕರ್ ಇದ್ದರು.

ನ.25 ರಂದು ಉದ್ಯೋಗ ಮೇಳ

ಮಂಡ್ಯ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಹಾಗೂ ಮೆ.ಇಸಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಸಂಸ್ಥೆಯ ಸಹಯೋಗದಲ್ಲಿ ನೇರಸಂದರ್ಶನ ನಡೆಯಲಿದ್ದು, ಫೀಲ್ಡ್ ಎಕ್ಸಿಕ್ಯೂಟಿವ್ ಹುದ್ದೆಗಳಿಗೆ ಪಿ.ಯು.ಸಿ ಯಾವುದೇ ಪದವಿ ಉತ್ತೀರ್ಣರಾದ ಅಭ್ಯರ್ಥಿಗಳು ನ.25 ರಂದು ಬೆಳಿಗ್ಗೆ 10.30 ಗಂಟೆಗೆ ಮಂಡ್ಯ ಅಶೋಕ ನಗರದ ಇಸಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ಬಯೋಡೇಟಾಗಳೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ ಮೊ. 9164642684 ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

ನ.24 ರಂದು ವಿದ್ಯುತ್ ವ್ಯತ್ಯಯ

ಮಂಡ್ಯ: ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿಮಿತ್ತ ನ.24 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5ರ ವರೆಗೆ ನಗರ ಪ್ರದೇಶಗಳಾದ ಸುಭಾಷ್‌ನಗರ, ಆಶೋಕ ನಗರ, ವಿ.ವಿ. ರೋಡ್, ಹೊಸಹಳ್ಳಿ, ವಿನಾಯಕ ಬಡಾವಣೆ, ನೂರು ಅಡಿ ರೋಡ್, ನೆಹರು ನಗರ, ಹೊಸಹಳ್ಳಿ, ದ್ವಾರಕನಗರ, ಗಾಂಧಿನಗರ, ಕಾವೇರಿ ನಗರ 1 2 ನೇ ಹಂತ, ಚಂದ್ರ ದರ್ಶನ, ಚಾಮುಂಡೇಶ್ವರಿ ನಗರ, ಅನ್ನಪೂರ್ಣೇಶ್ವರಿ ನಗರ, ಶಂಕರನಗರ, ಇಂಡುವಾಳು, ಕಿರಗಂದೂರು, ಕಲ್ಲಹಳ್ಳಿ. ಕ್ಯಾತುಂಗೆರೆ ಸುತ್ತ ಮುತ್ತಲಿನ ಪ್ರದೇಶ ಹಾಗೂ ಗ್ರಾಮಾಂತರ ಪ್ರದೇಶಗಳಾದ ಕಾರಸವಾಡಿ, ಮಂಗಲ, ಹನಿಯಂಬಾಡಿ, ಚೀರನಹಳ್ಳಿ, ಹೆಬ್ಬಕವಾಡಿ, ಕೊತ್ತತ್ತಿ, ಮೊತ್ತಹಳ್ಳಿ, ಬೇವಿನಹಳ್ಳಿ, ಹುಲ್ಲುಕೆರೆ, ಎ. ಹುಲಿಕೆರೆ, ಬಿ.ಹುಲಿಕೆರೆ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಅಭಿಯಂತರರು ತಿಳಿಸಿದ್ದಾರೆ.

ಪೌರ ಕಾರ್ಮಿಕರತ್ತ ಆರೋಗ್ಯ ಕಾಳಜಿವಹಿಸಿ

ಹುಣಸೂರು: ಪರಿಸರ ಸ್ವಚ್ಛಗೊಳಿಸುತ್ತಿರುವ ಪೌರ ಕಾರ್ಮಿಕರ ಆರೋಗ್ಯದ ಬಗ್ಗೆ ಕಾಳಜಿವಹಿಸಿ ಐಟಿಸಿ ಎಂಎಸ್‌ಕೆ ಮತ್ತು ಔಟ್‌ರೀಚ್ ಸಂಸ್ಥೆಯ ಸೇವೆ ಶ್ಲಾಘನೀಯವೆಂದು ಡಾ. ಮಂಜುನಾಥ ತಿಳಿಸಿದರು. ನಗರದ ಅಂಬೇಡ್ಕರ್ ಭವನದಲ್ಲಿ ಆರೋಗ್ಯ ಇಲಾಖೆ ಮತ್ತು ಐಟಿಸಿ ಎಂಎಸ್‌ಕೆ ಮತ್ತು ಔಟ್‌ರೀಚ್ ಸಂಸ್ಥೆಯ ಸಹಯೋಗದಲ್ಲಿ ಆರೋಗ್ಯ ತಪಾಸಣೆ ಮಾತನಾಡಿದವರು. ಪೌರಕಾರ್ಮಿಕರು ತುಂಬ ಶ್ರಮವನ್ನು ವಹಿಸುತ್ತಿದ್ದಾರೆ. ನಿಮ್ಮಗಳ ಆರೋಗ್ಯವೂ ಕೂಡ ಮುಖ್ಯವಾಗಿರುತ್ತದೆಂದು ಸಲಹೆ ನೀಡಿದರು. ಜಿಲ್ಲಾ ಸಂಯೋಜಕರಾದ ರದೀಶ್‌ಕುಮಾರ್.ಎಂ ಮಾತನಾಡಿ, ತಾಲೂಕಿನ 41 ಗ್ರಾಮ ಪಂಚಾಯ್ತಿಗಳಿಂದ ಸುಮಾರು 45 ಪೌರಕಾರ್ಮಿಕರು ತಪಾಸಣೆಯಲ್ಲಿ ಭಾಗವಹಿಸಿದರು. ಬಹುತೇಕರಿಗೆ ಬಿ.ಪಿ. ಸಕ್ಕರೆ ಕಾಯಿಲೆ ಹಾಗೂ ಅಪೌಷ್ಟಿಕತೆ ಇರುವುದು ಕಂಡು ಬಂದಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಸುರಕ್ಷಿತ ಕ್ರಮಗಳನ್ನು ಬಳಸಿಕೊಂಡು ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದರು. ಐಟಿಸಿ ಎಂಎಸ್‌ಕೆ ಮತ್ತು ಔಟ್‌ರೀಚ್ ಸಂಸ್ಥೆವತಿಯಿಂದ ಆರೋಗ್ಯ ತಪಾಸಣೆ ಮಾಡಿದ ವೈದ್ಯರಿಗೆ ಗೌರವಿಸಲಾಯಿತು. ಆರೋಗ್ಯ ಇಲಾಖೆಯ ರಂಜನ್, ಶೃತಿ, ಚಂಗಪ್ಪ, ಔಟ್‌ರೀಚ್ ಯೋಜನಾಧಿಕಾರಿ ಪ್ರಶಾಂತ್, ಉಪಯೋಜನಾಧಿಕಾರಿ ಮಹೇಶ್ ಪ್ರಸಾದ್, ಕ್ಷೇತ್ರ ಸಿಬ್ಬಂದಿಗಳಾದ ಶಶಿಕುಮಾರ್, ಮಹದೇವ್, ಕೆಂಡೇಶ್, ಕಾರ್ತೀಕ್, ಪ್ರಕಾಶ್ ಭಾಗವಹಿಸಿದ್ದರು.

ವಿ+ ಸೋಮವಾರ

ಹಾಲು ಮಾರಾಟದಲ್ಲಿ 2ನೇ ಸ್ಥಾನ

ಸಹಕಾರ ಸಪ್ತಾಹದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನ ಸನ್ಮಾನಿಸಲಾಯಿತು.

ತಿ.ನರಸೀಪುರ: ಹಾಲು ಮಾರಾಟದಲ್ಲಿ ಕೆಎಂಎಫ್ ದೇಶದಲ್ಲೇ 2ನೇ ಸ್ಥಾನದಲ್ಲಿದ್ದು, ರಾಜ್ಯದ ಹಾಲು ಉತ್ಪಾದಕರು ಹೆಚ್ಚು ಹೆಚ್ಚು ಹಾಲು ಉತ್ಪಾದಿಸದರೆ ಕೆಎಂಎಫ್ ಮೊದಲ ಸ್ಥಾನಕ್ಕೆ ಏರಲು ಸಹಕಾರಿಯಾಗಲಿದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚಲುವರಾಜ ಹೇಳಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿರುವ ಮೈಮುಲ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ದೇಶಿಸಿ ಮತನಾಡಿದರು. ಹೈನುಗಾರಿಕೆ ಹೆಮ್ಮರವಾಗಿ ಬೆಳೆದು ಕ್ಷೀರ ಕಾಂತ್ರಿಯಾಗಲು ಡಾ. ವರ್ಗಿಸ್ ಕುರಿಯನ್ ಕಾರಣ. ಮೈಮುಲ್ ನಲ್ಲಿ ಪ್ರಾರಂಭಿಕ ಹಂತದಲ್ಲಿ ಕಡಿಮೆ ಹಾಲು ಬರುತ್ತಿತ್ತು. ಪ್ರಸ್ತುತ ದಿನಕ್ಕೆ 9ಲಕ್ಷ ಲೀಟರ್ ಸಂಗ್ರಹಿಸಲಾಗುತ್ತಿದೆ. ಈಗ ನಂದಿನಿ ಉತ್ಪನ್ನಗಳು ದುಬೈ ಸೇರಿದಂತೆ ಹಲವು ದೇಶಗಳಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದರು. ಹಾಲು ಉತ್ಪಾದಕರ ಸಂಘ ಹಾಲಿನ ಜತೆ 250 ಸಹ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ. ಸಹಕಾರ ಕ್ಷೇತ್ರ ಮಾರ್ಗದರ್ಶನ ಕೊರತೆ ಮತ್ತು ಉತ್ತೇಜನದ ಕೊರತೆ ಅನುಭವಿಸುತ್ತಿದೆ ಎಂದರು.

ನಂದಿನಿ ಹಾಲಿನ ದರ ಅತೀ ಕಡಿಮೆ !

ದೇಶದಲ್ಲಿ ಬೇರೆಲ್ಲ ಹಾಲಿನ ಮಾರಾಟಕ್ಕಿಂತ ನಂದಿನಿ ಹಾಲಿನ ಬೆಲೆ ಕಡಿಮೆ ಇದೆ. ಹಾಗಾಗಿ ಹಾಲು ಮಾರಾಟ ದರವನ್ನು ಹೆಚ್ಚಳ ಮಾಡಬೇಕು ಎಂದು ಸರಕಾರಕ್ಕೆ ಮನವಿ ಮಾಡಲಾಗಿದೆ. ಹಾಲು ಉತ್ಪಾದಕರ ನಿರ್ವಹಣೆ ವೆಚ್ಚ, ಪಶು ಆಹಾರ, ಇತರೆ ವೆಚ್ಚಗಳಿದ್ದು ದರವನ್ನು ಹೆಚ್ಚಿಸಬೇಕು ಎಂದು ಉತ್ಪಾದಕರ ಬೇಡಿಕೆ ಇದೆ ಎಂದು ಆರ್. ಚಲುವರಾಜ ಹೇಳಿದರು.

ಹಿರಿಯ ಸಹಕಾರಿ ವೈ.ಎನ್. ಶಂಕರೇಗೌಡ ಮಾತನಾಡಿದರು. ಮೈಸೂರು ಒಕ್ಕೂಟದ ನಿರ್ದೇಶಕಿ ಮಾಜಿ ಶಾಸಕಿ ಜೆ. ಸುನೀತಾ ವೀರಪ್ಪಗೌಡ, ನಿರ್ದೇಶಕರಾದ ಹನುಮನಹಾಳು ಸಿದ್ದೇಗೌಡ, ಟಿ ಪಿ.ಬೋರೇಗೌಡ, ಸಿ. ಓಂ ಪ್ರಕಾಶ್, ಸದಾನಂದಾ, ಟಿಎಪಿಎಂಎಸ್ ಅಧ್ಯಕ್ಷ ಟಿ.ಪಿ. ಸುಬ್ರಮಣ್ಯ, ಮೈಮುಲ್ ಅಭಿವೃದ್ಧಿ ಅಧಿಕಾರಿ ಹಸೀನಾ, ಕರಿಬಸವರಾಜು, ವಿಸ್ತರಣಾಧಿಕಾರಿ ಪ್ರಮೋದ್ ಇದ್ದರು.

ಹೊಸ ಪೀಳಿಗೆಗೆ ಬೇಕು ಭಾವೈಕ್ಯತೆಯ ದೀವಿಗೆ

ಮಾಕೋಡು ಗ್ರಾಮದಲ್ಲಿ ರಾವಂದೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಶಿಬಿರವನ್ನು ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಉದ್ಘಾಟಿಸಿದರು.

ಪಿರಿಯಾಪಟ್ಟಣ: ಹೊಸ ಪೀಳಿಗೆ ಮಕ್ಕಳಲ್ಲಿ ಸಮಯ ಪ್ರಜ್ಞೆ ರಾಷ್ಟ್ರೀಯ ಭಾವೈಕ್ಯತೆ ಬೆಳೆಯುತ್ತಿದೆ ಎಂದು ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ತಿಳಿಸಿದರು.

ತಾಲೂಕಿನ ರಾವಂದೂರು ಸರಕಾರಿ ಪದವಿ ಪೂರ್ವ ಕಾಲೇಜಿನ ವತಿಯಿಂದ ಮಾಕೋಡಿನಲ್ಲಿ ನಡೆದ ಎನ್‌ಎಸ್‌ಎಸ್ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಈ ಶಿಬಿರದಿಂದ ಗ್ರಾಮೀಣ ಜನರಲ್ಲಿ ಅರಿವಿನ ಜೊತೆಗೆ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಯಾವ ರೀತಿ ಕಾಪಾಡಿಕೊಳ್ಳಬೇಕು ಎಂದು ಮನವರಿಕೆ ಮಾಡಿಕೊಳ್ಳಬಹುದು. ಉತ್ತಮ ಸಮಾಜದ ನಿರ್ಮಾಣದಲ್ಲಿ ಯುವಕರ ಪಾತ್ರ ಬಹಳ ಮುಖ್ಯ ಎಂದು ತಿಳಿಸಿದರು.

ರಾವಂದೂರಿನ ಮುರುಗ ಮಠದ ಮೋಕ್ಷಪತಿ ಸ್ವಾಮೀಜಿ ಮಾತನಾಡಿ, ವಿದ್ಯಾರ್ಥಿಗಳ ಜ್ಞಾನಾರ್ಜನೆ ಜೊತೆಗೆ ತಮ್ಮ ಸಮಾಜದಲ್ಲಿ ಯಾವ ರೀತಿ ಇರಬೇಕು ಎಂಬುದನ್ನ ಅರಿವು ಮೂಡಿಸುವ ಕಾರ್ಯಕ್ರಮ ಇದು ಎಂದು ತಿಳಿಸಿದರು.

ನಿವೃತ್ತ ಪ್ರಾಂಶುಪಾಲ ಪ್ರೊ.ಡಾ.ಆರ್.ಡಿ.ಸತೀಶ್ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಯಾವುದೇ ಹಿಂಜರಿಕೆ ಇಲ್ಲದೆ ಕಲಿತಾಗ ಮಾತ್ರ ಉತ್ತಮ ವಿದ್ಯಾರ್ಥಿಗಳಾಗಲು ಸಾಧ್ಯ ಎಂದರು.ರಾಷ್ಟ್ರೀಯ ಸೇವಾ ಯೋಜನೆ ಧ್ವಜಾರಣವನ್ನು ನಿತಿನ್ ವೆಂಕಟೇಶ್ ನೆರವೇರಿಸಿದರು. ಪ್ರಾಂಶುಪಾಲ ಲಕ್ಷ್ಮಿಕಾಂತ್ ,ಶಿಕ್ಷಕರಾದ ವರದೇಶ , ಸಿ ಆರ್ ಪಿ ನಾಗೇಶ್, ಧನರಾಜ್ ಮಾತನಾಡಿದರು. ನೀಲಕಂಠ ,ಸುರೇಶ್ ,ರವಿ, ಟಿ-ಶರ್ಟ್ ದಾನಿ ಡಿ,ಎಸ್ ನಂದೀಶ್, ಬಾಳೆ ಮಂಡಿ ಕೀರ್ತಿ , ಎ.ಆರ್ ಸಚಿನ್ ಇದ್ದರು.

ನ.25ರಿಂದ 7 ದಿನ 'ನಾಗ ರಂಗ' ನಾಟಕೋತ್ಸವ

ನಾಗಮಂಗಲ: ಪಟ್ಟಣದ ಕನ್ನಡ ಸಂಘದ ವತಿಯಿಂದ ನ.25ರಿಂದ ಡಿ.1 ರವರೆಗೆ ಏಳು ದಿನಗಳು ನಾಗರಂಗ ನಾಟಕೋತ್ಸವ ಜರುಗಲಿದ್ದು, ಅದೇ ವೇದಿಕೆಯಲ್ಲಿ ಕನ್ನಡ ರಾಜ್ಯೋತ್ಸವ ಆಯೋಜಿಸಲಾಗಿದೆ ಎಂದು ಕನ್ನಡ ಸಂಘದ ಅಧ್ಯಕ್ಷ ಕೆ.ಅಲಮೇಲ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಸಂಘದಿಂದ ಈ ಬಾರಿಯೂ ಕನ್ನಡ ರಾಜ್ಯೋತ್ಸವ ಮತ್ತು ನಾಟಕೋತ್ಸವ ಆಯೋಜಿಸಿದ್ದು, ಪಿಯು ಕಾಲೇಜು ಆವರಣದಲ್ಲಿ ಕಲಾಶಾರದೆ ಲೀಲಾವತಿ ಅವರ ಹೆಸರಿನಲ್ಲಿ ವೇದಿಕೆ ಸಿದ್ಧವಾಗಿದ್ದು, ನ.25ರಿಂದ ಡಿ.1ರ ವರೆಗೆ ನಾಟಕೋತ್ಸವ ಜರುಗಲಿದ್ದು.

ನ.25 ಸಂಜೆ 6.30ಗಂಟೆಗೆ ನಾಗಮಂಗಲದ ಮಾದರಿ ಉನ್ನತ ಪ್ರಾಥಮಿಕ ಶಾಲಾ ಮಕ್ಕಳಿಂದ ಹಚ್ಚೇವು ಕನ್ನಡದ ದೀಪ ಸ್ವಾಗತ ನೃತ್ಯ ಜರುಗಲಿದೆ. ಖ್ಯಾತ ಸಾಹಿತಿ ಕುಂ.ವೀರಭದ್ರಪ್ಪ ಅವರಿಗೆ ನುಡಿಗೌರವ, ಖ್ಯಾತ ಚಲನಚಿತ್ರ ಹಾಸ್ಯನಟ ದೊಡ್ಡಣ್ಣ ಅವರಿಗೆ ಕನ್ನಡ ಸಂಘದ ವತಿಯಿಂದ ರಂಗ ಗೌರವವನ್ನು ಸಲ್ಲಿಸಲಾಗುತ್ತದೆ.

25ರ ನಾಟಕೋತ್ಸವದ ಮೊದಲ ದಿನ ಸಂಜೆ 7 ಗಂಟೆಗೆ ವಿನಾಯಕ ಭಟ್ ಹಾಸಣಗಿ ನಿರ್ದೇಶನದ ಮೈಸೂರು ಮೈಮ್ ತಂಡದಿಂದ 'ನನಗ್ಯಾಕೋ ಡೌಟು' ನಾಟಕ, ನ.26ರಂದು ಎಸ್.ಡಿ.ಎಲ್. ಚಂದ್ರು ನಿರ್ದೇಶನದ 'ಪರಸಂಗದ ಗೆಂಡೆತಿಮ್ಮ' , ನ.27 ರಂದು 'ಕಾಕದೋಷ', ನ.28ಕ್ಕೆ 'ದೇವರ ಹೆಣ', ನ.29 ರಂದು 'ದಾರಾ ಶಿಕೋ', ನ.30ರಂದು ಜೀವನ್ ರಾಂ ಸುಳ್ಯ ನಿರ್ದೇಶನದಡಿ ಮೂಡಬಿದರೆಯ ಆಳ್ವಾಸ್ ತಂಡದಿಂದ ಚಾರುವಸಂತ, ಡಿ.1ರಂದು 'ದ್ರೋಪತಿ ಹೇಳ್ತವ್ಳೆ ' ನಾಟಕಗಳು ವಿವಿಧ ತಂಡಗಳಿಂದ ಪ್ರದರ್ಶನಗೊಳ್ಳಲಿವೆ. ಡಿ.1 ರಂದು ಸಮಾರೋಪ ಸಮಾರಂಭ ಜರುಗಲಿದ್ದು, ಚಲನಚಿತ್ರ ನಟ ಸುಂದರ್ ರಾಜ್, ನಟ ಸುಂದರ್ ಭಾಗವಹಿಸಲಿದ್ದಾರೆ.

ಈ ಉತ್ಸವದಲ್ಲಿ ವಿವಿಧ ಬಗೆಯ ಮಾರಾಟ ಮಳಿಗೆಗಳನ್ನು ತೆರೆಯಲಾಗುತ್ತದೆ ವಂದು ಹೇಳಿದರು.

ಗಟ್ಟಿ ವ್ಯಕ್ತಿತ್ವ ರೂಪಿಸಲೆಂದೇ ಅಕ್ಷರ ಯಾತ್ರೆ

ಚಾಮರಾಜನಗರ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಬೀದರ್ ಕಲ್ಯಾಣ ಕರ್ನಾಟಕ ಪ್ರತಿಷ್ಠಾನದ ವತಿಯಿಂದ ನಡೆದ ಅಕ್ಷರ ಜ್ಯೋತಿ ಯಾತ್ರೆಯನ್ನು ನಗರಸಭೆ ಅಧ್ಯಕ್ಷ ಸುರೇಶ್ ಉದ್ಘಾಟಿಸಿದರು.

ಚಾಮರಾಜನಗರ: ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ಹಾಗು ಸದೃಢ ವ್ಯಕ್ತಿತ್ವವನ್ನು ರೂಪಿಸಿ, ಅವರಲ್ಲಿ ಕಲಿಕಾ ಆಸಕ್ತಿ ಮೂಡಿಸುವುದು ಅಕ್ಷರ ಯಾತ್ರೆಯ ಮುಖ್ಯ ಉದ್ದೇಶವಾಗಿದೆ ಎಂದು ಬೀದರನ ಕಲ್ಯಾಣ ಕರ್ನಾಟಕ ಪ್ರತಿಷ್ಠಾನದ ಅಧ್ಯಕ್ಷ ಬಸವಕುಮಾರ್ ಪಾಟೀಲ್ ತಿಳಿಸಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ಜೆಎಸ್‌ಎಸ್ ಮಹಾವಿದ್ಯಾ ಪೀಠ, ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜು ಹಾಗೂ ಬೀದರ್ ಕಲ್ಯಾಣ ಕರ್ನಾಟಕ ಪ್ರತಿಷ್ಠಾನದ ವತಿಯಿಂದ ನಡೆದ ಅಕ್ಷರ ಜ್ಯೋತಿ ಯಾತ್ರೆ –2024 ಕಾರ್ಯಕ್ರಮದಲ್ಲಿ ಮಾತನಾಡಿದರು.

ಪಿಯುಸಿ ಹಾಗು ಎಸ್‌ಎಸ್‌ಎಲ್‌ಸಿ ಓದುವ ವಿದ್ಯಾರ್ಥಿಗಳಿಗೆ ಅಕ್ಷರ ಯಾತ್ರೆ ಮೂಲಕ ವ್ಯಕ್ತಿತ್ವ ವಿಕಸನದ ಬಗ್ಗೆ ಮಾರ್ಗದರ್ಶನ ನೀಡುವ ಜೊತೆಗ ಫಲಿತಾಂಶ ಸುಧಾರಣೆಯ ಮಾರ್ಗೋಪಾಯಗಳನ್ನು ಮನವರಿಕೆ ಮಾಡಿಕೊಡುವ ಆಶಯ ನಮ್ಮದಾಗಿದೆ ಎಂದರು. ಕೇವಲ ಪುಸ್ತಕದ ಕಲಿಕೆ ಮಾತ್ರವಲ್ಲ. ಸಂಸ್ಕೃತಿ, ಮೌಲ್ಯಗಳು, ಸಂಸ್ಕಾರಯುತ ಶಿಕ್ಷಣ ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳು ಪ್ರಬುದ್ಧ ಭಾರತ ಕಟ್ಟಲು ಶ್ರಮಿಸಬೇಕು ಎಂದರು. ನಗರಸಭೆ ಅಧ್ಯಕ್ಷ ಸುರೇಶ್ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಕಷ್ಟಪಟ್ಟ ಓದಿ ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಬೇಕು ಎಂದರು. ರೋಟರಿ ಸಿಲ್ಕ್‌ಸಿಟಿ ವಲಯ ಪ್ರತಿನಿಧಿ ದೊಡ್ಡರಾಯಪೇಟೆ ಗಿರೀಶ್ ಮಾತನಾಡಿದರು. ಜೆಎಸ್‌ಎಸ್ ಕಾಲೇಜುಗಳ ಪ್ರಾಂಶುಪಾಲರಾದ ಡಾ. ಎನ್. ಮಹದೇವಸ್ವಾಮಿ, ದೇವರಾಜಮೂರ್ತಿ, ಉಪನ್ಯಾಸಕರಾದ ಉಮಾಪತಿ, ಮಹದೇವಸ್ವಾಮಿ, ಇದ್ದರು.

ದೇಗುಲಗಳಿಗೆ ಧರ್ಮಸ್ಥಳ ಸಂಸ್ಥೆ ನೆರವು

ನೀಲಕಂಠನಹಳ್ಳಿ ಗ್ರಾಮದ ಬಸವೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕೆ ಒಂದು ಲಕ್ಷ ರೂ.ಗಳ ಚೆಕ್‌ನ್ನು ಸಂಸ್ಥೆಯ ಯೋಜನಾಧಿಕಾರಿ ಯೋಗೇಶ್ ಕನ್ಯಾಡಿ ಗ್ರಾಮಸ್ಥರಿಗೆ ವಿತರಿಸಿದರು.

ಮದ್ದೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಸಮುದಾಯದ ಅಭಿವೃದ್ಧಿ ಜತೆಗೆ ದೇವಾಲಯಗಳ ಜೀರ್ಣೋದ್ಧಾರ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಕಟ್ಟಡ ನಿರ್ಮಾಣಕ್ಕೂ ಆರ್ಥಿಕ ನೆರವು ನೀಡಿ ಸ್ವಾವಲಂಬಿ ಬದುಕಿಗೆ ನೆರವು ನೀಡಲು ಮುಂದಾಗಿದ್ದಾರೆಂದು ಸಂಸ್ಥೆಯ ಯೋಜನಾಧಿಕಾರಿ ಆರ್.ಯೋಗೇಶ್ ಕನ್ಯಾಡಿ ತಿಳಿಸಿದರು.

ಮದ್ದೂರು ತಾಲೂಕಿನ ನೀಲಕಂಠನಹಳ್ಳಿ ಗ್ರಾಮದ ಬಸವೇಶ್ವರಸ್ವಾಮಿ ದೇವಾಲಯದ ಜೀರ್ಣೋದ್ಧಾರಕ್ಕೆ ಬಿಡುಗಡೆಯಾಗಿರುವ ಒಂದು ಲಕ್ಷ ರೂ. ಚೆಕ್‌ನ್ನು ದೇವಾಲಯದ ಆಡಳಿತ ಮಂಡಳಿಗೆ ವಿತರಿಸಿ ಅವರು ಮಾತನಾಡಿದರು. ಸಂಸ್ಥೆಯು ಪ್ರಗತಿಪರ ಕೆಲಸದಲ್ಲಿ ಸಮುದಾಯ ಅಭಿವೃದ್ಧಿ, ದೇವಾಲಯಗಳ ಜೀರ್ಣೋದ್ಧಾರ, ಎಂ.ಪಿ.ಸಿ.ಎಸ್ ಕಟ್ಟಡ, ಶಾಲೆಗಳ ಕಾಂಪೌಂಡ್, ಶೌಚಾಲಯ ನಿರ್ಮಾಣ ಹಾಗೂ ಹಿಂದೂ ರುದ್ರಭೂಮಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡು ಸಮಾಜಕ್ಕೆ ಮಾದರಿ ಕೆಲಸ ನಿರ್ವಹಿಸುತ್ತಿದೆ ಎಂದರು. ತಾಲೂಕಿನಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸುಮಾರು 4 ಕೋಟಿಗೂ ಹೆಚ್ಚು ಅನುದಾನವನ್ನು ಸಂಸ್ಥೆ ನೀಡಿದ್ದು ಇದರಿಂದಾಗಿ ಧಾರ್ಮಿಕ ಕಾರ್ಯಕ್ರಮ ಜತೆಗೆ ಗ್ರಾಮೀಣ ಜನಪದ ಸೊಗಡು, ಸಂಸ್ಕೃತಿ ಉಳಿಸಲು ಕಾರ್ಯೋನ್ಮುಖವಾಗಿದೆ ಎಂದರು. ದೇವಾಲಯಗಳು ಭಾರತೀಯ ಸಂಸ್ಕೃತಿಯ ಬಿಂಬವಾಗಿದ್ದು ಇವುಗಳನ್ನು ಉಳಿಸಿ ಮುಂದಿನ ಪೀಳಿಗೆಗೂ ಪರಿಚಯಿಸಬೇಕಿದೆ ಎಂದರು. ಈ ವೇಳೆ ದೇವಾಲಯ ಟ್ರಸ್ಟ್‌ನ ಪದಾಧಿಕಾರಿಗಳಾದ ಬಸವರಾಜು, ಸುರೇಶ್, ನಾಗರಾಜು, ಶಿವಣ್ಣ, ಚಿಕ್ಕಮೊಗ, ಮಹೇಶ್, ಬಸವರಾಜು, ತಾಯಮ್ಮ, ಒಕ್ಕೂಟದ ಅಧ್ಯಕ್ಷೆ ಭಾಗ್ಯ, ಮೇಲ್ವಿಚಾರಕಿ ಚೈತ್ರ, ಶಾರದಮ್ಮ, ಭವ್ಯ, ಇಂದ್ರ ಇದ್ದರು.

ವಕ್ಫ್ ವಿರುದ್ಧ ಬಿಜೆಪಿ ಪ್ರತಿಭಟನೆ

ಮೈಸೂರು ರಾಜ್ಯ ವಕ್ಫ್ ವಿರುದ್ಧ ಮೈಸೂರಿನಲ್ಲೂ ಬಿಜೆಪಿ ಮುಖಂಡರು ಬೃಹತ್ ಪ್ರತಿಭಟನೆ ನಡೆಸಿದರು.

ಮೈಸೂರು: ರಾಜ್ಯ ವಕ್ಫ್ ವಿರುದ್ಧ ಮೈಸೂರಿನಲ್ಲೂ ಬಿಜೆಪಿ ಮುಖಂಡರು ಬೃಹತ್ ಪ್ರತಿಭಟನೆ ನಡೆಸಿ ರಾಜ್ಯ ಸರಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು.

ಮೈಸೂರು ನಗರ ಮತ್ತು ಗ್ರಾಮಾಂತರ ಬಿಜೆಪಿ ವತಿಯಿಂದ ಶಾಸಕ ಶ್ರೀವತ್ಸ ನೇತೃತ್ವದಲ್ಲಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಯಿತು. ಪ್ರತಿಭಟನೆಯಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಭಾಗಿಯಾಗಿದ್ದು, ರಾಜ್ಯ ಸರ್ಕಾರದ ಹಗರಣ ವಿರುದ್ಧ ಪದಕಟ್ಟಿ ಹಾಡಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಅಧ್ಯಕ್ಷ ಎಲ್.ನಾಗೇಂದ್ರ, ಸರಕಾರಿ ಶಾಲೆಗಳು, ಜಮೀನುಗಳನ್ನು ವಕ್ಫ್ ಆಸ್ತಿಯಾಗಿ ಬದಲಾವಣೆ ಮಾಡಲಾಗುತ್ತಿದೆ. ಇದಕ್ಕೆ ಮೂಲ ಕಾರಣ ಜಮೀರ್ ಅಹಮ್ಮದ್ ಖಾನ್. ಜಮೀರ್ ಅಹಮ್ಮದ್ ಬೆನ್ನಿಗೆ ನಿಂತಿರೋದು ಸಿಎಂ ಸಿದ್ದರಾಮಯ್ಯ. ಯಾವುದೇ ಕಾರಣಕ್ಕೂ ನಮ್ಮ ಒಂದಿಂಚು ಜಾಗವನ್ನು ವಕ್ಫ್ ಗೆ ಬಿಟ್ಟುಕೊಡಲು ನಾವು ಬಿಡಲ್ಲ. ಇದರ ವಿರುದ್ಧ ನಮ್ಮ ಹೋರಾಟ ಇದ್ದೇ ಇರುತ್ತದೆ. ಈ ಸರಕಾರ ಯಾವಾಗ ಬೀಳುತ್ತೆ ಎಂದು ಹೇಳಲು ಸಾಧ್ಯವಿಲ್ಲ. ನಾಳಿನ ಚುನಾವಣೆ ಫಲಿತಾಂಶ ಬಳಿಕ ಮಹತ್ತರ ಬದಲಾವಣೆ ಆಗುತ್ತದೆ. ಅವರದೇ ಸರಕಾರದ ವಿರುದ್ಧ ಸಚಿವರು ಮುಗಿ ಬೀಳುತ್ತಾರೆ ಎಂದು ಹೇಳಿದರು. ಶ್ರೀವತ್ಸ, ಡಾ. ಅನಿಲ್ ಥಾಮಸ್, ಆರ್. ರಘು, ಲಕ್ಷ್ಮಿದೇವಿ, ಹೇಮಾ ನಂದೀಶ್, ರೇಣುಕಾರಾಜು ಮತ್ತಿತರರು ಇದ್ದರು.

ಶಾಸಕರಿಂದ ಸಂಸದರ ಕಚೇರಿ ಉದ್ಘಾಟನೆ

ಚಾಮರಾಜನಗರ: ನಗರದ ಜಿಲ್ಲಾಡಳಿತ ಭವನದ ಎರಡನೆಯ ಮಹಡಿಯಲ್ಲಿರುವ ನೂತನ ಸಂಸದರ ಸುನೀಲ್ ಬೋಸ್ ಅವರ ಕಚೇರಿಯನ್ನು ಹಾಲಿ ಶಾಸಕ ಸಿ.ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿ ಶುಭ ಕೋರಿದರು. ಇದಕ್ಕೂ ಮೊದಲು ಸಂಸದರನ್ನು ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಸಂಸದರು, ಶಾಸಕರು ಜೊತೆಯಾಗಿ ಡಾ.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ನಂತರ ಶಾಸಕರು ಮಾತನಾಡಿ, ಜಿಲ್ಲಾ ಕೇಂದ್ರದಲ್ಲಿ ಸಂಸದರ ಕಚೇರಿ ತೆರೆಯಲಾಗಿದೆ. ಅಹವಾಲುಗಳನ್ನು ಸಲ್ಲಿಸಿ ತಮ್ಮ ಸಮಸ್ಯೆ ಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದರು. ಸಂಸದ ಸುನೀಲ್ ಬೋಸ್ ಮಾತನಾಡಿ, ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಸಂಸದರ ಕಚೇರಿ ತೆರೆದಿದ್ದು, ಜಿಲ್ಲೆಯ ಜನತೆ ಕೇಂದ್ರ ಪುರಸ್ಕೃತ ಯೋಜನೆಗಳ ಸದ್ಬಳಕೆ ಹಾಗೂ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಕಚೇರಿ ತೆರೆಯಲಾಗಿದೆ. ಜಿಲ್ಲೆಯ ಜನತೆ ಕಚೇರಿಯಲ್ಲಿ ಸಮಸ್ಯೆಗಳನ್ನು ಕುರಿತು ಆಹವಾಲು ಸಲ್ಲಿಸಬಹುದು ಎಂದರು. ಕಾರ್ಯಕ್ರಮದಲ್ಲಿ ಶಾಸಕ ಹೆಚ್.ಎಸ್.ಗಣೇಶಪ್ರಸಾದ್, ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಲಕ್ಷ್ಮಿ ನಾರಾಯಣ. ಟಿ ನರಸಿಪುರ ಬಸವರಾಜ್. ಅಯ್ಯನಪುರ ಶಿವಕುಮಾರ್. ಕೆ ಪಿ ಸದಾಶಿವ್ ಮೂರ್ತಿ. ಆಲೂರುಪ್ರದೀಪ್. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈಶ್ವರ್, ಸೈಯದ್ ರಫಿ. ಮಹೇಶ್ ಕುದರ್. ನಲ್ಲೂರು ಮಹದೇಸ್ವಾಮಿ. ಕಮಲ್ ಖಾನ್. ವೀರಭದ್ರ ಸ್ವಾಮಿ. ಎಪಿಎಂಸಿ ಅಧ್ಯಕ್ಷ ಸೋಮೇಶ್. ಇತರರು ಹಾಜರಿದ್ದರು.

ವಕ್ಫ್ ವಿರುದ್ಧ ಸುಮಲತಾ ಆಕ್ರೋಶ

ಪ್ರತಿಭಟನೆಯಲ್ಲಿ ಸುಮಲತಾ ಅಂಬರೀಷ್ ಮಾತನಾಡಿದರು.

ಮಂಡ್ಯ: ವಕ್ಫ್ ಬೋರ್ಡ್ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಬಿಜೆಪಿಯ ನೂರಾರು ಮಂದಿ ಕಾರ್ಯಕರ್ತರು ಮಾಜಿ ಸಂಸದೆ ಸುಮಲತಾ ಅಂಬರೀಷ್ ನೇತೃತ್ವದಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸಿದರು.

ಜಿಲ್ಲೆಯ ರೈತರ ಜಮೀನುಗಳನ್ನು ವಕ್ಫ್ ಬೋರ್ಡ್ ಹೆಸರಲ್ಲಿ ಸರಕಾರ ಕಬಳಿಸುತ್ತಿದೆ ಎಂದು ಆರೋಪಿಸಿ, ಸಚಿವ ಜಮೀರ್ ಅಹ್ಮದ್ ವಿರುದ್ಧ ಘೋಷಣೆ ಕೂಗಿದರು. ಸಚಿವರ ಭಾವಚಿತ್ರವನ್ನು ತುಳಿದು ಆಕ್ರೋಶ ವ್ಯಕ್ತಪಡಿಸಿ, ಇಡೀ ದಿನ ಧರಣಿ ನಡೆಸಿದರು.

ನಂತರ ಮಾಜಿ ಸಂಸದೆ ಸುಮಲತಾ ಅಂಬರೀಷ್ ಮಾತನಾಡಿ, ವಕ್ಫ್ ವಿವಾದ ಒಂದು ಗಂಭೀರವಾದ ವಿಚಾರ ವಾಗಿದ್ದು, ಅದರ ವಿರುದ್ಧ ಹೋರಾಟ ಮಾಡುತ್ತಿ ದ್ದೇವೆ. ಜನರಿಗೆ ಈ ಬಗ್ಗೆ ತಿಳುವಳಿಕೆ ಸಂದೇಶ ಕೊಡುವ ಜವಾಬ್ದಾರಿ ನಮ್ಮ ಮೇಲಿದೆ. ನಮ್ಮ ದೇವಸ್ಥಾನದ ವಿಚಾರಕ್ಕೆ ನಮ್ಮ ಮೇಲೆ ಅನ್ಯಾಯ ನಡೆಯುತ್ತಿದ್ದರೂ ನಾವು ಸುಮ್ಮನಿರಬೇಕೆ ಎಂದು ಪ್ರಶ್ನಿಸಿದರು.

ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ಸರಕಾರ ವಕ್ಫ್‌ಗೆ ಅನುಮತಿ ಕೊಟ್ಟಿದೆ. ಯಾಕೆ ಈ ರೀತಿಯ ನಿರ್ಧಾರ ತೆಗೆದುಕೊಂಡು ಹಿಂದೂಗಳನ್ನು ಕಡೆಗಣಿಸಿದೆಯೋ ಗೊತ್ತಿಲ್ಲ ಎಂದರು. ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ. ಇಂದ್ರೇಶ್, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಮುಡಾ ಮಾಜಿ ಅಧ್ಯಕ್ಷ ವಿದ್ಯಾ ನಾಗೇಂದ್ರ, ಮುಖಂಡರಾದ ಕೆ.ಎಸ್.ನಂಜುಂಡೇಗೌಡ, ವಿವೇಕ್, ಪೀಹಳ್ಳಿ ರಮೇಶ್, ಬಲ್ಲೇನಹಳ್ಳಿ ಸಂತೋಷ್, ಸಿ.ಟಿ.ಮಂಜುನಾಥ್, ಹೊಸಹಳ್ಳಿ ಶಿವು ಭಾಗವಹಿಸಿದ್ದರು.

{ಡಾ.ಜಿ.ಪರಮೇಶ್ವರ್ } ಗೃಹ ಸಚಿವ

ಸಿದ್ದರಾಮಯ್ಯ ಅವರೇ ಮುಂದಿನ ಐದು ವರ್ಷವೂ ಸಿಎಂ ಆಗಿ ಇರುತ್ತಾರೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ. ಸದ್ಯಕ್ಕೆ ರಾಜ್ಯದಲ್ಲಿ ಸಿಎಂ ಬದಲಾವಣೆ ಪ್ರಶ್ನೆಯಿಲ್ಲ. ವಿಜಯೇಂದ್ರ ಏನು ಬೇಕಾದ್ರೂ ಹೇಳಲಿ. ವಿಜಯೇಂದ್ರ ಅವರೇನು ನಮ್ಮ ಪಕ್ಷದವರಾ? ನಮ್ಮ ಪಕ್ಷದ ತೀರ್ಮಾನ ಅವರಿಗೇನು ಗೊತ್ತು ಹೇಳಿ ?

ಸಮಾಚಾರ ಸಣ್ಣದಲ್ಲ

ಬಿಜೆಪಿ ಅವಧಿಯಲ್ಲೂ ವಕ್ಫ್ ಪರ ನೋಟಿಸ್

ವಿಜಯಪುರ: ಬಿಜೆಪಿ ಅಧಿಕಾರದಲ್ಲಿದ್ದಾಗ ಮಾಡಿದ್ದು ಏನು.? 1974 ರಿಂದ ಇಲ್ಲಿಯವರೆಗೆ ಏಕೆ ಹೋರಾಟ ಮಾಡಿಲ್ಲ? ಬಿಜೆಪಿ ಅಧಿಕಾರಾವಧಿಯಲ್ಲೂ ವಕ್ಫ್ ಪರ ನೋಟೀಸ್ ನೀಡಲಾಗಿದೆ. ಪಹಣಿಯಲ್ಲಿ ವಕ್ಫ್ ಎಂದು ನಮೂದು ಮಾಡಲಾಗಿದೆ. ಅವರ ಕಾಲದಲ್ಲಿ ಗೆಜೆಟ್ ಬಗ್ಗೆ ಹೋರಾಟ ಮಾಡಿಲ್ಲ ಎಂದು ಪ್ರಶ್ನಿಸಿ ಸಚಿವ ಡಾ.ಎಂ.ಬಿ.ಪಾಟೀಲ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ವಿಜಯೇಂದ್ರ-ಯತ್ನಾಳ್ ಪೈಪೋಟಿ: ವಕ್ಫ್ ಕಾಯ್ದೆ ವಿರೋಧಿಸಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬಿಜೆಪಿ ಕೈಗೊಂಡಿರುವ ಹೋರಾಟದ ಬಗ್ಗೆ ಪ್ರತಿಕ್ರಿಯಿಸಿ ಅವರು, ಬಿಜೆಪಿ 2014 ರ ಚುನಾವಣಾ ಪ್ರಣಾಳಿಕೆಯಲ್ಲಿ ವಕ್ಫ್ ಪರ ಭರವಸೆ ನೀಡಿದ್ದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಂಸತ್‌ನಲ್ಲಿ ವಕ್ಫ್ ಪರವಾಗಿ ಪ್ರಶ್ನೆ ಕೇಳಿದ್ದರು. ನಂತರ ವಕ್ಫ್ ವಿರುದ್ಧ ಹೋರಾಟ ಮಾಡಿದ್ದಾರೆ. ಈಗ ಬಿಜೆಪಿಯವರು ಹೋರಾಟ ಮಾಡುತ್ತಿದ್ದಾರೆ. ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಧ್ಯೆ ವಕ್ಫ್ ಹೋರಾಟದ ಹೆಗ್ಗಳಿಕೆಗಾಗಿ ಪೈಪೋಟಿ ನಡೆದಿದೆ ಎಂದರು.

ಅಪರಿಚಿತ ವಾಹನ ಡಿಕ್ಕಿ: ನಿರ್ವಾಹಕ ಸಾವು

ಚಿಕ್ಕಮಗಳೂರು: ಬಸ್ ರಿಪೇರಿ ಮಾಡುವಾಗ ಅಪರಿಚಿತ ವಾಹನ ಡಿಕ್ಕಿ ಹೊಡೆದು ಬಸ್ ಕಂಡಕ್ಟರ್ ಮೃತಪಟ್ಟ ಘಟನೆ ನಡೆದಿದೆ. ಆದರೆ ಈ ಘಟನೆಗೆ ಸ್ಪಂದಿಸದ ಮೇಲಾಧಿಕಾರಿಗಳ ಕ್ರಮ ಖಂಡಿಸಿ ಕೆಎಸ್ ಆರ್.ಟಿ.ಸಿ ಡಿಪೋ ಎದುರು ಶವ ಇಟ್ಟು ದಲಿತ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಶ್ರೀನಾಥ್ (40) ಅಪಘಾತದಲ್ಲಿ ಮೃತಪಟ್ಟ ನಿರ್ವಾಹಕ.

ಅಭಿವೃದ್ಧಿಯ ಅಸಮತೋಲನವೇಕೆ?

ಘಟ್ಟದ ಮೇಲೆ ಹಾಗೂ ಘಟ್ಟದ ಕೆಳಗೆ ಎಂದು ಎರಡು ವಿಭಾಗವಾಗಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿಯ ಸಿಂಹಪಾಲು ಕರಾವಳಿಯದ್ದು

ವಿನುತಾ ಹೆಗಡೆ, ಶಿರಸಿ

ಉತ್ತರ ಕನ್ನಡ ಜಿಲ್ಲೆಯಲ್ಲಿ ಏನಿಲ್ಲ , ಏನಿದೆ ಎಂದು ನೋಡಿದಾಗ ಒಮ್ಮೆ ಏನೆಲ್ಲವೂ ಇದೆ ಎಂದೆನಿಸುತ್ತದೆ. ಆದರೆ ಇಡೀ ಉತ್ತರ ಕನ್ನಡ ಜಿಲ್ಲೆ ಎರಡು ಭಾಗವಾಗಿ ವಿಂಗಡಣೆಯಾಗಿದೆ. ಘಟ್ಟದ ಮೇಲಿನ ಭಾಗ ಹಾಗೂ ಕರಾವಳಿ ಭಾಗ. ಕರಾವಳಿ ಭಾಗದಲ್ಲಿ ನೋಡಿದರೆ ಕಾರವಾರದಲ್ಲಿ ಬಂದರಿದೆ. ಹೊನ್ನಾವರ, ಕಾಸರಕೋಡು ಹಾಗೂ ಬೇಣಿಯಲ್ಲಿ ಬಂದರು ಆಗುತ್ತಿದೆ. ಇಲ್ಲಿ ಮೀನುಗಾರಿಕೆ ಇದೆ. ಆರ್ಥಿಕ ಅಭಿವೃದ್ಧಿ, ಉದ್ಯೋಗಾವಕಾಶ ಸಾಕಷ್ಟಿದೆ. ಆದರೆ ಇದೇ ಮೀನುಗಾರಿಕೆ ಅಥವಾ ಬಂದರು ನಿರ್ಮಾಣವನ್ನು ಘಟ್ಟದ ಮೇಲಿನ ಭಾಗದಲ್ಲಿ ಮಾಡಲಾಗದು ನಿಜ. ಆದರೆ ಇದಕ್ಕೂ ಮಿಗಿಲಾಗಿ, ಸೀ ಬರ್ಡ್ ನೌಕಾನೆಲೆ ಇದೆ. ಕೊಂಕಣ ರೈಲ್ವೆ ಇದೆ. ಮೆಡಿಕಲ್ ಕಾಲೇಜ್, ಎಂಜಿನಿಯರಿಂಗ್ ಕಾಲೇಜ್ ಇದೆ. ನ್ಯಾಷನಲ್ ಹೈವೇ ಇದೆ. ಕೈಗಾ ಅಣು ಸ್ಥಾವರವಿದೆ. ಇದರ ಸಿಎಸ್‌ಆರ್ ನಿಧಿಯಿಂದ ಸಾಕಷ್ಟು ಅಭಿವೃದ್ಧಿ ಆಗಲಿದೆ. ಪ್ರವಾಸೋದ್ಯಮ ಕರಾವಳಿಯಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ.

ಘಟ್ಟದ ಮೇಲೆ ಮೂಲಸೌಕರ್ಯವೂ ಇಲ್ಲ: ಆದರೆ, ಘಟ್ಟದ ಮೇಲಿನ ಭಾಗದಲ್ಲಿ ನೋಡಿದರೆ ಸರಿಯಾಗಿ ಮೂಲಸೌಕರ್ಯವೂ ಇಲ್ಲ. ಉದ್ಯೋಗಾವಕಾಶ ಸಿಗುವ ಯಾವ ಯೋಜನೆಯೂ ಇಲ್ಲ. ಎಲ್ಲ ಜಿಲ್ಲಾ ಕಚೇರಿಯೂ ಜಿಲ್ಲಾ ಕೇಂದ್ರ ಕಾರವಾರದಲ್ಲಿರುವುದರಿಂದ ಅಧಿಕಾರಿಗಳೂ ಸಹ ಸಹಸಜವಾಗಿಯೇ ಅಲ್ಲಿಯೇ ಇರುತ್ತಾರೆ. ಕಾರವಾರ ಘಟ್ಟದ ಮೇಲಿನ ಎಲ್ಲ ತಾಲೂಕಿಗೂ ದೂರದ ತಾಲೂಕಾಗಿದೆ. ಅಲ್ಲಿ ಸಂಪರ್ಕ ಬೆಳೆಸುವುದೂ ಕಷ್ಟಸಾಧ್ಯ. ಇದೆಲ್ಲವನ್ನೂ ನೋಡಿದರೆ ಉತ್ತರ ಕನ್ನಡ ಜಿಲ್ಲೆ ಎಂದು ಬಂದಾಗ ಎಲ್ಲವೂ ಘಟ್ಟದ ಕೆಳಗಿನ ಭಾಗದಲ್ಲಿಯೇ ಹೋಗುತ್ತದೆ. ಒಂದು ಜಿಲ್ಲೆ ಎರಡಾಗಬೇಕೆಂದು ಅಸಮಾಧಾನ ಮೂಡಲು ಮೂಲ ಕಾರಣ ಅಭಿವೃದ್ಧಿ ಅಸಮತೋಲನ.

ಪ್ರತ್ಯೇಕ ಜಿಲ್ಲೆ ಕೂಗು

ಉತ್ತರ ಕನ್ನಡ ಇಬ್ಭಾಗವಾಗಲು ಅಭಿವೃದ್ಧಿಯ ಅಸಮತೋಲನೇ ಮುಖ್ಯ ಕಾರಣ ಎನ್ನುವುದು ಹಲವು ಗಣ್ಯರ ಅಭಿಪ್ರಾಯ. ಘಟ್ಟದ ಮೇಲಿನ ಅಭಿವೃದ್ಧಿಯಾಗಬೇಕಾದರೆ, ಇಲ್ಲಿನ ಪ್ರತಿಭೆಗೆ ಉದ್ಯೋಗ ಸಿಗಬೇಕಾದರೆ, ಮೆಡಿಕಲ್ ಕಾಲೇಜ್, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆಗಬೇಕೆಂದರೆ ಪ್ರತ್ಯೇಕ ಜಿಲ್ಲೆಯಾದರೆ ಆಗುತ್ತದೆ ಎನ್ನುವ ಮನೋಭಾಗದಿಂದ ಪ್ರತ್ಯೇಕ ಜಿಲ್ಲೆಯ ಕೂಗು ಎದ್ದಿದೆ. ಇದು ಇಂದು ನಿನ್ನೆಯ ಕೂಗಲ್ಲ. ಬರುವಂತ ಅಭಿವೃದ್ಧಿ ಪರ ಯೋಜನೆಗಳೆಲ್ಲ ಕರಾವಳಿಗೆ ಹೋದಾಗ ನಮಗೇಕಿಲ್ಲ ಎನ್ನುವುದು ಘಟ್ಟದ ಮೇಲಿನವರ ಅಸಮಾಧಾನ. ಆದ್ದರಿಂದ ಪ್ರತ್ಯೇಕ ಜಿಲ್ಲೆ ಬೇಕು ಎನ್ನುವ ಹೋರಾಟ ನಡೆಯುತ್ತಲೇ ಇದೆ.

ಪ್ರವಾಸೋದ್ಯಮಕ್ಕೆ ಸೌಲಭ್ಯಗಳಿಲ್ಲ: ಘಟ್ಟದ ಮೇಲಿನ ಭಾಗದಲ್ಲಿ ಪ್ರವಾಸೋದ್ಯಮ ಬೆಳೆಯಲು ಸಾಕಷ್ಟು ಅನುಕೂಲಗಳಿವೆ. ಆದರೆ ಅದಕ್ಕೆ ಬೇಕಾದ ಯಾವ ಸೌಲಭ್ಯ ಸೌಕರ್ಯವೂ ಇಲ್ಲ. ಬಡವಾಗಿಯೇ ಉಳಿದಿದೆ. ಇಲ್ಲಿನ ಹಲವು ಪ್ರವಾಸಿತಾಣಗಳ ರಸ್ತೆಯನ್ನು ನೋಡಿದರೆ ಪ್ರವಾಸಿಗರು ಬರುವುದಕ್ಕೇ ಭಯಪಡುವ ವಾತಾವರಣವಿದೆ.

ಇಲ್ಲಿ ಉದ್ಯೋಗ ಸೃಷ್ಟಿಸಿ ಸಾಕಷ್ಟು ಆರ್ಥಿಕ ಲಾಭ ಪಡೆಯಲು ಮಾಡುವಂತ ಅಭಿವೃದ್ಧಿ ಕಾರ್ಯಕೈಗೊಳ್ಳ ಬಹುದಾಗಿದೆ ಆದರೆ ಬರುವ ಎಲ್ಲವೂ ಘಟ್ಟದ ಕೆಳಗಿನ ಕರಾವಳಿ ತೀರದಲ್ಲಿ ಆಗುತ್ತಿದೆ.

ಅಭಿವೃದ್ಧಿ ಮತ್ತು ಜನರ ಅನುಕೂಲಕ್ಕಾಗಿ ಪ್ರತ್ಯೇಕ ಜಿಲ್ಲೆಯಾಗಬೇಕಿದೆ. ಸರಕಾರದ ಎಲ್ಲ ಯೋಜನೆ, ನೂರಾರು ಕೋಟಿ ಅನುದಾನ ನಮಗೆ ಬರುತ್ತಿಲ್ಲ. ಎಲ್ಲವೂ ಅಲ್ಲಿಯೇ ಹೋಗುತ್ತಿದೆ. ಜಿಲ್ಲಾ ಕೇಂದ್ರ ಸಂಪರ್ಕಿಸಲು ನೂರಾರು ಕಿಮಿ ಹೋಗಬೇಕು ಆದ್ದರಿಂದ ನಮಗೆ ಶಿರಸಿ ಪ್ರತ್ಯೇಕ ಜಿಲ್ಲೆ ಬೇಕು. ಆಗಲಾದರೂ ಅಭಿವೃದ್ಧಿ, ಅನುಕೂಲ ಆಗಬಹುದು.

-ಉಪೇಂದ್ರ ಪೈ ಪ್ರತ್ಯೇಕ ಜಿಲ್ಲೆ ಹೋರಾಟಗಾರ

ಅಭಿವೃದ್ಧಿ ಎಲ್ಲೆಡೆಯೂ ಸಮಾನವಾಗಿ ಆಗಬೇಕು. ಜಿಲ್ಲೆ ಎರಡಾಗಬೇಕು, ಘಟ್ಟದ ಮೇಲೆ ಶಿರಸಿ ಪ್ರತ್ಯೇಕ ಜಿಲ್ಲೆಯಾಗಬೇಕು ಎನ್ನುವುದೆಲ್ಲ ಇದಕ್ಕೆ ಕಾರಣ ಆಗಬಾರದು. ಆದರೆ ಜಿಲ್ಲೆಯಲ್ಲಿ ಸಮಾನವಾಗಿ ಅಭಿವೃದ್ಧಿಯಾಗಬೇಕು. ಆ ನಿಟ್ಟಿನಲ್ಲಿ ಏನೇನು ಪ್ರಯತ್ನ ಮಾಡಬೇಕು ಅದನ್ನು ನಾನು ಪ್ರಾಮಾಣಿಕವಾಗಿಯೇ ಪ್ರಯತ್ನ ಮಾಡುತ್ತೇನೆ.

-ವಿಶ್ವೇಶ್ವರ ಹೆಗಡೆ ಕಾಗೇರಿ ಸಂಸದ.

ಇದೀಗ ವಿಮಾನ ನಿಲ್ದಾಣವೂ ಕರಾವಳಿಯಲ್ಲೇ ಆಗುತ್ತಿದೆ. ಘಟ್ಟದ ಮೇಲಿನ ಭಾಗದಲ್ಲಿ ಅದಾದರೂ ಆಗಿದ್ದರೆ. ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತಿತ್ತು. ಚತುಷ್ಪಥದಂತ ಹೆದ್ದಾರಿಯೂ ಇಲ್ಲಿಲ್ಲ. ಅದೆಲ್ಲ ಕಾರಣಕ್ಕಾಗಿಯೇ ಇರಬಹುದು ಶಿರಸಿ ಪ್ರತ್ಯೇಕ ಜಿಲ್ಲೆಯ ಹೋರಾಟ ಆರಂಭವಾಗಿದ್ದು.

ಶಿರಸಿಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಶಿಕ್ಷಣ ಮಂತ್ರಿಯಾಗಿದ್ದಾಗ ಶೈಕ್ಷಣಿಕ ಅಭಿವೃದ್ಧಿಯ ನಿಟ್ಟಿನಲ್ಲಿ ಶಿರಸಿ ಶೈಕ್ಷಣಿಕ ಜಿಲ್ಲೆಯಾಗಿ ಪ್ರತ್ಯೇಕಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಸಿದ್ದರಾಮಯ್ಯನವರೇ 5 ವರ್ಷ ಸಿಎಂ: ಪರಂ

ಮೈಸೂರು: ಸಿದ್ದರಾಮಯ್ಯ ಅವರೇ ಮುಂದಿನ ಐದು ವರ್ಷವೂ ಸಿಎಂ ಆಗಿ ಇರುತ್ತಾರೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಸ್ಪಷ್ಟಪಡಿಸಿದರು. ಮಾಧ್ಯಮಗಳೊಂದಿಗೆ ಮಾತನಾಡಿ, ಸದ್ಯಕ್ಕೆ ರಾಜ್ಯದಲ್ಲಿ ಸಿಎಂ ಬದಲಾವಣೆ ಪ್ರಶ್ನೆಯಿಲ್ಲ. ವಿಜಯೇಂದ್ರ ಏನು ಬೇಕಾದ್ರೂ ಹೇಳಲಿ ಅವರೇನು ನಮ್ಮ ಪಕ್ಷದವರಾ? ಎಂದು ಕುಟುಕಿದರು.

ಹೇಳಿಕೆ ತಪ್ಪಾಗಿ ಅರ್ಥೈಸಲಾಗಿದೆ: ರಾಜಕೀಯದಲ್ಲಿ ಯಾವಾಗ, ಏನಾಗುತ್ತೋ ಎಂಬ ಹೇಳಿಕೆ ಕುರಿತು ಸ್ಪಷ್ಟನೆ ನೀಡಿದ ಪರಮೇಶ್ವರ್, ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ. ನಾನು ಆ ರೀತಿ ಎಲ್ಲಿಯೂ ಹೇಳಿಲ್ಲ. ಸಿದ್ದರಾಮಯ್ಯ ಅವರು ಸುಭದ್ರ ಆಡಳಿತ ನೀಡುತ್ತಿದ್ದಾರೆ. ರಾಜ್ಯ ಕಾಂಗ್ರೆಸ್‌ನಲ್ಲಿ ಅವಧಿ ಮುಗಿದ ಬಳಿಕ ಅಧ್ಯಕ್ಷರ ಬದಲಾವಣೆ. ಅಧ್ಯಕ್ಷರು ಬದಲಾದರೆ ಅಂತ ಈ ರೀತಿ ಹೇಳಿದೆ ಅಷ್ಟೇ. ನಾನು ಪಕ್ಷದ ವಿಚಾರವಾಗಿ ಬೇಗ ಕಟ್ಟಡ ಕಟ್ಟಿ ಅಂತ ಹೇಳಿದೆ ಅಷ್ಟೇ ಎಂದು ತಿಳಿಸಿದರು.

ಮೊಮ್ಮಗನಿಂದಲೇ ವೃದ್ಧ ದಂಪತಿ ಕೊಲೆ

ಚಿಕ್ಕಮಗಳೂರು: ಹಣಕಾಸಿನ ವಿಚಾರಕ್ಕೆ ವೃದ್ಧ ದಂಪತಿಯನ್ನು ಮೊಮ್ಮಗನೇ ಕೊಲೆ ಮಾಡಿರುವ ಘಟನೆ ಮಲ್ಲಂದೂರು ಸಮೀಪದ ಕೊಳಗಾಮೆ ಗ್ರಾಮದಲ್ಲಿ ನಡೆದಿದೆ. ಮೊಗಣ್ಣಗೌಡ ಎಂಬುವವರ ಕಾಫಿ ತೋಟದಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಬಸಪ್ಪ (65) ಹಾಗೂ ಲಲಿತಮ್ಮ (58) ಕೊಲೆಗೀಡಾದವರು. ಮೂಲತಃ ಗುಬ್ಬಿ ತಾಲೂಕಿನವರಾಗಿದ್ದ ದಂಪತಿ ಕಳೆದ 25 ವರ್ಷಗಳಿಂದ ಕೊಳಗಾಮೆಯಲ್ಲಿ ವಾಸವಿದ್ದರು. ಶುಕ್ರವಾರ ರಾತ್ರಿ ಬಸಪ್ಪನ ಅಣ್ಣನ ಮಗಳ ಮಗ ನಿಶಾಂತ್ ಇಬ್ಬರನ್ನು ಕೊಲೆ ಮಾಡಿ ಪರಾರಿಯಾಗಿದ್ದಾನೆ. ಮಲ್ಲಂದೂರು ಪೊಲೀಸರು ಸ್ಥಳಕ್ಕೆ ತೆರಳಿ ಮೃತದೇಹಗಳನ್ನು ಚಿಕ್ಕಮಗಳೂರು ಜಿಲ್ಲಾಸ್ಪತ್ರೆಯಲ್ಲಿ ಶವ ಪರೀಕ್ಷೆಗೆ ರವಾನಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಅಇಂ(ವಿ)/ಪ್ರ(ನಿ)/ಬೆಂಮಕ್ಷೇವ(ಉ)/ಕಾನಿಇಂ(ಕ)/ಸಕಾನಿಇಂ-3/ಕ-324(9)/24-25/5995-97 ದಿನಾಂಕ: 21.11.2024

ಇ-ಟೆಂಡರ್ ಪ್ರಕಟಣೆ (KPP ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯ, ವಿಚಾರಣೆ ಸಂಖ್ಯೆ: **ಕವಿಪ್ರನಿನಿ/ಅಇಂ(ವಿ)/ಪ್ರ(ನಿ)/ಬಿಎಂಎಜೆಡ್(ಉ)/ಕಾನಿಇಂ(ಕ)/ಸಕಾಇಂ-3/24-25/ಇಪಿಆರ್-04 ದಿನಾಂಕ: 30.08.2024** ಅನ್ವಯ ಬಿಎಂಎಜೆಡ್(ಉ) ವೃತ್ತಕ್ಕೆ ಸಂಬಂಧಿಸಿದಂತೆ, "ಹಾಟ್ ಲೈನ್ ವಿಭಾಗದಲ್ಲಿರುವ ಇನ್ಸುಲೇಟೆಡ್ ಏರಿಯಲ್ ಪ್ಲಾಟ್‌ಫಾರಂ ವಾಹನ ಅಥವಾ ಟೆಂಪೊ ಟ್ರಾವಲೆರ್ ಅಥವಾ ಇನ್ಸುಲೇಟೆಡ್ ಸ್ಕೈ ಲಾಡರ್ ಪಿಕ್-ಅಪ್ ವಾಹನ ಚಲಾಯಿಸಲು ಡ್ರೈವರ್ ಒದಗಿಸಲು"(2ನೇ ಕರೆ)ಬಿಡ್‌ಗಳನ್ನು ಆಹ್ವಾನಿಸಿದೆ. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ದಿನಾಂಕ **25.11.2024 ರಂದು ಅಥವಾ ಆನಂತರ** ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in.** ಗೆ **"E procurement KPTCL"** ಹೈಪರ್‌ಲಿಂಕ್‌ನಲ್ಲಿ ಅಥವಾ **https://kppp.karnataka.gov.in** ಇಲ್ಲಿಗೆ ಲಾಗ್‌ಇನ್ ಆಗಿ ಪಡೆದುಕೊಳ್ಳಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ (ನಿರ್ವಹಣೆ),
ಬೆಂ.ಮ.ಕ್ಷೇ.ವ. ಉತ್ತರ ವೃತ್ತ, ನೆಲಮಹಡಿ, ಕವಿಪ್ರನಿನಿ ಕಚೇರಿ ಸಂಕೀರ್ಣ,
ಆನಂದರಾವ್ ವೃತ್ತ, ಬೆಂಗಳೂರು-560 009. ದೂ: 080-22386686/85.

ಕರ್ನಾಟಕ ಸರ್ಕಾರ
ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ
ನೊಂದಣಿ ಸಂಖ್ಯೆ: ಓಟಿಸಿ/144/ಹೆಚ್.ಇ.ಟಿ/94-95/ದಿನಾಂಕ : 15.3.1995
ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೊಳಪಟ್ಟ ಸಂಸ್ಥೆ
ಪಶುಪಾಲನಾ ಭವನ ಹಿಂಭಾಗ, 1 ನೇ ಮಹಡಿ, ಹೆಬ್ಬಾಳ, ಬೆಂಗಳೂರು-560 024.
ದೂರವಾಣಿ ಸಂಖ್ಯೆ : 080- 2990 2415, ಇ-ಮೇಲ್ : mdkcpfbangalore@gmail.com

ಸಂ.ವ್ಯ.ನಿ/ಕೆ.ಸಿ.ಪಿ.ಎಫ್/ದೇಸಿ ಚಿಕ್ಸ್/ ಟೆಂಡರ್/2024-25 ದಿನಾಂಕ: 22.11.2024

ಅಲ್ಪಾವಧಿ ಟೆಂಡರ್ ನೋಟಿಫಿಕೇಷನ್ ("ಕೆ.ಪಿ.ಪಿ ಪೋರ್ಟಲ್" ಮೂಲಕ ಮಾತ್ರ)

2024-25 ನೇ ಸಾಲಿನ ಯೋಜನಾ ಕಾರ್ಯಕ್ರಮದಡಿ ಗ್ರಾಮೀಣ ಭಾಗದ ಅರ್ಹ ರೈತ ಮಹಿಳೆಯರಿಗೆ ಐದು ವಾರದ ನಾಟಿ ಕೋಳಿ ಮರಿಗಳನ್ನು ಉಚಿತವಾಗಿ ವಿತರಿಸುವ ಸಲುವಾಗಿ ನಾಟಿ ಕೋಳಿಮರಿಗಳನ್ನು ಸರಬರಾಜು ಮಾಡಲು KPP Portal ಮೂಲಕ ಒಂದು ವರ್ಷದ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿದ ಮೊತ್ತ ರೂ. 367.55 ಲಕ್ಷಗಳು. ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ : 22.11.2024 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು KPP Portal ನಲ್ಲಿ ದಿನಾಂಕ : 22.11.2024 ರಿಂದ 07.12.2024 ರವರೆಗೆ 17.30 ಗಂಟೆಯೊಳಗೆ ಅಪ್ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ KPP Portal ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ, ಹೆಬ್ಬಾಳ.
DIPR/CP/3384/Zen/2024-25

ಕರ್ನಾಟಕ ಸರ್ಕಾರ (ರೇಷ್ಮೆ ಇಲಾಖೆ)
ರೇಷ್ಮೆ ಉಪ ನಿರ್ದೇಶಕರ ಕಛೇರಿ,
ಜಿಲ್ಲಾ ಪಂಚಾಯತ್,ವಿಜಯನಗರ ರೇಷ್ಮೆ ಇಲಾಖೆ, ರಾಜೀವ ನಗರ, ಹೊಸಪೇಟೆ -583201
Email: ddsvijayanagara2024@gmail.com Mob: 9480409030

ಟೆಂಡರ್ ಪ್ರಕಟಣೆ(ಇ- ಪ್ರಕ್ಯೂರ್‌ಮೆಂಟ್ ಮೂಲಕ)

ವಿಜಯನಗರ ಜಿಲ್ಲೆಯ ರೇಷ್ಮೆ ಬೆಳೆಗಾರರಿಗೆ ವಿತರಿಸಲು ರೇಷ್ಮೆ ಬೆಳೆಗೆ ಸೊಂಕುನಿವಾರಕಗಳನ್ನು - ಗ್ರೇಡ್ -1 ಬ್ಲಿಚಿಂಗ್ ಪೌಡರ್ **(Grade-1 Bleaching Powder)**,ಸೋಂಕು ನಿವಾರಕಗಳು **(Disinfectants)** ಮತ್ತು ಊಜಿ ಟ್ರಾಪ್ **(Uzi Trap)** ಸರಬರಾಜು ಮಾಡಲು ಆಸಕ್ತ ಸರಬರಾಜುದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಸಲ್ಲಿಸಲು ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ-ಪ್ರಕ್ಯೂರ್ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಸಲ್ಲಿಸಲು ದಿನಾಂಕಗಳ ವಿವರ ಈ ಕೆಳಗಿನಂತಿದೆ.

1) ಟೆಂಡರ ವಿವರ: ರೇಷ್ಮೆ ಬೆಳೆಗೆ ಬಳಸುವ ಗ್ರೇಡ್ -1 ಬ್ಲಿಚಿಂಗ್ ಪೌಡರ್ **(Grade-1 Bleaching Powder)**,ಸೋಂಕು ನಿವಾರಕಗಳು **(Disinfectants)**, ಊಜಿ ಟ್ರಾಪ್ **(Uzi Trap)** ಸರಬರಾಜು ಮಾಡಲು ಟೆಂಡರ್ ಪ್ರಕಟಣೆ 2) ಟೆಂಡರ್ ಸಂಖ್ಯೆ ರೇಉನಿ/ವಿ.ನಗರ/ಇ-ಪ್ರೊ/ಸೋಂ.ನಿ/40/2024-25 ದಿನಾಂಕ:-**20-11-2024** 3) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ:- **20-11-2024**. 4) ಪ್ರೀ- ಬಿಡ್ ಸಭೆ ದಿನಾಂಕ:- **29-11-2024** ಬೆಳಿಗ್ಗೆ 11.30 (ಅವಶ್ಯಕತೆ ಇದ್ದಲ್ಲಿ) 5) ಕಛೇರಿ ವಿಳಾಸ:- ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್ ವಿಜಯನಗರ, ರೇಷ್ಮೆ ಇಲಾಖೆ, ರಾಜೀವ್ ನಗರ, ಹೊಸಪೇಟೆ-583201 6)ಟೆಂಡರ್ ಡೌನ್‌ಲೋಡ್ ಮಾಡಲು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ & ಸಮಯ **09-12-2024** ಸಂಜೆ 05.00 ಗಂಟೆ 7)ಇ.ಎಂ.ಡಿ ಹಾಗೂ ಭದ್ರತಾ ಠೇವಣಿ ಮೊತ್ತ : ಟೆಂಡರ್ ಡಾಕ್ಯೂಮೆಂಟ್ನಲ್ಲಿ ತಿಳಿಸಿರುವಂತೆ 8)ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ:- **11-12-2024** ಬೆ:- 11.00 9)ಆರ್ಥಿಕ ಬಿಡ್ ತೆರೆಯುವ ದಿನಾಂಕ:- **18-12-2024** ಬೆ: 11.30 (ತಾತ್ಕಾಲಿಕ ವೇಳಾಪಟ್ಟಿ ಬದಲಾವಣೆಗೆ ಒಳಪಟ್ಟಿದೆ) . ಆಸಕ್ತ ಸರಬರಾಜುದಾರರು " ಇ-ಪೋರ್ಟಲ್" ಮುಖಾಂತರ ಸಲ್ಲಿಸತಕ್ಕದ್ದು . ಹೆಚ್ಚಿನ ವಿವರಗಳನ್ನು **www.eproc.karnataka.gov.in** ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು

ಸಹಿ/- ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್ ವಿಜಯನಗರ.
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/381

ಎನ್‌ಕೌಂಟರ್ ಪ್ರಕರಣ: ಜಯಂತ್ ಗೌಡ ವಿಚಾರಣೆ

ಹೆಬ್ರಿ ಠಾಣೆಗೆ ಗ್ರಾಮಸ್ಥರ ಮುತ್ತಿಗೆ, ಪ್ರತಿಭಟನೆ

ಉಡುಪಿ: ಹೆಬ್ರಿ ತಾಲ್ಲೂಕಿನ ಪೀತುಬೈಲ್‌ನಲ್ಲಿ ನಕ್ಸಲ್ ಮುಖಂಡ ವಿಕ್ರಂ ಗೌಡನ ಎನ್ ಕೌಂಟರ್ ನಡೆದ ಮನೆಯ ಮಾಲೀಕ ಜಯಂತ ಗೌಡ ಅವರನ್ನು ಪೊಲೀಸರು ವಿಚಾರಣೆಗೆ ಕರೆದಿದ್ದನ್ನು ಖಂಡಿಸಿ ಹೆಬ್ರಿ ಪೊಲೀಸ್ ಠಾಣೆಯ ಎದುರು ಮಲೆಕುಡಿಯ ಸಂಘದ ಸದಸ್ಯರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಎನ್‌ಕೌಂಟರ್‌ಗೆ ಪ್ರಕರಣ ವಿಚಾರಣೆ ಗಾಗಿ ಬೆಳಗ್ಗೆ ಪೊಲೀಸರು ಠಾಣೆಗೆ ಕರೆ ತಂದಿದ್ದಾರೆ. ಈ ಬಗ್ಗೆ ಅಮಾಯಕನಾದ ಜಯಂತಗೌಡನಿಗೆ ಏನೂ ತಿಳಿದಿಲ್ಲ. ಆತನನ್ನು ಏಕೆ ಠಾಣೆಗೆ ಕರೆದುಕೊಂಡು ಬಂದಿದ್ದೀರಿ, ಅಲ್ಲಿಯೇ ವಿಚಾರಣೆ ನಡೆಸಬಹುದಿತ್ತು ಎಂದು ಮಲೆಕುಡಿಯ ಸಮಾಜದ ಮುಖಂಡರು, ಗ್ರಾಮಸ್ಥರು ಹೆಬ್ರಿ ಠಾಣೆಗೆ ಮುತ್ತಿಗೆ ಹಾಕಿದರು. ಆತನನ್ನು ಕೂಡಲೇ ಬಿಡುವಂತೆ ಠಾಣಾಧಿಕಾರಿ ಮಹೇಶ್‌ಗೆ ಒತ್ತಾಯಿಸಿದರು. ಪ್ರತಿಭಟನೆಗೆ ಮಣಿದ ಪೊಲೀಸರು ಜಯಂತ ಗೌಡನನ್ನು ಬಿಡುಗಡೆ ಮಾಡಿದರು.

ಪೊಲೀಸರಿಗೆ ಎಚ್ಚರಿಕೆ: ಈ ವೇಳೆ, ಮಾತನಾಡಿದ ರಾಜ್ಯ ಮಲೆಕುಡಿಯ ಸಂಘದ ಅಧ್ಯಕ್ಷ ಶ್ರೀಧರ ಗೌಡ, ಹಿಂಸಾತ್ಮಕ ಹೋರಾಟ ನಡೆಸುವವರಿಗೆ ಮತ್ತು ಸಂಘಟನೆಗಳ ಬಗ್ಗೆ ನಮ್ಮ ವಿರೋಧವಿದೆ. ಆದರೆ ವಿಚಾರಣೆ ನೆಪದಲ್ಲಿ ಮುಗ್ಧ ಜನರಿಗೆ ಪೊಲೀಸರು ಕಿರುಕುಳ ನೀಡಬಾರದು ಎಂದು ತಾಕೀತು ಮಾಡಿದರು. ಮುಂದೆ ಜನರಿಗೆ ಪೊಲೀಸರು ಕಿರುಕುಳ ನೀಡಿದರೆ ಹೋರಾಟ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ಕೊಟ್ಟರು.

ಮಲೆಕುಡಿಯ ಸಮಾಜದ ಇತರ ಪ್ರಮುಖರಾದ ಗಂಗಾಧರ ಗೌಡ, ನಾಡ್ಪಾಲು ಗ್ರಾ.ಪಂ. ಅಧ್ಯಕ್ಷ ನವೀನ್ ಕುಮಾರ್, ಹೆಬ್ರಿ ಗ್ರಾ.ಪಂ. ಅಧ್ಯಕ್ಷ ತಾರಾನಾಥ್ ಬಂಗೇರ, ವಿಜಯ ಶೆಟ್ಟಿ ಮೊದಲಾದವರಿದ್ದರು.

ಬೆಂಗಳೂರಲ್ಲಿ 4 ವರ್ಷಗಳ ತರಗತಿ: ಏರ್ ಇಂಡಿಯಾದಿಂದ ಮಹತ್ವದ ಯೋಜನೆ

ವಿಮಾನ ನಿರ್ವಹಣೆ ತರಬೇತಿ ಸಂಸ್ಥೆ ಸ್ಥಾಪನೆ

ಬೆಂಗಳೂರು: ಬೆಂಗಳೂರಿನಲ್ಲಿ ಮೂಲಭೂತ ನಿರ್ವಹಣೆ ತರಬೇತಿ ಸಂಸ್ಥೆ ಸ್ಥಾಪಿಸಲಾಗುತ್ತಿದ್ದು, 2+2 ವರ್ಷಗಳ ವಿಮಾನ ನಿರ್ವಹಣೆ ಎಂಜಿನಿಯರಿಂಗ್ ತರಬೇತಿ ನೀಡಲಾಗುವುದು ಎಂದು ಏರ್ ಇಂಡಿಯಾ ಕಂಪನಿ ಹೇಳಿದೆ.

ನಾಗರಿಕ ವಿಮಾನಯಾನ ನಿರ್ದೇಶನಾಲಯ ಪ್ರಮಾಣೀಕರಿಸಿದ ಸಂಯೋಜಿತ 2+2 ವರ್ಷಗಳ ತರಬೇತಿ ಇದಾಗಿದ್ದು, ಮೂಲ ನಿರ್ವಹಣಾ ತರಬೇತಿ ಸಂಸ್ಥೆ ಭಾರತದಲ್ಲಿ ದೃಢವಾದ, ಭವಿಷ್ಯಕ್ಕೆ ಸಿದ್ಧವಾದ ವಾಯುಯಾನ ಪರಿಸರ ವ್ಯವಸ್ಥೆ ನಿರ್ಮಿಸುವತ್ತ ಒಂದು ಹೆಜ್ಜೆಯಾಗಿದೆ. ಇದು ಏರ್ ಇಂಡಿಯಾ ವಿಮಾನ ನಿರ್ವಹಣಾ ಎಂಜಿನಿಯರ್‌ಗಳ ಲಭ್ಯತೆ ಬಲಪಡಿಸುವುದರೊಂದಿಗೆ ಸ್ವಾವಲಂಬಿಯನ್ನಾಗಿ ಮಾಡುತ್ತದೆ.

ವಿಮಾನ ನಿರ್ವಹಣಾ ಎಂಜಿನಿಯರಿಂಗ್ ತರಬೇತಿ ಕಾರ್ಯಕ್ರಮಕ್ಕಾಗಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದೊಂದಿಗಿನ ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು, ಪ್ರಾಯೋಗಿಕ ತರಬೇತಿ ಮತ್ತು ಅರ್ಹ ತರಬೇತಿದಾರರಿಗಾಗಿ ಆಧುನಿಕ ತರಗತಿ ಕೊಠಡಿಗಳು, ಸುಸಜ್ಜಿತ ಪ್ರಯೋಗಾಲಯ ಒಳಗೊಂಡಿದೆ ಎಂದು ಏರ್ ಇಂಡಿಯಾ ಹೇಳಿದೆ.

ವೃತ್ತಿಪರ ಭವಿಷ್ಯ ಬದಲಿಸಲಿದೆ: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸನ್ನಿಹದಲ್ಲಿ ಮೂಲ ನಿರ್ವಹಣಾ ತರಬೇತಿ ಸಂಸ್ಥೆ ಸ್ಥಾಪನೆಯಿಂದ ವಿಮಾನ ನಿರ್ವಹಣೆ ಎಂಜಿನಿಯರಿಂಗ್ ಕೆಡೆಟ್‌ಗಳು ನೈಜ-ಪ್ರಪಂಚದ ಅನುಭವ ಪಡೆಯಲು ಅನುವು ಮಾಡಿಕೊಡುತ್ತದೆ. ಅಗತ್ಯಗಳಿಗೆ ಅನುಗುಣವಾಗಿ ವೃತ್ತಿಪರರಾಗಿ ಅವರ ಭವಿಷ್ಯ ಬೆಂಬಲಿಸುತ್ತದೆ.

ವಿಮಾನ ನಿರ್ವಹಣೆ ಎಂಜಿನಿಯರಿಂಗ್ ಪದವೀಧರರಿಗೆ ವಿಶೇಷ ವೃತ್ತಿ ಮಾರ್ಗಗಳನ್ನು ಒದಗಿಸುತ್ತದೆ. ವಿಶ್ವವಿದ್ಯಾನಿಲಯದ ಸಹಭಾಗಿತ್ವದೊಂದಿಗೆ ಏಕಕಾಲದಲ್ಲಿ ಸ್ನಾತಕೋತ್ತರ ಪದವಿ ಮುಂದುವರಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗುತ್ತದೆ, ಇದು ಅವರ ಶೈಕ್ಷಣಿಕ ಮತ್ತು ವೃತ್ತಿ ಅವಕಾಶಗಳನ್ನು ಹೆಚ್ಚಿಸುತ್ತದೆ ಎಂದು ಕಂಪನಿ ಹೇಳಿದೆ.

ಸುಸಜ್ಜಿತ ಕ್ಯಾಂಪಸ್

ಬೆಂಗಳೂರು ಏರ್‌ಪೋರ್ಟ್ ನಗರದಲ್ಲಿ 86,000 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಲಾಗುವ ಕ್ಯಾಂಪಸ್ 2026 ರ ಮಧ್ಯಭಾಗದಲ್ಲಿ ಕಾರ್ಯನಿರ್ವಹಿಸುವ ನಿರೀಕ್ಷೆಯಿದೆ. ವಿಮಾನ ನಿರ್ವಹಣೆ ಮತ್ತು ಎಂಜಿನಿಯರಿಂಗ್ ಕಾರ್ಯಾಚರಣೆಗಳಿಗಾಗಿ ನುರಿತ ವೃತ್ತಿಪರರ ಕಾರ್ಯಪಡೆ ಬೆಳೆಸುವುದು ಮೂಲ ನಿರ್ವಹಣಾ ತರಬೇತಿ ಸಂಸ್ಥೆ ಗುರಿಯಾಗಿದೆ. ಅಲ್ಲಿ ವಿದ್ಯಾರ್ಥಿಗಳು ಅನುಭವ ಮತ್ತು ತರಬೇತಿ ಪಡೆಯುತ್ತಾರೆ, ಉದ್ಯಮದ ಮಾನದಂಡ ಮತ್ತು ಏರ್ ಇಂಡಿಯಾದ ನಿರ್ದಿಷ್ಟ ಅವಶ್ಯಕತೆಗಳಿಗೆ ಬದ್ಧರಾಗುತ್ತಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕತಾರಿನಲ್ಲಿ ಭಾರತೀಯ ಸಾಂಸ್ಕೃತಿಕ ಕೇಂದ್ರವು ಆಯುರ್ವೇದ ದಿನಾಚರಣೆ ಆಚರಿಸಿತು. ಕಾರ್ಯಕ್ರಮದಲ್ಲಿ ಭಾರತೀಯ ದೂತಾವಾಸದ ಉಪಮುಖ್ಯಸ್ಥ ಸಂದೀಪ್ ಕುಮಾರ್ ಭಾಗವಹಿಸಿದ್ದರು. ಈ ವೇಳೆ ಡಾ. ಫಸಿಹ ಅಸ್ಕರ್ 'ಆಯುರ್ವೇದ ಹಾಗೂ ಪ್ರಪಂಚದ ಆರೋಗ್ಯ' ಎನ್ನುವ ವಿಷಯದ ಮೇಲೆ ಮಾತನಾಡಿದರು. ಈ ವೇಳೆ ಐಸಿಸಿ ಕಾರ್ಯದರ್ಶಿ ಅಬ್ರಹಾಂ ಜೋಸೆಫ್, ಉಪಾಧ್ಯಕ್ಷ ಸುಬ್ರಹ್ಮಣ್ಯ ಹೆಬ್ಬಾಗಿಲು ಮತ್ತಿತರರು ಇದ್ದರು.

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123.
ಇ-ಮೇಲ್: nelamangala.pa@gmail.com Phone: 9663046622

ಸಂಖ್ಯೆ: ನೆಯೋಪ್ರಾ:CLU:28:2024-25 ದಿನಾಂಕ: 21-11-2024

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13-02-2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಗೊಲ್ಲಹಳ್ಳಿ** ಗ್ರಾಮವು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ:01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ **'ವಾಣಿಜ್ಯ'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ" ವಲಯದಿಂದ "ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1. ಶ್ರೀ ಎನ್.ಪ್ರಕಾಶ್ ಬಿನ್ ಲೇಟ್ ಎಂ.ನರಸಿಂಹಯ್ಯ 2. ಶ್ರೀಮತಿ ರೇಣುಕಾ ಕೋಂ ಎನ್.ಪ್ರಕಾಶ್	ನೆಲಮಂಗಲ/ ಕಸಬಾ/ ಗೊಲ್ಲಹಳ್ಳಿ	105	01-27	ವ್ಯವಸಾಯ	ವಾಣಿಜ್ಯ

ಷರಾ:- ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಾಣಿಜ್ಯ ಸಮುಚ್ಚಯ ಇಲ್ಲದೆ ಇರುವುದರಿಂದ ಪ್ರಶ್ನಿತ ಜಮೀನಿನಲ್ಲಿ ಉತ್ತಮ ಸೌಲಭ್ಯಗಳನ್ನೊಳಗೊಂಡ ವಾಣಿಜ್ಯ ಸಮುಚ್ಚಯ ಸ್ಥಾಪಿಸಿದಲ್ಲಿ, ಸ್ಥಳೀಯ ಹುದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ" ವಲಯದಿಂದ "ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.
ವಾಸಾಸಂಇ/ವಾಪ್ರ/3392/2024-25

ಚಿಕಿತ್ಸೆ ಬಳಿಕ ದರ್ಶನ್ ಮತ್ತೆ ಜೈಲಿಗೆ

ರೇಣುಕಾಸ್ವಾಮಿ ಕೊಲೆ ಪ್ರಕರಣ: ಗೃಹ ಸಚಿವ ಪರಮೇಶ್ವರ ಸ್ಪಷ್ಟನೆ

ಮೈಸೂರು: ಶಸ್ತ್ರಚಿಕಿತ್ಸೆ ಬಳಿಕ ನಟ ದರ್ಶನ್ ಮತ್ತೆ ಜೈಲಿಗೆ ಹೋಗಬೇಕು ಎಂದು ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಟ ದರ್ಶನ್ ಅವರು ಬೆನ್ನು ನೋವಿನ ಸಮಸ್ಯೆ ಹಿನ್ನೆಲೆ ಹೈಕೋರ್ಟ್ ನಿಂದ ಮಧ್ಯಂತರ ಜಾಮೀನು ಪಡೆದು ಬೆಂಗಳೂರಿನ ಕೆಂಗೇರಿ ಬಳಿಯ ಬಿಜಿಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದರ್ಶನ್ ಜಾಮೀನು ಕೇಳಬಹುದು. ಹಾಗಾಗಿ ಅವರಿಗೆ ಜಾಮೀನು ಕೊಡದಂತೆ ಸುಪ್ರೀಂಕೋರ್ಟ್‌ಗೆ ಅರ್ಜಿ ಹಾಕುತ್ತೇವೆ. ಕೊಲೆ ಪ್ರಕರಣದ ತನಿಖೆ ಪೂರ್ಣವಾದ ಬಳಿಕ ಸಲ್ಲಿಸುತ್ತೇವೆ ಎಂದರು.

ಶಸ್ತ್ರಚಿಕಿತ್ಸೆ ನಿಗದಿಯಾಗಿಲ್ಲ : ಚಿಕಿತ್ಸೆಯ ಬಳಿಕ ದರ್ಶನ ವಾಪಸ್ ಜೈಲಿಗೆ ಹೋಗಬೇಕು. ದರ್ಶನ್‌ಗೆ ಶಸ್ತ್ರಚಿಕಿತ್ಸೆ ದಿನಾಂಕ ನಿಗದಿ ಮಾಡಿಲ್ಲ, ರಕ್ತದೊತ್ತಡ ಕಾರಣದಿಂದ ಆಪರೇಷನ್ ವಿಳಂಬವಾಗಿದೆ. ಚಿಕಿತ್ಸೆಗೆ ದರ್ಶನ್ ಸಿದ್ಧರಿದ್ದಾರೆ ಅಂತ ವೈದ್ಯಕೀಯ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಯಾವಾಗ ಸರ್ಜರಿ ಯಾವ ದಿನಾಂಕದಲ್ಲಿ ಸರ್ಜರಿ ಮಾಡಲಾಗುತ್ತದೆ ಎಂಬುದು ತಿಳಿದಿಲ್ಲ ಎಂದು ಸಚಿವರು ತಿಳಿಸಿದರು.

ಬುಡಾ ಆಯುಕ್ತ ಸೇರಿ 3 ಜನಲೋಕಾ ಬಲೆಗೆ

ಬೀದರ್: ಕೃಷಿಯೇತರ ಜಮೀನಿನ ಎನ್.ಎ. ಲೇಔಟ್ ನಿವೇಶನಗಳ ಮಾರಾಟದ ಅನುಮತಿಗಾಗಿ ಹತ್ತು ಲಕ್ಷ ನಗದು ಲಂಚ ಪಡೆಯುತ್ತಿದ್ದಾಗ ಇಲ್ಲಿನ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಆಯುಕ್ತ ಸೇರಿದಂತೆ ಮೂವರು ಶುಕ್ರವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಪ್ರಾಧಿಕಾರದ ಆಯುಕ್ತ ಶ್ರೀಕಾಂತ ಚಿಮಕೋಡೆ, ಸದಸ್ಯ ಚಂದ್ರಕಾಂತ ರೆಡ್ಡಿ ಹಾಗೂ ಅವರ ಆಪ್ತ ಸಿದ್ದು ಹೂಗಾರನನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ.

50 ಲಕ್ಷ ಲಂಚಕ್ಕೆ ಬೇಡಿಕೆ: ಬೀದರ್‌ನ ಚಿಕ್ಕಪೇಟೆಯಲ್ಲಿ ಸರ್ವೆ ನಂಬರ್ 26ರಲ್ಲಿ ಕೃಷಿಯೇತರ ಜಮೀನಿನ ಶೇ 60ರಷ್ಟು ನಿವೇಶನ ಬಿಡುಗಡೆ ಮಾಡಿ, ಅವುಗಳ ಮಾರಾಟಕ್ಕೆ ಅನುಮತಿ ಕೊಡಲು ಶ್ರೀಕಾಂತ ಹಾಗೂ ಚಂದ್ರಕಾಂತ 50 ಲಕ್ಷ ರು. ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಅದರನ್ವಯ ಹತ್ತು ಲಕ್ಷ ಮುಂಗಡ ಕೊಡುವುದರ ಬಗ್ಗೆ ಮಾತುಕತೆಯಾಗಿತ್ತು. ಬೀದರ್‌ನ ಪ್ರತಾಪ ನಗರದ ದಾಲ್‌ಮಿಲ್ ಸಮೀಪ ಶ್ರೀಕಾಂತ ಹಾಗೂ ಚಂದ್ರಕಾಂತ ಅವರ ಆಪ್ತ ಸಿದ್ದು ಹೂಗಾರ ಎಂಬಾತ 10 ಲಕ್ಷ ನಗದು ಪಡೆಯುತ್ತಿದ್ದಾಗ ದಾಳಿ ನಡೆಸಿ, ವಶಕ್ಕೆ ಪಡೆಯಲಾಯಿತು. ಆನಂತರ ಶ್ರೀಕಾಂತ ಹಾಗೂ ಚಂದ್ರಕಾಂತ ಅವರನ್ನೂ ವಶಕ್ಕೆ ಪಡೆಯಲಾಗಿದೆ ಎಂದು ಲೋಕಾಯುಕ್ತ ಎಸ್ಪಿ ಉಮೇಶ ಬಿ.ಕೆ. ತಿಳಿಸಿದ್ದಾರೆ.

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಡಜನರ ಕಲ್ಯಾಣದ ಉದ್ದೇಶಕ್ಕಾಗಿಯೇ ಇರುವ ಬಿಪಿಎಲ್ ಪಡಿತರ ಚೀಟಿಯನ್ನು ಆದಾಯ ತೆರಿಗೆ ಪಾವತಿಸುವವರಿಗೆ ಮತ್ತು ಸರಕಾರಿ ನೌಕರರಿಗೆ ಏಕೆ ಕೊಡಬೇಕು..? ಅರ್ಹರ, ಬಡಜನರ ಪಾಲಿನ ಅಕ್ಕಿ ಅನರ್ಹರ ಪಾಲಾಗಲು ನಮ್ಮ ಸರಕಾರ ಬಿಡಲ್ಲ.

ಮಂಜುನಾಥ, ಬೆಂಗಳೂರು

ಚುನಾವಣೆ ಸಮಯದಲ್ಲಿ ಈ ಮಾತನ್ನು ಏಕೆ ಹೇಳಲಿಲ್ಲ ಮುಖ್ಯಮಂತ್ರಿಗಳೇ..? ಎಲ್ಲರಿಗೂ 10 ಕೆ.ಜಿ. ಅಕ್ಕಿ ಅಂತ ಘೋಷಿಸಿದಿರಲ್ಲ...ಮತ್ತು ಸಿಕ್ಕ ಸಿಕ್ಕ ಕಡೆ ನುಡಿದಂತೆ ನಡೆಯುವ ಪಕ್ಷ ಅಂತ ಬೋರ್ಡನ್ನು ತೋರಿಸುತ್ತಿದ್ದೀರಾ..!

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಶಿರಸಿ**

ಸಮಸ್ಯೆಯೇನು..?

- ಪ್ರತಿದಿನ ಸಿದ್ದಾಪುರದಿಂದ ಸಾಗರ, ಶಿರಸಿಗೆ ಶಾಲಾ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಹಾಗೂ ಕೆಲಸಕ್ಕೆ ಹೋಗುವವರು ಪರದಾಡುವಂತಾಗಿದೆ. ಮೊದಲೇ ಬೆಳಗ್ಗೆ 6 ರಿಂದ 10 ರವರೆಗೆ ಸಿದ್ದಾಪುರ ದಿಂದ ಸಾಗರಕ್ಕೆ ಶಿರಸಿಗೆ ಬಸ್ಸುಗಳಿಲ್ಲದೆ ಸಮಸ್ಯೆ ಯಾಗಿರುವುದು.
- **ಪರಿಹಾರ:** ಪ್ರತಿದಿನ ಸಿದ್ದಾಪುರದಿಂದ ಸಾಗರ, ಶಿರಸಿಗೆ ಪ್ರಯಾಣಿಕರ ಅನುಗುಣವಾಗಿ ವಾಹನ ಗಳನ್ನು ಸಮಯಕ್ಕೆ ಸರಿಯಾಗಿ ಕಾರ್ಯಚರಣೆ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗಿದೆ

ಸಮಾಚಾರ ಸಣ್ಣದಲ್ಲ

ಮೊಸಳೆ ಸೆರೆ: ನಿಟ್ಟುಸಿರು ಬಿಟ್ಟ ಗ್ರಾಮಸ್ಥರು

ಸಿರುಗುಪ್ಪ: ತಾಲೂಕಿನ ನಿಟ್ಟೂರಿನಲ್ಲಿ ಕಳೆದ ಕೆಲ ದಿನಗಳಿಂದ ಕಾಣಿಸಿಕೊಳ್ಳುತ್ತಿದ್ದ ಮೊಸಳೆ ಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆಹಿಡಿದಿಯು ವಲ್ಲಿ ಯಶಸ್ವಿಯಾಗಿದ್ದು, ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ.

ನಿಟ್ಟೂರು ಬಳಿಯ ತುಂಗಭದ್ರಾ ನದಿಯ ಸಿಂಗಾಪುರ ಘಾಟ್ ರಸ್ತೆಯಲ್ಲಿರುವ ಶಾಲೆಯ ಹಿಂದಿರುವ ಹಳ್ಳದಲ್ಲಿ ಕಳೆದ ನಾಲ್ಕೈದು ದಿನಗಳಿಂದ ಕಾಣಿಸಿಕೊಂಡಿದ್ದ ಮೊಸಳೆ, ರಸ್ತೆಯಲ್ಲಿ ಓಡಾಡುವ ಮೂಲಕ ಜನರಲ್ಲಿ ಆತಂಕ ಮೂಡಿಸಿತ್ತು. ಅರಣ್ಯ ಇಲಾಖೆಯ ಅಧಿಕಾರಿ ಅಂಬಣ್ಣ ನಾಯಕ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಶುಕ್ರವಾರ ಬೆಳಗಿನಜಾವ ಮೊಸಳೆಯನ್ನು ಸೆರೆಹಿಡಿಯಲಾಗಿದೆ. ವೇಷಗಾರ ಮಲ್ಲಯ್ಯ ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಈ ಮೊಸಳೆ ಹಿಡಿದಿದು ತುಂಗಭದ್ರಾ ನದಿಗೆ ಬಿಟ್ಟಿದ್ದಾರೆ.

ಹೃದಯಾಘಾತ: ಶಿಕ್ಷಕ ಸಾವು

ಶಿವಮೊಗ್ಗ: ಬೈಕ್‌ನಲ್ಲಿ ಶಾಲೆಗೆ ತೆರಳುತ್ತಿದ್ದ ಶಿಕ್ಷಕರೊಬ್ಬರು ಹೃದಯಘಾತಕ್ಕೆ ಒಳಗಾಗಿ ಮೃತಪಟ್ಟಿರುವ ಘಟನೆ ಶುಕ್ರವಾರ ನಡೆದಿದೆ. ಆನಂದಪುರ ಸಮೀಪದ ನರಸೀಪುರದ ಸರಕಾರಿ ಶಾಲೆಯ ಶಿಕ್ಷಕ ಮಂಜುನಾಥ್ (57) ಮೃತಪಟ್ಟ ಶಿಕ್ಷಕ. ಬೆಳಗ್ಗೆ ಜಂಬೆಕೊಪ್ಪ ಶಾಲೆಯಲ್ಲಿ ಕಾರ್ಯನಿರ್ವಹಿಸಲು ಬೈಕ್ ನಲ್ಲಿ ತೆರಳುತ್ತಿರುವ ಸಂದರ್ಭದಲ್ಲಿ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟಿದ್ದಾರೆ. ಮಂಜುನಾಥ್ ಅವರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಶಿಕ್ಷಕ ವರ್ಗದವರನ್ನು ಅಗಲಿದ್ದಾರೆ. ಮಂಜುನಾಥ್ ಮನೆಗೆ ಸಾಗರ ಕ್ಷೇತ್ರ ಶಿಕ್ಷಣಾಧಿಕಾರಿ ಭೇಟಿನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದ್ದಾರೆ. ಇತ್ತೀಚೆಗೆ ಸಾಗರ ತಾಲೂಕು ಸಿರಿವಂತೆಯ ಸರಕಾರಿ ಶಾಲೆಯ ಶಿಕ್ಷಕಿ ಶಿವಮೊಗ್ಗದ ಡಯಟ್‌ನಲ್ಲಿ ನಡೆಯುವ ತರಬೇತಿಗಾಗಿ ತೆರಳುವ ಅವಸರದಲ್ಲಿ ಅಪಘಾತವಾಗಿ ಸಾವನ್ನಪ್ಪಿರುವ ಘಟನೆ ಮಾಸುವ ಮುನ್ನವೇ ಮತ್ತೊಂದು ದುರ್ಘಟನೆ ಸಂಭವಿಸಿದೆ.

{ಪ್ರಲ್ಹಾದ ಜೋಶಿ} ಕೇಂದ್ರ ಸಚಿವ

ನನ್ನ ಸುದೀರ್ಘ ವರ್ಷಗಳ ರಾಜಕೀಯ ಮತ್ತು ಸಾರ್ವಜನಿಕ ಜೀವನದಲ್ಲಿ ಯಾವತ್ತೂ ಪ್ರತ್ಯಕ್ಷ-ಪರೋಕ್ಷವಾಗಿ ನ್ಯಾಯಾಂಗದ ಸದಸ್ಯರ ಖ್ಯಾತಿಗೆ ಚ್ಯುತಿ ಬರುವಂತೆ ನಡೆದುಕೊಂಡಿಲ್ಲ ಮತ್ತು ಹೇಳಿಕೆಯನ್ನೂ ನೀಡಿಲ್ಲ ಎಂದು ರಾಜ್ಯ ಹೈಕೋರ್ಟ್ ನಿವೃತ್ತ ನ್ಯಾಯ ಮೂರ್ತಿ ಮೈಕೆಲ್ ಡಿ'ಕುನ್ಹಾ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ.

ಉಪಚುನಾವಣೆ: ಇಂದು ಮತಗಳ ಎಣಿಕೆ | ಚನ್ನಪಟ್ಟಣ ಬಗ್ಗೆ ಕಾಂಗ್ರೆಸ್, ಬಿಜೆಪಿ-ಜೆಡಿಎಸ್‌ನಲ್ಲಿ ಹೆಚ್ಚಿದ ಕುತೂಹಲ

ಮೂರೂ ಕ್ಷೇತ್ರಗಳ ಫಲಿತಾಂಶದತ್ತ ಪಕ್ಷಗಳ ಚಿತ್ತ

ಚನ್ನಪಟ್ಟಣ/ಬಳ್ಳಾರಿ/ಹಾವೇರಿ: ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಉಪಚುನಾವಣೆಯ ಮತಗಳ ಎಣಿಕೆ ಶನಿವಾರ ಬೆಳಗ್ಗೆ ಆರಂಭವಾಗಲಿದ್ದು, ಮಧ್ಯಾಹ್ನದೊಳಗೆ ಫಲಿತಾಂಶ ಸ್ಪಷ್ಟವಾಗಲಿದೆ. ಈ ಚುನಾವಣೆ ಆಡಳಿತಾರೂಢ ಕಾಂಗ್ರೆಸ್ ಮತ್ತು ಮೈತ್ರಿಪಕ್ಷಗಳಾದ ಬಿಜೆಪಿ-ಜೆಡಿಎಸ್ ನಡುವಣ ಜಿದ್ದಾಜಿದ್ದಿ ಸ್ಪರ್ಧೆಗೆ ಕಾರಣವಾಗಿತ್ತು. ಮೊನ್ನೆ ತಾನೇ ಹೊರಬಿದ್ದ ಮತದಾನೋತ್ತರ ಸಮೀಕ್ಷೆಯಲ್ಲಿ ಮೈತ್ರಿಪಕ್ಷಗಳು ಚನ್ನಪಟ್ಟಣ ಮತ್ತು ಶಿಗ್ಗಾವಿಯಲ್ಲಿ ಗೆಲ್ಲಲಿದ್ದು, ಸಂಡೂರು ಕ್ಷೇತ್ರವನ್ನು ಕಾಂಗ್ರೆಸ್ ಉಳಿಸಿಕೊಳ್ಳಲಿದೆ. ಆದರೆ ಅಂತಿಮ ಫಲಿತಾಂಶದವರೆಗೂ ಕಾಯಬೇಕಾಗುತ್ತದೆ. ಈ ಚುನಾವಣೆಯಲ್ಲಿ ಗ್ಯಾರಂಟಿ ಯೋಜನೆಗಳ ಜಾರಿ ಸೇರಿದಂತೆ ರಾಜ್ಯ ಸರಕಾರ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಕಾಂಗ್ರೆಸ್ ನೆಚ್ಚಿಕೊಂಡಿದೆ.

ಡಿಕೆಶಿ-ಎಚ್‌ಡಿಕೆಗೆ ಪ್ರತಿಷ್ಠೆಯ ಚುನಾವಣೆ: ಪ್ರತಿಷ್ಠಿತ ಕ್ಷೇತ್ರ ಚನ್ನಪಟ್ಟಣದಲ್ಲಿ ಬಿಜೆಪಿಯಿಂದ ಜಿಗಿದು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಸಿ.ಪಿ. ಯೋಗೇಶ್ವರ್‌ಗೆ ಈ ಚುನಾವಣೆ ವೈಯಕ್ತಿಕವಾಗಿ ಸವಾಲೆನಿಸಿದೆ. ಯೋಗೇಶ್ವರ್‌ಗೆ ಬೆಂಬಲವಾಗಿ ನಿಂತು ಬಿರುಸಿನ ಪ್ರಚಾರ ಕೈಗೊಂಡ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಶತಾಯಗತಾಯ ಪಕ್ಷ ಗೆಲ್ಲಲೇಬೇಕೆಂದು ಹೋರಾಟ ನಡೆಸಿದ್ದರು. ಇದಕ್ಕೆ ಪೂರಕವಾಗಿ ಪಕ್ಷದ ನಾಯಕರ ದಂಡೇ ಪ್ರಚಾರಕ್ಕೆ ಇಳಿದಿತ್ತು.

ಮತ್ತೊಂದೆಡೆ, ಅಳೆದೂ ತೂಗಿ ಪುತ್ರ ನಿಖಿಲ್‌ರನ್ನು ಕಣಕ್ಕಿಳಿಸಿದ ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ, ಎರಡು ಸೋಲಿನ ನಂತರ ಪುತ್ರನನ್ನು ಈ ಬಾರಿ ವಿಧಾನಸಭೆಗೆ ಆರಿಸಿ ಕಳುಹಿಸಬೇಕೆಂದು ಬಿಜೆಪಿ ನಾಯಕರ ಭಾರಿ ಬೆಂಬಲದಿಂದ ವ್ಯಾಪಕ ಪ್ರಚಾರ ಕೈಗೊಂಡಿದ್ದರು. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ , ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಪ್ರತಿಪಕ್ಷ ನಾಯಕ ಆರ್. ಅಶೋಕ್ ಮೊದಲಾದವರು ತಮ್ಮ ಪೂರ್ಣ ಶ್ರಮ ಹಾಕಿದ್ದು, ನಿಖಿಲ್ ಗೆಲುವು ಖಚಿತವೆಂಬ ವಿಶ್ವಾಸದಲ್ಲಿದ್ದಾರೆ. ಜೊತೆಗೆ ಮೊಮ್ಮಗನ ಗೆಲುವಿಗೆ ಮಾಜಿ ಪ್ರಧಾನಿ ದೇವೇಗೌಡರೂ ರಂಗಕ್ಕಿಳಿದಿದ್ದರಿಂದ ಮತದಾರರ ಮೇಲೆ ಪರಿಣಾಮ ಬೀರಿದೆ ಎಂಬುದನ್ನು ತಳ್ಳಿಹಾಕುವಂತಿಲ್ಲ.

ಜಮೀರ್ ಹೇಳಿಕೆ ಪರಿಣಾಮ: ಈ ಮಧ್ಯೆ, ಚನ್ನಪಟ್ಟಣದಲ್ಲಿ ಪ್ರಚಾರ ಕೈಗೊಂಡ ವೇಳೆ, ಸಚಿವ ಜಮೀರ್ ಅಹಮದ್ ಖಾನ್ ಹಿಂದೊಮ್ಮೆ ತಮ್ಮ ಆಪ್ತರಾಗಿದ್ದ ಕುಮಾರಸ್ವಾಮಿ ಅವರನ್ನು ಕರಿಯ ಎಂದು ಸಂಬೋಧಿಸುವ ಮೂಲಕ ಒಕ್ಕಲಿಗ ಸಮುದಾಯದ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಆದರೆ ಪರಿಸ್ಥಿತಿ ತಿಳಿಯಾಗಿಸಲು ಕಾಂಗ್ರೆಸ್ ನಾಯಕರು ತೀವ್ರ ಪ್ರಯತ್ನ ನಡೆಸಿದ್ದರೂ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿತ್ತು. ಫಲಿತಾಂಶದಲ್ಲಿ ಇದರ ಪರಿಣಾಮ ಸ್ಪಷ್ಟವಾಗಲಿದೆ. ಆದರೆ, ಜಮೀರ್ ಹೇಳಿಕೆಯಿಂದ ತಮಗೆ ಲಾಭ- ನಷ್ಟ ಎರಡೂ ಆಗಿದೆ ಎಂದು ಸ್ವತಃ ಯೋಗೇಶ್ವರ್ ಅಲವತ್ತುಕೊಂಡಿರುವುದು ಫಲಿತಾಂಶದ ಬಗ್ಗೆ ಅಂದಾಜು ಮಾಡಬಹುದು. ಆದರೂ ಯಾರೇ ಗೆದ್ದರೂ ಕಡಿಮೆ ಮತಗಳ ಅಂತರದಿಂದ ಎಂಬ ಮಾತುಗಳು ಕೇಳಿಬಂದಿವೆ. ಸಮೀಕ್ಷೆಗಳನ್ನು ತಳ್ಳಿಹಾಕಿರುವ ಕಾಂಗ್ರೆಸ್, ಮೂರೂ ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲಲಿದೆ ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ.

ಶಿಗ್ಗಾವಿಯಲ್ಲಿ ಯಾರಿಗೆ ಗೆಲುವು ?: ಹಾವೇರಿ ಜಿಲ್ಲೆಯ ಶಿಗ್ಗಾವಿ ಕ್ಷೇತ್ರವೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ತುರುಸಿನ ಸ್ಪರ್ಧೆಗೆ ಸಾಕ್ಷಿಯಾಗಿತ್ತು. ಸಂಸತ್ತಿಗೆ ಆಯ್ಕೆಯಾದ ಬಸವರಾಜ ಬೊಮ್ಮಾಯಿ ತೆರವುಗೊಳಿಸಿದ ಕ್ಷೇತ್ರದಲ್ಲಿ ಅವರ ಪುತ್ರ ಭರತ್ ಬೊಮ್ಮಾಯಿ ಕಣಕ್ಕಿಳಿದಿದ್ದು, ಈ ಕ್ಷೇತ್ರವನ್ನು ಉಳಿಸಿಕೊಳ್ಳುವ ವಿಶ್ವಾಸ ಬಿಜೆಪಿಗಿದೆ. ತಂದೆ ಕೈಗೊಂಡ ಅಭಿವೃದ್ಧಿ ಕಾರ್ಯಗಳು ತಮ್ಮ ಕೈಹಿಡಿಯಲಿವೆ ಎಂದು ಭರತ್ ನಂಬಿದ್ದಾರೆ. ಆದರೆ ಅಜ್ಜಂ ಪೀರ್ ಖಾದ್ರಿ ವಿರೋಧದ ನಡುವೆಯೂ ಕಾಂಗ್ರೆಸ್‌ನಿಂದ ಮತ್ತೆ ಕಣಕ್ಕಿಳಿದಿರುವ ಯಾಸೀರ್ ಪಠಾಣ್‌ಗೆ ಗೆಲುವು ಸುಲಭಸಾಧ್ಯವಲ್ಲ ಎಂದು ಸಮೀಕ್ಷೆ ತಿಳಿಸಿದೆ. ಆದರೂ ಸಿಎಂ, ಡಿಸಿಎಂ ಆದಿಯಾಗಿ ಎಲ್ಲ ಕಾಂಗ್ರೆಸ್ ನಾಯಕರು ಕ್ಷೇತ್ರದಲ್ಲಿ ಬಿರುಸಿನ ಪ್ರಚಾರ ಕೈಗೊಂಡು ಯಾಸೀರ್‌ಗೆ ಮತಗಳನ್ನು ಕ್ರೋಢೀಕರಿಸಲು ಬಹುವಾಗಿ ಶ್ರಮಿಸಿದ್ದಾರೆ.

ಚನ್ನಪಟ್ಟಣ

ಶನಿವಾರ ಬೆಳಗ್ಗೆ 8ಕ್ಕೆ ರಾಮನಗರದ ಅರ್ಚಕರ ಹಳ್ಳಿಯಲ್ಲಿರುವ ಸರಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮತ ಎಣಿಕೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ತಿಳಿಸಿದರು. ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಸಮಕ್ಷಮದಲ್ಲಿ ಬೆಳಿಗ್ಗೆ 6.45ಕ್ಕೆ ಮತಯಂತ್ರಗಳನ್ನಿಟ್ಟಿರುವ ಸ್ಟ್ರಾಂಗ್‌ರೂಂ ತೆರೆಯಲಾಗುವುದು. 7.30ಕ್ಕೆ ಅಂಚೆ ಮತಗಳ ಎಣಿಕೆ, ಬೆಳಿಗ್ಗೆ 8 ಗಂಟೆಗೆ ಇವಿಎಂ ಮತ ಎಣಿಕೆ ಆರಂಭವಾಗಲಿದೆ, ಒಟ್ಟಾರೆ 20 ಸುತ್ತುಗಳಲ್ಲಿ ಮತ ಎಣಿಕೆ ಪ್ರಕ್ರಿಯೆ ನಡೆಯಲಿದೆ. ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಸಮಕ್ಷಮದಲ್ಲಿ ಬೆಳಿಗ್ಗೆ 6.45ಕ್ಕೆ ಮತಯಂತ್ರಗಳನ್ನಿಟ್ಟಿರುವ ಸ್ಟ್ರಾಂಗ್‌ರೂಂ ತೆರೆಯಲಾಗುವುದು. 7.30ಕ್ಕೆ ಅಂಚೆ ಮತಗಳ ಎಣಿಕೆ, ಬೆಳಿಗ್ಗೆ 8 ಗಂಟೆಗೆ ಇವಿಎಂ ಮತ ಎಣಿಕೆ ಆರಂಭವಾಗಲಿದೆ, ಒಟ್ಟಾರೆ 20 ಸುತ್ತುಗಳಲ್ಲಿ ಮತ ಎಣಿಕಾ ಕಾರ್ಯ ನಡೆಯಲಿದೆ. ಕ್ಷೇತ್ರದಲ್ಲಿ 2,06,886 (ಶೇ.88.81) ಮತಗಳು ಚಲಾವಣೆಗೊಂಡಿದೆ. 14 ಟೇಬಲ್‌ಗಳಲ್ಲಿ ಮತ ಎಣಿಕೆ ನಡೆಯಲಿದೆ. ಮತಎಣಿಕೆಗೆ 69 ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, 250 ಏಜೆಂಟರು ಇರುತ್ತಾರೆ ಎಂದು ಮಾಹಿತಿ ನೀಡಿದರು.



ಶಿಗ್ಗಾವಿ

ಶಿಗ್ಗಾವಿ ಕ್ಷೇತ್ರದ ಉಪ ಚುನಾವಣೆಯ ಮತಗಳ ಎಣಿಕೆ ಹಾವೇರಿಯ ದೇವಗಿರಿ ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ. ಇವಿಎಂ ಮತಗಳ ಎಣಿಕೆಗೆ 14 ಟೇಬಲ್ ಮತ್ತು ಅಂಚೆ ಮತಪತ್ರ ಎಣಿಕೆಗೆ 1 ಟೇಬಲ್ ಹಾಗೂ ಸೇವಾ ಮತದಾರರ ಅಂಚೆ ಮತಪತ್ರ ಎಣಿಕೆಗಾಗಿ ಮತ್ತೊಂದು ಟೇಬಲ್ ಸಿದ್ಧಪಡಿಸಲಾಗಿದೆ. ಪ್ರತಿ ಟೇಬಲ್‌ಗೆ ಒಬ್ಬರು ಮೇಲ್ವಿಚಾರಕರು, ಒಬ್ಬರು ಸಹಾಯಕರು ಹಾಗೂ ಒಬ್ಬರು ಮೈಕ್ರೋ ಅಬ್ಸರ್ವರ್‌ರನ್ನು ನೇಮಿಸಲಾಗಿದೆ. ಎಣಿಕೆ ಕೇಂದ್ರದ ಬಂದೋಬಸ್ತ್‌ಗೆ ಪೊಲೀಸ್ ಇಲಾಖೆಯಿಂದ ನಾಲ್ವರು ಡಿ.ಎಸ್.ಪಿ, ಒಂಬತ್ತು ಸಿ.ಪಿ.ಐ, 25-ಪಿ.ಎಸ್.ಐ, 29-ಎ.ಎಸ್.ಐ, 250-ಎಚ್.ಸಿ, ಪಿ.ಸಿ ಹಾಗೂ ಕೆ.ಎಸ್.ಆರ್.ಪಿ.ಯ ಎರಡು ತುಕಡಿ ಗಳನ್ನು ಮತ್ತು ನಾಲ್ಕು ಡಿ.ಆರ್. ತುಕಡಿಗಳು ಭದ್ರತೆಗಾಗಿ ನಿಯೋಜಿಸಲಾಗಿದೆ. ಎಣಿಕೆ ಕೇಂದ್ರದ ಸುತ್ತ ನಿಷೇಧಾಜ್ಞೆ ಜಾರಿಯಲ್ಲಿದ್ದು, ಬೇರೆ ವಾಹನಗಳ ಪ್ರವೇಶಕ್ಕೆ ಅವಕಾಶವಿಲ್ಲ. ಎಣಿಕೆ ಕಾರ್ಯ ಸುಗಮವಾಗಿಸಲು ಅಧಿಕಾರಿಗಳು ನಿಗಾ ವಹಿಸಿದ್ದಾರೆ ಎಂದರು.

ಸಂಡೂರು

ಸಂಡೂರು ಕ್ಷೇತ್ರದ ಉಪಚುನಾವಣೆಯ ಮತಗಳ ಎಣಿಕೆ ಶನಿವಾರ ಬೆಳಗ್ಗೆ ಬಳ್ಳಾರಿಯ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆಯಲಿದೆ ಎಂದು ಚುನಾವಣಾಧಿಕಾರಿ ಹಾಗೂ ಸಹಾಯಕ ಆಯುಕ್ತ ರಾಜೇಶ್ ಎಚ್.ಡಿ ಹೇಳಿದರು. ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಎಣಿಕೆ ಕೇಂದ್ರದಲ್ಲಿ 253 ಮತಗಟ್ಟೆಗಳ ಯಂತ್ರಗಳು, 13 ಅಂಚೆ ಮತಗಳ ಎಣಿಕೆ ಮತ್ತು ಇಟಿಪಿಬಿಎಸ್-4 ಮತ ಎಣಿಕೆ ಕಾರ್ಯ ನಡೆಯಲಿದೆ ಎಂದರು. ಮತ ಎಣಿಕೆಗಾಗಿ 15 ಮೇಜುಗಳನ್ನು ವ್ಯವಸ್ಥೆ ಮಾಡಲಾಗಿದೆ. ಪ್ರತಿ ಮೇಜಿಗೆ ಒಬ್ಬರು ಮೇಲ್ವಿಚಾರಕರು, ಒಬ್ಬರು ಸಹಾಯಕರು, ಒಬ್ಬರು ಮೈಕ್ರೋ ಅಬ್ಸರ್ವರ್‌ಗಳನ್ನು ನಿಯೋಜಿಸಲಾಗಿದೆ ಎಂದು ಅವರು ವಿವರಿಸಿದರು. ಸಂಡೂರು ಕ್ಷೇತ್ರದಲ್ಲಿ 253 ಮತಗಟ್ಟೆಗಳಿದ್ದು, 19 ಸುತ್ತು ಮತ ಎಣಿಕೆ ನಡೆಯಲಿದೆ. ಪ್ರತಿ ಹಂತದ ಮತ ಎಣಿಕೆ ವಿವರವನ್ನು ಮಾಧ್ಯಮಗಳ ಮೂಲಕ ಪ್ರಚುರಪಡಿಸಲು ಅನುವಾಗುವಂತೆ ಮಾಧ್ಯಮ ಕೇಂದ್ರವನ್ನು ತೆರೆಯಲಾಗುವುದು. ಕಾಲೇಜಿನ ಸುತ್ತ ಸಿಆರ್‌ಪಿಎಫ್, ಸಿಎಎಸ್‌ಎಫ್, ಕೆಎಸ್‌ಆರ್‌ಪಿ ಮತ್ತು ಸಿವಿಲ್ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಸಹಾಯಕ ಆಯುಕ್ತರು ತಿಳಿಸಿದರು.

ಸಂಡೂರಿನಲ್ಲಿ ಮತ ಎಣಿಕೆಗೆ ಸಜ್ಜಾಗುತ್ತಿರುವ ಅಧಿಕಾರಿಗಳ ತಂಡ.

ಸಂಡೂರಿನಲ್ಲಿ ಮುಂದುವರಿದ ಕುತೂಹಲ: ಸಂಡೂರು ಉಪಚುನಾವಣೆಯಲ್ಲಿ ಈವರೆಗೆ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಸಂಸದ ತುಕಾರಾಮ್ ಅವರ ಪತ್ನಿ ಅನ್ನಪೂರ್ಣ ತುಕಾರಾಮ್ ಕಣಕ್ಕಿಳಿದಿದ್ದು, ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು ತೀವ್ರ ಸ್ಪರ್ಧೆಯೊಡ್ಡಿದ್ದಾರೆ. ಆದರೆ ಈ ಕ್ಷೇತ್ರ ಕಾಂಗ್ರೆಸ್ ಕೋಟೆಯಾಗಿರುವುದರಿಂದ ಪಕ್ಷ ಗೆಲ್ಲಲಿದೆ ಎಂದು ಸಮೀಕ್ಷೆಗಳೂ ಸ್ಪಷ್ಟಪಡಿಸಿವೆ.

ಆದರೂ, ಗಾಲಿ ಜನಾರ್ದನ ರೆಡ್ಡಿಯನ್ನು ಮತ್ತೆ ಪಕ್ಷಕ್ಕೆ ಕರೆತಂದು ಸಂಡೂರಿನಲ್ಲಿ ಶ್ರೀರಾಮುಲ ಜತೆ ವ್ಯಾಪಕ ಪ್ರಚಾರ ಕೈಗೊಳ್ಳುವ ಮೂಲಕ ಬಿಜೆಪಿ ಕ್ಷೇತ್ರದಲ್ಲಿ ಗೆಲ್ಲುವ ವಿಶ್ವಾಸ ಹೊಂದಿದೆ. ಅನ್ನಪೂರ್ಣ ಹಾಗೂ ಹನುಮಂತು ಇಬ್ಬರಿಗೂ ಮೊದಲ ಚುನಾವಣೆ ಇದಾಗಿದ್ದು, ಯಾರೇ ಗೆದ್ದರೂ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಲಿದ್ದಾರೆ.

ವಿವಿಧ ಜಿಲ್ಲೆಗಳಲ್ಲಿ ಶುಕ್ರವಾರದಿಂದ ಬಿಜೆಪಿ ಹೋರಾಟ | ನಮ್ಮ ಹಕ್ಕು ನಮ್ಮ ಭೂಮಿ ಘೋಷಣೆಯಡಿ ಪ್ರತಿಭಟನೆ

ವಕ್ಫ್: ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆ

ಗದಗ / ಕೊಪ್ಪಳ: ವಕ್ಫ್ ವಿಚಾರದಲ್ಲಿ ರಾಜ್ಯ ಸರಕಾರದ ವಿರುದ್ಧ ರಾಜ್ಯದ ವಿವಿಧೆಡೆ ಬಿಜೆಪಿ ಪ್ರತಿಭಟನೆ ನಡೆಸುತ್ತಿದೆ. ಕೊಪ್ಪಳ ಮತ್ತು ಗದಗ ಜಿಲ್ಲೆಯಲ್ಲಿ ಪ್ರತಿಭಟನಾ ಧರಣಿ ನಡೆಸಲಾಯಿತು

ಗದಗ ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ರೈತರ ಭೂಮಿ, ಮಠಮಾನ್ಯಗಳ ಹಾಗೂ ಜನಸಾಮಾನ್ಯರ ಆಸ್ತಿಗಳನ್ನು ಕಬಳಿಸುತ್ತಿರುವ ಕಾಂಗ್ರೆಸ್ ಪ್ರಾಯೋಜಿತ ವಕ್ಫ್ ಅಕ್ರಮದ ವಿರುದ್ಧ 'ನಮ್ಮ ಹಕ್ಕು ನಮ್ಮ ಭೂಮಿ 'ಘೋಷಣೆಯೊಂದಿಗೆ ಪ್ರತಿಭಟನೆ ನಡೆಸಲಾಗುತ್ತಿದೆ. ಕಾಂಗ್ರೆಸ್ ರೈತರ ಆಸ್ತಿ ಕಬಳಿಸಿದ ವಕ್ಫ್ ನಡೆಗೆ ಹಾಗೂ ರೈತ ವಿರೋಧಿ ನೀತಿ ಅನುಸರಿಸಿದೆ. ರೈತರ ಪಹಣಿಯಲ್ಲಿ ಆಸ್ತಿ ನಮೂದು ಮಾಡಿದ ವಕ್ಫ್ ರದ್ದು ಪಡಿಸಲು ಚಳವಳಿಗಾರರು ಒತ್ತಾಯಿಸಿದರು. ಮಾಜಿ ಸಚಿವ, ನರಗುಂದ ಶಾಸಕ ಸಿ.ಸಿ. ಪಾಟೀಲ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜು ಕುರಡಗಿ, ಮುಖಂಡರಾದ ಎಂ.ಎಸ್. ಕರಿಗೌಡ್ರ, ಸಿದ್ದಣ್ಣ ಪಲ್ಲೇದ ಸೇರಿ ಹಲವರು ಭಾಗಿಯಾಗಿದ್ದರು.

ಕೊಪ್ಪಳದಲ್ಲಿ ಪ್ರತಿಭಟನೆ: ಕೊಪ್ಪಳ ಡಿಸಿ ಕಚೇರಿ ಮುಂದೆ ಬಿಜೆಪಿ ಪ್ರತಿಭಟನೆ ನಡೆಸಿದೆ. ವಕ್ಫ್ ಕಬಳಿಸುತ್ತಿರುವ ರೈತರ ಆಸ್ತಿಗಳನ್ನು ವಾಪಸ್ ಮಾಡಿಕೊಡಲೇ ವಕ್ಫ್ ಮಂಡಳಿ ರದ್ದು ಮಾಡಿ, ರಾಜ್ಯದ ರೈತರ ಹಿತ ರಕ್ಷಿಸುವಂತೆ ಬಿಜೆಪಿ ನಾಯಕರು ಒತ್ತಾಯಿಸಿದರು.

ವಕ್ಫ್: ತಿದ್ದುಪಡಿ ಅಗತ್ಯ

ಉಡುಪಿ: ನಮ್ಮ ದೇಶದಲ್ಲಿ ಮಿಲಿಟರಿ ಮತ್ತು ರೈಲ್ವೆಯನ್ನು ಹೊರತುಪಡಿಸಿದರೆ ಅತಿ ಹೆಚ್ಚು ಭೂಮಿ ಇರುವುದು ವಕ್ಫ್ ಮಂಡಳಿಗೆ. ವಕ್ಫ್ ಕಾನೂನಿಗೆ ತಿದ್ದುಪಡಿ ಮಾಡುವ ಅಗತ್ಯ ಇದೆ ಎಂದು ಕಾರ್ಕಳ ಶಾಸಕ ಸುನೀಲ್‌ಕುಮಾರ್ ಪ್ರತಿಪಾದಿಸಿದರು. ವಕ್ಫ್ ಮಂಡಳಿ ವಿರುದ್ಧದ ನಮ್ಮ ಭೂಮಿ ನಮ್ಮ ಹಕ್ಕು ಅಭಿಯಾನದಡಿ ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು. ಇಡೀ ದೇಶದಲ್ಲಿ ಲಕ್ಷಾಂತರ ಎಕರೆ ಭೂಮಿಯನ್ನು ವಕ್ಫ್ ಮಂಡಳಿಗೆ ನೀಡುವ ಪ್ರಯತ್ನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಡೆದಿದೆ ಎಂದು ಆರೋಪಿಸಿದರು. ಆಂದೋಲನಕ್ಕೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ಚಾಲನೆ ನೀಡಿದರು. ಮಂಗಳೂರು ವಿಭಾಗ ಪ್ರಭಾರಿ ಕೆ.ಉದಯಕುಮಾರ್ ಶೆಟ್ಟಿ, ನಿಕಟಪೂರ್ವ ಜಿಲ್ಲಾಧ್ಯಕ್ಷ ಕುಯಿಲಾಡಿ ಸುರೇಶ್ ನಾಯಕ್, ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ, ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಮೊದಲಾದವರು ಮಾತನಾಡಿದರು.



ವಕ್ಫ್ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಬಿಜೆಪಿ ಶಾಸಕ ಸುನಿಲ್ ಕುಮಾರ್ ಮಾತನಾಡಿದರು.

ಬಿಜೆಪಿ ಕಾರ್ಯಕರ್ತರು ಮಂಗಳೂರಿನಲ್ಲಿ ವಕ್ಫ್ ವಿರುದ್ಧದ ಹೋರಾಟ ನಡೆಸಿದರು.

ಟಿಪ್ಪು ಮಾದರಿ ಆಡಳಿತ

ಮಂಗಳೂರು: ಹಿಂದೂ ಜೀವನ ಪದ್ಧತಿ ಪ್ರಕಾರ ಬದುಕುವವರನ್ನು ಹತ್ತಿಕ್ಕುವುದು ಟಿಪ್ಪು ಆಡಳಿತದ ಕ್ರಮವಾಗಿತ್ತು. ಇದೇ ರೀತಿಯಲ್ಲಿ ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ವಕ್ಫ್ ಆಸ್ತಿ ಹೆಸರಿನಲ್ಲಿ ಹಿಂದೂಗಳ ಬದುಕುವ ಹಕ್ಕನ್ನು ಕಸಿಯ ುತ್ತಿದೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ಆರೋಪಿಸಿದರು. ವಕ್ಫ್ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಪ್ರತಿ ಹಿಂದೂವಿನ, ಬಡವರ ಭೂಮಿ ರಕ್ಷಣೆಗಾಗಿ ಬಿಜೆಪಿ ಮಹಾ ಅಭಿಯಾನ ನಡೆಸಲಿದೆ. ಮನೆಮನೆಗೆ ನಮ್ಮ ಕಾರ್ಯಕರ್ತರು ಹೋಗಿ ಆರ್‌ಟಿಸಿ ನೋಡಿ ನಮ್ಮ ಭೂಮಿ ನಮಗೇ ಉಳಿದಿದೆಯಾ ಎಂದು ಪರೀಕ್ಷಿಸಲಿದ್ದಾರೆ ಎಂದರು. ಶಾಸಕರಾದ ಡಾ. ಭರತ್ ಶೆಟ್ಟಿ, ವೇದವ್ಯಾಸ ಕಾಮತ್ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ ಮೊದಲಾದವರು ಪ್ರತಿಭಟನೆ ಯಲ್ಲಿದ್ದರು

ಬಳ್ಳಾರಿಯಲ್ಲಿ ವಕ್ಫ್ ರಾದ್ಧಾಂತದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಜನಾರ್ದನ ರೆಡ್ಡಿ ಮಾತನಾಡಿದರು.

ವಕ್ಫ್: ತಿರುಗಿಬಿದ್ದ ಬಿಜೆಪಿ

ಬಳ್ಳಾರಿ: ರೈತರ ಭೂಮಿಗೆ ವಕ್ಫ್ ಮಂಡಳಿ ನೋಟಿಸ್ ನೀಡಿದ್ದನ್ನು ವಿರೋಧಿಸಿ ಬಿಜೆಪಿ ನಾಯಕರು, ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ವಕ್ಫ್ ಖಾತೆ ಸಚಿವ ಜಮೀರ್ ಅಹಮದ್ ಖಾನ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸರ್ಕಾರದ ವಿರುದ್ಧ ಘೋಷಣೆ ಕೂಗಲಾಯಿತು. ಈ ವೇಳೆ ಮಾತನಾಡಿದ ಶಾಸಕ ಜನಾರ್ದನ ರೆಡ್ಡಿ, ಭೂಮಿ ಕಬಳಿಕೆ ಮಾಡುವ ಹುನ್ನಾರವನ್ನು ವಕ್ಫ್ ಹೆಸರಲ್ಲಿ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಆರಂಭಿಸಿದಕ್ಕೆ ಕಾಂಗ್ರೆಸ್ ಹೀಗೆ ಮಾಡುತ್ತಿದೆ. ಕರ್ನಾಟಕದಲ್ಲಿ ಸಚಿವ ಜಮೀರ್‌ರನ್ನು ಮುಂದಿಟ್ಟುಕೊಂಡು ರೈತರ ಭೂಮಿ ಕಬಳಿಸಲು ಸರ್ಕಾರ ಪ್ರಯತ್ನಿಸುತ್ತಿದೆ' ಎಂದು ವಾಗ್ದಾಳಿ ನಡೆಸಿದರು. ವಕ್ಫ್ ಮಂಡಳಿ ನೋಟಿಸಿನ ವಿರುದ್ಧ ನಮ್ಮ ಹೋರಾಟ ನಡೆಯುತ್ತಿದೆ. ಗೆಜೆಟ್ ಅಧಿಸೂಚನೆಗಳನ್ನು ಸಂಪುಟ ನಿರ್ಣಯ ಕೈಗೊಂಡು ರದ್ದು ಮಾಡಬೇಕು ಎಂದು ಒತ್ತಾಯಿಸಿದರು.

ನಿವೃತ್ತ ಎಂಜಿನಿಯರ್ ಸಾವು

ರಾಮನಗರ: ಚನ್ನಪಟ್ಟಣದಲ್ಲಿ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದ ಕಾವೇರಿ ನೀರಾವರಿ ನಿಗಮದ ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರ ವೆಂಕಟೇಗೌಡ (63) ಕಜಕಿಸ್ತಾನದಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಎ.ವಿ.ಹಳ್ಳಿ ಗ್ರಾಮದವರಾದ ವೆಂಕಟೇಗೌಡ, ಕುಟುಂಬ ಸದಸ್ಯರ ಜೊತೆ ಕಜಕಿಸ್ತಾನ ಪ್ರವಾಸಕ್ಕೆ ತೆರಳಿ, ವಾಪಸಾಗುವ ವೇಳೆ ವಿಮಾನ ನಿಲ್ದಾಣದಲ್ಲಿ ಅಕಾಲ ಮೃತ್ಯುವಿಗೆ ತುತ್ತಾಗಿದ್ದಾರೆ. ಚನ್ನಪಟ್ಟಣ ತಾಲೂಕಿನಲ್ಲಿ ಅನುಷ್ಠಾನಗೊಂಡಿರುವ ಕಣ್ವ ಏತನೀರಾವರಿ ಯೋಜನೆಯ ರೂವಾರಿಯಾಗಿದ್ದ ವೆಂಕಟೇಗೌಡ, ತಾಲೂಕಿಗೆ ಶಾಶ್ವತ ನೀರಾವರಿ ಕಲ್ಪಿಸಬೇಕೆನ್ನುವ ಮಹದಾಸೆ ಹೊಂದಿದ್ದರು. ಯೋಜನೆಯ ನೀಲನಕ್ಷೆ ತಯಾರಿಸಿದ್ದ ಅವರು, ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗಿದ್ದರು. ತಾಲೂಕಿನ ಎಲ್ಲ ಕೆರೆಗಳಿಗೆ ನೀರು ಹರಿಸುವ ಯೋಜನೆ ಸಾಕಾರಗೊಳಿಸಿ, ನಿವೃತ್ತರಾದ ನಂತರ ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೃತ ವೆಂಕಟೇಗೌಡ ಅವರ ಪಾರ್ಥಿವ ಶರೀರವನ್ನು ಶನಿವಾರ ಭಾರತಕ್ಕೆ ತರಲು ಸಕಲ ವ್ಯವಸ್ಥೆ ಮಾಡಲಾಗಿದೆ. ಸ್ವಗ್ರಾಮ ಎ.ವಿ. ಹಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ವೆಂಕಟೇಗೌಡ ಅವರ ನಿಧನಕ್ಕೆ ರಾಜಕೀಯ ಮುಖಂಡರು, ಸಂಘ ಸಂಸ್ಥೆಗಳು, ಚನ್ನಪಟ್ಟಣ ನಾಗರೀಕರು ಕಂಬನಿ ಮಿಡಿದಿದ್ದಾರೆ.

ಕಲಬುರಗಿಯ ಪೋಕ್ಸೋ ನ್ಯಾಯಾಲಯದ ತೀರ್ಪು | 20 ಸಾವಿರ ದಂಡ

ಲೈಂಗಿಕ ದೌರ್ಜನ್ಯ: ಅಪರಾಧಿಗೆ 35 ವರ್ಷ ಜೈಲು

ಕಲಬುರಗಿ: ಅಪ್ರಾಪ್ತ ವಯಸ್ಸಿನ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಗೆ 35 ವರ್ಷ ಜೈಲುಶಿಕ್ಷೆ ವಿಧಿಸಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ಮಹಾರಾಷ್ಟ್ರದ ಠಾಣಾ ಜಿಲ್ಲೆಯ ಭಿವಂಡಿಯ ಬಟ್ಟೆ ವ್ಯಾಪಾರಿ ಮಹ್ಮದ್ ಗೌಸ್ ಮೆಹಮೂದ್ ಶೇಖ್ ಗೆ 35 ವರ್ಷ ಜೈಲು ಹಾಗೂ 20 ಸಾವಿರ ರೂ. ದಂಡವನ್ನು ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ವಿಧಿಸಿ ಶುಕ್ರವಾರ ಆದೇಶ ನೀಡಿದ್ದಾರೆ. ನೊಂದ ಬಾಲಕಿಗೆ ಕಾನೂನು ಸೇವಾ ಪ್ರಾಧಿಕಾರದಿಂದ ಪರಿಹಾರವಾಗಿ 5 ಲಕ್ಷ ರು.ಗಳನ್ನು ಒಂದು ತಿಂಗಳೊಳಗೆ ನೀಡುವಂತೆ ಆದೇಶದಲ್ಲಿ ತಿಳಿಸಿದ್ದಾರೆ.

ಸರಕಾರದ ಪರ ವಿಶೇಷ ಅಭಿಯೋಜಕ ಶಾಂತವೀರ ಬಿ. ತುಪ್ಪದ ವಾದ ಮಂಡಿಸಿದ್ದರು.. ಸಾಕ್ಷಿಗಳನ್ನು ಆರ್.ಜೆ.ನಗರ ಠಾಣೆ ಸಿಬ್ಬಂದಿ ಸಿದ್ದಣ್ಣ ಹಾಗೂ ಲಕ್ಷ್ಮೀಕಾಂತ ಸಾಕ್ಷಿದಾರರನ್ನು ಹಾಜರು ಪಡಿಸಿದ್ದರು.

ಘಟನೆಯ ವಿವರ

ಕಲಬುರಗಿಯ ಬಡಾವಣೆಯೊಂದರ ನಿವಾಸಿಯಾಗಿರುವ ಬಾಲಕಿಯನ್ನು ಬಟ್ಟೆ ವ್ಯಾಪಾರಿ ಗೌಸ್ ಆಗಾಗ ಭೇಟಿ ಮಾಡಿ, ಪ್ರೀತಿಸುವುದಾಗಿ ನೀನು ನನ್ನ ಜತೆ ಬಂದರೆ ನನ್ನ ಹೆಂಡತಿಗೆ ವಿಚ್ಛೇದನ ನೀಡುತ್ತೇನೆ ಎಂದು ನಂಬಿಸಿದ್ದ. ಇದರೊಂದಿಗೆ ನಗರದಲ್ಲಿ 3-4 ಬಾರಿ ಅಪ್ರಾಪ್ತ ವಯಸ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಮುಂದೆ ಗೌಸ್ ಸೂಚನೆಯಂತೆ 2023, ಅ.16ರಂದು ಭಿವಂಡಿಗೆ ಹೋದ ಬಾಲಕಿಯನ್ನು ಮನೆಯಲ್ಲಿಟ್ಟು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ದೂರಲಾಗಿದೆ. ಈ ಬಗ್ಗೆ ದಾಖಲಾದ ದೂರಿನ ವಿಚಾರಣೆ ನಡೆಸಿದ ಇನ್ಸ್‌ಪೆಕ್ಟರ್ ಕುಬೇರ್ ಎಸ್.ರಾಯಮಾನೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಹೋಮಿಯೋಪಥಿ ಸಮ್ಮೇಳನದಲ್ಲಿ ಸಚಿವ ದಿನೇಶ್ ಗುಂಡೂರಾವ್ ಪ್ರತಿಪಾದನೆ

ಆರೋಗ್ಯ ಸುಧಾರಣೆಗೆ ವಿವಿಧ ವೈದ್ಯ ಪದ್ಧತಿ ಬಳಕೆ

ಮಂಗಳೂರು: ಜನರ ಜೀವನದ ಗುಣಮಟ್ಟ ಹಾಗೂ ಆರೋಗ್ಯ ಸುಧಾರಣೆಗೆ ಅಲೋಪಥಿಯ ಜೊತೆಗೆ ಹೋಮಿಯೋಪಥಿ, ಆಯುರ್ವೇದ, ಯುನಾನಿ, ಸಿದ್ಧ, ಪ್ರಕೃತಿ ಚಿಕಿತ್ಸೆಯಂತಹ ವೈದ್ಯ ಪದ್ಧತಿಗಳ ನೆರವನ್ನೂ ಪಡೆಯಬೇಕೆಂದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಕರೆ ನೀಡಿದ್ದಾರೆ.

ಮಂಗಳೂರಿನ ಫಾದರ್ ಮುಲ್ಲರ್ ಸಂಸ್ಥೆಯಲ್ಲಿ ಹೋಮಿಯೋಪಥಿ ಕಾಲೇಜಿನಲ್ಲಿ 40ನೇ ವರ್ಷಾಚರಣೆ ಅಂಗವಾಗಿ ಏರ್ಪಡಿಸಿದ್ದ ರೂಬಿಕಾನ್ 2024 ಹಾಗೂ 27ನೇ ವಾರ್ಷಿಕ ರಾಷ್ಟ್ರೀಯ ಹೋಮಿಯೋಪಥಿ ಸಮ್ಮೇಳನವನ್ನು ಉದ್ಘಾಟಿಸಿ ಸಚಿವ ದಿನೇಶ್ ಮಾತನಾಡಿದರು.

ಸಾಂಕ್ರಾಮಿಕ ರೋಗ ನಿಯಂತ್ರಣ: ತಂತ್ರಜ್ಞಾನ ಬೆಳವಣಿಗೆಯಿಂದಾಗಿ ಜನರಲ್ಲಿ ಸ್ವಚ್ಛತೆಯ ಕಾಳಜಿ ಹೆಚ್ಚಿದ್ದು, ಸಾಂಕ್ರಾಮಿಕ ರೋಗಗಳು ನಿಯಂತ್ರಣಕ್ಕೆ ಬಂದಿವೆ. ಆದರೆ ಬದಲಾದ ಜೀವನಶೈಲಿಯಿಂದಾಗಿ ಸಾಂಕ್ರಾಮಿಕವಲ್ಲದ ಕಾಯಿಲೆಗಳು ಹೆಚ್ಚುತ್ತಿವೆ. ಅಧಿಕ ರಕ್ತದೊತ್ತಡ, ಮಧುಮೇಹ, ನರರೋಗ, ಮಾನಸಿಕ, ಹೃದಯ ಸಂಬಂಧಿ ಹಾಗೂ ಮೂತ್ರಕೋಶ ಸಂಬಂಧಿ ಸಮಸ್ಯೆಗಳು ಹೆಚ್ಚಾಗಿವೆ. ಇವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿ ಆರೋಗ್ಯಮಟ್ಟ ಸುಧಾರಿಸಲು ವಿವಿಧ ವೈದ್ಯ ಪದ್ಧತಿಗಳ ಉತ್ತಮ ಅಂಶಗಳನ್ನು ಪೂರಕವಾಗಿ ಬಳಸಿಕೊಳ್ಳುವ ಅಗತ್ಯ ವಿದೆ ಎಂದು ಸಚಿವರು ಸೂಚಿಸಿದರು. ರಾಷ್ಟ್ರೀಯ ಹೋಮಿಯೊಪಥಿ ಆಯೋಗದ ಅಧ್ಯಕ್ಷ ಡಾ. ಅನಿಲ್ ಖುರಾನ, ಹೋಮಿಯೊಪಥಿ ವೈದ್ಯರನ್ನು ರೂಪಿಸುವುದರಲ್ಲಿ, ಔಷಧಿ ತಯಾರಿಕೆಯಲ್ಲಿ ಭಾರತ ಅಗ್ರಗಣ್ಯ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದರು.



ಮಂಗಳೂರಿನ ಫಾದರ್ ಮುಲ್ಲರ್ ಸಂಸ್ಥೆಯ ಹೋಮಿಯೋಪಥಿ ಕಾಲೇಜಿನಲ್ಲಿ ನಡೆದ ಸಮ್ಮೇಳನದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಡಾ. ಅನಿಲ್ ಖುರಾನ, ಫಾ.ರಿಚರ್ಡ್ ಅಲೋಷಿಯಸ್ ಕುವೆಲ್ಲೊ ಮೊದಲಾದವರು ಪಾಲ್ಗೊಂಡಿದ್ದರು.

ಪೋರ್ಟಲ್‌ನಲ್ಲಿ ನೋಂದಾಯಿಸಿ

ಹೋಮಿಯೋಪಥಿ ಚಿಕಿತ್ಸಾ ವಿಧಾನ ಅನುಸರಿಸುವ ಎಲ್ಲ ವೈದ್ಯರು ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಿಕೊಂಡು ಆಯುಷ್ಮಾನ್ ಭಾರತ್ ಆರೋಗ್ಯ ಖಾತೆ ಗುರುತಿನ ಕಾರ್ಡ್ ಪಡೆಯಬೇಕು. ತಮ್ಮ ಚಿಕಿತ್ಸೆಯ ಯಶೋಗಾಥೆಗಳನ್ನು ಎವಿಡಿಎಂ ಪೋರ್ಟಲ್‌ನಲ್ಲಿ ದಾಖಲಿಸಿದಲ್ಲಿ ಎಲ್ಲೆಲ್ಲಿ ಹೋಮಿಯೋಪಥಿ ವೈದ್ಯರು ಲಭ್ಯ ಇದ್ದಾರೆ ಹಾಗೂ ಹೋಮಿಯೋಪಥಿ ಮೂಲಸೌಕರ್ಯದ ಮಾಹಿತಿ ಇದರಿಂದ ಸುಲಭವಾಗಿ ಲಭ್ಯವಾಗಲಿದೆ ಎಂದು ದಿನೇಶ್ ಗುಂಡೂರಾವ್ ವಿವರಿಸಿದರು.

ರಾಷ್ಟ್ರೀಯ ಹೋಮಿಯೋಪಥಿ ಸಂಶೋಧನಾ ಮಂಡಳಿಯು ಕೋವಿಡ್ ಸಂದರ್ಭದಲ್ಲಿ ರೋಗ ನಿಯಂತ್ರಣಕ್ಕೆ ಸಂಬಂಧಿಸಿದ 1.20 ಕೋಟಿ ಪ್ರಕರಣಗಳ ದಾಖಲೆಗಳನ್ನು ಸಂಗ್ರಹಿಸಿದೆ. ಹೋಮಿಯೋಪಥಿ ಔಷಧ ಸೇವನೆಯಿಂದ ರೋಗಿಗಳು ಬೇಗ ಗುಣಮುಖರಾಗಿದ್ದಕ್ಕೆ ಸಾಕಷ್ಟು ಪುರಾವೆಗಳಿವೆ .
-**ದಿನೇಶ್ ಗುಂಡೂರಾವ್**, ಆರೋಗ್ಯ ಸಚಿವ

ಎ ಪ್ಲಸ್ ಶ್ರೇಣಿ

ಫಾದರ್ ಮುಲ್ಲರ್ ಚಾರಿಟಬಲ್ ಸಂಸ್ಥೆಗಳ ನಿರ್ದೇಶಕ ಫಾ.ರಿಚರ್ಡ್ ಅಲೋಷಿಯಸ್ ಕುವೆಲ್ಲೊ ಮಾತನಾಡಿ ನಮ್ಮ ಹೋಮಿಯೋಪಥಿ ಕಾಲೇಜಿಗೆ ಈ ವರ್ಷ ಎ ಪ್ಲಸ್ ಶ್ರೇಣಿ ಲಭಿಸಿದೆ. ನಮ್ಮಲ್ಲಿ ಏಳು ಸೂಪರ್ ಸ್ಪೆಷಾಲಿಟಿ ಸೌಲಭ್ಯಗಳಿದ್ದು, ಸಮುದಾಯ ಆರೋಗ್ಯ ಹಾಗೂ ಚರ್ಮರೋಗಕ್ಕೆ ಸಂಬಂಧಿಸಿದ ಅತ್ಯುತ್ತಮ ಸೌಲಭ್ಯಗಳು ಶೀಘ್ರವೇ ಸೇರ್ಪಡೆಯಾಗಲಿವೆ ಎಂದರು. ಅಲ್ಲದೆ, ಉತ್ತಮ ಸೌಕರ್ಯ ಹೊಂದಿರುವ ವೈದ್ಯಕೀಯ ಕಾಲೇಜುಗಳಲ್ಲಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಅವರು ಇದೇ ವೇಳೆ ಒತ್ತಾಯಿಸಿದರು. ಫಾದರ್ ಮುಲ್ಲರ್ ಚಾರಿಟಬಲ್ ಸಂಸ್ಥೆಗಳ ನಿಯೋಜಿತ ಅಧ್ಯಕ್ಷ ಫಾ.ಫೌಸ್ಟೀನ್ ಲ್ಯೂಕಾಸ್ ಲೋಬೊ ಕಾಲೇಜಿನ ಪ್ರಾಂಶುಪಾಲ ಡಾ.ಇ ಎಸ್‌ಜೆ ಪ್ರಭುಕಿರಣ್ ಉಪ ಪ್ರಾಂಶುಪಾಲರಾದ ವಿಲ್ಮಾ ಮೀರಾ ಡಿಸೋಜ, ಸಹಾಯಕ ಆಡಳಿತಾಧಿಕಾರಿ ಫಾ.ಅಶ್ವಿನ್ ಎಲ್.ಕ್ರಾಸ್ತ, ಡೀನ್ ಫಾ. ಅಂತೋನಿ ಸಿಲ್ವನ್, ಫಾ. ನೆಲ್ಸನ್ ಧೀರಜ್ ಪಾಯಸ್ ಮೊದಲಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವಿಶ್ವವಾಣಿ

ಸಂಪಾದಕೀಯ

ಬಿಪಿಎಲ್ ಕಾರ್ಡ್ ದುರ್ಬಳಕೆ ತಪ್ಪಲಿ

ರಾಜ್ಯದಲ್ಲಿ ಪಡಿತರ ಚೀಟಿ ರದ್ದು ವಿವಾದ ತಾರಕಕ್ಕೇರಿದೆ. ಮೂಲಗಳ ಪ್ರಕಾರ 12 ಲಕ್ಷಕ್ಕೂ ಅಧಿಕ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ. ಅರ್ಹರಲ್ಲದವರೂ ಬಿಪಿಎಲ್ ಚೀಟಿ ಪಡೆದಿದ್ದು, ಅದನ್ನು ಪತ್ತೆ ಹಚ್ಚಿ ರದ್ದು ಮಾಡಲಾಗಿದೆ ಎಂದಿತ್ತು ಸರಕಾರ. ಆದರೆ ಈ ಕುರಿತ ವಿವಾದ ತೀವ್ರವಾಗುತ್ತಿದ್ದಂತೆಯೇ ಬಿಪಿಎಲ್ ಚೀಟಿ ಪರಿಶೀಲನೆ ವಿಚಾರವನ್ನೇ ಕೈಬಿಟ್ಟಿದೆ. ಕಾಂಗ್ರೆಸ್ ಸರಕಾರ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಬಿಪಿಎಲ್ ಚೀಟಿದಾರರಿಗೆ ಮಾಸಿಕ ತಲಾ 10 ಕಿಲೋ ಅಕ್ಕಿ ಘೋಷಿಸಿದ ಬಳಿಕ ಈ ಪಡಿತರ ಕಾರ್ಡುಗಳಿಗೆ ಭಾರಿ ಬೇಡಿಕೆ ಉಂಟಾಗಿದೆ. ಬಿಪಿಎಲ್ ಕಾರ್ಡ್ ಪಡೆಯಲು ವಾರ್ಷಿಕ ವರಮಾನ 1.20 ಲಕ್ಷ ರು. ಒಳಗಿರಬೇಕು ಇತ್ಯಾದಿ ನಿರ್ಬಂಧಗಳಿದ್ದರೂ ಸರಕಾರಿ ನೌಕರರೂ ಸೇರಿದಂತೆ ಹಲವು ಅನರ್ಹರು ಚೀಟಿ ಪಡೆದಿದ್ದಾರೆಂದು ತಿಳಿದುಬಂದಿತ್ತು. ಆದರೆ ಇದೀಗ ಒತ್ತಡಕ್ಕೆ ಮಣಿದು ಅನರ್ಹ ಬಿಪಿಎಲ್ ಚೀಟಿಗಳ ರದ್ದು ನಿರ್ಧಾರವನ್ನೇ ಕೈಬಿಡಲಾಗಿದೆ. ಈ ಸಂಬಂಧ ಯಥಾಸ್ಥಿತಿ ಕಾಯ್ದುಕೊಳ್ಳುವುದಾಗಿ ಸರಕಾರ ತಿಳಿಸಿದೆ. ಇದು ನಿಜವಾಗಿದ್ದರೆ, ಬಡಜನರಿಗೆ ಸಲ್ಲಬೇಕಾದ ಸವಲತ್ತುಗಳನ್ನು ಅನರ್ಹರು ಲೂಟಿ ಹೊಡೆಯಲು ಸರಕಾರವೇ ಪ್ರೋತ್ಸಾಹ ನೀಡಿದಂತಾಗುತ್ತದೆ. ಒಂದೆಡೆ ಸಂಪನ್ಮೂಲ ಸಂಗ್ರಹ ಕೊರತೆ ನೀಗಿಸಲು ನೀರು, ವಿದ್ಯುತ್, ಆಸ್ತಿ ತೆರಿಗೆ ಸೇರಿದಂತೆ ಎಲ್ಲ ಬಾಬ್ತುಗಳನ್ನು ಹೆಚ್ಚಿಸುತ್ತಿರುವ ಸರಕಾರ, ಇನ್ನೊಂದೆಡೆ ಈ ಹಣವನ್ನು ಅನರ್ಹರಿಗಾಗಿ ವ್ಯಯ ಮಾಡುತ್ತಿರುವುದು ಸರಿಯಲ್ಲ. ರಾಮಕೃಷ್ಣ ಹೆಗಡೆ ಸರಕಾರ ಸಾರ್ವತ್ರಿಕ ಪಡಿತರ ಯೋಜನೆ ಜಾರಿಗೆ ತಂದಾಗ,ಅಗತ್ಯವಿರುವ ಯಾರು ಬೇಕಿದ್ದರೂ ಪಡಿತರ ಪಡೆಯಬಹುದಿತ್ತು. ಆಗ ಸಿರಿವಂತರು ಪಡಿತರಕ್ಕೆ ಕೈಚಾಚುತ್ತಿರಲಿಲ್ಲ. ಈಗ ಗೃಹಲಕ್ಷ್ಮಿ, ಯುವನಿಧಿ ಸೇರಿದಂತೆ ವಿವಿಧ ಯೋಜನೆಗಳನ್ನು ಬಿಪಿಎಲ್ ಕಾರ್ಡ್‌ಗೆ ಲಿಂಕ್ ಮಾಡಿರುವುದೇ ಈ ಕಾರ್ಡ್‌ಗೆ ಎಲ್ಲರೂ ಮುಗಿಬೀಳಲು ಕಾರಣವಾಗಿದೆ. ಸರಕಾರ ಈಗ ವಿತರಿಸುವ ಪಡಿತರವನ್ನು ಮುಕ್ತವಾಗಿ ಹಂಚಿದರೂ, ಇಷ್ಟೊಂದು ಬೇಡಿಕೆ ಬರುವ ಸಾಧ್ಯತೆ ಇಲ್ಲ. ರಾಜ್ಯದಲ್ಲಿ ಅಂತ್ಯೋದಯ, ಬಿಪಿಎಲ್ ಕಾರ್ಡುಗಳು ಸೇರಿ 1,25,74,521 ಪಡಿತರ ಚೀಟಿಗಳಿವೆ. ಈ ಕಾರ್ಡುಗಳಲ್ಲಿ ಸುಮಾರು 4,35,33,099 ಕುಟುಂಬ ಸದಸ್ಯರಿದ್ದಾರೆ. ಅಂದರೆ ಕರ್ನಾಟಕದ ಜನಸಂಖ್ಯೆಯ ಶೇ.65ಕ್ಕಿಂತ ಹೆಚ್ಚು ಜನರು ಬಡವರಾಗಿದ್ದಾರೆಂದಾಯಿತು! ಈ ಪ್ರಮಾಣದಲ್ಲಿ ಯೋಜನೆಯೊಂದು ದುರ್ಬಳಕೆಯಾಗುತ್ತಿರುವುದು ಅಕ್ಷಮ್ಯ.

ಸೊಂಪಾದಕೀಯ

ಮಂಗಗಳ ಮಂಗಳಕಾರ್ಯ

ನಾವು ಅನೇಕ ಸಿನಿಮಾಗಳಲ್ಲಿ, ಕಥಾನಾಯಕನು ಕಷ್ಟದಲ್ಲಿರುವವರ ರಕ್ಷಣೆ ಮಾಡುವ ದೃಶ್ಯಗಳನ್ನು ನೋಡಿದ್ದೇವೆ. 'ಅಯ್ಯೋ, ಈ ಅನ್ಯಾಯನಾ ತಡೆಯೋಕೆ ಯಾರೂ ಇಲ್ವಾ..?' ಅಂತ ಚಿತ್ರದ ಪಾತ್ರವೊಂದು ಕೂಗಿ ಹೇಳಿದಾಗ ನಾಯಕ ನಟನ ಎಂಟ್ರಿ ಆಗೋದು, ಅವನು ಬಂದು ಅನ್ಯಾಯನ ನಿಲ್ಲಿಸೋದು ಎಲ್ಲವನ್ನೂ ನೋಡಿದ್ದೇವೆ. ಇದು ಮುಂದುವರಿದು, ಅನೇಕ ಪ್ರಾಣಿಪ್ರಧಾನ ಚಿತ್ರಗಳಲ್ಲಿ ನಾಯಿ, ಕೋತಿ, ಹಸು ಮುಂತಾದ ಪ್ರಾಣಿಗಳು ಸಂಕಷ್ಟದಲ್ಲಿರುವವರನ್ನು ಪಾರು ಮಾಡಿದ ಉದಾಹರಣೆಗಳನ್ನೂ ನಾವು ನೋಡಿದ್ದೇವೆ. ಇದು ಅಂಥದ್ದೇ ಒಂದು ಪ್ರಸಂಗ. ಸೆಕ್ಸ್ ಅನ್ನೋ ವಿಷಯಕ್ಕೆ ಬಂದ್ರೆ ಮನುಷ್ಯ ಕ್ರೂರಮೃಗ ಆಗ್ತಾನೆ ಅನ್ನೋದಕ್ಕೆ ಅನೇಕ ಉದಾಹರಣೆಗಳಿವೆ. ಇತ್ತೀಚೆಗಂತೂ ಮನುಷ್ಯನನ್ನು ಕೊಂದು, ದೇಹವನ್ನು ಕತ್ತರಿಸಿ, ಅದರ ತುಂಡುಗಳನ್ನು ಫ್ರಿಜ್‌ನಲ್ಲಿ ಶೇಖರಿಸಿಡುವವರೆಗೆ ಈ ಕ್ರೂರತನ ಮುಂದುವರಿದಿರೋದ್ರಿಂದ ಇದು ಶೀತಲ ಸಮರವಾಗಿ ಉಳಿದಿಲ್ಲ. ಮನುಷ್ಯನೊಳಗಿನ ಮೃಗ ಒಂದು ಕಡೆ ಆದರೆ, ಮೃಗಗಳಲ್ಲಿರೋ ಮನುಷ್ಯತ್ವ ಇನ್ನೊಂದು ಕಡೆ. ಅಂಥ ಮೃಗಗಳ ಮಾನವೀಯತೆ ಸಾರುವಂಥ ವಿಷಯ ಇದು. ಕೆಲ ದಿನಗಳ ಹಿಂದೆ ಉತ್ತರಪ್ರದೇಶದಲ್ಲಿ ಮಂಗಗಳು, ಅತ್ಯಾಚಾರಕ್ಕೆ ಒಳಗಾಗುತ್ತಿದ್ದ ಬಾಲಕಿಯನ್ನು ರಕ್ಷಣೆ ಮಾಡಿ, ಮನುಷ್ಯ ಮೇಲೋ, ಪ್ರಾಣಿ ಮೇಲೋ ಎಂಬ ಪ್ರಶ್ನೆಗೆ ಉತ್ತರ ನೀಡಿದ ಕಥೆಯಿದು. 6 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗುವ ಪ್ಲ್ಯಾನ್ ಮಾಡಿ, ಆಕೆಯ ಜತೆ ನಯವಾಗಿ ಮಾತಾಡಿ ಪಾಳುಬಿದ್ದ ಮನೆಯೊಂದಕ್ಕೆ ಕರೆದೊಯ್ದಿದ್ದ ಕಾಮುಕ, ಇನ್ನೇನು ಆಕೆಯ ಮೇಲೆ ಅತ್ಯಾಚಾರಕ್ಕೆ ಸಿದ್ಧವಾಗಿದ್ದಾಗ ಅವನ ಮೇಲೆ ಅಟ್ಯಾಕ್ ಮಾಡಿದ ಮಂಗಗಳು ಆತನನ್ನು ಅಲ್ಲಿಂದ ಓಡಿಸಿ ಮಂಗಗಳಿಗೂ ಮಾನವೀಯತೆ ಇದೆ ಅಂತ ಪ್ರೂವ್ ಮಾಡಿದವು. ಬಾಲಕಿಯ ಚೀರಾಟ ಕೇಳಿ ಅಲ್ಲಿದ್ದ ಮಂಗಗಳ ಹಿಂಡು ಈ ಕಾಮುಕನ ಮೇಲೆ ದಾಳಿ ಮಾಡಿದವು. ಮಂಗಗಳ ಸಂಖ್ಯೆ ಜಾಸ್ತಿ ಇದ್ದಿದ್ದರಿಂದ ಅವನು ಬೇರೆ ದಾರಿ ಕಾಣದೆ ಅಲ್ಲಿಂದ ಪೇರಿ ಕಿತ್ತ. ಬಾಲಕಿಯ ಮನೆಯವರು ಸಾಕ್ಷಾತ್ ಹನುಮಂತನೇ ಬಂದು ನಮ್ಮ ಮಗಳನ್ನು ರಕ್ಷಿಸಿದ್ದಾನೆ ಅಂತ ನಿಟ್ಟುಸಿರು ಬಿಟ್ಟರು. ಒಟ್ಟಿನಲ್ಲಿ ಮಂಗಗಳು ಅಂದ್ರೆ ಬರೀ ಕಪಿಚೇಷ್ಟೆ ಮಾಡಲು ಮಾತ್ರ ಅಂದುಕೊಂಡಿದ್ದವರಿಗೆ ಮಂಗಗಳಿಂದ ಮಂಗಳಕರ ಕೆಲಸಗಳೂ ಆಗುತ್ತವೆ ಅಂತ ಪ್ರೂವ್ ಮಾಡಿದವು ಈ ಕೋತಿಗಳು.

ಸಂಪಾದಕರ ಸದ್ಯಶೋಧನೆ

ಬುಲೆಟ್ ಟ್ರೇನ್ ಕುರಿತು ಮತ್ತಷ್ಟು

ಜಪಾನ್‌ನ ಬುಲೆಟ್ ಟ್ರೇನುಗಳ (ಶಿಂಕನ್ಸೆನ್) ಬಗ್ಗೆ ಮತ್ತಷ್ಟು ಸಂಗತಿಗಳನ್ನು ಹೇಳಬಹುದು. ಈ ಟ್ರೇನಿನಲ್ಲಿ ಪ್ರಯಾಣ ಮಾಡುವುದು ನಿಜಕ್ಕೂ ಒಂದು ರೋಮಾಂಚಕ ಅನುಭವವೇ ಸರಿ. ಗಂಟೆಗೆ ಸುಮಾರು 320 ಕಿ.ಮೀ. ವೇಗದಲ್ಲಿ ಸಂಚರಿಸುವ ಈ ರೈಲು, ಭೂಮಿ ಮೇಲೆ ಚಲಿಸುವ ಎಲ್ಲ ವಾಹನಗಳ ಪೈಕಿ ಅತ್ಯಂತ ವೇಗದ್ದು. ವಿಶ್ವದ ಅತ್ಯಂತ ಸುರಕ್ಷಿತ ಸಾರಿಗೆ ವ್ಯವಸ್ಥೆಗಳಲ್ಲಿ ಒಂದು ಎಂದು ಪರಿಗಣಿಸಲಾಗಿರುವ ಈ ಬುಲೆಟ್ ಟ್ರೇನ್ ಆರಂಭವಾಗಿ ಈ ವರ್ಷಕ್ಕೆ 60 ವರ್ಷಗಳು ತುಂಬಿದ್ದರೂ, ಇಲ್ಲಿ ತನಕ ಯಾವ ಪ್ರಯಾಣಿಕರೂ ಅಪಘಾತದಿಂದ ಮೃತಪಟ್ಟಿಲ್ಲ ಎಂಬುದು ಅದರ ಅತ್ಯುನ್ನತ ಕಾರ್ಯಕ್ಷಮತೆಗೆ ಹಿಡಿದ ಕನ್ನಡಿಯಾಗಿದೆ. ಸಣ್ಣ-ಪುಟ್ಟ ಘಟನೆಗಳು ಮತ್ತು ಅನಾಹುತಗಳು ಸಂಭವಿಸಿರುವುದು ನಿಜ. ಪ್ರಾಕೃತಿಕ ವಿಕೋಪಗಳಾದ ಭೂಕಂಪ ಮತ್ತು ಚಂಡಮಾರುತಗಳಿಂದ ಕೆಲವು ಸಲ ತಾಂತ್ರಿಕ ಸಮಸ್ಯೆಗಳನ್ನು ಎದುರಿಸಿದ್ದುಂಟು. ಉದಾಹರಣೆಗೆ, 2004ರಲ್ಲಿ ಸಂಭವಿಸಿದ ಭೂಕಂಪದ ವೇಳೆ, ಶಿಂಕನ್ಸೆನ್ ಸಂಚರಿಸುವಾಗ ಹಳಿ ತಪ್ಪಿತ್ತು. ಇದು ಶಿಂಕನ್ಸೆನ್‌ನ ಮೊದಲ ಹಳಿ ತಪ್ಪಿದ ಘಟನೆ. ಅಂದರೆ ಬುಲೆಟ್ ಟ್ರೇನ್ ಆರಂಭವಾಗಿ 40 ವರ್ಷಗಳಲ್ಲಿ ಮೊದಲ ಬಾರಿಗೆ ಹಳಿ ತಪ್ಪಿತ್ತು, ಅದೂ ತನ್ನದಲ್ಲದ (ನೈಸರ್ಗಿಕ ದುರಂತದ) ಕಾರಣಕ್ಕೆ. ಅದೃಷ್ಟವಶಾತ್, ಪ್ರಯಾಣಿಕರ ಪೈಕಿ ಯಾರಿಗೂ ಗಾಯಗಳಾಗಿರಲಿಲ್ಲ. ಶಿಂಕನ್ಸೆನ್‌ಗಳಲ್ಲಿ ಈಗ ತಂತ್ರಜ್ಞಾನವನ್ನು ಅಪ್‌ಗ್ರೇಡ್ ಮಾಡಲಾಗಿದೆ. ಭೂಕಂಪ ಸಂಭವಿಸುವ ಕನಿಷ್ಠ 40 ಸೆಕೆಂಡುಗಳ ಮೊದಲು, Earthquake early warning system ಮೂಲಕ ಮುನ್ಸೂಚನೆ ಸಿಗುತ್ತದೆ. ಇದರಿಂದ ಡ್ರೈವರ್‌ಗೆ ಬುಲೆಟ್ ಟ್ರೇನನ್ನು ತಕ್ಷಣ ನಿಲ್ಲಿಸಲು ಸಾಧ್ಯವಾಗುತ್ತದೆ. ಕೆಲವು ಸಂದರ್ಭಗಳಲ್ಲಿ, ರೈಲುಗಳ ಹಳಿ ಮೇಲೆ ಆತ್ಮಹತ್ಯೆ ಮಾಡಿಕೊಂಡ ಪ್ರಸಂಗಗಳು ಜರುಗಿದ್ದುಂಟು. ಆದರೆ ಈ ಘಟನೆಗಳು ಶಿಂಕನ್ಸೆನ್‌ನ ಅಚ್ಚುಕಟ್ಟಾದ ಸಮಯಪಾಲನೆ ಮೇಲಾಗಲಿ, ರೈಲು ಸಂಚಾರದ ಮೇಲಾಗಲಿ ಯಾವ ಪರಿಣಾಮವನ್ನೂ ಬೀರಿಲ್ಲ ಎಂಬುದು ಗಮನಾರ್ಹ. 2015ರಲ್ಲಿ, ಒಬ್ಬ ಪ್ರಯಾಣಿಕ ಸ್ವತಃ ಬೆಂಕಿ ಹಚ್ಚಿಕೊಂಡ ಘಟನೆ ನಡೆದಿತ್ತು. ಇದು ಒಬ್ಬ ಪ್ರಯಾಣಿಕನ ಸಾವಿಗೆ ಕಾರಣವಾಯಿತು, ಆದರೆ ಇದರಿಂದ ಇನ್ನಿತರ ಪ್ರಯಾಣಿಕರಿಗೆ ಯಾವ ತೊಂದರೆಯೂ ಆಗಲಿಲ್ಲ. ಶಿಂಕನ್ಸೆನ್‌ಗಳಲ್ಲಿ ತಾಂತ್ರಿಕ ಸಮಸ್ಯೆಗಳು ಸಹ ತೀರಾ ಅಪರೂಪ. ಒಮ್ಮೆ ರೈಲುಗಳ ಬ್ರೇಕ್ ವ್ಯವಸ್ಥೆಯಲ್ಲಿ ಸಣ್ಣ ತೊಂದರೆ ಉಂಟಾಗಿತ್ತು. ತಕ್ಷಣವೇ ತಾಂತ್ರಿಕ ತಂಡವು ಕಾರ್ಯಪ್ರವೃತ್ತವಾಗಿ ಸಮಸ್ಯೆಯನ್ನು ಬಗೆಹರಿಸಿತು. 2021ರಲ್ಲಿ ಒಂದು ಸಲ ರೈಲು ನಿಲ್ಲುವ ಸಮಯದಲ್ಲಿ ಬ್ರೇಕ್ ಪ್ಯಾಡ್‌ನ ಸಮಸ್ಯೆಯಿಂದಾಗಿ ಹೊಗೆ ಕಾಣಿಸಿಕೊಂಡಿತ್ತು. ಆದರೆ ಇದರಿಂದ ಯಾವುದೇ ಅನಾಹುತವಾಗಲಿಲ್ಲ. ಕೆಲವೊಮ್ಮೆ ಪ್ರಯಾಣಿಕರ ತಪ್ಪಿನಿಂದಾಗಿ ಬೇರೆ ಬೋಗಿಗಳನ್ನು ಪ್ರವೇಶಿಸಿ, ತಮ್ಮದಲ್ಲದ ಆಸನಗಳಲ್ಲಿ ಹೋಗಿ ಕುಳಿತುಕೊಂಡು ಉಳಿದವರಿಗೆ ಕಿರಿಕಿರಿಯಾಗಿರಬಹುದು. ಆದರೂ ಅಕ್ಷರ ಬಾರದವರು, ಭಾಷೆ ಗೊತ್ತಿಲ್ಲದವರು ಸೂಚನೆ, ಸಂಕೇತ, ಸಂಜ್ಞೆಗಳ ಮೂಲಕ ತಮ್ಮ ಆಸನಗಳನ್ನು ಸುಲಭವಾಗಿ ಕಂಡುಕೊಳ್ಳಬಹುದಾಗಿದೆ. ಇದನ್ನು ಸಹ ಪರಿಹರಿಸಲು ಕಾಲಕಾಲಕ್ಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಶಿಂಕನ್ಸೆನ್‌ನ 60 ವರ್ಷಗಳ ಇತಿಹಾಸದಲ್ಲಿ 10 ಶತಕೋಟಿ ಜನ ಪ್ರಯಾಣಿಸಿದ್ದಾರೆ. ಆದರೆ ದುರಂತದ ಪ್ರಮಾಣ ಮಾತ್ರ ಶೂನ್ಯ ಎಂದೇ ಹೇಳಬಹುದು. ಇದಕ್ಕೆ ಕಾರಣ ದೋಷರಹಿತ ವ್ಯವಸ್ಥೆ, ಸಮರ್ಥ ತಂತ್ರಜ್ಞಾನ, ನಿರ್ವಹಣಾ ಶಿಸ್ತು ಮತ್ತು ನಿರಂತರ ಪರೀಕ್ಷಾ ಕ್ರಮಗಳು. ಒಂದು ಸಣ್ಣ ದೋಷ ಕಂಡುಬಂದರೂ ತಕ್ಷಣ ಅದನ್ನು ಪರಿಹರಿಸಲಾಗುತ್ತದೆ. ಇವು ಶಿಂಕನ್ಸೆನ್ ಅನ್ನು ವಿಶ್ವದ ಅತ್ಯಂತ ಸುರಕ್ಷಿತ ಸಾರಿಗೆ ವ್ಯವಸ್ಥೆಯನ್ನಾಗಿ ಮಾಡಿವೆ. ಜಪಾನ್ ಬುಲೆಟ್ ಟ್ರೇನು ವೇಗಕ್ಕೊಂದೇ ಅಲ್ಲ, ಸುರಕ್ಷತೆ, ದಕ್ಷತೆ, ಅತ್ಯುನ್ನತ ಪರಿಣತಿ, ದೋಷರಹಿತ ವ್ಯವಸ್ಥೆ, ನಿರಂತರ ಮೇಲ್ದರ್ಜೆಗೆ ಎತ್ತರಿಸಿಕೊಳ್ಳುವ ತುಡಿತ ಹಾಗೂ ಅತ್ಯುತ್ತಮ ಕಾರ್ಯಕ್ಷಮತೆಗೂ ಜಗತ್ತಿನಲ್ಲಿಯೇ ಹೆಸರುವಾಸಿಯಾಗಿದೆ.

ಅಮೆರಿಕದ 'ಇಕನಾಮಿಕ್ ಹಿಟ್‌ಮ್ಯಾನ್'

ರಾಹುಲ್ ಗಾಂಧಿಯವರ ಸ್ನೇಹಿತ ಜಾರ್ಜ್ ಸೊರೋಸ್ ತನ್ನ ಪ್ರಭಾವ ಬಳಸಿ ಟ್ರಂಪ್‌ರನ್ನು ಚುನಾವಣೆಯಲ್ಲಿ ಸೋಲಿಸಲು ಯತ್ನಿಸಿದ. ಆದರೆ ಇದು ಅಮೆರಿಕನ್ನರಿಗೆ ತಿಳಿದು, ಟ್ರಂಪ್‌ರನ್ನು 2ನೇ ಅವಧಿಗೆ ಗೆಲ್ಲಿಸಿದರು. ಕಾಂಗ್ರೆಸ್‌ಗೆ ಭಾರತದಲ್ಲಿ ಮನ್ನಣೆ ಸಿಗದ ಕಾರಣ, ಸೊರೋಸ್ ಮೂಲಕ ಸುಳ್ಳು ನಿರೂಪಣೆಗಳ ದಾಳಿ ನಡೆಸಿ ಮೋದಿಯವರ ಘನತೆಗೆ ಧಕ್ಕೆ ತರುವ ಕೆಲಸವನ್ನು ಅದು ಮಾಡುತ್ತಾ ಬಂದಿದೆ.

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ನಾವೆಲ್ಲ ಶಾಲೆಗಳಲ್ಲಿ ಓದುವಾಗ 'ಎ' ಫಾರ್ ಆ್ಯಪಲ್ ಎಂದು ಹೇಳಿಕೊಟ್ಟಿದ್ದರು. ಆದರೆ ರಾಹುಲ್ ಗಾಂಧಿಯವರು ಓದಿದ ಶಾಲೆಯಲ್ಲಿ, 'ಎ' ಫಾರ್ 'ಅದಾನಿ' ಅಥವಾ 'ಅಂಬಾನಿ' ಎಂದು ಹೇಳಿಕೊಟ್ಟಿರಬೇಕು! ದೇಶದ ಕೈಗಾರಿಕೋದ್ಯಮಿಯೊಬ್ಬರ ಮೇಲೆ ವಿದೇಶದಲ್ಲಿ ಆಪಾದನೆ ಬಂದರೆ ಖುಷಿಪಟ್ಟು ಆನಂದಿಸುವ ಕೆಲವರು ಜಗತ್ತಿನಲ್ಲಿರುವುದು ಪ್ರಾಯಶಃ ಭಾರತದಲ್ಲೇ ಇರಬೇಕು.

ಮೋದಿಯವರು ಅಧಿಕಾರಕ್ಕೆ ಬಂದ ನಂತರ ಅಂಬಾನಿ ಮತ್ತು ಅದಾನಿ ಕೋಟ್ಯಧಿಪತಿಗಳಾದರು ಎಂಬಂತೆ ರಾಹುಲ್ ಗಾಂಧಿ ಮಾತನಾಡುತ್ತಾರೆ. ಎರಡನೇ ಮಹಾಯುದ್ಧದ ಬಳಿಕ ಅಮೆರಿಕವು ವಿಶ್ವದ ದೊಡ್ಡಣ್ಣನ ಪಟ್ಟ ಗಿಟ್ಟಿಸಿಕೊಂಡ ನಂತರ, ಅದನ್ನು ಉಳಿಸಿಕೊಳ್ಳಲು ಅನೇಕ ಕೆಲಸಗಳನ್ನು ಮಾಡುತ್ತಾ ಬಂದಿದೆ. ತನ್ನನ್ನು ಮೀರಿಸುವಂತಿರುವ ಇತರ ದೇಶಗಳ ಅಭಿವೃದ್ಧಿಯನ್ನು ಅದು ಸುಲಭವಾಗಿ ಸಹಿಸುವುದಿಲ್ಲ. ಮತ್ತೊಂದು ದೇಶ ತನಗೆ ಸ್ಪರ್ಧೆ ನೀಡುತ್ತಿದೆಯೆಂಬುದು ಗೊತ್ತಾಗುತ್ತಿದ್ದಂತೆ, ತನ್ನ ಗುಪ್ತದಳದ ಮೂಲಕ ಆ ದೇಶದ ಮಂಡಿಯೂರಿಸುವ ಕೆಲಸಕ್ಕೆ ಕೈಹಾಕುತ್ತದೆ. ಪಕ್ಕದ ದಕ್ಷಿಣ ಅಮೆರಿಕ ಖಂಡವಂತೂ ಒಂದು ಶತಮಾನದಷ್ಟು ಕಾಲ ಆಂತರಿಕ ಯುದ್ಧದಲ್ಲಿ ನಲುಗಿಹೋಗಿತ್ತು. ಅಮೆರಿಕದ ತನಿಖಾ ಸಂಸ್ಥೆಗಳು, ಬೇಹುಗಾರಿಕಾ ಸಂಸ್ಥೆಗಳು, ಆಳವಾದ ಹಿಡಿತ ಹೊಂದಿರುವ ಮಾಧ್ಯಮಗಳು, ದೊಡ್ಡ ದೊಡ್ಡ ಉದ್ಯಮಿಗಳು 'ವಿಶೇಷ ಸಂಸ್ಥೆ'ಗಳ ಮೂಲಕ ಇತರ ದೇಶಗಳ ಮೇಲೆ ಮಾನಸಿಕವಾಗಿ ಯುದ್ಧ ಸಾರುವ ಕೆಲಸಗಳನ್ನು ಮಾಡುತ್ತಿರುತ್ತಾರೆ.

ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ದಿಗ್ವಿಜಯ ಸಾಧಿಸಿದ ನಂತರ, ಅಲ್ಲಿನ ಡೆಮಾಕ್ರಟಿಕ್ ಪಕ್ಷದ ಬೆಂಬಲಿಗರು ವಿಲವಿಲ ಒದ್ದಾಡುತ್ತಿದ್ದಾರೆ. ಟ್ರಂಪ್ ಅಧಿಕೃತವಾಗಿ ಅಧ್ಯಕ್ಷಗಾದಿ ಹಿಡಿಯುವ ಮುನ್ನ, ಬಾಕಿ ಉಳಿದಿರುವ ಕೆಲಸಗಳನ್ನು ಹಂಗಾಮಿ ಅಧ್ಯಕ್ಷರ ಮೂಲಕ ಮಾಡಿಸುವಲ್ಲಿ ನಿರತರಾಗಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಮತದಾನದ ಫಲಿತಾಂಶ ಬಂದ ಮರುಕ್ಷಣವೇ, ಸೋತ ಪಕ್ಷದವರು ಅಧಿಕಾರದಿಂದ ಕೆಳಗಿಳಿಯಬೇಕು. ಸೋತ ಪಕ್ಷವು ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳುವಂತಿರುವುದಿಲ್ಲ. ಅಧಿಕಾರ ನಡೆಸಲು ಅರ್ಹರಲ್ಲವೆಂಬ ಕಾರಣಕ್ಕೆ ಜನರು ಅವರನ್ನು ಕೆಳಗಿಳಿಸಿರುತ್ತಾರೆ. ಆದರೆ ಚುನಾವಣೆ ಸೋತ ನಂತರವೂ ನಿರ್ಣಯಗಳನ್ನು ತೆಗೆದುಕೊಳ್ಳುವುದು ಯಾವ ಪ್ರಜಾಪ್ರಭುತ್ವ? ಇಂಥವರು ಭಾರತದ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾರೆ.

ರಾಹುಲ್ ಗಾಂಧಿಯವರ ಸ್ನೇಹಿತ ಜಾರ್ಜ್ ಸೊರೋಸ್ ಹಣಬಲದ ಮೂಲಕ ತನ್ನ ಪ್ರಭಾವವನ್ನು ಬಳಸಿ ಡೊನಾಲ್ಡ್ ಟ್ರಂಪ್‌ರನ್ನು ಚುನಾವಣೆಯಲ್ಲಿ ಸೋಲಿಸಬೇಕೆಂದು ಶತಪ್ರಯತ್ನ ಪಟ್ಟ. ಆದರೆ ಆತನ ಈ ಷಡ್ಯಂತ್ರ ಅಮೆರಿಕನ್ನರಿಗೆ ತಿಳಿದು, ಟ್ರಂಪ್‌ರನ್ನು ಎರಡನೇ ಅವಧಿಗೆ ಗೆಲ್ಲಿಸಿದರು. ಕಾಂಗ್ರೆಸ್ ಪಕ್ಷಕ್ಕೆ ಭಾರತದಲ್ಲಿ ಜನಮನ್ನಣೆ ಸಿಗದ ಕಾರಣ, ಜಾರ್ಜ್ ಸೊರೋಸ್ ಮೂಲಕ ಭಾರತದ ಮೇಲೆ ಸುಳ್ಳು ನಿರೂಪಣೆಗಳಿಂದ ಕೂಡಿದ ದಾಳಿ ನಡೆಸಿ ಮೋದಿಯವರ ಘನತೆಗೆ ಧಕ್ಕೆ ತರುವಂಥ ಕೆಲಸವನ್ನು ಅದು ಸತತವಾಗಿ ಮಾಡುತ್ತಾ ಬಂದಿದೆ. ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭವಾಗಲು ಕೆಲವು ದಿನಗಳಷ್ಟೇ ಉಳಿದಿದ್ದು, ಅಧಿವೇಶನದಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕಿದೆ. ಮುಖ್ಯವಾಗಿ, ಅಸಾಂವಿಧಾನಿಕವಾಗಿರುವ 'ವಕ್ಫ್' ಕಾನೂನಿನ ತಿದ್ದುಪಡಿಗಳ ಬಗ್ಗೆ ಚರ್ಚೆಯಾಗುತ್ತದೆಂದು ಹೇಳಲಾಗುತ್ತಿದೆ. ವಿರೋಧ ಪಕ್ಷಗಳು ತಮ್ಮ ಆಡಳಿತವಿರುವ ರಾಜ್ಯಗಳಲ್ಲಿ ವಕ್ಫ್ ಮಂಡಳಿಗೆ ಆದಷ್ಟು ಜಾಗವನ್ನು ಸೇರಿಸುವ ಕೆಲಸವನ್ನು ತರಾತುರಿಯಲ್ಲಿ ಮಾಡುತ್ತಿವೆ. ಕರ್ನಾಟಕದಲ್ಲಿ ಸಚಿವ ಜಮೀರ್ ಅಹ್ಮದ್ ಅವರು ಕೆಲ ಜಿಲ್ಲೆಗಳಿಗೆ ತೆರಳಿ ವಕ್ಫ್ ಅದಾಲತ್ ನಡೆಸಿ, ರೈತರ ಜಮೀನುಗಳು, ಮಠ-ಮಂದಿರ-ದಲಿತರ ಜಾಗಗಳನ್ನು ವಕ್ಫ್ ಮಂಡಳಿಗೆ ಸೇರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸಂಸತ್ತಿನ ಅಧಿವೇಶನದಲ್ಲಿ ವಕ್ಫ್ ಕಾಯ್ದೆ ತಿದ್ದುಪಡಿ ವಿಷಯವನ್ನು ಚರ್ಚಿಸದೆ ಸಂಸತ್ತಿನ ಗಮನವನ್ನು ಬೇರೆಡೆಗೆ ತಿರುಗಿಸಲು, ರಾಹುಲ್ ಗಾಂಧಿ ತಮ್ಮ ಆಪ್ತ ಜಾರ್ಜ್ ಸೊರೋಸ್ ಮೂಲಕ ಅದಾನಿ ವಿಷಯವು ಚರ್ಚೆಗೆ ಬರುವಂತೆ ಮಾಡಿ, ಮೋದಿಯವರ ಹೆಸರಿನೊಂದಿಗೆ ಮತ್ತೊಮ್ಮೆ ಅದಾನಿಯನ್ನು ಸೇರಿಸುವ ಷಡ್ಯಂತ್ರ ಮಾಡಿದ್ದಾರೆ. ಕಳೆದ ಬಾರಿಯ ಅಧಿವೇಶನದ ವೇಳೆ 'ಹಿಂಡನ್‌ಬರ್ಗ್' ಸಂಸ್ಥೆಯು ಅದಾನಿ ಸಮೂಹ ಸಂಸ್ಥೆಗಳ ಮೇಲೆ ಆರ್ಥಿಕ ಅಶಿಸ್ತಿನ ಆರೋಪವನ್ನು ಹೊರಿಸಿತ್ತು ಮತ್ತು ಈ ವಿಷಯವನ್ನು ಮೋದಿಯವರ ತಲೆಗೆ ಕಟ್ಟುವ ವ್ಯರ್ಥಪ್ರಯತ್ನವನ್ನು ಕಾಂಗ್ರೆಸ್ ಮಾಡಿತ್ತು. ಆದರೆ ಈ ಬಾರಿ ಅದಾನಿ ಸಂಸ್ಥೆಗಳ ಮೇಲೆ ಅಮೆರಿಕದಲ್ಲಿ ಕೇಳಿಬಂದಿರುವ ಆರೋಪದಲ್ಲಿ, ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಆಡಳಿತವಿದ್ದ ಕಾಲದ ರಾಜ್ಯಗಳಿವೆ. ಅಂದರೆ, ತಮಿಳುನಾಡು, ಒಡಿಶಾ, ಆಂಧ್ರಪ್ರದೇಶ, ರಾಜಸ್ಥಾನಗಳಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಆಡಳಿತವಿದ್ದ ಸಂದರ್ಭದಲ್ಲಿ ಅದಾನಿ ಲಂಚ ನೀಡಿದ್ದಾರೆಂಬ ಆರೋಪವಿದೆ.

ಅಮೆರಿಕದಲ್ಲಿ 'ಇಕನಾಮಿಕ್ ಹಿಟ್‌ಮ್ಯಾನ್' ಎಂಬುದು ಭರ್ಜರಿ ಹಣಗಳಿಸುವ ವೃತ್ತಿಯಾಗಿದೆ. ಇದರಲ್ಲಿ ತೊಡಗಿಸಿಕೊಂಡಿರುವವರು ಇತರ ದೇಶಗಳಿಗೆ ತೆರಳಿ, ಅಲ್ಲಿ ಆರ್ಥಿಕತೆಯನ್ನು ದುಸ್ಥಿತಿಗೆ ತರುವ ಕೆಲಸವನ್ನು ಮಾಡುತ್ತಾರೆ. ಈ ವೃತ್ತಿಯಲ್ಲಿರುವವರಿಗೆ ವಿವಿಧ ಸಂಸ್ಥೆಗಳು ಮತ್ತು ಪ್ರತಿಷ್ಠಿತ ಉದ್ಯಮಿಗಳ ಮೂಲಕ ಹಣಸಂದಾಯವಾಗುತ್ತದೆ. 'ಟೂಲ್ ಕಿಟ್'ಗಳ ಮೂಲಕ ಸುಳ್ಳು ಆರ್ಥಿಕ ವರದಿಗಳನ್ನು ನೀಡುವುದು, ಚುನಾವಣೆ ಸಮಯದಲ್ಲಿ ಗಲಾಟೆ ಮಾಡಿಸಿ ಆ ಪ್ರಕ್ರಿಯೆಯನ್ನು ಅಸ್ಥಿರಗೊಳಿಸುವುದು, ಪ್ರಮುಖ ವಿಜ್ಞಾನಿಗಳನ್ನು ಕೊಲೆ ಮಾಡಿಸುವುದು, ಹನಿಟ್ರ್ಯಾಪ್ ಮೂಲಕ ಪ್ರಮುಖ ವಿಷಯಗಳನ್ನು ಸಂಗ್ರಹಿಸುವುದು ಇವು 'ಇಕನಾಮಿಕ್ ಹಿಟ್‌ಮ್ಯಾನ್' ವೃತ್ತಿಯಲ್ಲಿರುವವರ ಕೆಲಸ. ದಕ್ಷಿಣ ಅಮೆರಿಕದ ಈಕ್ವೆಡಾರ್ ದೇಶದಲ್ಲಿ ಯುರೋಪ್ ಮತ್ತು ಅಮೆರಿಕದ ಮಿಶ್ರ ಸಂಸ್ಕೃತಿಯಿದೆ. ಈಕ್ವೆಡಾರ್ ಎಂದಾಕ್ಷಣ ನೆನಪಿಗೆ ಬರುವುದು ಸಂಪದ್ಭರಿತ ಅರಣ್ಯ, ವಿಷಕಾರಿ ಹಾವುಗಳು, ಮನುಷ್ಯರನ್ನು ಕೊಲ್ಲುವ ಕಾಡುಮನುಷ್ಯರು. ಅಮೆರಿಕದ ಉದ್ಯಮಿಯೊಬ್ಬರು 1960ರ ದಶಕದಲ್ಲಿ ಅಲ್ಲಿನ ಕಾಡುಗಳ ನಡುವೆ ಅಗಾಧ ಪ್ರಮಾಣದ ಕಚ್ಚಾತೈಲ ನಿಕ್ಷೇಪಗಳನ್ನು ಪತ್ತೆಹಚ್ಚಿದ್ದರು. ಬಡತನದಿಂದ ಬಳಲುತ್ತಿದ್ದ ಆ ದೇಶದಲ್ಲಿ ಸಿಕ್ಕಿದ ಬಿಲಿಯನ್‌ಗಟ್ಟಲೆ ಬೆಲೆಬಾಳುವ ಸಂಪನ್ಮೂಲ ಅದಾಗಿತ್ತು. ತೈಲನಿಕ್ಷೇಪ ಪತ್ತೆಯಾದರೂ ಅದನ್ನು ಹೊರತೆಗೆದು ಬಳಸಿಕೊಳ್ಳುವಷ್ಟು ಹಣ ಅಲ್ಲಿನವರಲ್ಲಿ ಇರಲಿಲ್ಲ. ಹೀಗಾಗಿ ಅಮೆರಿಕದ ಉದ್ಯಮಿಗಳು 'ಇಕನಾಮಿಕ್ ಹಿಟ್‌ಮ್ಯಾನ್' ಮೂಲಕ ಆ ನಿಕ್ಷೇಪಗಳನ್ನು ಹೊರತೆಗೆದು ವ್ಯಾಪಾರಕ್ಕೆ ಬಳಸಿಕೊಳ್ಳುವ ಕೆಲಸಕ್ಕೆ ಕೈಹಾಕಿದರು. ಅಮೆರಿಕದ ಸಂಸ್ಥೆಗಳು ಮತ್ತು ಬ್ಯಾಂಕುಗಳ ಮೂಲಕ ಈಕ್ವೆಡಾರ್ ದೇಶಕ್ಕೆ ಸಾಲನೀಡಿ, ಅಲ್ಲಿನ ಅಭಿವೃದ್ಧಿ ಕೆಲಸಗಳಿಗೆ ಬಳಸಿಕೊಳ್ಳುವಂತೆ ಮಾಡಿದರು. ಈಕ್ವೆಡಾರ್ ದೇಶದಲ್ಲಿ ವಿದ್ಯುತ್ ಸಮಸ್ಯೆಯಿತ್ತು. ಅದನ್ನು ಬಗೆಹರಿಸಲು ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಗೆಂದು ತಮ್ಮವರನ್ನು ಅಲ್ಲಿಗೆ ಕಳುಹಿಸಿದರು. ತೈಲನಿಕ್ಷೇಪವನ್ನು ಪತ್ತೆಹಚ್ಚುವ ಕೆಲಸ ನಡೆದಿತ್ತು. ಈ ಉದ್ಯಮಿಗಳು ತಾವು ನೇಮಿಸಿದ್ದ 'ಇಕನಾಮಿಕ್ ಹಿಟ್ ಮ್ಯಾನ್'ಗಳಿಗೆ ಯಾವ ಕೆಲಸ ಮಾಡಬೇಕೆಂದು ಹೇಳುತ್ತಿದ್ದರೇ ಹೊರತು, ಭವಿಷ್ಯದ ಉದ್ದೇಶಗಳನ್ನಲ್ಲ.

ಈ ಉದ್ಯಮಿಗಳ ಉದ್ದೇಶಗಳನ್ನು ಅರಿಯುವಷ್ಟರಲ್ಲಿ ಹಿಟ್‌ಮ್ಯಾನ್‌ಗಳು ತಮಗರಿವಿಲ್ಲದಂತೆ ಕೆಲಸ ಮುಗಿಸುತ್ತಿದ್ದರು. ನಿಕ್ಷೇಪವಿರುವ ದೇಶಕ್ಕೆ ಬೇಕಿರುವ ಹಣಸಂದಾಯ ಮಾಡಿ, ಅಲ್ಲಿ ಆಗಬೇಕಿರುವ ಕೆಲಸಗಳನ್ನೂ ಅಮೆರಿಕದ ಕಂಪನಿಗಳಿಗೆ ನೀಡಬೇಕಿತ್ತು. ಸರಳವಾಗಿ ಹೇಳಬೇಕೆಂದರೆ, ಅಮೆರಿಕನ್ ಡಾಲರ್ ಸಾಲದ ಮೂಲಕ

ಹೊರದೇಶಕ್ಕೆ ಹೋಗಿ, ಅಲ್ಲಿನ ಸರಕಾರವು ಅಮೆರಿಕದ ಕಂಪನಿಗಳಿಗೆ ನೀಡುವ ಗುತ್ತಿಗೆಯ ಮೂಲಕ ವಾಪಸ್ ಬರುತ್ತಿತ್ತು. ಇದರಿಂದಾಗಿ ವಿದೇಶಿ ವಿನಿಮಯದ ಒತ್ತಡ ಇರುತ್ತಿರಲಿಲ್ಲ. 1960-70ರ ದಶಕದಲ್ಲಿ ಅಮೆರಿಕದ ಮಾತನ್ನು ಕೇಳದ ದೇಶಗಳನ್ನು 'ಸೋವಿಯತ್ ಒಕ್ಕೂಟದ ಸ್ನೇಹಿತ'ನೆಂದು ಹೇಳಲಾಗುತ್ತಿತ್ತು. ಯಾವುದಾದರೊಂದು ದೇಶ ತನ್ನ ಮಾತನ್ನು ಕೇಳಲಿಲ್ಲವೆಂದರೆ ಅಲ್ಲಿನ ಸರಕಾರದ ಆಂತರಿಕ ವಿಷಯದಲ್ಲಿ ತಲೆಹಾಕಿ ಅಭದ್ರತೆ ಸೃಷ್ಟಿಸಲಾಗುತ್ತಿತ್ತು. ಹೀಗೆಂದು 'ಇಕನಾಮಿಕ್ ಹಿಟ್‌ಮ್ಯಾನ್'ಗಳೇ ಹೇಳಿದ್ದಾರೆ.

'ಇಕನಾಮಿಕ್ ಹಿಟ್‌ಮ್ಯಾನ್'ಗಳು ಕೆಲಸ ಮಾಡುವ ಸಂಸ್ಥೆಗಳನ್ನು ಕೆಲವೇ ಮಂದಿ ನಿಯಂತ್ರಿಸುತ್ತಾರೆ. ಅಂದರೆ, ಸುಮಾರು 2000 ಕೆಲಸಗಾರರಿರುವ ಸಂಸ್ಥೆಯನ್ನು ನಾಲ್ಕರಿಂದ ಐದು ಮಂದಿ ಮಾತ್ರ ನಿಯಂತ್ರಿಸುತ್ತಾರೆ. ಇಂಥ ಸಂಸ್ಥೆಯ ಪಾಲುದಾರರು ರಾಜ್ಯಗಳ ಮುಖ್ಯಸ್ಥರು, ಸರಕಾರದ ಉನ್ನತಾಧಿಕಾರಿಗಳು, ಬೃಹತ್ ಉದ್ಯಮಿಗಳು, ಪ್ರತಿಷ್ಠಿತ ಮಾಧ್ಯಮಗಳ ಮುಖ್ಯಸ್ಥರು, ಕಾನೂನು ಪಂಡಿತರ ಜತೆ ನಿರಂತರ ಸಂಪರ್ಕದಲ್ಲಿರುತ್ತಾರೆ. ಈ ಸಂಸ್ಥೆಗಳಲ್ಲಿ ಕೆಲಸ ಮಾಡುವ 'ಇಕನಾಮಿಕ್ ಹಿಟ್‌ಮ್ಯಾನ್'ಗಳಿಗೆ ಕಠಿಣ ನಿಯಮ ಅನ್ವಯವಾಗುತ್ತದೆ. ಅವರು ಮಾಧ್ಯಮಗಳ ಮತ್ತು ಸರಕಾರಿ ಅಧಿಕಾರಿಗಳ ಜತೆ ಸಂಪರ್ಕ ಸಾಧಿಸುವಂತಿಲ್ಲ, ತಮ್ಮ ಕೆಲಸದ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳುವಂತಿಲ್ಲ. ಇಲ್ಲಿ ಕೆಲಸ ಮಾಡುವವರು ಮಾಜಿ ಸೈನಿಕರು ಅಥವಾ ಎಂಜಿನಿಯರ್‌ಗಳು ಆಗಿರುತ್ತಾರೆ. ಅವರಿಗೆ ನೀಡಿದ ಕೆಲಸ ಮೊದಮೊದಲಿಗೆ ಸಾಮಾನ್ಯ ವೃತ್ತಿಯಂತೆ ಕಾಣುತ್ತದೆ. ಆದರೆ ಉದ್ಯಮಿಗಳು ತಮಗೆ ನೀಡಿರುವ ಕೆಲಸದ ಉದ್ದೇಶವನ್ನು ಆ ಸಂಸ್ಥೆಗಳು 'ಇಕನಾಮಿಕ್ ಹಿಟ್ ಮ್ಯಾನ್'ಗಳಿಗೆ ವಿವರವಾಗಿ ಹೇಳುವುದಿಲ್ಲ.

ಹೀಗಾಗಿ, ಮೊದಮೊದಲು ಸಾಮಾನ್ಯ ನೌಕರರಂತೆ ಉದ್ಯೋಗಕ್ಕೆ ಸೇರಿ ತಮ್ಮ ಪಾಲಿನ ಕೆಲಸದಲ್ಲಿ ತೊಡಗುವ ಅವರು, ಕಾಲಕ್ರಮೇಣ ಪ್ರತಿಷ್ಠಿತ ಉದ್ಯಮಿಗಳು ಹೆಣೆದ ಬಲೆಯೊಳಗೆ ಸಿಕ್ಕಿಬಿಡುತ್ತಾರೆ. ತಮಗೆ ನಿಯೋಜಿಸಲಾಗಿರುವ ಕೆಲಸದ ನೈಜ ಉದ್ದೇಶ ಅರಿವಾದಾಕ್ಷಣ, ತಾವು ಮಾಡುತ್ತಿರುವುದು ಕೊಳಕು ಕೆಲಸ ಎಂಬುದು ಅವರಿಗೆ ಅರಿವಾಗುತ್ತದೆ. ಆದರೆ ಅಷ್ಟು ಹೊತ್ತಿಗಾಗಲೇ ಅವರು ಬಹಳ ದೂರ ಬಂದಿರುತ್ತಾರೆ. ಹಿಂದಿರುಗಲು ಸಾಧ್ಯವಿಲ್ಲದ ಕಾರಣ ಒಲ್ಲದ ಮನಸ್ಸಿನಿಂದಲೇ ಕೆಲಸ ಮಾಡಬೇಕಾದಂಥ ಪರಿಸ್ಥಿತಿ ಎದುರಾಗುತ್ತದೆ. ಈ ಸಂಸ್ಥೆಗಳು ತಮ್ಮನ್ನು ನೇಮಕ ಮಾಡಿರುವ ಉದ್ಯಮಿಗಳು ಹೇಳಿದ ಕೆಲಸ ಮಾಡಲು ಯಾವ ಮಟ್ಟಕ್ಕೆ ಬೇಕಾದರೂ ಹೋಗುತ್ತವೆ. 'ನಿಕ್ಷೇಪವಿರುವ ದೇಶಗಳು ಸಮಸ್ಯೆಯಲ್ಲಿವೆ' ಅಂತ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಬೀತುಪಡಿಸುವುದು ಅವುಗಳ ಕೆಲಸ. ಸಾಬೀತುಪಡಿಸಿದ ನಂತರ ಆ ದೇಶಗಳಿಗೆ ಬೇಕಿರುವ ಹಣಕಾಸಿನ ನೆರವನ್ನು ಸಾಲದ ರೂಪದಲ್ಲಿ ನೀಡುವುದು, ಹೀಗೆ ನೀಡಿದ ಹಣವನ್ನು ಆ ದೇಶಗಳು ಹೇಗೆ ಬಳಸಬೇಕೆಂಬುದನ್ನು ಹೇಳುವುದು, ನಿಕ್ಷೇಪಗಳನ್ನು ಹೊರತೆಗೆಯಲು ನಿರ್ಮಿಸಬೇಕಾದಂಥ ಮೂಲಭೂತ ಸೌಕರ್ಯಗಳ ಗುತ್ತಿಗೆಗಳನ್ನು ಅಮೆರಿಕದ ಕಂಪನಿಗಳಿಗೆ ನೀಡುವಂತೆ ಮಾಡುವುದು ಹೀಗೆ ಜಾಲವನ್ನು ಹೆಣೆಯಲಾಗುತ್ತದೆ. ನಂತರದಲ್ಲಿ, ಆ ದೇಶವನ್ನು ದಿವಾಳಿ ಮಾಡಲು ತಂತ್ರಗಾರಿಕೆ ಹೂಡುವುದು, ಅಲ್ಲಿನ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವುದು, ಜನರನ್ನು ಎತ್ತಿಕಟ್ಟಿ ದಂಗೆ ಏಳಿಸುವುದು, ದೇಶದಲ್ಲಿ ಅಶಾಂತಿ ಸೃಷ್ಟಿಸುವುದು ಇತ್ಯಾದಿ ನಡೆಯುತ್ತದೆ.

ಇಷ್ಟೆಲ್ಲಾ ಮಾಡಿದ ನಂತರ ಆ ದೇಶವು ತನ್ನ ಅಸ್ತಿತ್ವವಿರುವವರೆಗೂ ಅಮೆರಿಕವನ್ನು ಅವಲಂಬಿಸಬೇಕಾಗುತ್ತದೆ ಮತ್ತು ಅಲ್ಲಿ ಉದ್ಯಮಿಗಳ ಮಾತುಗಳನ್ನು ಕೇಳಬೇಕಾಗುತ್ತದೆ. ಜೀವನಪರ್ಯಂತ ಸಾಲಗಾರ ದೇಶವಾಗಿ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಣದ ಸಹಾಯವನ್ನು ಕೇಳುತ್ತಲೇ ಇರಬೇಕಾಗುತ್ತದೆ. ಹೀಗೆ ನೆರವಿನ ಮುಖವಾಡ ಧರಿಸುವ ಅಮೆರಿಕದ ಉದ್ಯಮಿಗಳು, ತಾವು ಮಾಡಿದ ಸಹಾಯಕ್ಕಾಗಿ ಅಲ್ಲಿನ ತೈಲನಿಕ್ಷೇಪಗಳು, ನೈಸರ್ಗಿಕ ಸಂಪತ್ತನ್ನು ಬಳಸಿಕೊಳ್ಳುತ್ತಾರೆ. ಅಮೆರಿಕದ ಮಿಲಿಟರಿ ನೆಲೆಗಳನ್ನು ಸ್ಥಾಪಿಸುವುದಕ್ಕೂ ಆ ದೇಶವನ್ನು ಬಳಸಿಕೊಳ್ಳಲಾಗುತ್ತದೆ.

ಜಾಗತಿಕ ಮಟ್ಟದಲ್ಲಿ ಭಾರತವು ದಾಖಲಿಸುತ್ತಿರುವ ಅಭಿವೃದ್ಧಿಯ ವೇಗವನ್ನು ಸಹಿಸದ ಜಾರ್ಜ್ ಸೊರೋಸ್, ಅಮೆರಿಕದ ಹಲವು ಸಂಸ್ಥೆಗಳ ಮೂಲಕ ಭಾರತದಲ್ಲಿ ಮೋದಿಯವರ ವಿರುದ್ಧ ಹಲವು ನಿರೂಪಣೆಗಳನ್ನು ಸೃಷ್ಟಿಸಿ, ಭಾರತದ ಆರ್ಥಿಕತೆಯ ವೇಗಕ್ಕೆ ಕಡಿವಾಣ ಹಾಕಲು ವಿಫಲಯತ್ನ ನಡೆಸುತ್ತಿದ್ದಾನೆ. ಅವನ ಸಂಸ್ಥೆಯ ಮತ್ತೊಂದು 'ಟೂಲ್‌ಕಿಟ್' ಎರಡು ದಿನದಿಂದ ಚರ್ಚೆಯಲ್ಲಿದೆ. ರಾಹುಲ್ ಗಾಂಧಿಯವರು ಆತ ಆಡಿಸುವ ತೊಗಲುಬೊಂಬೆ ಆಗಿದ್ದಾರೆ!

ನ್ಯಾಯದ ಕೋಣೆಯ ಬೀಗ ತೆರೆಯಲು ಚಿನ್ನದ ಕೀಲಿಕೈ ಬೇಕೆ?

ಅಪರಾಧಗಳ ತನಿಖೆ, ವಿಚಾರಣೆ ಹಾಗೂ ನ್ಯಾಯದಾನಗಳಲ್ಲಿ ಆಗುತ್ತಿರುವ ವಿಳಂಬ ಬಹುಚರ್ಚಿತ ವಿಷಯ. ಆರೋಪಿಗಳ ಅಪರಾಧ ಸಾಬೀತಾಗುವವರೆಗೂ ಅವರು ನಿರಪರಾಧಿಗಳು ಎಂಬ ಪೂರ್ವಕಲ್ಪನೆ ಭಾರತ ಸೇರಿದಂತೆ ಜಗತ್ತಿನ ಬಹುತೇಕ ನ್ಯಾಯಾಂಗ ವ್ಯವಸ್ಥೆಗಳಲ್ಲಿದೆ. ಆದರೆ ನ್ಯಾಯ ಪ್ರಕ್ರಿಯೆಯಲ್ಲಾಗುವ ವಿಳಂಬದಿಂದಾಗಿ ಬಡವರು ಹೆಚ್ಚಿನ ತೊಂದರೆ ಅನುಭವಿಸುತ್ತಾರೆ.

ನ್ಯೂನ ಕಾನೂನು
ತಿಮ್ಮಣ್ಣ ಭಾಗವತ್
vveditoped@gmail.com

ನ್ಯಾಯದೇವತೆಯ ಮೂರ್ತಿಯ ಕಣ್ಣಿಗೆ ತೀರಾ ಇತ್ತೀಚಿನವರೆಗೂ ಕಪ್ಪುಬಟ್ಟೆ ಕಟ್ಟಲಾಗಿತ್ತು. ವಾದಗಳನ್ನು ಆಲಿಸುವ ಮತ್ತು ಸಾಕ್ಷಿ-ಪುರಾವೆಗಳನ್ನು ಅಳೆದು ತೂಗುವ ಮೂಲಕ ನಿಷ್ಪಕ್ಷಪಾತವಾಗಿ ನ್ಯಾಯನಿರ್ಣಯ ಮಾಡಬೇಕೇ ಹೊರತು, ವಾದಿ-ಪ್ರತಿವಾದಿಗಳ ಸಂಪತ್ತು ಅಥವಾ ಸ್ಥಾನಮಾನಗಳನ್ನು ನೋಡಿ ಅಲ್ಲ ಎಂಬುದರ ಸಂಕೇತವದು ಎಂಬ ಕಲ್ಪನೆಯಿದೆ. ಆದರೆ ನ್ಯಾಯದಾನ ವ್ಯವಸ್ಥೆಯಲ್ಲಿರುವ ಸಂಕೀರ್ಣತೆ, ನ್ಯಾಯ ಪಡೆಯಲು ಜನಸಾಮಾನ್ಯರು ಭರಿಸಬೇಕಾಗುವ ವೆಚ್ಚ ಮತ್ತು ಇಡೀ ಪ್ರಕ್ರಿಯೆಯಲ್ಲಿ ಆಗುತ್ತಿರುವ ಅತಿರೇಕದ ವಿಳಂಬವನ್ನು ನೋಡಲಾಗದೆ ಆಕೆ ಕಣ್ಣು ಮುಚ್ಚಿಕೊಂಡಿರಬಹುದು ಎಂದು ಪೊಲೀಸ್ ಠಾಣೆ ಮತ್ತು ಕೋರ್ಟುಗಳಿಗೆ ಅಲೆದಾಡಿದವರಿಗೆ ಖಂಡಿತ ಅನಿಸಿರುತ್ತದೆ.

ಅಪರಾಧಗಳ ತನಿಖೆ, ವಿಚಾರಣೆ ಹಾಗೂ ನ್ಯಾಯದಾನಗಳಲ್ಲಿ ಆಗುತ್ತಿರುವ ವಿಳಂಬ ಬಹುಚರ್ಚಿತ ವಿಷಯ. ಆರೋಪಿಗಳ ಅಪರಾಧ ಸಾಬೀತಾಗುವವರೆಗೂ ಅವರು ನಿರಪರಾಧಿಗಳು ಎಂಬ ಪೂರ್ವಕಲ್ಪನೆಯು ಭಾರತ ಸೇರಿದಂತೆ ಜಗತ್ತಿನ ಬಹುತೇಕ ನ್ಯಾಯಾಂಗ ವ್ಯವಸ್ಥೆಗಳಲ್ಲಿದೆ. ಆದರೆ ನ್ಯಾಯ ಪ್ರಕ್ರಿಯೆಯಲ್ಲಾಗುವ ವಿಳಂಬದಿಂದಾಗಿ ಬಡವರು, ಅನಕ್ಷರಸ್ಥರು ಹೆಚ್ಚಿನ ತೊಂದರೆ ಅನುಭವಿಸುತ್ತಾರೆ ಎಂಬುದು ಖೇದದ ವಿಷಯ.

1977ರಷ್ಟು ಹಿಂದೆ, ಬಿಹಾರದ ವಿವಿಧ ಜೈಲುಗಳಲ್ಲಿ ಅನೇಕ ವಿಚಾರಣಾಧೀನ ಕೈದಿಗಳು ವರ್ಷಗಟ್ಟಲೆ ವಿಚಾರಣೆಯಿಲ್ಲದೆ ಸೆರೆವಾಸ ಅನುಭವಿಸುತ್ತಿದ್ದರು. ಅವರಲ್ಲಿ ಕೆಲವರಂತೂ ತಮ್ಮ ಮೇಲೆ ಹೊರಿಸಲಾದ ಆರೋಪ ಸಾಬೀತಾದರೆ ವಿಧಿಸಬಹುದಾದ ಗರಿಷ್ಠ 10 ವರ್ಷ ಶಿಕ್ಷೆಗಿಂತ ಹೆಚ್ಚು ಅವಧಿಯವರೆಗೆ ಜೈಲಿನಲ್ಲಿದ್ದರು. ಇನ್ನು ಕೆಲವರು 5-6 ವರ್ಷಗಳ ಜೈಲುವಾಸ ಮುಗಿಸಿದ್ದರು. ಹಲವು ಸಲ ಅವರನ್ನು ಕೋರ್ಟಿಗೆ ಕರೆತರಲಾಗುತ್ತಿತ್ತು ಮತ್ತು ಪೊಲೀಸರ ವಿನಂತಿಯ ಮೇರೆಗೆ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಗುತ್ತಿತ್ತು. ಅವರಲ್ಲಿ ಬಹುತೇಕರು ಬಡವರು ಮತ್ತು ನಿರಕ್ಷರಿಗಳು. ಕಾನೂನಿನ ಪ್ರಕ್ರಿಯೆಗಳ ಗೋಜಲಿನ ಯಾವ ಜ್ಞಾನವೂ ಇರದ ಅವರಿಗೆ, ಕೋರ್ಟಿನಿಂದ ಜಾಮೀನು ಪಡೆಯುವ ಅವಕಾಶವಿದೆ ಎಂತಲೇ ಗೊತ್ತಿರಲಿಲ್ಲ. ವಕೀಲರನ್ನು ಸಂಪರ್ಕಿಸುವ ಬಗೆಗಿನ ಮಾಹಿತಿ ಮತ್ತು ಅದಕ್ಕೆ ತಗಲುವ ವೆಚ್ಚ ಭರಿಸುವ ಶಕ್ತಿಯೂ ಅವರಿಗಿರಲಿಲ್ಲ. ರಾಷ್ಟ್ರೀಯ ಪೊಲೀಸ್ ಆಯೋಗದ ಆರ್.ಎಫ್.ರುಸ್ತುಂ ಎಂಬ ಅಧಿಕಾರಿ ಕೆಲವು ಜೈಲುಗಳಿಗೆ ಭೇಟಿಯಿತ್ತಾಗ ಈ ವಿಷಯ ಅವರ ಗಮನಕ್ಕೆ ಬಂದು, ಅವರು ಈ ಕುರಿತು ವಿವರವಾದ ವರದಿ ಸಲ್ಲಿಸಿದರು. ಈ ವಿಷಯ ಪತ್ರಿಕೆಗಳಲ್ಲೂ ವರದಿಯಾಯಿತು. ಆಗಿನ್ನೂ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು ಪ್ರಚಲಿತವಿರಲಿಲ್ಲ. 'ಲೋಕಸ್ ಸ್ಟಾಂಡಿ' ಅಂದರೆ 'ವಿವಾದಿತ ವಿಷಯದಲ್ಲಿ ಕೋರ್ಟಿಗೆ ಅರ್ಜಿ ಸಲ್ಲಿಸಲು ಮನವಿದಾರರಿಗೆ ಇರುವ ಹಕ್ಕು' ಆಧಾರದಲ್ಲಿ ಸಂಬಂಧಿತ ವ್ಯಕ್ತಿಗಳಿಂದ ದಾಖಲಿಸಲ್ಪಟ್ಟ ಪ್ರಕರಣಗಳನ್ನು ಮಾತ್ರ ಕೋರ್ಟುಗಳು ಪರಿಗಣಿಸುತ್ತಿದ್ದವು. ಪುಷ್ಪಾ ಕಪಿಲ ಹಿಂಗೋರಾಣಿ ಎಂಬ ನ್ಯಾಯವಾದಿಯು ಅಂಥ ಅನೇಕ ಕೈದಿಗಳ ಪರವಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಮೂಲಕ 'ಹೇಬಿಯಸ್ ಕಾರ್ಪಸ್' ರಿಟ್ ಅರ್ಜಿಯನ್ನು ದಾಖಲಿಸಿದರು. ಇದರಲ್ಲಿ ಅವರು, ತನಿಖೆ ಹಾಗೂ ವಿಚಾರಣೆಯಲ್ಲಿ ಆಗುತ್ತಿರುವ ವಿಳಂಬ, ಜೈಲುಗಳಲ್ಲಿನ ಕೆಟ್ಟ ಪರಿಸ್ಥಿತಿ, ಆಪಾದಿತರ ಬಡತನ ಹಾಗೂ ನಿರಕ್ಷರತೆಯಿಂದಾಗಿ ಜಾಮೀನು ಹಾಗೂ ನ್ಯಾಯ ಪಡೆಯಲು ಆಗುತ್ತಿರುವ ತೊಂದರೆಗಳನ್ನು ಮಾನ್ಯ ನ್ಯಾಯಾಲಯದ ಗಮನಕ್ಕೆ ತಂದರು. ಹುಸೈನಾರಾ ಖಾತೂನ ಮತ್ತು ಇತರರು ವರ್ಸಸ್ ಬಿಹಾರ ಸರಕಾರ ಎಂಬ ಈ ಪ್ರಕರಣದಲ್ಲಿ ನ್ಯಾಯಮೂರ್ತಿ ಪಿ.ಎನ್.ಭಗವತಿಯವರು ನೀಡಿದ ಐತಿಹಾಸಿಕ ತೀರ್ಪು, ದೇಶದ ನ್ಯಾಯ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಿಗೆ ಕಾರಣವಾಯಿತು. ಈ ರಿಟ್ ಪ್ರಕರಣವನ್ನು ದಾಖಲಿಸಿದ ನ್ಯಾಯವಾದಿ ಪುಷ್ಪಾ ಕಪಿಲ ಹಿಂಗೋರಾಣಿ 'ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳ ತಾಯಿ' (mother of PIL) ಎಂದು ಪ್ರಸಿದ್ಧರಾದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳು, ಬಿಹಾರ ಸರಕಾರದ ಅಧಿಕಾರಿಗಳು, ಪೊಲೀಸ್ ವ್ಯವಸ್ಥೆ, ತನಿಖಾಧಿಕಾರಿಗಳು ಮತ್ತು ನ್ಯಾಯಾಂಗ ವ್ಯವಸ್ಥೆಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿ, "ಬಡವರು ಆರೋಪಿತರಾಗಿ ಜೈಲು ಸೇರಿದಾಗ, ಅವರ ವಿರುದ್ಧ ತನಿಖೆ ಮತ್ತು ಪ್ರಕರಣ ನಡೆಸಲು ಉತ್ತಮ ತರಬೇತು ಹೊಂದಿದ ಸುಶಿಕ್ಷಿತ-ಸಮರ್ಥ ಅಧಿಕಾರಿಗಳ ತಂಡವೇ ವ್ಯವಸ್ಥೆಯಲ್ಲಿದೆ. ದಂಡ ಪ್ರಕ್ರಿಯಾ ಸಂಹಿತೆಯ 304ನೇ ಅಧಿನಿಯಮದ ಪ್ರಕಾರ ಸರಕಾರಿ ವೆಚ್ಚದಲ್ಲಿ ವಕೀಲರನ್ನು ನೇಮಿಸಿಕೊಳ್ಳುವ ಅವಕಾಶವಿದ್ದರೂ ಆಪಾದಿತರಿಗೆ ಅದರ ಮಾಹಿತಿ ಇರುವುದಿಲ್ಲ. ತನ್ನ ಮೇಲೆ ಮಾಡಲಾದ ಆರೋಪ ಸುಳ್ಳಾಗಿದ್ದರೂ ಬಡ ಆಪಾದಿತನು ಜಾಮೀನು ಪಡೆಯಲು ಅಥವಾ ಪ್ರಕರಣ ನಡೆಸಿ ಸುಳ್ಳೆಂದು ಸಾಬೀತುಪಡಿಸಲು ನ್ಯಾಯವಾದಿಗಳನ್ನು ನಿಯುಕ್ತಿಗೊಳಿಸುವ ಮತ್ತು ಜಾಮೀನು ಸಲುವಾಗಿ ನೀಡಬೇಕಾದ ಬಾಂಡ್ ಹಣದ ವೆಚ್ಚ ಭರಿಸುವ ಶಕ್ತಿಯಿಲ್ಲದೆ ಜೈಲಿನಲ್ಲಿ ಕೊಳೆಯುವಂತಾಗುತ್ತದೆ. ವರ್ಷಗಟ್ಟಲೆ ಜೈಲಿನಲ್ಲಿದ್ದು ಪ್ರಕರಣದ ವಿಚಾರಣೆ ಮುಗಿದಾಗ ನಿರಪರಾಧಿಯೆಂದು ನಿರ್ಣಯವಾದರೆ, ಆತನಿಗೆ ಕಾಯಿದೆಬಾಹಿರವಾಗಿ ಜೈಲುಶಿಕ್ಷೆ ವಿಧಿಸಿದಂತಾಗುತ್ತದೆ. ಇದು ಅಮಾನವೀಯ ಹಾಗೂ ಸಂವಿಧಾನದ 21 ಮತ್ತು 39-ಎ ವಿಧಿಗಳ ಸ್ಪಷ್ಟ ಉಲ್ಲಂಘನೆಯಾಗುತ್ತದೆ" ಎಂದು ಅಭಿಪ್ರಾಯಪಟ್ಟರು.

ಅಶಿಕ್ಷಿತ ಆಪಾದಿತರಿಗೆ ಜಾಮೀನು ಪ್ರಕ್ರಿಯೆಯಂಥ ವ್ಯವಸ್ಥೆಯ ಕುರಿತು ಇರುವ ಅಜ್ಞಾನ ಹಾಗೂ ಕೆಲವು ಪೊಲೀಸರು ಮತ್ತು ನ್ಯಾಯವಾದಿಗಳಿಂದ ಆಗಬಹುದಾದ ಶೋಷಣೆಯಿಂದ ಈ ಸಮಸ್ಯೆ ಇನ್ನಷ್ಟು ಜಟಿಲಗೊಳ್ಳುತ್ತದೆ. ಸಂಕೀರ್ಣತೆಯಿಂದಾಗಿ ಕಾನೂನು ಮತ್ತು ನ್ಯಾಯಪ್ರಕ್ರಿಯೆಗಳು ಬಡವರಿಗೆ ಹಾಗೂ ಅಶಿಕ್ಷಿತರಿಗೆ ನಿಲುಕದಂತಾಗಿವೆ. ಕಾನೂನಿನ ಕೋಣೆಯ ಬೀಗವನ್ನು ಚಿನ್ನದ ಕೀಲಿಕೈ ಮೂಲಕವಷ್ಟೇ ತೆರೆಯಬಹುದಾದರೆ, ಕಾನೂನಿರುವುದು ಶ್ರೀಮಂತರ ರಕ್ಷಣೆಗಾಗಿ ಮಾತ್ರ ಎಂದಾಗುತ್ತದೆ; ಅದು ಬಡವರನ್ನು ಶಿಕ್ಷಿಸುತ್ತದೆಯೇ ಹೊರತು ಅವರಿಗೆ ಯಾವುದೇ ಪರಿಹಾರ ಅಥವಾ ಲಾಭ ದೊರಕಿಸಿಕೊಡುವುದಿಲ್ಲ ಎಂಬ ಗ್ರಹಿಕೆಯು ಬಡವರಲ್ಲಿ ಬೇರೂರುತ್ತದೆ. ಇಂಥ ಸಂಕೀರ್ಣ ಅಂಶಗಳನ್ನು ಗಮನಿಸಿದ ನ್ಯಾಯಾಲಯ, "ಪ್ರಕರಣಗಳ ತ್ವರಿತ ವಿಲೇವಾರಿ ಮತ್ತು ಕ್ಷಿಪ್ರ ನ್ಯಾಯದಾನವನ್ನು ಖಾತ್ರಿಪಡಿಸಲು ಸರಕಾರಗಳು ತನಿಖಾ ವ್ಯವಸ್ಥೆಯನ್ನು ಬಲಪಡಿಸುವ, ಹೆಚ್ಚುವರಿ ಕೋರ್ಟುಗಳನ್ನು ಸ್ಥಾಪಿಸುವ, ಹೆಚ್ಚಿನ ನ್ಯಾಯಾಧೀಶರನ್ನು ನೇಮಿಸುವ ಮತ್ತಿತರ ಅವಶ್ಯ ಕ್ರಮಗಳಿಗೆ ಕೂಡಲೇ ಮುಂದಾಗಬೇಕು. ಅತ್ಯಂತ ಸಕ್ರಿಯ-ಸಮಗ್ರ ಕಾನೂನು ಸೇವೆ ಮತ್ತು ಕಾನೂನು ನೆರವಿನ ವ್ಯವಸ್ಥೆಯನ್ನು ಜಾರಿಗೊಳಿಸಬೇಕು. ಬಡ ಹಾಗೂ ದುರ್ಬಲವರ್ಗದ ಆಪಾದಿತರಿಗೆ ಉಚಿತ ಕಾನೂನು ನೆರವು ಮತ್ತು ನ್ಯಾಯವಾದಿಗಳ ಸೇವೆ ಒದಗಿಸಬೇಕು. ಇಂಥ ಸೌಲಭ್ಯಗಳು ಲಭ್ಯವಿರುವ ಕುರಿತು ಅವಶ್ಯ ಮಾಹಿತಿಯನ್ನು ವಿಚಾರಣಾಪೂರ್ವದಲ್ಲಿ ಆಪಾದಿತರಿಗೆ ಒದಗಿಸಬೇಕು" ಎಂದು ಆದೇಶಿಸಿತು.

ನಾಲ್ಕು ಹಂತಗಳಲ್ಲಿ ಪ್ರತ್ಯೇಕ ಆದೇಶಗಳನ್ನು ನೀಡಿದ ನ್ಯಾಯಾಲಯ, ಪ್ರಕರಣದಲ್ಲಿ ಹೆಸರಿಸಲಾದ ಎಲ್ಲ ವಿಚಾರಣಾಧೀನ ಕೈದಿಗಳನ್ನು ವೈಯಕ್ತಿಕ ಬಾಂಡ್ ಆಧಾರದಲ್ಲಿ ಜಾಮೀನಿನ ಮೇಲೆ ಕೂಡಲೇ ಬಿಡುಗಡೆ ಮಾಡುವಂತೆ ಸೂಚಿಸಿತು. ಇದರ ಪರಿಣಾಮವಾಗಿ ದೇಶಾದ್ಯಂತದ ವಿವಿಧ ಜೈಲುಗಳಲ್ಲಿದ್ದ 40 ಸಾವಿರಕ್ಕೂ ಹೆಚ್ಚಿನ ವಿಚಾರಣಾಧೀನ ಕೈದಿಗಳ ಬಿಡುಗಡೆಯಾಯಿತು. ದೇಶಾದ್ಯಂತ ಕಾನೂನು ಸೇವೆಗಳನ್ನು ಜಾರಿಗೊಳಿಸುವ ಉದ್ದೇಶದಿಂದ 1987ರ

ಕಾನೂನು ಸೇವೆ ಕಾಯಿದೆಯನ್ನು ಜಾರಿಗೊಳಿಸಲಾಯಿತು. ಇದರನ್ವಯ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ಹಾಗೂ ರಾಜ್ಯ-ಜಿಲ್ಲೆ-ತಾಲೂಕು ಮಟ್ಟಗಳಲ್ಲಿ ಕೂಡ ಕಾನೂನು ಸೇವಾ ಪ್ರಾಧಿಕಾರ ಮತ್ತು ಸಮಿತಿಗಳನ್ನು ರಚಿಸಲಾಯಿತು. ಪ್ರಕರಣಗಳ ತ್ವರಿತ ವಿಚಾರಣೆ (speedy trial) ಆಪಾದಿತರ ಮೂಲಭೂತ ಹಕ್ಕು ಎಂಬುದು ಕೇವಲ ಪ್ರಾರಂಭಿಕ ತನಿಖೆ, ವಿಚಾರಣೆಗಳಿಗಷ್ಟೇ ಅಲ್ಲದೆ ತೀರ್ಪುಗಳ ಮರುಪರಿಶೀಲನೆ, ಮೇಲ್ಮನವಿಗಳಿಗೂ ಅನ್ವಯವಾಗುತ್ತದೆ. ಅಪರಾಧ ನಿರ್ಣಯದ ಹಿಂದಿನ ಬಂಧನ ಅಥವಾ ರಿಮಾಂಡ್ ಆದಷ್ಟು ಕಡಿಮೆ ಅವಧಿಗೆ ಸೀಮಿತವಾಗಬೇಕು.

ಅಪರಾಧ ನಿರ್ಣಯದ ವಿಳಂಬ ತಡೆಯಲು ಸರ್ವೋಚ್ಚ ನ್ಯಾಯಾಲಯವು ಮುಂದಿನ ಪ್ರಕರಣಗಳಲ್ಲಿ ಅನೇಕ ನಿಯಮಾವಳಿಗಳನ್ನು ನೀಡಿತು (ಉದಾಹರಣೆಗೆ, ಎ.ಆರ್. ಅಂತುಲೆ ವರ್ಸಸ್ ಆರ್.ಎಸ್.ನಾಯಕ್). ಈ ಎಲ್ಲ ಆದೇಶಗಳ ಹೊರತಾಗಿಯೂ ನ್ಯಾಯದಾನದಲ್ಲಿನ ವಿಳಂಬವು ಗಂಭೀರ ಸಮಸ್ಯೆಯಾಗಿಯೇ ಮುಂದುವರಿದಿದೆ. ಜತೆಗೆ ನ್ಯಾಯಪ್ರಕ್ರಿಯೆಯ ವೆಚ್ಚ ಕೂಡ. ಬಹುಶಃ ಬಿಹಾರದಲ್ಲಿ 1977ರಲ್ಲಿದ್ದ ಪರಿಸ್ಥಿತಿ ಕೆಲಮಟ್ಟಿಗೆ ಈಗಲೂ ಇರಬಹುದೇನೋ. 2024ರ ಸೆಪ್ಟೆಂಬರ್ ಅಂತ್ಯದ ವೇಳೆಗೆ ದೇಶಾದ್ಯಂತದ ವಿವಿಧ ಕೋರ್ಟುಗಳಲ್ಲಿ 5.1 ಕೋಟಿ ಪ್ರಕರಣಗಳು ವಿಚಾರಣೆಯ ವಿವಿಧ ಹಂತಗಳಲ್ಲಿ ಬಾಕಿಯಿವೆ. ಈ ಪೈಕಿ 1.80 ಲಕ್ಷ ಪ್ರಕರಣಗಳು 30 ವರ್ಷಕ್ಕಿಂತ ಹಳೆಯವು. ಈಗಿರುವ ವ್ಯವಸ್ಥೆ ಮತ್ತು ವಿಲೇವಾರಿಯ ಪ್ರಗತಿಯ ಗತಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಬಾಕಿಯಿರುವ ಇಷ್ಟೊಂದು ಪ್ರಕರಣಗಳ ವಿಲೇವಾರಿಗೆ ಸುಮಾರು 324 ವರ್ಷಗಳು ಬೇಕಾಗಬಹುದೆಂಬ ಅಂದಾಜಿದೆ. ಈ ಬಾಕಿಗೆ ಪ್ರತಿವರ್ಷ ಹೊಸ ಪ್ರಕರಣಗಳು ಸೇರಿಕೊಳ್ಳುತ್ತವೆ. ಭಾರತದ ನ್ಯಾಯವ್ಯವಸ್ಥೆಗೆ ಇದೊಂದು ಭಾರಿ ಸವಾಲು ಮತ್ತು ನಾಗರಿಕರ ಹಿತದೃಷ್ಟಿಯಲ್ಲಿ ಗಂಭೀರ ವಿಷಯ.

ನ್ಯಾಯಾಲಯಗಳಲ್ಲಿ ಪ್ರಕರಣಗಳು ಜಾಸ್ತಿಯಾಗಲು, ವಿಲೇವಾರಿ ವಿಳಂಬವಾಗಲು ಅನೇಕ ಕಾರಣಗಳಿವೆ. ದೇಶದ ಜನಸಂಖ್ಯೆಗೆ ಹೋಲಿಸಿದರೆ ನ್ಯಾಯಾಲಯಗಳ ಸಂಖ್ಯೆ ಕಡಿಮೆಯಿದ್ದು, ಹಲವೆಡೆ ಪ್ರಕರಣಗಳ ವಿಲೇವಾರಿಗೆ ಸಾಕಷ್ಟು ನ್ಯಾಯಾಧೀಶರ ಕೊರತೆಯಿದೆ. ಇರುವ ನ್ಯಾಯಾಲಯಗಳಲ್ಲಿ ಅನುದಾನ ಮತ್ತು ಮೂಲಸೌಲಭ್ಯಗಳ ಕೊರತೆಯಿಂದಾಗಿ ಅವುಗಳ ಕಾರ್ಯನಿರ್ವಹಣೆಗೆ ಅಡೆತಡೆಯಾಗುತ್ತಿದೆ. ಮುಖ್ಯವಾಗಿ, ಕಾನೂನು ಮತ್ತು ನ್ಯಾಯಾಲಯ ವ್ಯವಸ್ಥೆಯ ದುರುಪಯೋಗದ ಕುರಿತೂ ಇಲ್ಲಿ ಉಲ್ಲೇಖಿಸಬೇಕು. ಕೆಲ ನ್ಯಾಯವಾದಿಗಳು ನಗಣ್ಯ ವಿಷಯಗಳಿಗೂ ಪ್ರಕರಣ ದಾಖಲಿಸುವುದರಿಂದ ಕೋರ್ಟುಗಳ ಅಮೂಲ್ಯ ಸಮಯವು ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಸಿಗದಂತಾಗುತ್ತದೆ. ರಾಜಕಾರಣಿಗಳು, ನಟರು ಮತ್ತು ಇತರ ಪ್ರಸಿದ್ಧ ವ್ಯಕ್ತಿಗಳ ಪ್ರಕರಣಗಳು ಕೋರ್ಟುಗಳ ಹೆಚ್ಚಿನ ಸಮಯವನ್ನು ಕಬಳಿಸುತ್ತವೆ. ಪ್ರಕರಣಗಳಿಗೆ ಪದೇಪದೆ ಸಮಯ ಕೇಳುವಿಕೆ, ಅನವಶ್ಯಕ ವಾದ- ವಿವಾದ ಗಳು ಕೋರ್ಟುಗಳ ಅಮೂಲ್ಯ ಸಮಯವನ್ನು ಹಾಳುಮಾ ಡುವುದಲ್ಲದೆ, ಈ ಕಾರಣಕ್ಕೆ ಕಕ್ಷಿದಾರರು ವಕೀಲರಿಗೆ ಹೆಚ್ಚಿನ ಶುಲ್ಕ ನೀಡಬೇಕಾಗುತ್ತದೆ. ಪ್ರತಿವಾದಿಗಳು ಅಥವಾ ಆಪಾದಿತರೇ ಪ್ರಕರಣಗಳನ್ನು ಎಳೆದು ವಿಳಂಬಿಸುತ್ತಾರೆ ಎಂಬ ಆರೋಪವೂ ಇದೆ. ಹೆಚ್ಚು ಹಣ ಕೀಳಲು ಕೂಡ ವಕೀಲರು ಪ್ರಕರಣಗಳ ಮುಂದೂಡಿಕೆಗೆ ಯತ್ನಿಸುತ್ತಾರೆ ಎಂಬ ಅಭಿಪ್ರಾಯವಿದೆ. ಸಾಕಷ್ಟು ಪ್ರಕರಣಗಳಲ್ಲಿ ಸರಕಾರವೇ ಪ್ರತಿವಾದಿ; ಅಂಥ ಸಮಸ್ಯೆ/ಪ್ರಕರಣಗಳ ವಿಷಯದಲ್ಲಿ ಸರಕಾರ ನ್ಯಾಯಯುತವಾಗಿ ಸ್ಪಂದಿಸಿದರೆ ಕ್ಷಿಪ್ರ ವಿಲೇವಾರಿ ಸಾಧ್ಯವಾಗುತ್ತದೆ.

ಇಂಥ ಅನೇಕ ಕೊರತೆಗಳು ಮತ್ತು ವ್ಯವಸ್ಥೆಯ ದೋಷಗಳನ್ನು ಸರಿಪಡಿಸಿ ನ್ಯಾಯದಾನ ಪ್ರಕ್ರಿಯೆಯನ್ನು ಸಬಲಗೊಳಿಸಬೇಕಾದ್ದು ಸರಕಾರಗಳ ಜವಾಬ್ದಾರಿ. ತ್ವರಿತ ನ್ಯಾಯದಾನವು, ಕೋರ್ಟಿನ ಮೊರೆಹೋಗುವ ಎಲ್ಲ ನಾಗರಿಕರ ಹಕ್ಕು. ನ್ಯಾಯದಾನದಲ್ಲಿ ವಿಳಂಬವಾದರೆ ನ್ಯಾಯ ನಿರಾಕರಣೆಯೇ ಆಗುತ್ತದೆ (justice delayed is justice denied) ಎಂಬುದು ಸರ್ವತ್ರ ಸತ್ಯ. ಪ್ರಕರಣ ವಿಳಂಬವಾದಂತೆಲ್ಲ ಸಾಕ್ಷಿಗಳ ಅಲಭ್ಯತೆ, ಸಾವು, ಕಣ್ಮರೆಯಾಗುವಿಕೆ, ಸಾಕ್ಷ್ಯ ತಿರುಚುವಿಕೆ ಮುಂತಾದವಕ್ಕೆ ಅವಕಾಶವಾಗಿ ನಿರ್ಣಯಗಳು ಏರುಪೇರಾಗುವ ಸಾಧ್ಯತೆ ಹೆಚ್ಚು. ಅಪರಾಧಿಗಳಿಗೆ ತ್ವರಿತ ಶಿಕ್ಷೆ ನೀಡುವುದು, ಅಪರಾಧ ನಿಯಂತ್ರಣಕ್ಕೂ ಅವಶ್ಯಕ ಎಂಬುದು ಗಮನಾರ್ಹ. ಈ ನಿಟ್ಟಿನಲ್ಲಿ ನ್ಯಾಯವಾದಿಗಳು, ನ್ಯಾಯಾಲಯಗಳು, ಪೊಲೀಸರು, ಅಧಿಕಾರಿಗಳು ಮತ್ತು ಕಾಯಿದೆ ರೂಪಿಸ ಬೇಕಾದ ಸಂಸದರು-ಶಾಸಕರು ಪ್ರಾಮಾಣಿಕವಾಗಿ ಯತ್ನಿಸಬೇಕಿದೆ.

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಭಟ್ಟರ್ ಸ್ಕಾಚ್

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಗಂಡಸಿನ ಮತ್ತು ಹೆಂಗಸಿನ ಧ್ವನಿ ಒಂದೇ ರೀತಿ ಇದ್ದಿದ್ದರೆ ಏನಾಗುತ್ತಿತ್ತು?
- **ನೀನು ಕಿರುಚಿದರೆ ನಿನ್ನ ಹೆಂಡತಿ ಕಿರುಚಿದಳು ಎಂದೇ ಅಕ್ಕ-ಪಕ್ಕದವರು ಅಂದುಕೊಳ್ಳುತ್ತಿದ್ದರು!**

- **ಅರುಣಾ ಕೊಡಗಿ, ಭದ್ರಾವತಿ**
ಭಟ್ರೇ, ಹುಡುಗಿಯರು ಲೈನ್ ಹೊಡೆಯುವುದಿಲ್ಲ ಅಂತ ನನ್ನ ಸ್ನೇಹಿತ ವಾದಿಸುತ್ತಾನಲ್ಲ?
- **ಆತನಿಗೆ ಒಂದೋ ಹುಡುಗಿಯರು ಗೊತ್ತಿಲ್ಲ, ಇಲ್ಲವೇ ಲೈನ್ ಅಂದ್ರೆ ಏನು ಅನ್ನೋದು ಗೊತ್ತಿಲ್ಲ!**

- **ಸುಮಾ ವಿ.ಶೇಟ್, ಬೆಂಗಳೂರು**
ಭಟ್ರೇ, ನೀವು ಹೊರದೇಶಕ್ಕೆ ಹೋದ್ರೆ ಸಾಕು, ಆ ದೇಶದ ಬಗ್ಗೆ ನಿರಂತರ ಬರೆಯುತ್ತೀರಲ್ಲ?
- **ಅದು ನನ್ನ ವೀಕ್ನೆಸ್... ನಾನು ಹೊರದೇಶಕ್ಕೆ ಹೋದರೂ ಬರೆಯುತ್ತೇನೆ, ಹೊರನಾಡಿಗೆ ಹೋದರೂ ಬರೆಯುತ್ತೇನೆ!**

- **ಸಹಾನಿ ಉಕ್ಕಡಗಾತ್ರಿ, (ಇಮೇಲ್ ಮೂಲಕ)**
ಭಟ್ರೇ, ನಿಮ್ಮನ್ನು ಹಾವೇರಿ ಪ್ಯಾಟ್ಯಾಗ ನೋಡಿದ ಹಾಗೆ ಆತು, ನಿಜವಾ?
- **ಸಹಾನಿಯವರಿಗೆ ಅದೇ ಯೋಚನೆ ಅಂತಾರಲ್ಲ... ಹಾಗಾಗಿ ನೋಡಿದ ನಿನ್ನ ಕತಿ, ಸಹಾನಿ!**

- **ಜಿ.ವಿ.ಗೌಡ, ಮಂಡ್ಯ**
ಭಟ್ರೇ, ಶ್ರೀಮಂತರೂ ಎಲ್ಲ ಆಸೆಗಳು ಈಡೇರುವುದಿಲ್ಲವಂತೆ ಹೌದಾ?
- **ಹಾಗೆ ಈಡೇರುವಂತಿದ್ದರೆ ಅವರಷ್ಟು ತುಂಬಿದ ಶ್ರೀಮಂತರಿಗೆಲ್ಲ ಹತ್ತು ಹೆಂಡಿರು ಇರ್ತಾ ಇದ್ದರು!**

- **ನಿಶಿತ ಕೆ., ಕತ್ತರಗುಪ್ಪೆ**
ಭಟ್ರೇ, ಮಧು ಬಂಗಾರಪ್ಪರಿಗೆ ಬುದ್ಧಿ ಇರದಿದ್ದರೂ ಅದಕ್ಕೇನೂ ಕೊರತೆ ಇಲ್ಲ ಅಲ್ವಾ?
- **ಅದು ಅಂದ್ರೆ ಕೊಟ್ಟಾ?!**

- **ಜಿ.ಶ್ರೀನಿವಾಸ, ಅರಸೀಕೆರೆ**
ಭಟ್ರೇ, ನೀವು ಜಪಾನಿನಲ್ಲಿ ಕುಳಿತು ಯಾವ ಕೆಲಸ ಮಾಡಬಾರದು ಅಂದುಕೊಂಡಿದ್ದೀರಿ?
- **ಇಲ್ಲಿಗೆ ಬಂದು 'ಬಿಗ್ ಬಾಸ್' ನೋಡಬಾರದು ಅಂದುಕೊಂಡಿದ್ದೇನೆ!**

- **ಮಮತಾ ಕೊಪ್ಪದ, ಧಾರವಾಡ**
ಭಟ್ರೇ, ನಿಮ್ಮ ಪತ್ರಿಕೆ ಓದಿದ್ದರೆ ನನಗೆ ನಿದ್ದೆಯೇ ಬರುವುದಿಲ್ಲವಲ್ಲ?
- **ಇನ್ನು ಕೆಲವರಿಗೆ ಅದೇ ಕಾರಣಕ್ಕೆ ನಿದ್ದೆ ಬರುತ್ತದೆ!**

- **ರಘು ಭಟ್ಟ, (ಇಮೇಲ್ ಮೂಲಕ)**
ಭಟ್ರೇ, 'ಕೆಲವು ಬಲ್ಲವರಿಂದ ತಿಳಿದು' ಅಂತಾರಲ್ಲ, ಹಾಗಂದ್ರೆ ಏನು?
- **ಹೂಂ.. ಉಳಿದಿದ್ದನ್ನು ನಿನ್ನಿಂದ ತಿಳಿದು ಅಂತ ಅರ್ಥ!**

ಬಲವೃದ್ಧಿಗಾಗಿ ಸೇವಿಸಿ ಷಡ್ರಸ ಭೋಜನ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ

vveditoped@gmail.com

ಮನೆಯಲ್ಲೊಮ್ಮೆ ಹಬ್ಬದ ವಾತಾವರಣ. ಅಜ್ಜಿಯ ನೇತೃತ್ವದಲ್ಲಿ ಹಬ್ಬದ ತಯಾರಿ ನಡೆದಿತ್ತು. ಹಬ್ಬದ ಹಿಂದಿನ ದಿನ ಮನೆಯನ್ನು ಸ್ವಚ್ಛಗೊಳಿಸಿ, ಪೂಜಾ ಸಾಮಗ್ರಿಗಳನ್ನು ಜೋಡಿಸಿ, ಮಂಟಪವನ್ನು ಕಟ್ಟಿ, ಹಣ್ಣು-ಹೂವು ಅಣಿಮಾಡಿಟ್ಟು ಎಲ್ಲರೂ ಭೋಜನಕ್ಕೆ ಕುಳಿತೆವು. ಭೋಜನದ ನಂತರ ಒಂದು ಮುಖ್ಯವಾದ ಚರ್ಚೆ ಪ್ರಾರಂಭವಾಯಿತು. ಅದೇನಪ್ಪ ಅಂದರೆ, ನಾಳೆಯ ಹಬ್ಬದ ಅಡುಗೆಯ ನಿರ್ಧಾರ. ನಾವೆಲ್ಲರೂ ಮನಬಂದಂತೆ ನಮ್ಮಿಷ್ಟದ ತಿಂಡಿ-ತಿನಿಸುಗಳ ಪಟ್ಟಿಯನ್ನು ಅಜ್ಜಿಯ ಮುಂದಿಟ್ಟೆವು. ಅಜ್ಜಿ ಅವನ್ನು ಒಂದೊಂದಾಗಿ ಪರಿಶೀಲಿಸಿ, "ಮಕ್ಕಳೇ, ಹಬ್ಬದಡುಗೆ ಮಾಡುವಾಗ 6 ರಸಗಳಿಂದ ಕೂಡಿರುವ ಖಾದ್ಯಗಳನ್ನು ತಯಾರಿಸಬೇಕೇ ಹೊರತು, ಯಾವುದೋ ಒಂದು ಅಥವಾ ಎರಡು ರಸಪ್ರಧಾನವಾದ ಆಹಾರವನ್ನಲ್ಲ. ಹಾಗೆ ಮಾಡಿದಾಗ ಮಾತ್ರ ಹಬ್ಬದ ಅಡುಗೆ ಸಾರ್ಥಕ" ಎಂದರು. ಈ ಮಾತು ನನ್ನ ನೆನಪಿನಲ್ಲಿ ಆಳವಾಗಿ ಕುಳಿತಿತ್ತು. ಅಜ್ಜಿ ಯಾಕೆ 6 ರಸಗಳಿಗೆ ಅಷ್ಟೊಂದು ಮಹತ್ವ ನೀಡುತ್ತಿದ್ದರು ಎನ್ನುವ ಪ್ರಶ್ನೆ ನನ್ನಲ್ಲಿ ಸುಳಿಯುತ್ತಿತ್ತು. ಅಜ್ಜಿಯನ್ನು ಈ ಕುರಿತು ಕೇಳಿದಾಗ ಸಿಕ್ಕಿದ "ಅದು ಮನೆಯ ಸಂಪ್ರದಾಯ" ಎಂಬ ಉತ್ತರ ನನಗೆ ಸಂಪೂರ್ಣವಾಗಿ ಒಪ್ಪಿಗೆ ಆಗಿರಲಿಲ್ಲ. ಈ ಪ್ರಶ್ನೆಗೆ ವೈಜ್ಞಾನಿಕವಾಗಿ ಉತ್ತರ ಸಿಕ್ಕಿದ್ದು ನಾನು ಆಯುರ್ವೇದ ಶಾಸ್ತ್ರದ ಅಧ್ಯಯನಕ್ಕೆ ತೊಡಗಿದಾಗ.

ಆಯುರ್ವೇದದ ಮುಖ್ಯವಾದ ಗ್ರಂಥ 'ಚರಕ ಸಂಹಿತಾ'. ಇದರಲ್ಲಿ 'ಅಗ್ರ್ಯ ಪ್ರಕರಣ' ಎಂಬ ಒಂದು ಭಾಗವಿದೆ. ಇದು ಜಗತ್ತಿನ ಎಲ್ಲಾ ವಿಷಯಗಳಲ್ಲೂ ಅತ್ಯಂತ ಪ್ರಶಸ್ತವಾದ ಅಥವಾ ಹೀನವಾದ ವಸ್ತುಗಳ ಪಟ್ಟಿ. ಉದಾಹರಣೆಗೆ, ಇದರ ಪ್ರಕಾರ ನಮ್ಮ ದೈಹಿಕ-ಮಾನಸಿಕ ಶ್ರಮವನ್ನು ನೀಗಿಸುವ ವಸ್ತುಗಳಲ್ಲಿ ಸ್ನಾನವು ಶ್ರೇಷ್ಠವಾದದ್ದು. ಹಾಗೆಯೇ, 'ವಿಷಾದ'ವು ರೋಗವನ್ನು ವರ್ಧಿಸುವ ವಸ್ತುಗಳಲ್ಲಿ ಪ್ರಮುಖವಾದದ್ದು. ಇದೇ ಪಟ್ಟಿಯಲ್ಲಿ 'ರಸ'ಗಳ ವಿಚಾರವನ್ನೂ ಹೇಳಿದ್ದಾರೆ. 'ಸರ್ವರಸಾಭ್ಯಾಸೋ ಬಲಕರಾಣಾಂ ಶ್ರೇಷ್ಠಮ್' ಅಂದರೆ ನಿತ್ಯವೂ 6 ರಸಗಳ ಸೇವನೆಯು ನಮ್ಮ ಬಲ ಹೆಚ್ಚಿಸುವ ಅಭ್ಯಾಸಗಳಲ್ಲಿ ಶ್ರೇಷ್ಠವಾದದ್ದು. ಹಾಗೆಯೇ, 'ಏಕರಸಾಭ್ಯಾಸೋ ದೌರ್ಬಲ್ಯಕರಾಣಾಂ ಶ್ರೇಷ್ಠಮ್' ಅಂದರೆ ಯಾವುದೋ ಒಂದು ರಸ/ರುಚಿಯನ್ನು ಹೆಚ್ಚಾಗಿ ಸೇವಿಸುವುದು ನಮ್ಮ ಶರೀರದ ಬಲವನ್ನು ಕುಗ್ಗಿಸುವುದರಲ್ಲಿ ಸಂಶಯವಿಲ್ಲ ಎಂದರ್ಥ. ಹಾಗಾದರೆ, ನಮ್ಮ ಸ್ವಾಸ್ಥ್ಯ ಸ್ಥಾಪನೆ, ಆರೋಗ್ಯ ರಕ್ಷಣೆ ಮತ್ತು ವಿಶೇಷವಾಗಿ ಬಲ ವೃದ್ಧಿಯಲ್ಲಿ ಷಡ್ರಸಗಳ ಪಾತ್ರವೇನು ಎಂಬುದನ್ನು ಅರಿಯೋಣ.

'ರಸ'ವೆಂದರೆ ರುಚಿ. ವಿಶೇಷವಾಗಿ, ಇಂದು ನಾನು ಚರ್ಚಿಸುತ್ತಿರುವುದು ನಾವು ಸೇವಿಸುವ ಆಹಾರದ ರುಚಿಗಳ ಕುರಿತು. ಆಯುರ್ವೇದದ ಪ್ರಕಾರ ಆಹಾರದಲ್ಲಿ 6 ಬಗೆಯ ರುಚಿಗಳನ್ನು ಗುರುತಿಸಿರುತ್ತಾರೆ. ಮಧುರ ರಸ- ಸಿಹಿ ರುಚಿ, ಅಮ್ಲರಸ- ಹುಳಿ ರುಚಿ, ಲವಣ ರಸ- ಉಪ್ಪು ರುಚಿ, ಕಟು ರಸ- ಖಾರ ರುಚಿ, ತಿಕ್ತ ರಸ- ಕಹಿ ರುಚಿ ಮತ್ತು ಕಷಾಯ ರಸ- ಒಗರು ರುಚಿ. ಆಯುರ್ವೇದದ ಪ್ರಕಾರ 'ಸಮತೋಲನ ಆಹಾರ'ವೆಂದರೆ 6 ರಸಗಳ ಸರಿಯಾದ ಸಂಯೋಗ. ಇವು ದೇಹದ ಪೋಷಣೆ, ಬೆಳವಣಿಗೆ ಮತ್ತು ಬಲಕ್ಕೆ ಕಾರಣ. ಆಯುರ್ವೇದವು ಪ್ರತಿಯೊಂದು ರಸದ ಗುಣ, ಪ್ರಯೋಜನ, ಅತಿಯಾಗಿ ಬಳಸಿದಾಗ ಆಗುವ ತೊಂದರೆಗಳನ್ನು ಸವಿಸ್ತಾರವಾಗಿ ಉಲ್ಲೇಖಿಸಿದೆ. ಇದನ್ನರಿತು ಆಹಾರದಲ್ಲಿ ಈ 6 ರಸಗಳನ್ನು ಬಳಸಿಕೊಂಡರೆ ನಮ್ಮ ಆರೋಗ್ಯವನ್ನು ಉತ್ತಮವಾಗಿಸಿಕೊಳ್ಳಬಹುದು. ಹಾಗಾಗಿ ಮೊದಲಿಗೆ ಈ 6 ರಸಗಳ ಸಾಮಾನ್ಯ ಗುಣಗಳನ್ನು ಅರಿಯೋಣ.

1. ಮಧುರ ರಸ- ಸಿಹಿ ರುಚಿಯನ್ನು ಇಷ್ಟಪಡದವರೇ ಇಲ್ಲ. ಇದು ಸರ್ವರಿಗೂ ಪ್ರಿಯವಾದ ರಸ. ನಮ್ಮ ಸರ್ವತೋಮುಖ ಬೆಳವಣಿಗೆಗೆ ಸಿಹಿರುಚಿ ಬೇಕೇ ಬೇಕು. ಇದು ನಾಲಿಗೆಗೆ ರುಚಿಸುವುದರ ಜತೆಗೆ ಇಂದ್ರಿಯಗಳಿಗೆ ಪುಷ್ಟಿ ನೀಡುತ್ತದೆ. ದೇಹದ ಪ್ರತಿಯೊಂದು ಜೀವಕೋಶಕ್ಕೂ ಚೈತನ್ಯವನ್ನು ತುಂಬುತ್ತದೆ. ದೇಹದ ಎಲ್ಲಾ ಧಾತುಗಳಿಗೆ ಪೋಷಣೆ ನೀಡಿ, ಅವು ತಮ್ಮ ಕಾರ್ಯ ನಿರ್ವಹಿಸಲು ಶಕ್ತಿ ನೀಡುತ್ತದೆ. ಹಾಗೆಯೇ, ಮನಸ್ಸಿಗೆ ಆನಂದವನ್ನು ನೀಡುತ್ತದೆ. ಆದರೆ ಸಿಹಿಯನ್ನೇ ಅಥವಾ ಸಿಹಿಪ್ರಧಾನ ಆಹಾರವನ್ನೇ ಹೆಚ್ಚಾಗಿ ಸೇವಿಸುವುದರಿಂದ ಬೊಜ್ಜು, ಪ್ರಮೇಹ, ಹೃದಯ ತೊಂದರೆ, ಆಲಸ್ಯ, ಚರ್ಮದ ತೊಂದರೆಗಳು ಕಾಣಿಸಿಕೊಳ್ಳಬಹುದು. ಸಿಹಿಪ್ರಧಾನ ಆಹಾರಗಳೆಂದರೆ, ವಿವಿಧ ಧಾನ್ಯಗಳು, ಅಕ್ಕಿ, ಗೋಧಿ, ಬಾರ್ಲಿ, ಬೇಳೆ, ಹಾಲು, ತುಪ್ಪ, ಹಣ್ಣುಗಳು, ಮಾಂಸಾಹಾರಗಳಾದ ಮೀನು, ಮೊಟ್ಟೆ ಇತ್ಯಾದಿ. ಆಯುರ್ವೇದದ ಪ್ರಕಾರ ನಮ್ಮ ಆಹಾರದಲ್ಲಿ ಸಿಹಿಯ ಪ್ರಮಾಣ ಅಧಿಕವಾಗಿರಬೇಕು. ಸಿಹಿ ಪದಾರ್ಥಗಳನ್ನು ಭೋಜನದಲ್ಲಿ ಮೊದಲ ಭಾಗವಾಗಿಯೇ ಸೇವಿಸಬೇಕು. ಆದರೆ ನೆನಪಿಡಿ- ಸಿಹಿರಸ ಪದಾರ್ಥವು ಜೀರ್ಣಕ್ಕೆ ಜಡ. ಸಾಕಷ್ಟು ಶಾರೀರಿಕ ಶ್ರಮ ಮಾಡಿ ನಂತರ ಮಧುರ ರಸ ಪ್ರಧಾನ ಭೋಜನವನ್ನು ಆನಂದಿಸಿ.

2. ಅಮ್ಲ ರಸ- ಅಂದರೆ ಹುಳಿ ರುಚಿ. ಇದು ಅಗ್ನಿಯನ್ನು ಉತ್ತೇಜಿಸುತ್ತದೆ, ಮಲ-ಮೂತ್ರಗಳ ವಿಸರ್ಜನೆಗೆ ನೆರವಾಗುತ್ತದೆ. ಇದು ಹೃದಯಕ್ಕೆ ಪೋಷಣೆ ನೀಡಿ ನಾಲಿಗೆಯ ರುಚಿಗ್ರಹಣವನ್ನು ಹೆಚ್ಚಿಸುತ್ತದೆ. ಇದು ದೇಹದಲ್ಲಿ ಉಷ್ಣತೆಯನ್ನು ಹೆಚ್ಚಿಸುತ್ತದೆ. ಹುಳಿ ರುಚಿ ಪ್ರಧಾನ ಆಹಾರವು ದೇಹದಲ್ಲಿನ ಕಫ, ಪಿತ್ತ ಮತ್ತು ರಕ್ತವನ್ನು ಹೆಚ್ಚಿಸುತ್ತದೆ. ಆದರೆ ಅತಿಯಾಗಿ ಹುಳಿ ರುಚಿಯನ್ನು ಸೇವಿಸಿದರೆ ಅತಿ ಬಾಯಾರಿಕೆ, ಪದೇಪದೆ ಜ್ವರ, ಚರ್ಮದ ತೊಂದರೆ, ಪ್ರಮೇಹ, ಚರ್ಮ ಸುಕ್ಕುಗಟ್ಟುವುದು, ಕೂದಲು ಬೇಗ ಬೆಳ್ಳಗಾಗುವುದು, ಕಣ್ಣಿನ ದೃಷ್ಟಿ ಕುಂದುವುದು ಮೊದಲಾದ ತೊಂದರೆಗಳಿಗೆ ಅದು ಕಾರಣವಾಗಬಹುದು. ಕ್ರಮೇಣ ಶರೀರವು ಬಲ ಕಳೆದುಕೊಂಡು ಮಾಂಸಪೇಶಿಗಳು ಶಿಥಿಲವಾಗುತ್ತವೆ. ಹುಳಿ ರುಚಿಯ ಆಹಾರವನ್ನು ಸಿಹಿಗಿಂತ ಕಡಿಮೆ ಪ್ರಮಾಣದಲ್ಲಿ ಬಳಸಬೇಕು, ಸಿಹಿಯ ನಂತರ ಸೇವಿಸಬೇಕು. ಇದು ಬೇರೆ ರುಚಿಪ್ರಧಾನ ಆಹಾರದ ಜತೆಗೆ ಇರಬೇಕೇ ಹೊರತು ಹುಳಿ ರುಚಿಯ ಆಹಾರವನ್ನೇ ಪ್ರತ್ಯೇಕವಾಗಿ ಸೇವಿಸುವುದು ಒಳ್ಳೆಯದಲ್ಲ. ಹುಳಿಯ ಆಹಾರ ದ್ರವ್ಯಗಳೆಂದರೆ ನೆಲ್ಲಿಕಾಯಿ, ದಾಳಿಂಬೆ, ಹುಣಸೆಹಣ್ಣು, ನಿಂಬೆಹಣ್ಣು, ಮಾವಿನಕಾಯಿ, ಟೊಮೇಟೊ ಇತ್ಯಾದಿ.

3. ಲವಣ ರಸ- ಅಂದರೆ ಉಪ್ಪು ರುಚಿ. ಇದು ರುಚಿಯಲ್ಲೇ ಅತ್ಯಂತ ಶ್ರೇಷ್ಠ ರುಚಿ. ಉಪ್ಪು, ಹಸಿವಿನ ಶಕ್ತಿಯನ್ನು ಹೆಚ್ಚಿಸಿ ಆಹಾರವು ಸರಿಯಾಗಿ ಜೀರ್ಣವಾಗುವಂತೆ ಮಾಡುತ್ತದೆ, ದೇಹದಲ್ಲಿನ ರಕ್ತ ಸಂಚಾರವನ್ನು ಸುಗಮಗೊಳಿಸುತ್ತದೆ. ಆದರೆ, ಅಗತ್ಯಕ್ಕಿಂತ ಹೆಚ್ಚು ಉಪ್ಪನ್ನು ಬಳಸಿದಾಗ ಅತಿ ಬಾಯಾರಿಕೆ, ಸುಸ್ತು, ನಿಶ್ಶಕ್ತಿ, ಉರಿಯೂತ, ಚರ್ಮದ ತೊಂದರೆಗಳು ಉತ್ಪತ್ತಿಯಾಗುತ್ತವೆ, ಮುಪ್ಪಿನ ಲಕ್ಷಣಗಳು ಬೇಗ ಶುರುವಾಗುತ್ತವೆ, ರಕ್ತ ದುಷ್ಟಿಯಾಗಿ ಸಂಧಿಗಳ ತೊಂದರೆಗಳು ಪ್ರಾರಂಭವಾಗುತ್ತವೆ. ಆಹಾರದಲ್ಲಿ ಉಪ್ಪಿನ ಪ್ರಮಾಣವು ಸಿಹಿ ಮತ್ತು ಹುಳಿಯ ಪ್ರಮಾಣಕ್ಕಿಂತ ಕಡಿಮೆ ಇರಬೇಕು. ನಿತ್ಯಬಳಕೆಗೆ ಸೈಂಧವ ಅಥವಾ ಕಲ್ಲುಪ್ಪು ಯೋಗ್ಯ.

4. ಕಟು ರಸ- ಅಂದರೆ ಖಾರ ರುಚಿ. ಸಿಹಿಯು ಎಳೆಯ ಮಕ್ಕಳಿಗೆ ಎಷ್ಟು ಪ್ರಿಯವೋ, ಅದೇ ರೀತಿ ಖಾರ ರುಚಿಯು ದೊಡ್ಡವರಿಗೆ ಬಲುಪ್ರಿಯ. ನಿಯಮಿತ ಬಳಕೆಯಿಂದಾಗುವ ಪ್ರಯೋಜನಗಳೆಂದರೆ- ಖಾರವು ಹಸಿವಿನ ಶಕ್ತಿಯನ್ನು ಹೆಚ್ಚಿಸಿ ಆಹಾರವು ಸರಿಯಾಗಿ ಜೀರ್ಣವಾಗುವಂತೆ ಮಾಡುತ್ತದೆ. ದೇಹದಲ್ಲಿ ಉಷ್ಣತೆಯನ್ನು ಉಂಟುಮಾಡಿ, ಎಲ್ಲಾ ನಾಳಗಳಲ್ಲಿನ ಅಡೆತಡೆಗಳನ್ನು ನಿವಾರಿಸಿ ಸಂಚಾರವನ್ನು ಸರಿಯಾಗಿಸುತ್ತದೆ. ಆದರೆ, ಅತಿಯಾದ/ಅನಿಯಮಿತ ಸೇವನೆಯಿಂದ ಬಾಯಿಹುಣ್ಣು, ಎದೆ ಉರಿ, ಮೂತ್ರ ಉರಿ, ಕಣ್ಣುರಿ, ನಿದ್ರಾಹೀನತೆಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಕಟುಪ್ರಧಾನ ಆಹಾರ ಸೇವನೆಯು ದೇಹವನ್ನು ದುರ್ಬಲಗೊಳಿಸುತ್ತದೆ. ಇದರಿಂದ ದೌರ್ಬಲ್ಯ, ಸುಸ್ತು ಆಗುತ್ತದೆ, ವೀರ್ಯಾಣುವಿನ ಪ್ರಮಾಣ ಕಡಿಮೆಯಾಗಿ ಸಂತಾನೋತ್ಪತ್ತಿಗೆ ತೊಂದರೆ ಆಗಬಹುದು. ರಕ್ತ ಪಿತ್ತಗಳನ್ನು ಕೆಡಿಸಿ ತಲೆ ತಿರುಗುವಿಕೆ, ಮೂರ್ಛೆರೋಗ, ಕಣ್ಣು ಕತ್ತಲೆಗಳನ್ನು ನೀಡುತ್ತದೆ. ಕಟಿಶೂಲ, ಸಂಧಿಶೂಲವನ್ನು ಹೆಚ್ಚಿಸುತ್ತದೆ. ಕಟುಪ್ರಧಾನ ಆಹಾರಗಳೆಂದರೆ ಶುಂಠಿ, ಕಾಳು ಮೆಣಸು, ಹಿಪ್ಪಲಿ, ಜೀರಿಗೆ, ನುಗ್ಗೆ, ಮೆಣಸಿನ ಕಾಯಿ, ಬೆಳ್ಳುಳ್ಳಿ, ಹಿಂಗು ಇತ್ಯಾದಿ.

5. ತಿಕ್ತ ರಸ- ಅಂದರೆ ಕಹಿ ರುಚಿ. 'ಅಧರಕ್ಕೆ ಕಹಿ ಉದರಕ್ಕೆ ಸಿಹಿ' ಎನ್ನುವಂತೆ ಕಹಿಯು ಮನಸ್ಸಿಗೆ ಹಿಡಿಸದ ರುಚಿ. ಆದರೆ ಆರೋಗ್ಯವನ್ನು ಹೆಚ್ಚಿಸುತ್ತದೆ. ಕಹಿಯು ನಾಲಿಗೆಗೆ ರುಚಿಯನ್ನು ಚೋದಿಸುವ ಗುಣವುಳ್ಳದ್ದು. ಜೀರ್ಣಕ್ರಿಯೆಗೆ ಸಹಕಾರಿ. ಆದರೆ, ಕಹಿಯ ಪ್ರಮಾಣವು ಆಹಾರದಲ್ಲಿ ಬಹಳ ಕಡಿಮೆ ಇರಬೇಕು. ಇದು ಪಿತ್ತವನ್ನು ಶಮನಗೊಳಿಸಲು ನೆರವಾಗುತ್ತದೆ. ಕಫದ ವಿಕಾರಗಳನ್ನು ಸರಿದೂಗಿಸುತ್ತದೆ. ಕಫ ಪಿತ್ತ ದೋಷಗಳು ಹೆಚ್ಚಾಗಿ ಉಂಟಾಗುವ ಚರ್ಮರೋಗಗಳನ್ನು ಗುಣಪಡಿಸುತ್ತದೆ. ಕ್ರಿಮಿಯ ಸಮಸ್ಯೆಯನ್ನು ನಿವಾರಿಸುತ್ತದೆ. ಜ್ವರವನ್ನು ಶಮನಗೊಳಿಸುತ್ತದೆ. ಸಕ್ಕರೆ ಕಾಯಿಲೆ ಮತ್ತು ದೇಹತೂಕದ ನಿಯಂತ್ರಣಕ್ಕೆ ಇದು ಸಹಕಾರಿ. ಹಾಗಂತ ಹೆಚ್ಚು ಪ್ರಮಾಣದಲ್ಲಿ ಸೇವಿಸಿದರೆ ತೊಂದರೆ ತಪ್ಪಿದ್ದಲ್ಲ. ದೇಹದಲ್ಲಿನ ಸಪ್ತಧಾತುಗಳು ಕ್ರಮೇಣ ಒಣಗಿ ಶರೀರ ತೆಳ್ಳಗಾಗುತ್ತದೆ. ಸಂದುನೋವು, ತಲೆನೋವು, ಪಾರ್ಶ್ವವಾಯು, ಹೃದಯ ಸಂಕುಚನ ಮತ್ತು ಇತರ ವಾತರೋಗಗಳು ಕಾಣಿಸಿಕೊಳ್ಳಬಹುದು. ಕಹಿ ರುಚಿಯ ಪದಾರ್ಥಗಳೆಂದರೆ ಕಹಿಬೇವು, ಮೆಂತ್ಯ, ಹಾಗಲಕಾಯಿ ಇತ್ಯಾದಿ. ಕಹಿ ರುಚಿಯನ್ನು ಮಧುರ, ಅಮ್ಲ, ಲವಣ, ಕಟು ರಸಗಳಿಗಿಂತ ಕಡಿಮೆ ಪ್ರಮಾಣದಲ್ಲಿ ಬಳಸಬೇಕು.

6. ಕಷಾಯ ರಸ- ಅಂದರೆ ಒಗರು ರುಚಿ. ಇದು ಊಟದ ಕೊನೆಗೆ ಇರಬೇಕಾದ ರಸ. ಇದು ಶರೀರವನ್ನು ದೃಢಗೊಳಿಸುತ್ತದೆ. ರಕ್ತವನ್ನು ಶುದ್ಧಿಗೊಳಿಸಿ ಚರ್ಮವನ್ನು ಆರೋಗ್ಯವಾಗಿರಿಸುತ್ತದೆ. ಗಾಯಗಳನ್ನು ಗುಣಪಡಿಸುತ್ತದೆ. ಶರೀರದಲ್ಲಿನ ದ್ರವಾಂಶ ಮತ್ತು ಕೊಬ್ಬಿನಂಶವನ್ನು ನಿಯಂತ್ರಿಸಿ ಪ್ರಮೇಹ ಸ್ಥೌಲ್ಯಗಳಲ್ಲಿ ಪಥ್ಯವಾಗುತ್ತದೆ, ಅತಿಯಾದ ಮಲದ ಹರಿವನ್ನು ತಡೆಯುತ್ತದೆ. ಆದರೆ, ಒಗರು ರುಚಿಯ ಅತಿ ಬಳಕೆಯಿಂದ ಹೊಟ್ಟೆಯುಬ್ಬರ, ಮಲಬದ್ಧತೆ ಉಂಟಾಗುತ್ತದೆ. ಇದು ದೇಹವನ್ನು ಒಣಗಿಸಿ ಶರೀರದ ಆಂತರಿಕ ಪದರಗಳಲ್ಲಿ ರೂಕ್ಷತೆಯನ್ನು ಉಂಟುಮಾಡುತ್ತದೆ. ದೇಹದಲ್ಲಿನ ಸ್ನಿಗ್ಧಾಂಶವನ್ನು ತಗ್ಗಿಸಿ, ಎಲ್ಲಾ ಧಾತುಗಳ ಪೋಷಣೆಯನ್ನು ಕುಗ್ಗಿಸುತ್ತದೆ. ದೇಹವನ್ನು ಕೃಶವಾಗಿಸುತ್ತದೆ. ಶುಕ್ರ ಧಾತುಗಳ ತೊಂದರೆ ಮತ್ತು ಹೃದಯ-ವಿಕೃತಿಯನ್ನು ಉಂಟುಮಾಡುತ್ತದೆ. ಆದ್ದರಿಂದ ಆಹಾರದಲ್ಲಿ ಇದರ ಪ್ರಮಾಣ ಅತ್ಯಂತ ಅಲ್ಪವಾಗಿರಬೇಕು. ಒಗರು ರಸಪ್ರಧಾನ ಆಹಾರಗಳೆಂದರೆ, ನೇರಳೆ ಹಣ್ಣು, ತ್ರಿಫಲ, ಅರಿಶಿಣ, ಮಜ್ಜಿಗೆ, ಅಳಲೇಕಾಯಿ, ದಾಳಿಂಬೆ ಸಿಪ್ಪೆ, ಧನಿಯಾ ಇತ್ಯಾದಿ.

ಹೀಗೆ, ಪ್ರತಿಯೊಂದು ರಸಕ್ಕೂ ಆರೋಗ್ಯವನ್ನು ಸುಧಾರಿಸುವ ಗುಣಗಳಿವೆ, ಸ್ವಾಸ್ಥ್ಯ ಹಾಳುಮಾಡುವ ಸ್ವಭಾವವೂ ಇದೆ. ಆದ್ದರಿಂದ, 6 ರಸಗಳನ್ನು ಅವುಗಳ ಗುಣ ಕರ್ಮಗಳ ಆಧಾರದಲ್ಲಿ ಆಹಾರದಲ್ಲಿ ಸಂಯೋಜಿಸಿಕೊಂಡಾಗ ಅವು ಶರೀರವೃದ್ಧಿ, ಬಲವೃದ್ಧಿ ಮತ್ತು ಆಯುವೃದ್ಧಿಗೆ ಪೂರಕವಾಗುತ್ತವೆ. ಅಂದಹಾಗೆ, ನಾವು ಅಂದು ಹಬ್ಬಕ್ಕೆ ಮಾಡಿದ್ದ ಅಡುಗೆಯೆಂದರೆ- ಮಧುರಪ್ರಧಾನ ಪಾಯಸ, ಹಾಲುಬಾಯಿ, ಬಿಸಿಯನ್ನ, ಆಮ್ಲಕ್ಕಾಗಿ ಪುನರ್ಪುಳಿ ಸಾರು, ನಿಂಬೆಕಾಯಿ ಚಿತ್ರಾನ್ನ, ಆಮ್ಲ-ಲವಣ ಪ್ರಧಾನವಾದ ಕೋಸಂಬರಿ, ಕಟುರಸ ಪ್ರಧಾನವಾದ ಹುಳಿ, ಕಹಿಗಾಗಿ ಮೆಂತ್ಯ ಗೊಜ್ಜು, ಒಗರು ರಸಕ್ಕಾಗಿ ದಾಳಿಂಬೆ ಸಿಪ್ಪೆಯ ತಂಬುಳಿ. ಜತೆಗೆ ಹಸುವಿನ ತುಪ್ಪ, ಸ್ವಲ್ಪ ಸಂಡಿಗೆ, ಹೀರಲು ಬಿಸಿನೀರು. ನಂತರ ಜೀರ್ಣಕಾರಿ ತಾಂಬೂಲ ಸೇವನೆಯ ಸೊಗಸು. ಇದೇ ಅಲ್ಲವೇ ದೇಹ-ಇಂದ್ರಿಯ-ಮನಗಳಿಗೆ ಮುದ ನೀಡುವ ನಿಜವಾದ ಸಂತುಲಿತ ಆಹಾರ?!

ಅಭಿಮತ

ಹೊಸೂರು ರತ್ನಾಕರ ಶೆಟ್ಟಿ

ವಿಸ್ತರಣೆಗೆ ಇದು ಸಕಾಲ

ಆಧುನಿಕ ಜಗತ್ತು ಅಭಿವೃದ್ಧಿಯ ಮಂತ್ರ ಜಪಿಸುತ್ತಿದೆ. ಎಲ್ಲಾ ಮುಂಚೂಣಿ ದೇಶಗಳು ಉದ್ದೇಶಿತ ಆರ್ಥಿಕ ಗುರಿಯನ್ನು ಸಾಧಿಸಲು ತಮ್ಮೆಲ್ಲ ಆರ್ಥಿಕ ಪರಿಕರಗಳ ಸಹಯೋಗದೊಂದಿಗೆ ಮುನ್ನುಗ್ಗುತ್ತಿವೆ. ಇದರ ಪರಿಣಾಮವಾಗಿ ಒಟ್ಟು ಆರ್ಥಿಕ ಪ್ರಗತಿಯು ಅಪೇಕ್ಷಿತ ಮಟ್ಟ ಮುಟ್ಟಿದರೂ, ಅಭಿವೃದ್ಧಿಯ ಸಿಂಹಪಾಲು ಬಲಾಢ್ಯರ ಪಾಲಾಗುತ್ತಿದೆ. ಹೀಗಾಗಿ ಸಮಾಜದ ಶ್ರೀಸಾಮಾನ್ಯರು ಅಧೋಗತಿಯಲ್ಲೇ ಮುಂದುವರಿಯಬೇಕಾದ ಅನಿವಾರ್ಯತೆಯಲ್ಲಿದ್ದಾರೆ ಎಂಬುದು ಬಹುಕಾಲದಿಂದ ಕೇಳಿಬರುತ್ತಿರುವ ಬುದ್ಧಿಜೀವಿಗಳ ಆಕ್ರೋಶ.

ಆರ್ಥಿಕಾಭಿವೃದ್ಧಿಯ ಸಂಕೇತವಾಗಿರುವ ಉದ್ದಿಮೆಯು ಶ್ರೀಮಂತರ ಹಿಡಿತದಲ್ಲಿರುವುದರಿಂದ, ಪ್ರಗತಿಯ ಫಲವೂ ಸಹಜವಾಗಿಯೇ ಶ್ರೀಮಂತರನ್ನು ಅನಾಯಾಸವಾಗಿ ಸೇರುತ್ತದೆ. ಆದರೂ, ಅಗಾಧ ಪ್ರಮಾಣದ ಅಭಿವೃದ್ಧಿಯ ನೆಲೆಯಲ್ಲಿ ಫಲಗಳ ಒಂದು ಭಾಗವು ಕೆಳಹಂತಗಳಿಗೆ ಪಸರಿಸಿ ಅವುಗಳ ಅಭಿವೃದ್ಧಿಗೆ ನಾಂದಿಯಾಗುತ್ತದೆ. ಇದನ್ನೇ 'ವ್ಯಾಪಿಸುವಿಕೆಯ ಸಿದ್ಧಾಂತ' ಎಂದೂ ಕರೆಯಬಹುದು. ಎಲ್ಲರಿಗೂ ಬೇಕಾದ ಈ ಆರ್ಥಿಕ ಪ್ರಗತಿಯನ್ನು ಸಮಾನವಾಗಿ ಹಂಚುವುದು ಒಂದು ಅಸಾಮಾನ್ಯ ಕೆಲಸವೇ ಸರಿ. ಆರ್ಥಿಕ ಪ್ರಗತಿಯು ಉದ್ಯಮಶೀಲರಿಗಷ್ಟೇ ಸೀಮಿತವೇ, ಬಡವರು ಇನ್ನಷ್ಟು ನಿರ್ಗತಿಕರಾಗಬೇಕೇ? ಎಂಬುದು ಬಹುಕಾಲದಿಂದ ಇರುವ ಪ್ರಶ್ನೆ. ಆರ್ಥಿಕ ಪ್ರಗತಿಯು ಎಲ್ಲಾ ದೇಶಕ್ಕೂ ಅನಿವಾರ್ಯ. ಸಮಾನತೆಯ ಮಂತ್ರವನ್ನೇ ಸದಾ ಜಪಿಸುತ್ತಿದ್ದ ಕಮ್ಯುನಿಸ್ಟ್ ರಾಷ್ಟ್ರ ಚೀನಾ, ತಾನು ವಿರೋಧಿಸುತ್ತಾ ಬಂದಿದ್ದ ಬಂಡವಾಳ ವ್ಯವಸ್ಥೆಯನ್ನೇ ಕಾಲಕ್ರಮೇಣ ಅಪ್ಪಿಕೊಂಡು ಇಂದು ಜಗತ್ತಿನ ದೊಡ್ಡಣ್ಣನಾಗುವ ಹವಣಿಕೆಯಲ್ಲಿದೆ. ಪ್ರಗತಿಯ ಬಹುಪಾಲನ್ನು ಜನಸಾಮಾನ್ಯರಿಗೆ ತಲುಪಿಸಬಹುದಾದ ಏಕೈಕ ಮಾರ್ಗವೆಂದರೆ, ಸಹಕಾರಿ ವಲಯದ ಬೆಳವಣಿಗೆಗಾಗಿ ಪೂರಕ ವಾತಾವರಣವನ್ನು ನಿರ್ಮಿಸುವುದು.

'ಎಲ್ಲರಿಗಾಗಿ ನಾನು, ನನಗಾಗಿ ಎಲ್ಲರೂ' ಎನ್ನುವ ವಿಶಾಲ ಮನೋಭಾವ ಹೊಂದಿರುವ ಸಹಕಾರ ತತ್ತ್ವವು ಸಮಾಜದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರುತ್ತಲೇ ಬಂದಿದೆ. ಗುಜರಾತ್‌ನ 7 ಮಂದಿ ಶೋಷಿತ ಮಹಿಳೆಯರು ಸ್ಥಾಪಿಸಿದ ಹಪ್ಪಳ ತಯಾರಿಕಾ ಸಂಸ್ಥೆಯು ಇಂದು 'ಲಿಜ್ಜತ್ ಪಾಪಡ್' ಹೆಸರಿನಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರುಮಾಡಿದೆ. 2000 ಕೋಟಿ ರುಪಾಯಿ ವಾರ್ಷಿಕ ವ್ಯವಹಾರ ಮಾಡಿರುವ ಈ ಸಂಸ್ಥೆ 50,000ಕ್ಕೂ ಹೆಚ್ಚಿನ ಬಡ ಮಹಿಳೆಯರಿಗೆ ಆರ್ಥಿಕ ಭದ್ರತೆಯನ್ನು ಒದಗಿಸಿದೆ. ಜತೆಗೆ ಪರೋಕ್ಷವಾಗಿ ಸಾವಿರಾರು ಬಡಕುಟುಂಬಗಳು ನೆಮ್ಮದಿಯ ಬದುಕು ನಡೆಸುವುದಕ್ಕೆ ಅನುವುಮಾಡಿಕೊಟ್ಟಿದೆ. ಸಹಕಾರಿ ತತ್ತ್ವದ ಇನ್ನೊಂದು ಯಶೋಗಾಥೆಯನ್ನೂ ಗುಜರಾತ್‌ನಲ್ಲೇ ನೋಡಬಹುದು. ಇದು ಹಾಲಿನ ಕಥೆ. ವರ್ಗೀಸ್ ಕುರಿಯನ್ ಎಂಬ ಪರಿಣತರ ಅವಿರತ ಶ್ರಮದಿಂದಾಗಿ, ಕೇವಲ ಬಡ ಗ್ರಾಮೀಣ ಜನರನ್ನು ಒಳಗೊಂಡಿದ್ದ ಹೈನುಗಾರಿಕಾ ಸಂಸ್ಥೆಯು ಇಂದು 'ಅಮುಲ್' ಹೆಸರಿನಲ್ಲಿ ಜಾಗತಿಕ ಮಟ್ಟದಲ್ಲಿ ಮಿಂಚುತ್ತಿದೆ. ಕರ್ನಾಟಕದಲ್ಲೂ ಸಹಕಾರಿ ಸಂಸ್ಥೆಗಳು ಹುಲುಸಾಗಿ ಬೆಳೆಯುತ್ತಿವೆ. ಪ್ರಾದೇಶಿಕ ಪ್ರತಿಭೆ, ಕ್ಷೇತ್ರಜ್ಞಾನ, ಗ್ರಾಮೀಣ ಜನತೆಯ ನಾಡಿಮಿಡಿತವನ್ನರಿತು ಸ್ಪಂದಿಸುವ ಚಾಕಚಕ್ಯತೆಗಳಿಂದಾಗಿ ಇಂದು ಹಲವಾರು ಸಹಕಾರಿ ಸಂಘಗಳು ಬೃಹತ್ ಬ್ಯಾಂಕ್ ಶಾಖೆಗಳಿಗೆ ಸಮಾನವಾಗಿ ಪೈಪೋಟಿ ನೀಡುತ್ತಿವೆ. ಇದು ಸಹಕಾರಿ ಸಂಘಗಳ ಶಕ್ತಿಯೇ ಸರಿ. ಸುಮಾರು 46,000ಕ್ಕೂ ಹೆಚ್ಚಿನ ಸಹಕಾರಿ ಸಂಘಗಳು, 5 ಮಹಾಮಂಡಳಿಗಳ ನಡುವೆ ಹೆಮ್ಮರವಾಗಿ ಬೆಳೆಯುತ್ತಿರುವುದು ರಾಜ್ಯದ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್). ರಾಜ್ಯದ ಸುಮಾರು 16,000 ಹಾಲು ಉತ್ಪಾದಕ ಸಂಘಗಳ ಮೂಲಕ 25 ಲಕ್ಷಕ್ಕೂ ಅಧಿಕ ಗ್ರಾಮೀಣ ಬಡರೈತರ ಆಶಾಕಿರಣವಾಗಿರುವ ಕೆಎಂಎಫ್, ದೇಶ-ವಿದೇಶಗಳಲ್ಲಿ ತನ್ನ ವಹಿವಾಟನ್ನು ವಿಸ್ತರಿಸುತ್ತಿದೆ. ಗುಣಮಟ್ಟದ ಹಾಲು ಮತ್ತು ಕ್ಷೀರೋತ್ಪನ್ನಗಳ ಮೂಲಕ ಇದು ಮಾರುಕಟ್ಟೆಯಲ್ಲಿ ನಿಯಂತ್ರಣ ಸಾಧಿಸುತ್ತಿರುವುದು ಸಂಘದ ಸದಸ್ಯರಲ್ಲಿ ಭರವಸೆಯನ್ನು ಮೂಡಿಸುತ್ತಿದೆ. ಹೀಗಾಗಿ, ಅಭಿವೃದ್ಧಿಯಲ್ಲಿ ಅಧಿಕ ಒಳಗೊಳ್ಳುವಿಕೆಯನ್ನು ನೋಡಬೇಕಾದಲ್ಲಿ, ಸಹಕಾರಿ ತತ್ತ್ವವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಉತ್ತೇಜಿಸಬೇಕಾಗಿದೆ. ಸಹಕಾರಿ ಸಂಘಗಳು ಸೋಲಲು ಎರಡು ಮುಖ್ಯ ಕಾರಣಗಳಿವೆ- ಆಡಳಿತ ಮಂಡಳಿಯಲ್ಲಿ ಪರಿಣತರ ಕೊರತೆ ಹಾಗೂ ಅನಗತ್ಯ ರಾಜಕೀಯ ಹಸ್ತಕ್ಷೇಪ. ಇವನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ಕ್ರಮಗಳನ್ನು ಕೈಗೊಂಡು ಬಲವರ್ಧನೆ ಮಾಡಿದಲ್ಲಿ ಅಪೇಕ್ಷಿತ ಫಲ ದಕ್ಕುವುದು ನಿಶ್ಚಿತ.

ದೇಶದ ಆರ್ಥಿಕ ಪ್ರಗತಿಯನ್ನು ನಿರಂತರ ಏರುಗತಿಯಲ್ಲಿರಿಸಲು ಅಂಬಾನಿ-ಅದಾನಿಗಳಂಥ ಉದ್ಯಮಿಗಳು ಬೇಕೇ ಬೇಕು. ಜತೆಗೆ, ಜನರ ಸಹಯೋಗವಿರುವ ಸಹಕಾರ ಸಂಘಗಳ ಮೂಲಕ ವಿವಿಧ ಆರ್ಥಿಕ ಚಟುವಟಿಕೆಗಳಿಗೆ ಒತ್ತುನೀಡಬೇಕಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅಪಾರವಾಗಿ ಸಿಗುವ ಕೃಷಿ ಉತ್ಪನ್ನಗಳನ್ನು ಕೇಂದ್ರೀಕರಿಸಿ ಸಣ್ಣ ಸಣ್ಣ ಉದ್ದಿಮೆಗಳನ್ನು ಉತ್ತೇಜಿಸಿದಲ್ಲಿ ಬಡವ-ಬಲ್ಲಿದರ ನಡುವಿನ ಅಂತರ ತುಸು ಕಡಿಮೆಯಾದೀತು.

(ಲೇಖಕರು ಹವ್ಯಾಸಿ ಬರಹಗಾರರು)

ಶುರುವಾಗಲಿದೆ ಏಕವ್ಯಕ್ತಿಯ ವಿರುದ್ಧ 'ಗಾಂಧಿ ತ್ರಿಮೂರ್ತಿ'ಗಳ ಸಂಘರ್ಷ



ಪ್ರಭು ಪ್ರವರ

ಪ್ರಭು ಚಾವ್ಲಾ

vveditoped@gmail.com

ಸಂಖ್ಯಾಬಲಕ್ಕೇ ಇನ್ನಿಲ್ಲದ ಮಹತ್ವವಿರುವ ನಮ್ಮ ಸಂಸತ್ತಿನಲ್ಲಿ ಸದನದ ಎರಡೂ ಕಡೆಗಳಿಂದ ಹುಯಿಲು, ಬೊಬ್ಬೆ, ಅಪಸ್ವರಗಳು ಕೇಳಿಬರುವುದು ಸಾಮಾನ್ಯ. ಈ ಸದ್ದು ಸದನಕ್ಕೆ ಅಪರಿಚಿತವೇನಲ್ಲ. ಇದುವರೆಗೆ ಸಂಸತ್ತಿನಲ್ಲಿ ಕಾಂಗ್ರೆಸ್ಸಿನ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರ ಕಡೆಯಿಂದ ಇಂಥ ದನಿ ಕೇಳಿಬರುತ್ತಿದ್ದುದುಂಟು. ಈ ಸಲ ವಯನಾಡಿನ ಉಪಚುನಾವಣೆಯಲ್ಲಿ ಒಂದೊಮ್ಮೆ ಪ್ರಿಯಾಂಕಾ ಗಾಂಧಿಯವರೂ ಗೆದ್ದು ಲೋಕಸಭೆಯನ್ನು ಪ್ರವೇಶಿಸಿಬಿಟ್ಟರೆ, ಕಾಂಗ್ರೆಸ್‌ನ ಈ ಹುಯಿಲುಗಾರರ ಪಟ್ಟಿಗೆ ಅವರೂ ಸೇರಿಕೊಂಡಂತಾಗುತ್ತದೆ. ಸಂಸತ್ತಿನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕಾಂಗ್ರೆಸ್‌ನ ಈ 'ತ್ರಿಮೂರ್ತಿ'ಗಳು ತಮ್ಮ ನಿಷ್ಠಾವಂತ ಅನುಯಾಯಿಗಳನ್ನು ಮುನ್ನಡೆಸಲು ಅನುವಾದಂತಾಗುತ್ತದೆ. ಸಾಮ್ರಾಜ್ಯದ ಸ್ಥಾಪನೆಯಲ್ಲಿ ಒಂದಿಡೀ ಕುಟುಂಬವು ವಿಭಿನ್ನ ಪಾತ್ರಗಳನ್ನು ನಿರ್ವಹಿಸುವುದು ಒಂದು ರಾಜಪ್ರಭುತ್ವದಲ್ಲೋ ಅಥವಾ ನಿರಂಕುಶಾಧಿಕಾರದ ವ್ಯವಸ್ಥೆಯಲ್ಲೋ ಸಾಮಾನ್ಯವಾಗಿ ಕಂಡುಬರುವ ಪರಿಪಾಠ. ಆದರೆ ಈ ಸಲ, ಈ ತ್ರಿಮೂರ್ತಿಗಳಿಗೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ಏಕೈಕ ಪಾತ್ರವೆಂದರೆ- ಸಂಸತ್ತಿನಲ್ಲಿ ನರೇಂದ್ರ ಮೋದಿಯವರಿಗೆ ಮುಖಾಮುಖಿಯಾಗುವುದು, ವಾಗ್ದಾಳಿಗೆ ನಿಲ್ಲುವುದು.

ಕಾಂಗ್ರೆಸ್‌ನಲ್ಲಿ ಈಗಿರುವ, ಇದುವರೆಗೆ ಆಗಿಹೋಗಿರುವ ಸಂಸದರ ಬಳಗ ಸಾಕಷ್ಟು ದೊಡ್ಡದೇ ಇದೆ; ಆದರೆ, ಪಕ್ಷದ ರಾಜಕೀಯ ಮುಖವಾಣಿಯ ಮತ್ತು ಸೈದ್ಧಾಂತಿಕ ಆತ್ಮದ ವಿಷಯ ಬಂದಾಗ ಅಲ್ಲಿ 'ಹಕ್ಕುದಾರರು' ಎನಿಸಿಕೊಳ್ಳುವುದು 'ಗಾಂಧಿ ಕುಟುಂಬಿಕರು' ಮಾತ್ರವೇ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಕಾಂಗ್ರೆಸ್ ಸಂಘಟನೆಯ ಶ್ರೇಣೀಕೃತ ವ್ಯವಸ್ಥೆಯೆಂಬುದು ಕೇವಲ ಸಾಂಕೇತಿಕವಾಗಿದ್ದು, ಮೇಲೆ ಉಲ್ಲೇಖಿಸಿರುವ ಮೂವರು 'ಗಾಂಧಿ'ಗಳ ಮಾತುಗಳೇ ಇಲ್ಲಿ ಅಲಿಖಿತ ಕಾನೂನು ಆಗಿರುತ್ತದೆ, ಅಂತಿಮ ನಿರ್ಧಾರವಾಗಿರುತ್ತದೆ. ಹೀಗಾಗಿ, ಶಾಸಕಾಂಗದ ವಿಷಯದಲ್ಲಿ ಈ ಗಾಂಧಿತ್ರಯರು ನಿರ್ವಹಿಸಲು ಹೊರಟಿರುವ ಪಾತ್ರವು ಪ್ರಸ್ತುತ ಪಕ್ಷದ ಕಟ್ಟಾ ಅನುಯಾಯಿಗಳ ನಡುವೆ ನಡೆಯುತ್ತಿರುವ ಮಾತುಕತೆಗಳಿಗೆ ಗ್ರಾಸವಾಗಿಬಿಟ್ಟಿದೆ. ಪೂರ್ವನಿದರ್ಶನಗಳನ್ನು ಆಧರಿಸಿ ಹೇಳುವುದಾದರೆ, ಈ ತ್ರಿಮೂರ್ತಿಗಳ ಪೈಕಿಯ ಪ್ರತಿಯೊಬ್ಬ 'ಗಾಂಧಿ'ಯೂ, ತಮ್ಮ ಪಾತ್ರ ಹಾಗೂ ಅಧಿಕಾರ ವ್ಯಾಪ್ತಿಯನ್ನು ವ್ಯಾಖ್ಯಾನಿಸುವ ವಿಷಯದಲ್ಲಿ ನಿಸ್ಸಂದಿಗ್ಧವಾಗಿ ವರ್ತಿಸುತ್ತಾರೆ ಎಂಬುದು ಸ್ಪಷ್ಟ. ಒಬ್ಬೊಬ್ಬ 'ಗಾಂಧಿ'ಯನ್ನೂ ವಿಶ್ಲೇಷಿಸುತ್ತಾ ಹೋದಲ್ಲಿ ನಿಮಗಿದು ನಿಚ್ಚಳವಾದೀತು.

● **ಸೋನಿಯಾ ಗಾಂಧಿ:** 'ಮೌನ' ಎಂಬುದು ಇವರ ಬತ್ತಳಿಕೆಯಲ್ಲಿನ ಅತ್ಯಂತ ಪ್ರಬಲ ಅಸ್ತ್ರ; ಇದು ಅವರ ಕೌಟುಂಬಿಕ ಜೀವನದಲ್ಲಾದ ಒಂದಷ್ಟು ದುರಂತಗಳು ಮತ್ತು ಸುದೀರ್ಘ ರಾಜಕೀಯ ಜೀವನದ ಫಲಶ್ರುತಿ ಎಂದರೆ ತಪ್ಪಾಗದು. ದಿನನಿತ್ಯದ ರಾಜಕೀಯ ಜಂಜಾಟಗಳಿಂದ ದೂರವುಳಿಯುವುದು ಇವರ ಅಭ್ಯಾಸ. ಬರೋಬ್ಬರಿ 26 ವರ್ಷಗಳಿಂದ ರಾಜಕೀಯವಾಗಿ ಸಕ್ರಿಯರಾಗಿರುವ 77ರ ಹರೆಯದ ಈ 'ಕಾಂಗ್ರೆಸ್ ಅಧಿನಾಯಕಿ', ಬಿಜೆಪಿ ಮತ್ತು ನರೇಂದ್ರ ಮೋದಿಯವರ ವಿರುದ್ಧ ತಮ್ಮನ್ನು 'ಜೋನ್ ಆಫ್ ಆರ್ಕ್'ಳ ರೀತಿಯಲ್ಲೇ ಬಿಂಬಿಸಿಕೊಂಡು ಬಂದವರು. ಪರಸ್ಪರ ವೈಯಕ್ತಿಕ ಚಾರಿತ್ರ್ಯವಧೆಗೆ ಇಳಿಯುವ ಕಾಂಗ್ರೆಸ್‌ನ ಇತರ ನಾಯಕರ ಹಾದಿಯನ್ನು ಅನುಸರಿಸದೆ, ಬಿಜೆಪಿಯೇತರ ಪಕ್ಷಗಳನ್ನೆಲ್ಲ ಒಂದೆಡೆ ಹಿಡಿದಿಟ್ಟುಕೊಳ್ಳುವುದನ್ನು ಇವರು ಬಲ್ಲರು. ಪಶ್ಚಿಮ ಬಂಗಾಳ, ದೆಹಲಿ ಮತ್ತು ಕೇರಳ ರಾಜ್ಯಗಳಲ್ಲಿ ಸ್ಥಳೀಯ ನಾಯಕರು ಕ್ರಮವಾಗಿ ಮಮತಾ ಬ್ಯಾನರ್ಜಿ, ಅರವಿಂದ ಕೇಜ್ರಿವಾಲ್ ಮತ್ತು ಪಿಣರಾಯಿ ವಿಜಯನ್‌ರಂಥ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರೂ, ಇಂಥ ವೈಯಕ್ತಿಕ ಕೆಸರೆರಚಾಟ ನಡೆಸುವುದು ಸೋನಿಯಾರ ಚಾಳಿಯಲ್ಲ. ಈಕೆಯಲ್ಲಿ ಕೆನೆಗಟ್ಟಿರುವ ತಟಸ್ಥತೆ ಮತ್ತು ಸಮಚಿತ್ತತೆಯಿಂದಾಗಿಯೇ, ಯುಪಿಎ ಮೈತ್ರಿಕೂಟದ ಮತ್ತು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆಯಾಗಿ ಅವರ ಸ್ವೀಕಾರಾರ್ಹತೆಯು ಪರಮೋಚ್ಚ ಮಟ್ಟದಲ್ಲಿದೆ ಎನ್ನಬೇಕು. ವಿಪಕ್ಷಗಳನ್ನು ಒಗ್ಗಟ್ಟಾಗಿ ಇರಿಸಲೆಂದು ಹಾಗೂ ದೇಶವನ್ನು ಒಂದು ದಶಕದವರೆಗೆ ಆಳಿದ 16 ಪಕ್ಷಗಳ ಯುಪಿಎ ಮೈತ್ರಿಕೂಟವನ್ನು ಸ್ಥಾಪಿಸಲೆಂದು 2004ರಲ್ಲಿ ಸೋನಿಯಾ ಅವರು ಪ್ರಧಾನಮಂತ್ರಿ ಪಟ್ಟವನ್ನು ಸ್ವತಃ ನಿರಾಕರಿಸಿದ್ದು ಗೊತ್ತಿರುವಂಥದ್ದೇ. ಈ ವೈಶಿಷ್ಟ್ಯವೇ ಅವರನ್ನು ಸುತ್ತುವರಿದಿರುವ 'ಸಂತಸದೃಶ ಪ್ರಭಾವಳಿ'ಗೆ ಕಾರಣವಾಗಿದೆ ಎನ್ನಲಡ್ಡಿಯಿಲ್ಲ.

ಆದರೆ, ಮೋದಿಯವರಿಗೆ ಜನಾದೇಶ ದಕ್ಕಿ ಪ್ರಧಾನಿ ಗದ್ದುಗೆಯಲ್ಲಿ ಅವರು ಪ್ರತಿಷ್ಠಾಪಿಸಲ್ಪಟ್ಟ ನಂತರ, ಗೊಂದಲಗಳನ್ನು ತಿಳಿಗೊಳಿಸಿ ಪರಿಸ್ಥಿತಿಯನ್ನು ಸುಗಮಗೊಳಿಸುವ ಮತ್ತು ಸಮಸ್ಯೆಯ ನಿವಾರಣೆಗೆ ರಾಮಬಾಣವಾಗಿ ಪರಿಣಮಿಸುವ ಪಾತ್ರಕ್ಕೆ ಅವರು ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಲೋಕಸಭೆಯ ಅಧಿವೇಶನದ ಒಂದು ಸಂದರ್ಭದಲ್ಲಿ, ಕಾಂಗ್ರೆಸ್‌ನ ಮಿತ್ರಪಕ್ಷಗಳ ಕೋಪೋದ್ರಿಕ್ತ ಸದಸ್ಯರು ಸದನದ ಬಾವಿಯೆಡೆಗೆ ಧಾವಿಸಿದರೂ, ಕಾಂಗ್ರೆಸ್‌ನ ಪ್ರಮುಖ ಸಂಸದರಾದ ಶಶಿ ತರೂರ್ ಹಾಗೂ ಕಾರ್ತಿ ಚಿದಂಬರಂ ಅವರು ತಂತಮ್ಮ ಸ್ಥಾನಗಳಲ್ಲೇ ಕುಳಿತಿದ್ದರು; ಇದನ್ನು ಕಂಡು ಡಿಎಂಕೆಯ ಸಂಸದರು ದೂರಿದಾಗ ಸೋನಿಯಾ ಅವರನ್ನುದ್ದೇಶಿಸಿ, ''ಸದನದ ಬಾವಿಯ ಬಳಿಗೆ ನಾನು ಬರುತ್ತೇನೆ'' ಎಂದು ನಗುತ್ತಲೇ ಹೇಳಿದ್ದು ಆಕೆಯ



ಮಾನವೀಯ ಮಗ್ಗುಲನ್ನು ಅನಾವರಣಗೊಳಿಸಿತ್ತು. ಶ್ಲಾಘನೀಯವೆನಿಸಿದ ಅವರ ಈ 'ಹೆಜ್ಜೆ'ಯನ್ನು ತರೂರ್ ಮತ್ತು ಕಾರ್ತಿ ಕೂಡ ಅನುಸರಿಸಬೇಕಾಗಿ ಬಂತು.

ಸಂತರು ಎನಿಸಿಕೊಂಡವರು ಪ್ರಶಾಂತಚಿತ್ತತೆಯನ್ನು ಕಾಯ್ದುಕೊಂಡು ಶಾಂತಿಪಾಲಕರಾಗಿರುವುದರ ಜತೆಜತೆಗೆ ಯೋಧರೂ ಆಗಿರುತ್ತಾರೆ. ಸಂಸತ್ತಿನ ಕೊನೆಯ ಅಧಿವೇಶನದ ಅವಧಿಯಲ್ಲಿ ನಡೆದ ಪಕ್ಷದ ಸಭೆಯೊಂದರಲ್ಲಿ ಅವರು ಹೀಗೆ ಘೋಷಿಸಿದ್ದುಂಟು: ''ಕಳೆದೊಂದು ದಶಕದಿಂದ ಕಾಣಬರುತ್ತಿರುವಂತೆ ಸಂಸತ್ತಿನ ಅಧಿವೇಶನವು ಇನ್ನು ಮುಂದೆಂದೂ ಹೀಗೆ ಬಲವಂತವಾಗಿ ಅಥವಾ ಬೆದರಿಸಿ ನಿಗ್ರಹಿಸಲ್ಪಡುವಂತಾಗಬಾರದು. ಸಂಸತ್ತಿನ ಕಲಾಪಗಳಿಗೆ ಅಡ್ಡಿಪಡಿಸುವುದಕ್ಕೆ, ಸಂಸದರನ್ನು ವಿಲಕ್ಷಣ ರೀತಿಯಲ್ಲಿ ನಡೆಸಿಕೊಳ್ಳುವುದಕ್ಕೆ ಅಥವಾ ಯಥೋಚಿತ ಪರಿಗಣನೆ ಮತ್ತು ಚರ್ಚೆಗಳಿಲ್ಲದೆಯೇ ಶಾಸನವೊಂದನ್ನು ಅಂಗೀಕರಿಸಿಬಿಡುವುದಕ್ಕೆ ಇನ್ನು ಮುಂದೆ ಅವಕಾಶ ನೀಡಲಾಗುವುದಿಲ್ಲ, ಆಡಳಿತಾರೂಢ ಸರಕಾರದ ಅಂಥ ಫರ್ಮಾನುಗಳಿಗೆ ಓಗೊಡಲಾಗುವುದಿಲ್ಲ. 2014ರಿಂದಲೂ ಮಾಡಿಕೊಂಡು ಬಂದಿರುವಂತೆ, ಸಂಸದೀಯ ಸಮಿತಿಗಳನ್ನು ನಿರ್ಲಕ್ಷಿಸುವ ಅಥವಾ ಕಡೆಗಣಿಸುವ ನಡೆಯನ್ನು ಹಾಗೂ ಮಾತನಾಡದಂತೆ ಸಂಸತ್ತನ್ನು ತಡೆಯುವ ಹಾಗೂ ಹತ್ತಿಕ್ಕುವ ಧೋರಣೆಯನ್ನು ಇನ್ನು ಮುಂದೆ ಸಹಿಸಲಾಗುವುದಿಲ್ಲ''.

ನಿಮಗೆ ನೆನಪಿರಬಹುದು, ಸೋನಿಯಾ ಅವರು 1998ರಲ್ಲಿ ಸಕ್ರಿಯ ರಾಜಕಾರಣಕ್ಕೆ ಹೆಜ್ಜೆಯಿಟ್ಟಾಗ, ಅವರ ಆ ಹೆಜ್ಜೆ ಸಾಕಷ್ಟು ಅಬ್ಬರದಿಂದಲೇ ಕೂಡಿತ್ತು- ಅಂದರೆ, ಕಾಂಗ್ರೆಸ್‌ನ ಅಧಿನಾಯಕಿ ಎನಿಸಿಕೊಳ್ಳಲು ಅಂದಿನ ಪಕ್ಷಾಧ್ಯಕ್ಷ ಸೀತಾರಾಮ್ ಕೇಸರಿಯವರನ್ನು ಸೋನಿಯಾ ನಿರ್ದಾಕ್ಷಿಣ್ಯವಾಗಿ ಪದಚ್ಯುತಗೊಳಿಸಿದರು. ರಾಜಕೀಯದಲ್ಲಿನ ಮತ್ತು ಪಕ್ಷದ ಚಟುವಟಿಕೆಗಳಲ್ಲಿನ ಆಕೆಯ ಒಳಗೊಳ್ಳುವಿಕೆ ಮೇಲ್ನೋಟಕ್ಕೆ ಗೋಚರಿಸದಿರಬಹುದು, ಆದರೆ ಪಕ್ಷದ ಮಾರ್ಗದರ್ಶಕಿಯಾಗಿ ಮತ್ತು ತಮ್ಮ ಮಕ್ಕಳ ಭವಿಷ್ಯವನ್ನು ರೂಪಿಸಬೇಕಿರುವ ಓರ್ವ ತಾಯಿಯಾಗಿ ಅವರಿಗಿರುವ ಸರ್ವವ್ಯಾಪಿತ್ವ ಮತ್ತು ಪ್ರಭಾವ ಎದ್ದುಕಾಣುವಂತಿವೆ.

● **ರಾಹುಲ್ ಗಾಂಧಿ:** ಐದು ಅವಧಿಗೆ ಸಂಸದರೆನಿಸಿಕೊಂಡಿರುವ 54ರ ಹರೆಯದ ರಾಹುಲ್ ಗಾಂಧಿಯವರು ನಿರ್ವಹಿಸಿಕೊಂಡು ಬಂದಿರುವ ಪಾತ್ರಗಳು, ನಿಭಾಯಿಸುತ್ತಿರುವ ಹೊಣೆಗಾರಿಕೆಗಳು ಒಂದೆರಡಲ್ಲ. ಒಂದು ಕಾಲಕ್ಕೆ ಪ್ರಮಾಣೀಕೃತ 'ಸ್ಕೂಬಾ ಜಿಗಿತಗಾರ' ಎನಿಸಿಕೊಂಡಿದ್ದ ಅವರು ಹಿಂದೆ ಪಕ್ಷದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಹಾಗೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ, ಪ್ರಸ್ತುತ ಲೋಕಸಭೆಯಲ್ಲಿ ಪ್ರತಿಪಕ್ಷ ನಾಯಕ ಎಂಬ ಹಣೆಪಟ್ಟಿಯನ್ನು ಲಗತ್ತಿಸಿಕೊಂಡಿದ್ದಾರೆ. ಭಾರತಕ್ಕೆ ಒಂದು ಆಮೂಲಾಗ್ರ, ಆರ್ಥಿಕ ಮತ್ತು ಸಾಮಾಜಿಕ ಮಾದರಿಯನ್ನು ಒದಗಿಸಲು ಜನಸಮೂಹದ ಭಾವನೆಗಳನ್ನು ಉತ್ತೇಜಿಸುವ ಆಶಯದೊಂದಿಗೆ ಕ್ರಾಂತಿಕಾರಕವಾಗಿ ಮಾತಾಡುವ, ತನ್ಮೂಲಕ ತಮ್ಮ ರಾಜಕೀಯ ಅಸ್ತಿತ್ವದ ಬೇರುಗಳನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಲು ಹವಣಿಸುತ್ತಿರುವ ನಾಯಕರವರು. ಜಾತಿ-ಆಧಾರಿತ ನೀತಿ ನಿರೂಪಣೆಗಳಿಗೆ ಸತತವಾಗಿ ಮತ್ತು ಪಟ್ಟಾಗಿ ಅಂಟಿಕೊಂಡಿರುವ ಅವರು ವ್ಯಾಪಾರ ಹಾಗೂ ವಾಣಿಜ್ಯೋದ್ಯಮ ವಲಯವು ಯಾವುದೋ ಒಬ್ಬ ವ್ಯಕ್ತಿಯ ಅಥವಾ ಒಂದೇ ಉದ್ಯಮ ಸಮೂಹದ ಬಿಗಿಮುಷ್ಟಿಗೆ ಸೇರಿಕೊಳ್ಳುವುದನ್ನು ವಿರೋಧಿಸಿಕೊಂಡೇ ಬಂದಿದ್ದಾರೆ.

ಬಹುತೇಕರಿಗೆ ಗೊತ್ತಿರುವಂತೆ, ಒಂದಿಡೀ ಭಾರತವನ್ನು ತಲುಪುವ ಆಶಯದೊಂದಿಗೆ ದೇಶದ ದಕ್ಷಿಣದಿಂದ ಉತ್ತರ ಭಾಗಕ್ಕೆ ಮತ್ತು ಪೂರ್ವದಿಂದ ಪಶ್ಚಿಮ ಭಾಗಕ್ಕೆ ಎರಡು ಸುದೀರ್ಘ ಪಾದಯಾತ್ರೆಗಳನ್ನು ಕೈಗೊಂಡ ಮೊಟ್ಟಮೊದಲ ಕಾಂಗ್ರೆಸ್ ನಾಯಕರು ರಾಹುಲ್ ಗಾಂಧಿ. ಇತಿಹಾಸದ ಪುಟದಿಂದ ಹಳೆಯ ನಿದರ್ಶನವೊಂದನ್ನು ಹೆಕ್ಕಿ, ''ನೆಹರು ಮತ್ತು ಇಂದಿರಾ ಗಾಂಧಿಯವರು 'ಟಾಟಾ-ಬಿರ್ಲಾ ಸಾಮ್ರಾಜ್ಯ'ಕ್ಕೆ ಇನ್ನಿಲ್ಲದ ಒತ್ತಾಸೆ ನೀಡಿದರು, ಪ್ರಯೋಜನ ಒದಗಿಸಿಕೊಟ್ಟರು'' ಎಂದೆಲ್ಲಾ ಕೆಲವರು ಆರೋಪಿಸಿದಾಗ, ''ಮೋದಿ ಸರಕಾರವು ಅಂಬಾನಿ-ಅದಾನಿಗಳನ್ನು ಮಾತ್ರವೇ ಪೋಷಿಸುತ್ತಿದೆ'' ಎಂದು ತಿರುಗೇಟು ನೀಡಿದರು ರಾಹುಲ್. ಅವರು ಇತ್ತೀಚೆಗೆ ಅಮೆರಿಕದಲ್ಲಿ 'ನ್ಯಾಷನಲ್ ಪ್ರೆಸ್ ಕ್ಲಬ್' ಅನ್ನು ಉದ್ದೇಶಿಸಿ ಮಾತನಾಡುತ್ತಾ, ''ಭಾರತದಲ್ಲಿನ ಅಗ್ರಗಣ್ಯ 200 ವ್ಯಾಪಾರೋದ್ದಿಮೆಗಳ ಪೈಕಿ, ಭಾರತದ ಜನಸಂಖ್ಯೆಯ ಶೇ.90ರಷ್ಟು ಮಂದಿಗೆ ಹೆಚ್ಚುಕಮ್ಮಿ ಮಾಲೀಕತ್ವವೇ ಇಲ್ಲ. ದೇಶದ ಅತ್ಯುನ್ನತ ನ್ಯಾಯಾಲಯಗಳಲ್ಲಿ ಭಾರತದ ಶೇ.90ರಷ್ಟು ಮಂದಿಗೆ ಬಹುತೇಕವಾಗಿ ಭಾಗಿತ್ವದ ಅವಕಾಶವೇ ಇಲ್ಲ. ಮಾಧ್ಯಮ ವಲಯದಲ್ಲಂತೂ, ಕೆಳಜಾತಿಯವರ, ಒಬಿಸಿಗಳ ಮತ್ತು ದಲಿತರ ಭಾಗಿತ್ವದ ಪ್ರಮಾಣ ಬಹುತೇಕ ಶೂನ್ಯವಾಗಿದೆ'' ಎಂದು ಸಮರ್ಥಿಸಿಕೊಂಡರು.

ಕಾಂಗ್ರೆಸ್‌ನ ಜಾಲತಾಣವು ಅವರ ದೃಷ್ಟಿಕೋನವನ್ನು ಜಾಹೀರುಗೊಳಿಸುವುದು ಹೀಗೆ: ''ಸರಕಾರಗಳು ಉತ್ತರದಾಯಿಗಳಾಗಿರಬೇಕು, ಹೊಣೆಯರಿತು ನಡೆಯಬೇಕು ಹಾಗೂ ಜನರಿಗೆ ಸೇವೆ ಸಲ್ಲಿಸಬೇಕು ಎಂಬುದು ರಾಹುಲರ ನಿಶ್ಚಿತಾಭಿಪ್ರಾಯ. ನೀತಿ ನಿರೂಪಣೆಯ ಪ್ರಕ್ರಿಯೆಯು ಸಂಪನ್ಮೂಲಗಳ ಸಮಾನ ಹಂಚಿಕೆಯ ಮೇಲೆ ಗಮನ ಹರಿಸಬೇಕು; ಅಗಲವಾಗುತ್ತಲೇ ಹೋಗುತ್ತಿರುವ ಆರ್ಥಿಕ ಕಂದಕವನ್ನು ಕುಗ್ಗಿಸಲು, ಸನಿಹಕ್ಕೆ ತರಲು ಅದು ನೆರವಾಗಬೇಕು; ಭಾರತದ ಕೃಷಿಕರು, ಯುವ ಜನರು, ಕಾರ್ಮಿಕರು, ಮಹಿಳೆಯರು ಮತ್ತು ಅವಗಣನೆಗೆ ಒಳಗಾಗಿರುವ ಸಮುದಾಯಗಳಿಗೆ ಅದು ರಕ್ಷಣೆಯನ್ನು ಒದಗಿಸಿ ಸೂಕ್ತ ಅವಕಾಶಗಳನ್ನು ಕಲ್ಪಿಸಬೇಕು ಎಂಬುದು ರಾಹುಲ್ ಗಾಂಧಿಯವರ ಗಾಢನಂಬಿಕೆಯಾಗಿದೆ''.

ತಮ್ಮ ತಾಯಿಯವರು ಯುಪಿಎ ಕೂಟದ ಅಧ್ಯಕ್ಷೆಯಾಗಿರುವವರೆಗೆ, ಈ ಮೈತ್ರಿಕೂಟವನ್ನು ಮುನ್ನಡೆಸುವ ಕಸರತ್ತಿನಿಂದ ರಾಹುಲ್ ದೂರವೇ ಉಳಿಯುತ್ತಾರೆ. ಆದರೆ ಪ್ರಸ್ತುತ ರೂಪುಗೊಳ್ಳುತ್ತಿರುವ 'ರಾಹುಲ್ ಕಾಂಗ್ರೆಸ್'ನಲ್ಲಿ ಅವರ ಆಯ್ಕೆಯವರೇ ಮತ್ತು ಅವರ ಸಿದ್ಧಾಂತಕ್ಕೆ ಓಗೊಡುವವರೇ ಆದ ಅನುಯಾಯಿಗಳು ತುಂಬಿಕೊಂಡುಬಿಟ್ಟಿದ್ದಾರೆ. ಪ್ರಸ್ತುತ ಪ್ರತಿಪಕ್ಷ ನಾಯಕರಾಗಿರುವ ರಾಹುಲರು, ಪ್ರಧಾನಿಯವರನ್ನು ಗುರಿಯಾಗಿಸಿಕೊಂಡಿರುವ ತಮ್ಮ ಪ್ರಚೋದನಕಾರಿ ರಾಜಕೀಯ ವಾಗ್ದಾಳಿಗಳೊಂದಿಗೆ ಸಮರಕ್ಕೆ ಇಳಿಯಲಿದ್ದಾರೆ. ವಿಪಕ್ಷ ನಾಯಕರಾಗಿ ಇನ್ನೂ ನಾಲ್ಕು ವರ್ಷಗಳವರೆಗಿರುವ ಅವರ ಅವಧಿಯನ್ನು ಗಮನದಲ್ಲಿಟ್ಟುಕೊಂಡು ಅವರ ಸಲಹೆಗಾರರು ಈಗಾಗಲೇ ಇದಕ್ಕೆ ಸಂಬಂಧಿಸಿ ಮಾರ್ಗಸೂಚಿಯನ್ನು ರೂಪಿಸಿದ್ದಾರೆ ಎಂಬುದು ಗಮನಾರ್ಹ.

● **ಪ್ರಿಯಾಂಕಾ ಗಾಂಧಿ:** 52ರ ಹರೆಯದ ಓರ್ವ ತಾಯಿಯೂ, ವಿಪಶ್ಯನ ಧ್ಯಾನದ ಅಭ್ಯಾಸಿಯೂ ಆಗಿರುವ ಪ್ರಿಯಾಂಕಾ ಅವರು ವಯನಾಡ್ ಕ್ಷೇತ್ರದಿಂದ ಒಂದೊಮ್ಮೆ ಚುನಾಯಿತರಾದಲ್ಲಿ, ಇದೇ ಮೊದಲ ಬಾರಿಗೆ ಲೋಕಸಭೆಯನ್ನು ಪ್ರವೇಶಿಸಲಿದ್ದಾರೆ; ಇದು ಅವರ ಸೋದರ ರಾಹುಲರೇ ಬಿಟ್ಟುಕೊಟ್ಟ ಸ್ಥಾನವಾಗಿದೆ ಮತ್ತು ಒಂದು ಸುರಕ್ಷಿತ 'ರಾಜಕೀಯ ಚಿಮ್ಮುಹಲಗೆ'ಯೂ ಆಗಿದೆ ಎಂಬುದು ನಿಮಗೆ ಗೊತ್ತಿರುವಂಥದ್ದೇ. ತಾಯಿ ಸೋನಿಯಾರ 'ರಾಜಕೀಯ ಆತ್ಮಸಾಕ್ಷಿಯ ಪಾಲಕಿ' ಎಂದೇ ಈಗಾಗಲೇ ಬಿಂಬಿಸಲ್ಪಟ್ಟಿರುವ ಪ್ರಿಯಾಂಕಾ ಅವರು, ಪಕ್ಷದ ಪಾಲಿಗೆ ಒಂದು 'ನವಿರು ಮುಖವಾಣಿ' ಎನಿಸಿಕೊಳ್ಳಲಿದ್ದಾರೆ. ಸೋನಿಯಾರ ನಂತರ ಪಕ್ಷವು ಅವರನ್ನು ತನ್ನ 'ಮಹಿಳಾ ಮುಖ'ವಾಗಿ ಪ್ರವರ್ತಿಸಿ ಪ್ರಚಾರ ಮಾಡುವುದಂತೂ ಖರೆ!

ಇದುವರೆಗೆ ಪ್ರಿಯಾಂಕಾ ಅವರು ಪಕ್ಷದ ಯಾವುದೇ ಬಣದೊಂದಿಗೆ ಗುರುತಿಸಿಕೊಳ್ಳುವ ಪರಿಪಾಠದಿಂದ ದೂರವೇ ಉಳಿದಿದ್ದಾರೆ. ತಮ್ಮ ಸೋದರ ರಾಹುಲ್‌ರನ್ನು ಸಮರ್ಥಿಸಿಕೊಳ್ಳುವ ಅಥವಾ ಮೋದಿಯವರನ್ನು ಎದುರಿಸುವ ವಿಷಯದಲ್ಲಿ ಆಕೆ ತೀವ್ರ ಆಕ್ರಮಣಕಾರಿಯಾಗಿರುವುದರಿಂದ, ಮೋದಿಯವರ ಮೇಲಿನ ರಾಹುಲರ ವಾಗ್ದಾಳಿಗಳನ್ನು ಮತ್ತಷ್ಟು ವರ್ಧಿಸುವುದು ಅವರ ಪ್ರಮುಖ ಕಾರ್ಯಸೂಚಿಯಾಗಿದೆ ಎನ್ನಲಡ್ಡಿಯಿಲ್ಲ. ಮೋದಿಯವರು ರಾಹುಲರನ್ನು 'ಶಹಜಾದಾ' (ರಾಜಕುಮಾರ) ಎಂದು ಕರೆದಾಗ, ಗುಜರಾತ್‌ನಲ್ಲಿ ನಡೆದ ಚುನಾವಣಾ ರ್‍ಯಾಲಿಯೊಂದರಲ್ಲಿ ಆಕೆ ಮೋದಿಯವರಿಗೆ ತಿರುಗೇಟು ನೀಡಿದ ಪರಿ ಹೀಗಿತ್ತು: ''ಮೋದಿಯವರು ನನ್ನ ಸೋದರನನ್ನು 'ಶಹಜಾದಾ' ಎಂದೇನೋ ಕರೆದಿದ್ದಾರೆ. ಆದರೆ, ಜನರ ಸಮಸ್ಯೆಗಳನ್ನು ಆಲಿಸಲೆಂದೇ ಈ ಶಹಜಾದಾ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ 4,000 ಕಿ.ಮೀ. ಅಂತರವನ್ನು ಕಾಲ್ನಡಿಗೆಯಲ್ಲೇ ಕ್ರಮಿಸಿದ ಎಂಬುದನ್ನು ಅವರಿಗೆ ತಿಳಿಸಬಯಸುತ್ತೇನೆ. ದೇಶದ ಉದ್ದಗಲಕ್ಕೂ ಇರುವ ನನ್ನ ಸೋದರ-ಸೋದರಿಯರು, ರೈತರು ಮತ್ತು ಕಾರ್ಮಿಕರನ್ನು ಅವನು ಮುಖತಃ ಭೇಟಿಯಾಗಿ ಅವರ ಸಮಸ್ಯೆಗಳೇನು ಎಂಬುದನ್ನು ಕೇಳಿದ. ಆದರೆ ಮತ್ತೊಂದೆಡೆ ಜನರ 'ಶಹೆನ್‌ಷಾ' ಆಗಿರುವ ಮತ್ತು ಅರಮನೆಯಲ್ಲಿ ನೆಲೆಸಿರುವ ನರೇಂದ್ರ ಮೋದಿಯವರು ಮಾಡಿದ್ದೇನು? ನೀವು ಅವರನ್ನು ಟಿವಿಯಲ್ಲಿ ವೀಕ್ಷಿಸಿರಬಹುದು, ಅವರ ಮುಖದ ಮೇಲೆ ಒಂದೇ ಒಂದು ಧೂಳಿನ ಕಣವೂ ಕಾಣುವುದಿಲ್ಲ. ಹೀಗಿರುವಾಗ, ನಿಮ್ಮಂಥ ಜನರ ಸಮಸ್ಯೆಗಳನ್ನು ಅವರು ಹೇಗೆ ತಾನೇ ಅರ್ಥಮಾಡಿಕೊಳ್ಳಬಲ್ಲರು...?''

ಒಂದೊಮ್ಮೆ, ವಯನಾಡು ಉಪಚುನಾವಣೆಯಲ್ಲಿ ಗೆದ್ದ ಮಾತ್ರಕ್ಕೆ ಆಕೆಗೆ ವಿಪಕ್ಷಗಳ ಬೆಂಚುಗಳ ಮುಂದಿನ ಸಾಲಿನಲ್ಲೇ ಒಂದು ಸ್ಥಾನ ಸಿಗದಿರಬಹುದು, ಆದರೆ ಸದನದಲ್ಲಿ ತನ್ನ ಸೋದರ ನೀಡಿದ ಸಂದೇಶಗಳು ಮತ್ತು ಉಪದೇಶಗಳನ್ನು ಮತ್ತಷ್ಟು ವರ್ಧಿಸುವುದು ಮಾತ್ರವೇ ಆಕೆಯ ಉದ್ದೇಶವಾಗಿರುತ್ತದೆ ಎಂಬುದಂತೂ ಸತ್ಯ.

'ಚುನಾವಣೆ ಮತ್ತು ಕಾನೂನು ಸಂಘರ್ಷದ ಯುದ್ಧಭೂಮಿಗಳಲ್ಲಿ ರಾಜಕೀಯದ ಕೆಸರನ್ನು ಮೆತ್ತಿಕೊಂಡಿರುವ ದೆಹಲಿಯ ಲ್ಯುಟೆನ್ಸ್ ಪ್ರದೇಶದ ಯೋಧರು' ಎಂಬ ಹಣೆಪಟ್ಟಿಯು ಗಾಂಧಿ ಕುಟುಂಬಿಕರಿಗೆ ಈಗಾಗಲೇ ತಗುಲಿಕೊಂಡಿದೆ. ಈ 'ಗಾಂಧಿ ತ್ರಿಮೂರ್ತಿ'ಗಳ ಮೇಲೆ ಮಾತಿನ ಸಮರವನ್ನೇ ಸಾರಿರುವ ಮೋದಿಯವರು, ಅವರ ವಿರುದ್ಧ ಪರಿಣಾಮಕಾರಿ ಅಸ್ತ್ರಗಳನ್ನೇ ಪ್ರಯೋಗಿಸುತ್ತಾರೆ ಎಂಬುದಂತೂ ಖರೆ. ಒಟ್ಟಾರೆ ಹೇಳುವುದಾದರೆ, ಸಂಸತ್ತಿನಲ್ಲಿ ಕೇವಲ ಮೋದಿಯವರ ವಿರುದ್ಧವೇ ಈ ತ್ರಿಮೂರ್ತಿಗಳ ವಾಗ್ದಾಳಿ ಮತ್ತು ಹೋರಾಟ ನಡೆಯುವುದಂತೂ ಹೌದು. 'ಒಂದು ಸಿದ್ಧಾಂತಕ್ಕೆ ಎದುರಾಗಿ ಮತ್ತೊಂದು ಪರ್ಯಾಯ ಸಿದ್ಧಾಂತ' ಎಂಬ ಕಾಲವೆಲ್ಲ ಹೊರಟುಹೋಗಿದೆ, ಈಗೇನಿದ್ದರೂ ಮೋದಿ ಎಂಬ ಏಕವ್ಯಕ್ತಿಯ ವಿರುದ್ಧ ಈ ಗಾಂಧಿ ತ್ರಿಮೂರ್ತಿಗಳ ಸಂಘರ್ಷಕ್ಕೆ ಕಾಲ.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:9, Issue: 334

ಸಮಾಚಾರ ಸಣ್ಣದಲ್ಲ

ಜಲಾಂತರ್ಗಾಮಿ ದೋಣಿ ಡಿಕ್ಕಿ: ಇಬ್ಬರ ಕಣ್ಮರೆ

ದೆಹಲಿ: ಹದಿಮೂರು ಮಂದಿ ಸಿಬ್ಬಂದಿಗಳಿದ್ದ ಗೋವಾ ಮೀನುಗಾರಿಕಾ ದೋಣಿಯೊಂದು ಭಾರತೀಯ ನೌಕಾಪಡೆಯ ಜಲಾಂತರ್ಗಾಮಿಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ದೋಣಿಯಲ್ಲಿದ್ದ ಇಬ್ಬರು ಮೀನುಗಾರರು ನಿಗೂಢವಾಗಿ ಕಣ್ಮರೆಯಾಗಿದ್ದಾರೆ ಎಂದು ರಕ್ಷಣಾ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಭಾರತೀಯ ನೌಕಪಡೆಯು ತನ್ನ ಆರು ಹಡಗುಗಳು ಮತ್ತು ವಿಮಾನಗಳನ್ನು ಬೃಹತ್ ಶೋಧ ಹಾಗೂ ರಕ್ಷಣಾ ಕಾರ್ಯಾಚರಣೆಗೆಂದು ನಿಯೋಜಿಸಲಾಗಿದೆ. ಈ ವರೆಗೂ 11 ಸಿಬ್ಬಂದಿಗಳನ್ನು ರಕ್ಷಿಸಲಾಗಿದ್ದು, ಇನ್ನುಳಿದ ಇಬ್ಬರು ಮೀನುಗಾರಿಕಾ ಸಿಬ್ಬಂದಿಗಳು ನಾಪತ್ತೆಯಾಗಿದ್ದು, ಅವರಿಗಾಗಿ ಶೋಧ ಕಾರ್ಯಾಚರಣೆ ಮುಂದುವರೆದಿದೆ. ಗೋವಾ ಕರಾವಳಿಯಿಂದ 70 ನಾಟಿಕಲ್ ಮೈಲು ದೂರದಲ್ಲಿ ಸ್ಕಾರ್ಪೀನ್ ದರ್ಜೆಯ ಸಬ್ ಮೆರಿನ್ ನೌಕೆಗೆ ಮೀನುಗಾರಿಕಾ ದೋಣಿ ಡಿಕ್ಕಿ ಹೊಡೆದಿದೆ ಎಂದು ರಕ್ಷಣಾ ಸಚಿವಾಲಯವು ತನ್ನ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಅಫ್ಘನ್ ಗುಂಡಿನ ದಾಳಿಗೆ 10 ಬಲಿ

ಕಾಬುಲ್: ಅಫ್ಘಾನಿಸ್ತಾನದ ಉತ್ತರ ಭಾಗದ ಬಘ್ಲನ್ ಪ್ರಾಂತ್ಯದ ಸೂಫಿ ಮಸೀದಿಯೊಂದರಲ್ಲಿ ಬಂದೂಕುಧಾರಿಯೊಬ್ಬ ನಡೆಸಿದ ದಾಳಿಯಲ್ಲಿ ಕನಿಷ್ಠ 10 ಮಂದಿ ಸಾವಿಗೀಡಾಗಿದ್ದಾರೆ ಎಂದು ಆಂತರಿಕ ಸಚಿವಾಲಯದ ವಕ್ತಾರ ಮತೀನ್ ಖೈನಿ ಶುಕ್ರವಾರ ಹೇಳಿದ್ದಾರೆ. ದಾಳಿಯ ಹಿಂದೆ ಯಾರ ಕೈವಾಡ ಇದೆ ಎನ್ನುವುದು ತಿಳಿದುಬಂದಿಲ್ಲ.

ವಿಂಡೀಸ್ ಆಟಗಾರರ ಭೇಟಿ ಮಾಡಿದ ಮೋದಿ

ಜಾರ್ಜ್‌ಟೌನ್ (ಗಯಾನಾ): ಪ್ರಧಾನಿ ನರೇಂದ್ರ ಮೋದಿ ಅವರು ವೆಸ್ಟ್ ಇಂಡೀಸ್‌ನ ಪ್ರಮುಖ ಕ್ರಿಕೆಟ್ ಆಟಗಾರರನ್ನು ಜಾರ್ಜ್‌ಟೌನ್‌ನಲ್ಲಿ ಗುರುವಾರ ಭೇಟಿ ಮಾಡಿದರು. ಪ್ರಧಾನಿ ಮೋದಿ ಬುಧವಾರ ಗಯಾನಕ್ಕೆ ಭೇಟಿ ನೀಡಿದ್ದಾರೆ. ಇದರೊಂದಿಗೆ 50 ವರ್ಷಗಳಲ್ಲಿ ಭಾರತದ ಪ್ರಧಾನಿಯೊಬ್ಬರು ಇದೇ ಮೊದಲ ಬಾರಿಗೆ ಇಲ್ಲಿಗೆ ಭೇಟಿ ನೀಡಿದಂತಾಗಿದೆ. ಗಯಾನಾದ ಅಧ್ಯಕ್ಷ ಇರ್ಫಾನ್ ಆಲಿ ಅವರೊಂದಿಗೆ ಕ್ರಿಕೆಟ್ ಆಟಗಾರರನ್ನು ಭೇಟಿ ಮಾಡಿದರು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಎಕ್ಸ್‌ನಲ್ಲಿ ತಿಳಿಸಿ ಫೋಟೋಗಳನ್ನು ಹಂಚಿಕೊಂಡಿದೆ.

ಗುಂಡು ತಗುಲಿ ಭಾರತೀಯ ಸಾವು

ವಾಷಿಂಗ್ಟನ್: ಸ್ನೇಹಿತರ ಜೊತೆ ಹುಟ್ಟುಹಬ್ಬ ಆಚರಿಸುವಾಗ ಆಕಸ್ಮಿಕವಾಗಿ ಗುಂಡು ತಗುಲಿ ಭಾರತೀಯ ಮೂಲದ ವಿದ್ಯಾರ್ಥಿ ಮೃತಪಟ್ಟಿದ್ದಾನೆ. ಮೃತ ವಿದ್ಯಾರ್ಥಿಯನ್ನು ಆರ್ಯನ್ ರೆಡ್ಡಿ (23) ಎಂದು ಗುರುತಿಸಲಾಗಿದೆ. ಅಟ್ಲಾಂಟಾದ ಜಾರ್ಜಿಯಾದಲ್ಲಿರುವ ಆರ್ಯನ್ ಮನೆಯಲ್ಲಿ ಈ ಘಟನೆ ನಡೆದಿದೆ ಎಂದು ಅಮೆರಿಕ ಪೊಲೀಸರು ತಿಳಿಸಿದ್ದಾರೆ. ಜನ್ಮದಿನದ ಸಂಭ್ರಮಾಚರಣೆ ವೇಳೆ ರೈಫಲ್ ಅನ್ನು ಸ್ವಚ್ಛ ಮಾಡುವಾಗ ಈ ಘಟನೆ ಸಂಭವಿಸಿದೆ ಎಂದು ಆರ್ಯನ್ ಗೆಳೆಯರು ತಿಳಿಸಿದ್ದಾರೆ. ತಕ್ಷಣಕ್ಕೆ ಆಸ್ಪತ್ರೆಗೆ ಕರೆದೊಯ್ಯದರು ಬದುಕುಳಿಯಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ. ಅಟ್ಲಾಂಟಾದ ವಿಶ್ವವಿದ್ಯಾಲಯವೊಂದರಲ್ಲಿ ಆರ್ಯನ್ ಎಂಎಸ್ (ಮಾಸ್ಟರ್ ಆಫ್ ಸೈನ್ಸ್) ಮಾಡುತ್ತಿದ್ದರು. ಅವರು ಎರಡನೇ ವರ್ಷದ ವಿದ್ಯಾರ್ಥಿಯಾಗಿದ್ದರು. ಆರ್ಯನ್ ರೆಡ್ಡಿ ತೆಲಂಗಾಣ ರಾಜ್ಯದ ಭುವನಗಿರಿ ಜಿಲ್ಲೆಯವರು ಎಂದು ಪೊಲೀಸರು ತಿಳಿಸಿದ್ದಾರೆ.

ರಾಹುಲ್, ಖರ್ಗೆ ವಿರುದ್ಧ ಮಾನನಷ್ಟ ಖಟ್ಲೆ

ಮುಂಬೈ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ವೇಳೆ ಹಣ ಹಂಚಲಾಗಿದೆ ಎಂದು ತಮ್ಮ ವಿರುದ್ಧ ಆರೋಪ ಮಾಡಿದ್ದ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರಿಗೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ 100 ಕೋಟಿ ರೂ. ಮಾನನಷ್ಟ ಮೊಕದ್ದಮೆಯ ನೋಟಿಸ್ ಕಳುಹಿಸಿದ್ದಾರೆ. ಅಲ್ಲದೆ ಕಾಂಗ್ರೆಸ್ ನಾಯಕರು ತಮ್ಮ ಬಳಿ ಕ್ಷಮೆಯಾಚಿಸಬೇಕೆಂದು ಬಿಜೆಪಿ ಮುಖಂಡ ಆಗ್ರಹಿಸಿದ್ದಾರೆ. ತಾನು ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಿಂದ ಬಂದಿದ್ದೇನೆ, ಕಳೆದ 40 ವರ್ಷಗಳಿಂದ ರಾಜಕೀಯದಲ್ಲಿ ಇದ್ದೇನೆ, ಆದರೆ ನಾನು ಎಂದಿಗೂ ಈ ರೀತಿ ಮಾಡಿಲ್ಲ, ಕಾಂಗ್ರೆಸ್ ನಾಯಕರು ನನಗೆ, ಪಕ್ಷಕ್ಕೆ ಮತ್ತು ನನ್ನ ನಾಯಕರಿಗೆ ಮಾನಹಾನಿ ಮಾಡಲು ಬಯಸಿದ್ದಾರೆ. ಆದ್ದರಿಂದ ಅವರು ಉದ್ದೇಶಪೂರ್ವಕವಾಗಿ ಮಾಧ್ಯಮಗಳು ಮತ್ತು ಜನರ ಮುಂದೆ ಈ ಸುಳ್ಳನ್ನು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಮೇಲೆ 100 ಕೋಟಿ ರೂ. ಗಳ ಮಾನನಷ್ಟ ಮೊಕದ್ದಮೆ ಕೇಸ್ ಹಾಕಿದ್ದೇನೆ ಎಂದು ವಿನೋದ್ ತಾವ್ಡೆ ಹೇಳಿಕೊಂಡಿದ್ದಾರೆ.

{ಕೆ.ಟಿ.ರಾಮರಾವ್} ಬಿಆರ್‌ಎಸ್ ಕಾರ್ಯಾಧ್ಯಕ್ಷ

ಕಾಂಗ್ರೆಸ್ ಆಡಳಿತವಿರುವ ತೆಲಂಗಾಣವು ಅದಾನಿ ಗ್ರೂಪ್ ಜತೆ ಮಾಡಿಕೊಂಡಿರುವ ಒಪ್ಪಂದಗಳನ್ನು ರದ್ದುಗೊಳಿಸುತ್ತದೆಯೇ? ಈ ನಿಟ್ಟಿನಲ್ಲಿ ತೆಲಂಗಾಣ ಸರಕಾರಕ್ಕೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೂಚಿಸುವರೇ? ಉದ್ಯಮಿ ಗೌತಮ್ ಅದಾನಿ ವಿಷಯದಲ್ಲಿ ಕಾಂಗ್ರೆಸ್ ಇಬ್ಬಗೆ ನೀತಿ ಅನುಸರಿಸುತ್ತಿದೆ

ವಿಶ್ವ ನಾಯಕರ ಜತೆ ಮೋದಿ: ನೈಜೀರಿಯಾ, ಗಯಾನಾದಲ್ಲಿ ನಾಗರಿಕ ಪ್ರಶಸ್ತಿ ಸ್ವೀಕಾರ

5 ದಿನಗಳ ಪ್ರವಾಸ, 31 ನಾಯಕರ ಭೇಟಿ

ಬ್ರೆಜಿಲ್: ಜಿ-20 ಶೃಂಗಸಭೆ ಸೇರಿ 3 ದೇಶಗಳ ವಿದೇಶಿ ಪ್ರವಾಸ ಮಾಡಿದ ಪ್ರಧಾನಿ ಮೋದಿ ಬರೋಬ್ಬರಿ 31 ವಿಶ್ವನಾಯಕರ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಈ ಮೂಲಕ ಅತ್ಯಲ್ಪ ಅವಧಿಯಲ್ಲಿ ಅತೀ ಹೆಚ್ಚು ದ್ವಿಪಕ್ಷೀಯ ಸಭೆ ಹಾಗೂ ಒಪ್ಪಂದಗಳ ಚರ್ಚಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಬ್ರೆಜಿಲ್‌ನಲ್ಲಿ ನಡೆದ ಜಿ-20 ಶೃಂಗಸಭೆಯಲ್ಲಿ ಪಾಲ್ಗೊಂಡ ಪ್ರಧಾನಿ ನರೇಂದ್ರ ಮೋದಿ ನೈಜೀರಿಯಾ ಹಾಗೂ ಗಯಾನಾ ದೇಶಗಳಿಗೆ ಭೇಟಿ ನೀಡಿ ಮಹತ್ವದ ಮಾತುಕತೆ ನಡೆಸಿದ್ದಾರೆ. 3 ದೇಶಗಳಿಗೆ ಒಟ್ಟು 5 ದಿನಗಳ ಪ್ರವಾಸದಲ್ಲಿ ಮೋದಿ ಬರೋಬ್ಬರಿ 31 ದೇಶದ ನಾಯಕರ ಜೊತೆಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಈ ಪೈಕಿ ಬ್ರೆಜಿಲ್‌ನ ಜಿ-20 ಶೃಂಗಸಭೆಯಲ್ಲಿ ಬರೋಬ್ಬರಿ 10 ವಿಶ್ವನಾಯಕರ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

ಬ್ರೆಜಿಲ್‌ನಲ್ಲಿ ನಡೆದ ಜಿ 20 ಶೃಂಗಸಭೆಯಲ್ಲಿ ಪ್ರಧಾನಿ ಮೋದಿ, ರಕ್ಷಣೆ, ಗಡಿ ರಕ್ಷಣೆ, ವ್ಯಾಪಾರ ವಹಿವಾಟು, ಆರೋಗ್ಯ, ತಂತ್ರಜ್ಞಾನ ಸೇರಿದಂತೆ ಹಲವು ವಿಚಾರಗಳ ಕುರಿತು ಚರ್ಚಿಸಿದ್ದಾರೆ. ಇದೇ ವೇಳೆ 10 ವಿಶ್ವನಾಯಕರ ಜೊತೆಗೂ ದ್ವಿಪಕ್ಷೀಯ ಮಾತುಕತೆ ನಡೆಸಿ ಗಮನಸೆಳೆದಿದ್ದಾರೆ. ಅದೇ ಸಭೆಯಲ್ಲಿ ಬ್ರಿಟನ್ ಪ್ರಧಾನಿ ಕೈರ್ ಸ್ಟಾರ್ಮರ್ ಜತೆಗೂ ಮಾತುಕತೆ ನಡೆಸಿದ್ದಾರೆ

ಇತರ ವಿಶ್ವನಾಯಕರ ಪೈಕಿ ಇಂಡೋನೇಷ್ಯಾ ಪ್ರೆಸಿಡೆಂಟ್ ಪ್ರಬೊವೊ ಸುಬಿಯಾಂಟೊ, ಪೋರ್ಚುಗಲ್ ಪ್ರೈಮ್ ಮಿನಿಸ್ಟರ್ ಲೂಯಿಸ್ ಮೊಂಟೆನೆಗ್ರೊ, ಚಿಲಿ ಪ್ರೆಸಿಡೆಂಟ್ ಗೇಬ್ರಿಯಲ್ ಬೋರಿಕ್ ಮತ್ತು ಅರ್ಜೆಂಟೀನಾ ಪ್ರೆಸಿಡೆಂಟ್ ಜೇವಿಯರ್ ಮೈಲಿ ಜೊತೆಗೆ ಮೊದಲ ಬಾರಿಗೆ ಪ್ರಧಾನಿ ಮೋದಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

ಅಮೆರಿಕ, ಆಸ್ಟ್ರೇಲಿಯಾ ಸೇರಿದಂತೆ ಜಿ-20 ಸಭೆಗೆ ಆಗಮಿಸಿದ ಪ್ರಮುಖ ನಾಯಕರ ಜೊತೆಗೂ ಪ್ರಧಾನಿ ಮೋದಿ ಔಪಚಾರಿಕ ಮಾತುಕತೆ ನಡೆಸಿದ್ದಾರೆ. ಕೆಲ ರಾಷ್ಟ್ರಗಳ ಜೊತೆ ಅಧಿಕೃತ ದ್ವಿಪಕ್ಷೀಯ ಮಾತುಕತೆ ನಡೆಸಿದರೆ, ಸಿಂಗಾಪುರ, ಸೌತ್ ಕೊರಿಯಾ, ಈಜಿಪ್ಟ್, ಅಮೇರಿಕಾ ಮತ್ತು ಸ್ಪೇನ್ ನಾಯಕರ ಜೊತೆ ಔಪಚಾರಿಕ ಮಾತುಕತೆ ನಡೆಸಿದ್ದಾರೆ. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಜೊತೆ ನಡೆಸಿದ ಸಭೆಯಲ್ಲಿ ಭಾರತ ಹಾಗೂ ಇಟಲಿ ನಡುವೆ ಬಾಹ್ಯಾಕಾಶ, ಇಂಧನ ಹಾಗೂ ಕೃತಕ ಬುದ್ಧಿಮತ್ತೆ, ಗುಪ್ತಚರ ಸಹಕಾರದ ಮಾತುಕತೆ ನಡೆಸಿದ್ದಾರೆ. ಯುರೋಪಿಯನ್ ಯೂನಿಯನ್‌ನ ಉರ್ಸುಲಾ ವಾನ್ ಡೆರ್ ಲೇಯೆನ್, ವಿಶ್ವಸಂಸ್ಥೆಯ ಅಂಟೋನಿಯೊ ಗುಟೆರೆಸ್, ವರ್ಲ್ಡ್ ಟ್ರೇಡ್ ಆರ್ಗನೈಸೇಶನ್‌ನ ನ್ಗೋಜಿ ಒಕೊಂಜೊ-ಇವೆಲಾ, ವರ್ಲ್ಡ್ ಹೆಲ್ತ್ ಆರ್ಗನೈಸೇಶನ್‌ನ ಟೆಡ್ರೋಸ್ ಅದನೊಮ್ ಘೆಬ್ರೆಯೆಸಸ್, ಐಎಂಎಫ್‌ನ ಕ್ರಿಸ್ಟಲಿನಾ ಜಾರ್ಜೀವಾ ಮತ್ತು ಐಎಂಎಫ್ ಸಲಹೆಗಾರ್ತಿ, ಕರ್ನಾಟಕದ ಗೀತಾ ಗೋಪಿನಾಥ್ ಜೊತೆಗೂ ಸಭೆ ನಡೆಸಿದ್ದಾರೆ.

ಗಯಾನಾಗೆ ತೆರಳಿದ ಮೋದಿ, ಅಲ್ಲಿನ ಅಧ್ಯಕ್ಷರ ಡಾ. ಇರ್ಫಾನ್ ಅಲಿ ಜೊತೆ ಚರ್ಚಿಸಿದ್ದಾರೆ. ಬಳಿಕ ಸೈಂಟ್ ಲೂಸಿಕಾ ಪ್ರಧಾನಿ ಫಿಲಿಪ್ ಜೆ ಪಿಯೆರಾ ಜೊತೆ ಮೆಡಿಕಲ್ ಫಾರ್ಮಾ, ಇಂಧನ, ಆರೋಗ್ಯ ಕ್ಷೇತ್ರಗಳ ಕರಿತು ವಹಿವಾಟು ಗಟ್ಟಿಗೊಳಿಸಲು ಮಾತುಕತೆ ನಡೆಸಿದ್ದಾರೆ. ಗಯಾನದಲ್ಲಿ ಪ್ರಧಾನಿ ಮೋದಿ ಡೊಮಿನಿಕಾ, ಬಹಾಮಾಸ್, ಟ್ರಿನಿಡಾಡ್ ಮತ್ತು ಟೊಬ್ಯಾಗೊ, ಸುರಿನಾಮ್, ಬಾರ್ಬಡೋಸ್, ಆಂಟಿಗುವಾ ಮತ್ತು ಬಾರ್ಬುಡಾ, ಗ್ರೆನಡಾ ಮತ್ತು ಸೇಂಟ್ ಲೂಸಿಯಾ ಲೀಡರ್ಸ್ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ.

5 ದಿನಗಳ ಭೇಟಿಯ ವೇಳೆ ಮೋದಿ ನಾಲ್ಕು ರಾಷ್ಟ್ರಗಳ ನಾಗರಿಕ ಪ್ರಶಸ್ತಿಯನ್ನೂ ಸ್ವೀಕರಿಸಿದ್ದಾರೆ.

ಕೀನ್ಯಾ ದೇಶದ ಜೊತೆಗೆ ಮಾಡಿದ್ದ ಒಪ್ಪಂದ ರದ್ದು

ಅದಾನಿಗೆ ಮತ್ತೊಂದು ಶಾಕ್

ಮುಂಬೈ: ಸೌರಶಕ್ತಿ ಗುತ್ತಿಗೆಗಳನ್ನು ಪಡೆಯಲು ಭಾರತೀಯ ಅಧಿಕಾರಿಗಳಿಗೆ ದೊಡ್ಡ ಮೊತ್ತದ ಲಂಚ ನೀಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ನ್ಯೂಯಾರ್ಕ್‌ನ ಡಿಸ್ಟ್ರಿಕ್ಟ್ ಕೋರ್ಟ್ ಅರೆಸ್ಟ್ ವಾರೆಂಟ್ ಆದೇಶ ಹೊರಡಿಸಿದ ಬೆನ್ನಲ್ಲೇ ದೇಶದ ಪ್ರಮುಖ ಉದ್ಯಮಿ ಗೌತಮ್ ಅದಾನಿ ಅವರಿಗೆ ಮತ್ತೊಂದು ಸಂಕಷ್ಟ ಶುರುವಾಗಿದೆ. ಕೀನ್ಯಾದ ಅಧ್ಯಕ್ಷ ವಿಲಿಯಂ ರುಟೊ ಅವರು ಅದಾನಿ ಕಂಪನಿ ಕೀನ್ಯಾ ದೇಶದ ಜೊತೆಗೆ ಮಾಡಿಕೊಂಡಿದ್ದ ಎರಡು ಒಪ್ಪಂದಗಳನ್ನು ರದ್ದುಪಡಿಸುವುದಾಗಿ ಘೋಷಿಸಿದ್ದಾರೆ.

ಸೌರಶಕ್ತಿ ಉದ್ಯಮದಲ್ಲಿ ಗೌತಮ್ ಅದಾನಿ ಅವರದು ಪ್ರಪಂಚದಲ್ಲೇ ಪ್ರಮುಖ ಹೆಸರು. ಆದರೀಗ ಅದೇ ಸೌರಶಕ್ತಿ ಉದ್ಯಮಕ್ಕೆ ಸಂಬಂಧಿಸಿದ ಪ್ರಕರಣವೊಂದು ಅದಾನಿ ಅವರಿಗೆ ಏಟಿನ ಮೇಲೆ ಏಟುಗಳು ಬೀಳತೊಡಗಿವೆ. ಅಮೆರಿಕಾದ ಕೋರ್ಟ್ ಬೃಹತ್ ಮೊತ್ತದ ಲಂಚ ನೀಡಿ ಸೌರ ಶಕ್ತಿಗಳ ಗುತ್ತಿಗೆ ಪಡೆದಿದ್ದಾರೆ ಎಂದು ಅದಾನಿ ಸೇರಿದಂತೆ ಎಂಟು ಜನರ ವಿರುದ್ಧ ದೋಷಾರೋಪಣೆ ಮಾಡಿದೆ. ಈ ಬೆಳವಣಿಗೆ ಬೆನ್ನಲ್ಲೇ ಕೀನ್ಯಾ ದೇಶವು ಕೂಡ ಅದಾನಿ ಗ್ರೂಪ್ ಜೊತೆ ಮಾಡಿಕೊಂಡಿದ್ದ ಒಡಂಬಡಿಕೆಯನ್ನು ರದ್ದು ಮಾಡುವುದಾಗಿ ಘೋಷಿಸಿದೆ. ಅದಾನಿ ಗ್ರೀನ್ ಎನರ್ಜಿ ಮತ್ತು ಅಜುರೆ ಪವರ್ ಸಂಸ್ಥೆಗಳು ಭಾರತದಲ್ಲಿ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ದರದಲ್ಲಿ ಸೌರಶಕ್ತಿ ಗುತ್ತಿಗೆಗಳನ್ನು ಪಡೆಯಲು ಭಾರತೀಯ ಅಧಿಕಾರಿಗಳಿಗೆ ಸುಮಾರು 250 ಮಿಲಿ ಯನ್ ಡಾಲರ್ ಗೂ ಹೆಚ್ಚು ರೂಪಾಯಿಗಳ ಲಂಚ ನೀಡಿವೆ ಎಂದು ಆರೋಪಿಸಲಾಗಿದೆ. 2020- 2024ರ ಅವಧಿಯಲ್ಲಿ ಇಷ್ಟು ದೊಡ್ಡ ಮೊತ್ತದ ಲಂಚ ನೀಡಲಾಗಿದೆ ಎಂದು ಯುಎಸ್ ಡಿಪಾರ್ಟ್‌ಮೆಂಟ್ ಆಫ್ ಜಸ್ಟೀಸ್ ಮತ್ತು ಸೆಕ್ಯೂರಿಟಿ ಅಂಡ್ ಎಕ್ಸ್‌ಚೇಂಜ್ ಕಮಿಷನ್ (ಎಸ್ಇಸಿ) ಆರೋಪಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯೂಯಾರ್ಕ್‌ನ ಡಿಸ್ಟ್ರಿಕ್ಟ್ ಕೋರ್ಟ್ ಅದಾನಿ ಸೇರಿದಂತೆ 8 ಜನರ ವಿರುದ್ಧ ಅರೆಸ್ಟ್ ವಾರೆಂಟ್ ಹೊರಡಿಸಿದೆ.

ಗಾಯದ ಮೇಲೆ ಬರೆ

ಹಿಂಡೆನ್‌ಬರ್ಗ್ ರಿಸರ್ಚ್ ಹೆಸರಿನ ಅಮೇರಿಕ ಮೂಲದ ಹೂಡಿಕೆ ಸಂಶೋಧನಾ ಸಂಸ್ಥೆ ಎರಡು ವರ್ಷಗಳ ಕಾಲ ಅದಾನಿ ಗ್ರೂಪಿನ ವ್ಯವಹಾರಗಳ ಬಗ್ಗೆ ರಿಸರ್ಚ್ ಮಾಡಿ ವರದಿ ಪ್ರಕಟಿಸಿತು. ಅದಾನಿ ಗ್ರೂಪ್ ಸ್ಟಾಕ್ ಮ್ಯಾನಿಪ್ಯುಲೇಷನ್ ಮತ್ತು ಲೆಕ್ಕಪತ್ರ ವಂಚನೆ ಯೋಜನೆಯಲ್ಲಿ ತೊಡಗಿದೆ' ಎಂಬ ವಿಸ್ತಾರವಾದ ಹಿಂಡೆನ್‌ಬರ್ಗ್ ವರದಿ ಪ್ರಕಟವಾಗುತ್ತಿದ್ದಂತೆ ಅದಾನಿ ಗ್ರೂಪ್ ಷೇರುಗಳು ತೀವ್ರವಾಗಿ ಕುಸಿದಿದ್ದವು.

ಉತ್ಖನನ ಕೋರಿದ ಅರ್ಜಿಗೆ ಪ್ರತಿಕ್ರಿಯೆ ನೀಡಲು ಗಡುವು

ಜ್ಞಾನವಾಪಿ: ಸುಪ್ರೀಂ ನೋಟಿಸ್

ದೆಹಲಿ: ಕಾಶಿ ವಿಶ್ವನಾಥ ಜ್ಞಾನವಾಪಿ ಮಸೀದಿ ವಿವಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಮಹತ್ವದ ಆದೇಶವನ್ನು ಹೊರಡಿಸಿದೆ. ಜ್ಞಾನವಾಪಿ ಮಸೀದಿ ಆಡಳಿತ ಸಮಿತಿ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ಸುಪ್ರೀಂ ಕೋರ್ಟ್‌ನಲ್ಲಿ ಹಿಂದೂ ಅರ್ಜಿದಾರರು ಸಲ್ಲಿಸಿದ್ದ ಅರ್ಜಿಯ ಮೇರೆಗೆ ಪ್ರತಿಕ್ರಿಯೆ ನೀಡಲು ಕೋರ್ಟ್ ಸೂಚನೆ ನೀಡಿದೆ. ಶಿವಲಿಂಗ ಸಿಕ್ಕಿದ್ದ ಕಾರಣಕ್ಕೆ ಅಲ್ಲಿ ಉತ್ಖನನ ನಡೆಸಬೇಕೆಂದು ಸಲ್ಲಿಸಿದ್ದ ಮನವಿಯನ್ನು ವಿಚಾರಣೆ ನಡೆಸಿದ ನ್ಯಾಯಾಲಯವು, ಹದಿನಾಲ್ಕು ದಿನಗಳೊಳಗಾಗಿ ಪ್ರತಿಕ್ರಿಯೆ ನೀಡುವಂತೆ ಆದೇಶ ಹೊರಡಿಸಿದೆ. ಕಳೆದ ಬಾರಿ ಪುರಾತತ್ವ ಇಲಾಖೆಯ ವಿಡಿಯೋಗ್ರಾಫಿಕ್ ಸಮೀಕ್ಷೆ ನಡೆಸಲಾಗಿತ್ತು. ಆಗ ವಜೂಖಾನದಲ್ಲಿ ಶಿವಲಿಂಗ ಪತ್ತೆಯಾದ ಕಾರಣ ಕೂಡಲೇ ಸಮೀಕ್ಷೆಗೆ ತಡೆಯಾಜ್ಞೆ ತರಲಾಗಿತ್ತು. ಬಳಿಕ ಮಸೀದಿಯ ಕೆಲವು ಭಾಗಗಳಿಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿದ್ದಲ್ಲದೇ, ಕೋಣೆಗಳಿಗೆ ಬೀಗವನ್ನೂ ಹಾಕಲಾಗಿತ್ತು. ಆಗಿನಿಂದಲೂ ಜ್ಞಾನವಾಪಿ ಮಸೀದಿಯ ಸಂಪೂರ್ಣ ಸಮೀಕ್ಷೆ ನಡೆಯಬೇಕೆಂಬುದು ಹಿಂದೂಪರ ಸಂಘಟನೆಗಳ ಒತ್ತಾಯವಾಗಿತ್ತು.

ಹಿಂದೂಪರ ವಕೀಲ ಮದನ್ ಮೋಹನ್ ಯಾದವ್, 'ಈ ವಿಷಯವನ್ನು ಹಿಂದೂ ಸಂಘಟನೆಯ ಕಡೆಯಿಂದ ಸುಪ್ರೀಂ ಕೋರ್ಟ್‌ಗೆ ಕೊಂಡೊಯ್ಯಲಾಗಿತ್ತು. ಪುರಾತತ್ವ ಇಲಾಖೆ ಇನ್ನೂ ಸರ್ವೆ ಮಾಡಿದ ಬಳಿಕ ಅದು ಶಿವಲಿಂಗವೋ ಅಥವಾ ಕಾರಂಜಿಯೋ ಎಂಬುದು ಸ್ಪಷ್ಟವಾಗುತ್ತದೆ. ಮುಸ್ಲಿಂ ಕಡೆಯವರು ಇದೊಂದು ಕಾರಂಜಿ ಎಂದು ಹೇಳಿಕೊಳ್ಳುತ್ತಾರೆ ಎಂದು ಕೋರ್ಟ್‌ಗೆ ತಿಳಿಸಿದ್ದಾರೆ. ಜ್ಞಾನವಾಪಿಯ 12 ನೆಲಮಾಳಿಗೆಗಳ ಪೈಕಿ 8ರಲ್ಲಿ ಪುರಾತತ್ವ ಇಲಾಖೆಯಿಂದ ಸಮೀಕ್ಷೆ ನಡೆಸಲು ಸಾಧ್ಯವಾಗಿಲ್ಲ, ಮುಖ್ಯ ಗುಮ್ಮಟದ ಕೆಳಗಿರುವ ಜ್ಯೋತಿರ್ಲಿಂಗವನ್ನು ಸಹ ಸಮೀಕ್ಷೆ ಮಾಡಲಾಗಿಲ್ಲ. ಈ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆದಿತ್ತು, ಹಾಗಾಗಿ ಎರಡು ವಾರಗಳಲ್ಲಿ ಉತ್ತರವನ್ನು ಸಲ್ಲಿಸುವಂತೆ ಮುಸ್ಲಿಂ ಸಂಘಟನೆಗೆ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ತಿಳಿಸಿದೆ.

ಇನ್‌ಸ್ಟಾಗ್ರಾಮ್‌ನಲ್ಲಿ ಭಾವುಕ ಬರಹ

ತಂದೆ ಬಗ್ಗೆ ಅಪಪ್ರಚಾರ ಬೇಡ ರೆಹಮಾನ್ ಪುತ್ರನ ಬೇಸರ

ಚೆನ್ನೈ: ತನ್ನ ತಂದೆ ಎ.ಆರ್. ರೆಹಮಾನ್ ಬಗ್ಗೆ ಅಪಪ್ರಚಾರದ ಹೇಳಿಕೆಗಳು ಹರಡುತ್ತಿರುವುದು ನಿಜಕ್ಕೂ ನನ್ನ ಮನಸ್ಸಿಗೆ ಬಹಳ ಬೇಸರ ತಂದಿದೆ ಎಂದು ಅವರ ಮಗ ಅಮೀನ್ ಹೇಳಿದ್ದಾರೆ. ರೆಹಮಾನ್ ವಿಚ್ಛೇದನ ಸುದ್ದಿ ಹೊರಬಂದ ಮೇಲೆ, ಅವರ ಬಗ್ಗೆ ಆಧಾರರಹಿತ ಅಪಪ್ರಚಾರಗಳು ಹೆಚ್ಚಾಗಿವೆ, ತನ್ನ ತಂದೆಯ ಬಗ್ಗೆ ಹರಡುತ್ತಿರುವ ಸುದ್ದಿಗಳು ತನಗೆ ತುಂಬಾ ನೋವುಂಟು ಮಾಡಿವೆ ಎಂದು ಎ.ಆರ್. ರೆಹಮಾನ್ ಪುತ್ರ ಅಮೀನ್ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಭಾವುಕರಾಗಿ ಬರೆದುಕೊಂಡಿದ್ದಾರೆ.

ರೆಹಮಾನ್-ಸಾಯಿರಾ ವಿಚ್ಛೇದನ ಸುದ್ದಿ ಹೊರಬಂದಾಗ, ಗಾಳಿಸುದ್ದಿ ಅಂತ ಅಂದುಕೊಂಡಿದ್ದವರಿಗೆ, ರೆಹಮಾನ್‌ರ ಪತ್ನಿ ಸಾಯಿರಾ ಬಾನುರವರ ವಕೀಲರು ಅದು ನೈಜ ಸುದ್ದಿ ಎಂದು ಖಚಿತಪಡಿಸಿದರು. ನಂತರ ರೆಹಮಾನ್ ಕೂಡ ತನ್ನ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುವ ಮೂಲಕ ವಿಚ್ಛೇದನದ ಆ ಸುದ್ದಿಯನ್ನು ಖಚಿತಪಡಿಸಿದ್ದರು. ರೆಹಮಾನ್ ತಮ್ಮ ಕೆಲಸದ ಒತ್ತಡದಲ್ಲಿ ಕುಟುಂಬದ ಬಗ್ಗೆ ಗಮನ ಕೊಡಲಿಲ್ಲ, ಮಗಳಿಗೆ ಸೌಂಡ್ ಇಂಜಿನಿಯರ್ ಜೊತೆ ಮದುವೆ ಮಾಡಿದ್ದಕ್ಕೆ ಸಾಯಿರಾ ಅವರಿಗೂ ಒಪ್ಪಿಗೆ ಇರಲಿಲ್ಲ, ಆಗಲೇ ಇಬ್ಬರ ನಡುವೆ ಮನಸ್ತಾಪ ಶುರುವಾಗಿತ್ತು ಎಂದೂ ಹಲವು ಮಾಧ್ಯಮಗಳು ವರದಿ ಮಾಡಿವೆ.

ಅಮೀನ್ ತನ್ನ ಜಾಲತಾಣದ ಪೋಸ್ಟ್‌ನಲ್ಲಿ, ನನ್ನ ತಂದೆ ಸಾಧಕ, ಸಂಗೀತಕ್ಕೆ ಮಾತ್ರ ಅವರು ಕೊಡುಗೆ ನೀಡಿಲ್ಲ, ವರ್ಷಗಳಿಂದ ಅವರು ಬೆಳೆಸಿಕೊಂಡ ಮೌಲ್ಯಗಳು, ಗೌರವ ಮತ್ತು ಪ್ರೀತಿಯ ಕಾರಣಕ್ಕೂ ಅವರೊಬ್ಬರು ಸಾಧಕ. ಅವರ ಬಗ್ಗೆ ಸುಳ್ಳು ಮತ್ತು ಆಧಾರರಹಿತ ವದಂತಿಗಳು ಹರಡುವುದನ್ನು ನೋಡಲು ಬೇಸರವಾಗುತ್ತದೆ, ದಯವಿಟ್ಟು ಇಂತಹ ಸುಳ್ಳು ಸುದ್ದಿ ಹರಡುವುದನ್ನು ನಿಲ್ಲಿಸಿ ಎಂದು ಬರೆದಿದ್ದಾರೆ.

ಓಲಾ ಕಂಪನಿ: ಐನೂರು ಕಾರ್ಮಿಕರ ವಜಾ ಸಾಧ್ಯತೆ

ನವದೆಹಲಿ: ಆರ್ಥಿಕ ಸಂಕಷ್ಟದಲ್ಲಿರುವ ಓಲಾ ಎಲೆಕ್ಟ್ರಿಕ್ ಕಂಪನಿಯು 500 ಕಾರ್ಮಿಕರನ್ನು ವಜಾಗೊಳಿಸುವ ಸಾಧ್ಯತೆ ಇದೆ. 2024-25ರ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ನಷ್ಟ 495 ಕೋಟಿ ರೂ.ಗಳಾಗಿದ್ದು, ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ 524 ಕೋಟಿ ರೂ. ನಷ್ಟವಾಗಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇ. 5.53ರಷ್ಟು ಇಳಿಕೆಯಾಗಿದೆ.

ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್ ಆರ್ಥಿಕವಾಗಿ ನಷ್ಟದ ಪ್ರಮಾಣವನ್ನು ಕಡಿಮೆ ಮಾಡಿ ಲಾಭದಾಯಕವಾಗಿ ಮುನ್ನಡೆಯಲು ಪುನರ್ ರಚನೆಯ ಭಾಗವಾಗಿ ವಿವಿಧ ವಿಭಾಗದ 500ಕ್ಕೂ ಹೆಚ್ಚು ಉದ್ಯೋಗಿಗಳನ್ನು ವಜಾಗೊಳಿಸಲು ಯೋಜನೆ ರೂಪಿಸಲಾಗುತ್ತಿದೆ.

2024- 25ರ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕದಲ್ಲಿ ಓಲಾ ಎಲೆಕ್ಟ್ರಿಕ್‌ನ ಆದಾಯವು 873 ಕೋಟಿ ರೂ. ನಿಂದ 1,214 ಕೋಟಿ ರೂ.ಗೆ ಅಂದರೆ ಸರಿಸುಮಾರು ಶೇ. 39.06ರಷ್ಟು ಏರಿಕೆಯಾಗಿದೆ. ಓಲಾ ಮಾರಾಟ ಇದೇ ಅವಧಿಯಲ್ಲಿ 56,813 ಯುನಿಟ್‌ಗಳಿಂದ 98,619 ಯುನಿಟ್‌ಗಳಿಗೆ ಅಂದರೆ ಸರಿಸುಮಾರು ಶೇ. 73.6ರಷ್ಟು ಏರಿಕೆಯಾಗಿದೆ. ಭವಿಶ್ ಅಗರ್ವಾಲ್ ನೇತೃತ್ವದ ಕಂಪನಿಯು 2022ರಲ್ಲಿ ಸ್ಥಾಪನೆಯಾದ ಬಳಿಕ ಮೊದಲ ಬಾರಿಗೆ 2022ರ ಜುಲೈ ತಿಂಗಳಲ್ಲಿ 1,000 ಉದ್ಯೋಗಿಗಳನ್ನು ವಜಾಗೊಳಿಸಲಾಯಿತು. ಉಪಯೋಗಿಸಿದ ಕಾರುಗಳು, ಕ್ಲೌಡ್ ಕಿಚನ್ ಮತ್ತು ದಿನಸಿ ವಿತರಣೆ ಸೇರಿದಂತೆ ಮೂರು ವ್ಯವಹಾರಗಳನ್ನು ಮುಚ್ಚಲಾಯಿತು

ಬಳಿಕ ಇ.ವಿ ವ್ಯಾಪಾರದ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸಿತ್ತು. ಬಳಿಕ ಇವಿ ವಿಭಾಗಕ್ಕೆ ಸುಮಾರು 800 ಉದ್ಯೋಗಿಗಳನ್ನು ನೇಮಿಸಿಕೊಂಡಿತ್ತು. 2022ರ ಸೆಪ್ಟೆಂಬರ್‌ನಲ್ಲಿ ಇದು ಸ್ಥಾಪನೆಯಾದ ಏಳು ತಿಂಗಳ ಬಳಿಕ ರೈಡ್ ಹೇಲಿಂಗ್ ವಿಭಾಗದ ಓಲಾ ಕ್ಯಾಬ್ಸ್‌ನ ಸಿಇಒ ಹೇಮಂತ್ ಬಕ್ಷಿ ಅವರು ರಾಜೀನಾಮೆ ನೀಡಿದ್ದರು. ಇದೀಗ ಕಂಪೆನಿ ಶೇ. 10ರಷ್ಟು ಸಿಬ್ಬಂದಿಯನ್ನು ವಜಾಗೊಳಿಸಲು ಯೋಜನೆ ರೂಪಿಸುತ್ತಿದೆ.

ಮುಂಬೈ ದಾಳಿ ಆರೋಪಿ ತಹವ್ವುರ್ ರಾಣಾನಿಂದ ಮೊರೆ

ಹಸ್ತಾಂತರ ಪ್ರಶ್ನಿಸಿ ಸುಪ್ರೀಂಗೆ ಮನವಿ

ವಾಷಿಂಗ್ಟನ್: 2008ರ ಮುಂಬೈ ಭಯೋತ್ಪಾದನಾ ದಾಳಿಯ ಆರೋಪಿ ಪಾಕಿಸ್ತಾನಿ ಮೂಲದ ಕೆನಡಾದ ಪ್ರಜೆ ತಹವ್ವುರ್ ರಾಣಾ ತನ್ನನ್ನು ಭಾರತಕ್ಕೆ ಹಸ್ತಾಂತರಿಸುವುದನ್ನು ತಡೆಯಲು ಅಮೆರಿಕದ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ್ದಾನೆ. ಈ ಹಿಂದೆ ಅಮೆರಿಕ ಕೋರ್ಟ್ ಆಫ್ ಅಪೀಲ್ ಸೇರಿದಂತೆ ಕೆಳ ಮತ್ತು ಫೆಡರಲ್ ನ್ಯಾಯಾಲಕ್ಕೆ ಮನವಿ ಸಲ್ಲಿಸಿದ್ದ. ಆದರೆ ಸೆಪ್ಟೆಂಬರ್ 23ರಂದು ಯುನೈಟೆಡ್ ಸ್ಟೇಟ್ಸ್ ಕೋರ್ಟ್ ಆಫ್ ಅಪೀಲ್ ರಾಣಾ ಮನವಿಯನ್ನು ತಿರಸ್ಕರಿಸಿ ಹಿನ್ನೆಲೆಯಲ್ಲಿ ಹಸ್ತಾಂತರ ಒಪ್ಪಂದದ ಅಡಿಯಲ್ಲಿ ಆರೋಪಿಗಳನ್ನು ಭಾರತಕ್ಕೆ ಹಸ್ತಾಂತರಿಸಬಹುದು ಎಂದು ನ್ಯಾಯಾಲಯ ಆದೇಶ ನೀಡಿತ್ತು. ಆ ಕಾರಣಕ್ಕಾಗಿ ಆರೋಪಿ ಅಮೆರಿಕ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಿದ್ದಾನೆ.



ಆರು ಮಂದಿ ಅಮೆರಿಕನ್ನರು ಸೇರಿದಂತೆ 166 ಜನರ ಸಾವಿಗೆ ಕಾರಣವಾಗಿದ್ದ 26/11ರ ಮುಂಬೈನ ತಾಜ್ ಹೋಟೆಲ್ ಮೇಲಿನ ದಾಳಿಗೆ ನೆರವು ನೀಡಿದ್ದ ಆರೋಪದಲ್ಲಿ ತಹವ್ವುರ್ ರಾಣಾನನ್ನು ಹಸ್ತಾಂತರಿಸುವಂತೆ ಭಾರತವು ಅಮೆರಿಕಕ್ಕೆ ಮನವಿ ಮಾಡಿಕೊಂಡಿತ್ತು. ಪಾಕಿಸ್ತಾನಿ-ಅಮೆರಿಕನ್ ಭಯೋತ್ಪಾದಕ ಡೇವಿಡ್ ಕೋಲ್ಮನ್ ಹೆಡ್ಲಿ ಜೊತೆಗಿನ ಒಡನಾಟಕ್ಕೆ ಹೆಸರುವಾಸಿಯಾಗಿರುವ ರಾಣಾ, ಲಷ್ಕರ್-ಎ-ತೈಬಾ ಗುಂಪಿಗೆ ಸಹಾಯ ಮಾಡಿದ್ದಾರೆಂಬ ಆರೋಪವಿದೆ. 2008ರ ಮುಂಬೈ ದಾಳಿ ಆರೋಪಗಳಿಗೆ ಸಂಬಂಧಿಸಿದಂತೆ ರಾಣಾ ಸಲ್ಲಿಸಿದ್ದ ಅರ್ಜಿಯನ್ನು ಚಿಕಾಗೋದ ಫೆಡರಲ್ ನ್ಯಾಯಾಲಯವು ಈ ಹಿಂದೆ ವಿಚಾರಣೆ ನಡೆಸಿತ್ತು.

ತಹವ್ವುರ್ ರಾಣಾನ ಹಿನ್ನೆಲೆ

ಪಾಕಿಸ್ತಾನದ ಪಂಜಾಬ್‌ನ ಚಿಚಾವಟ್ನಿಯಲ್ಲಿ ಜನಿಸಿದ ರಾಣಾ , ವೃತ್ತಿಯಲ್ಲಿ ವೈದ್ಯನಾಗಿದ್ದ. ಪಾಕಿಸ್ತಾನದ ಸೇನಾ ವೈದ್ಯಕೀಯ ಕಾರ್ಪ್ಸ್‌ನಲ್ಲಿ ಕ್ಯಾಪ್ಟನ್ ಜನರಲ್ ಡ್ಯೂಟಿ ಪ್ರಾಕ್ಟೀಷನರ್ ಆಗಿ ಸೇವೆ ಸಲ್ಲಿಸಿ, ನಿವೃತ್ತಿಯ ನಂತರ, ರಾಣಾ 1997ರಲ್ಲಿ ಕೆನಡಾಕ್ಕೆ ತೆರಳಿದ್ದರು. ಚಿಕಾಗೋ, ನ್ಯೂಯಾರ್ಕ್ ಮತ್ತು ಟೊರೊಂಟೊದಲ್ಲಿ ವಲಸೆ ಸೇವಾ ವ್ಯವಹಾರ ನಡೆಸುತ್ತಿದ್ದ ಎಂದು ತಿಳಿದು ಬಂದಿದ್ದ ಈತ ಭಯೋತ್ಪಾದಕರ ಜತೆಗೆ ನಂಟು ಹೊಂದಿದ್ದ ಎಂದು ಭಾರತೀಯ ಗುಪ್ತಚರ ಇಲಾಖೆ ತಿಳಿಸಿತ್ತು. ಲಷ್ಕರ್-ಎ-ತೈಬಾ ಹಾಗೂ ಐಸಿಸ್ ಜತೆ ನೇರ ಸಂಪರ್ಕ ಹೊಂದಿದ್ದಾರೆಂಬ ಆರೋಪಗಳು ಕೇಳಿ ಬಂದಿದ್ದವು. 2008ರಲ್ಲಿ ಮುಂಬೈನ ತಾಜ್ ಹೋಟೆಲ್ ಮೇಲೆ ನಡೆದಿದ್ದ ದಾಳಿಯಲ್ಲಿ ಇವರ ಸಹಾಯ ಇದೆ ಎಂಬುದು ಕೇಳಿ ಬಂದಿತ್ತು.

ಭಾರತಕ್ಕೆ ತೆರಳುವ ಪ್ರಯಾಣಿಕರಿಗೆ ವಿಧಿಸಿದ್ದ ಭದ್ರತಾ ಸ್ಕ್ರೀನಿಂಗ್

ಹೆಚ್ಚುವರಿ ಸ್ಕ್ರೀನಿಂಗ್ ರದ್ದು ಮಾಡಿದ ಕೆನಡಾ

ಒಟ್ಟಾವ: ತನ್ನ ದೇಶದಿಂದ ಭಾರತಕ್ಕೆ ತೆರಳುವ ಪ್ರಯಾಣಿಕರಿಗೆ ವಿಧಿಸಿದ್ದ ಹೆಚ್ಚಿನ ಭದ್ರತಾ ಸ್ಕ್ರೀನಿಂಗ್ ಟೆಸ್ಟನ್ನು ಕೆನಡಾ ಸರಕಾರ ಹಿಂಪಡೆದಿದೆ. ಕೆಲ ದಿನಗಳ ಹಿಂದೆಯಷ್ಟೇ ಈ ಹೆಚ್ಚುವರಿ ಸ್ಕ್ರೀನಿಂಗ್ ಪರೀಕ್ಷೆಯನ್ನು ಜಾರಿಗೊಳಿಸಿತ್ತು. ಆದರೆ ಆ ಬಗ್ಗೆ ವಿವರ ನೀಡಿರುವ ಫೆಡರಲ್ ಸಾರಿಗೆ ಸಚಿವೆ ಅನಿತಾ ಆನಂದ್, ಹೆಚ್ಚುವರಿ ಸ್ಕ್ರೀನಿಂಗ್ ಕ್ರಮಗಳನ್ನು ತೆಗೆದುಹಾಕಲಾಗಿದೆ ಎಂದು ಹೇಳಿದ್ದಾರೆ.

ಖಲಿಸ್ತಾನಿ ಭಯೋತ್ಪಾದಕ ಹರ್ದೀಪ್ ಸಿಂಗ್ ನಿಜ್ಜಾರ್ ಹತ್ಯೆಗೆ ಸಂಬಂಧಿಸಿದಂತೆ ಕೆನಡಾ ಹಾಗೂ ಭಾರತದ ರಾಜತಾಂತ್ರಿಕತೆ ಉದ್ವಿಗ್ನಗೊಂಡಿರುವ ಸಮಯದಲ್ಲಿ ಕೆನಡಾ ಸರ್ಕಾರ ಈ ನಿರ್ಣಯವನ್ನು ತೆಗೆದುಕೊಂಡಿತ್ತು. ಈ ಹಿಂದೆ ಅನಿತಾ ಆನಂದ್ ''ಹೆಚ್ಚಿನ ಎಚ್ಚರಿಕೆಯ ಕಾರಣದಿಂದ, ಭಾರತಕ್ಕೆ ಪ್ರಯಾಣಿಸುವವರಿಗೆ ಹೆಚ್ಚುವರಿ ಭದ್ರತಾ ಸ್ಕ್ರೀನಿಂಗ್ ಅನ್ನು ಸರ್ಕಾರವು ತಾತ್ಕಾಲಿಕವಾಗಿ ಜಾರಿಗೊಳಿಸುತ್ತದೆ'' ಎಂದು ಹೇಳಿದ್ದರು. ಆದರೆ ನಿಯಮಗಳನ್ನು ಹಠಾತ್ ಬದಲಾವಣೆ ಮಾಡಿ ಹೆಚ್ಚುವರಿ ಸ್ಕ್ರೀನಿಂಗ್ ಪರೀಕ್ಷೆಯನ್ನು ತೆಗೆದುಹಾಕಿದ್ದು, ಅಲ್ಲಿನ ಸರ್ಕಾರದ ಈ ಕ್ರಮಕ್ಕೆ ನಿರ್ದಿಷ್ಟ ಕಾರಣಗಳು ತಿಳಿದು ಬಂದಿಲ್ಲ.

ಕೆನಡಾ ಹಾಗೂ ಭಾರತದ ರಾಜತಾಂತ್ರಿಕ ಸಂಬಂಧ ಸಂಪೂರ್ಣವಾಗಿ ಹದಗೆಟ್ಟಿದ್ದು, 2023ರ ಜೂನ್‌ನಲ್ಲಿ ನಡೆದಿದ್ದ ಖಲಿಸ್ತಾನಿ ಉಗ್ರ ಹಾಗೂ ಸಿಖ್ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜಾರ್‌ನ ಕೊಲೆ ಪ್ರಕರಣದ ಬಳಿಕ ಶುರುವಾದ ಈ ಬಿಕ್ಕಟ್ಟು, ಈಗ ರಾಯಭಾರ ಅಧಿಕಾರಿಗಳನ್ನು ವಜಾಗೊಳಿಸುವ ಪ್ರತೀಕಾರದ ಹಂತಕ್ಕೆ ತಲುಪಿದೆ. ನಿಜ್ಜಾರ್ ಹತ್ಯೆಯಲ್ಲಿ ಒಟ್ಟಾವದಲ್ಲಿನ ರಾಯಭಾರಿ ಸಂಜಯ್ ಕುಮಾರ್ ವರ್ಮಾ ಅವರ ಪಾತ್ರವಿದೆ, ಹೀಗಾಗಿ ಅವರನ್ನು ತನಿಖೆಗೆ ಒಳಪಡಿಸಬೇಕು ಎಂಬ ಕೆನಡಾ ಆರೋಪ ಹೊಸ ಸಂಘರ್ಷಕ್ಕೆ ನಾಂದಿ ಹಾಡಿತ್ತು.

ಬಾಂಬ್ ಬೆದರಿಕೆ ಹಿನ್ನೆಲೆ ಸ್ಕ್ರೀನಿಂಗ್

ಕಳೆದ ಅಕ್ಟೋಬರ್‌ನಲ್ಲಿ ನವದೆಹಲಿಯಿಂದ ಚಿಕಾಗೋಗೆ ತೆರಳುವ ಏರ್ ಇಂಡಿಯಾ ವಿಮಾನದಲ್ಲಿ ಬಾಂಬ್ ಬೆದರಿಕೆಯ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ವಿಮಾನವನ್ನು ಕೆನಡಾದ ಇಕಾಲುಯಿಟ್‌ನಲ್ಲಿ ಇಳಿಸಿ ತಪಾಸಣೆಗೆ ಒಳಪಡಿಸಲಾಗಿತ್ತು. ಆದರೆ ತಪಾಸಣೆಯ ನಂತರ ಯಾವುದೇ ಸ್ಫೋಟಕ ಸಾಧನ ಪತ್ತೆ ಆಗಿರಲಿಲ್ಲ. ನಂತರ ಕೆನಡಾದ ವಿಮಾನ ನಿಲ್ದಾಣಗಳ ನಿರ್ಬಂಧಿತ ಪ್ರದೇಶಗಳಿಗೆ ಪ್ರವೇಶಿಸುವ ಮೊದಲು ಭಾರತಕ್ಕೆ ತೆರಳುವ ಪ್ರಯಾಣಿಕರು ಮತ್ತು ಅವರ ಲಗೇಜ್‌ಗಳನ್ನು ಪರೀಕ್ಷಿಸುವುದಾಗಿ ತಿಳಿಸಿತ್ತು. ಅದರ ಉಸ್ತುವಾರಿಯನ್ನು ಕೆನಡಾದ ಏರ್ ಟ್ರಾನ್ಸ್‌ಪೋರ್ಟ್ ಸೆಕ್ಯುರಿಟಿ ಅಥಾರಿಟಿ (ಸಿಎಟಿಎಸ್‌ಎ) ವಹಿಸಿಕೊಂಡಿತ್ತು.

ರೈಲಿನ ಎಂಜಿನ್‌ನೊಳಗೆ ಹಾವು: ಆತಂಕ ಸೃಷ್ಟಿ

ಪಾಟ್ನಾ: ಪ್ಯಾಸೆಂಜರ್ ರೈಲಿನ ಎಂಜಿನ್‌ನಲ್ಲಿ ಹಾವೊಂದು ಕಂಡುಬಂದ ಕಾರಣ ಲೋಕೋ ಪೈಲಟ್ ಮತ್ತು ಸಹಾಯಕನು ರೈಲು ಬಿಟ್ಟು ಹೊರಗೆ ಓಡಿದ ಘಟನೆ ಬಿಹಾರದಿಂದ ವರದಿಯಾಗಿದೆ. ಪಾಟ್ನಾ-ಗಯಾ ರೈಲನ್ನು ಚಾಲನೆ ಮಾಡುತ್ತಿದ್ದ ಸಂಜಯ್ ಕುಮಾರ್ ರೈಲಿನ ಎಂಜಿನ್‌ನಲ್ಲಿ ಹಾವನ್ನು ನೋಡಿ ಹೆದರಿ ರೈಲಿನಿಂದ ಜಿಗಿದು ಸುಮಾರು ಒಂದು ಗಂಟೆ ಕಾಲ ತರೆಗ್ನಾ ರೈಲ್ವೆ ನಿಲ್ದಾಣದಲ್ಲಿ ಕಾದಿದ್ದಾನೆ.ಪಲಮು ಎಕ್ಸ್‌ಪ್ರೆಸ್ ರೈಲು ಬಿಹಾರದ ಹಳಿಗಳ ಮೂಲಕ ಚಲಿಸುತ್ತಿದ್ದಾಗ ಈ ಘಟನೆ ನಡೆದಿದ್ದು, ಪಾಟ್ನಾದಿಂದ ಹೊರಟ ರೈಲು ತನ್ನ ಕೊನೆಯ ನಿಲ್ದಾಣವಾದ ಬರ್ಕಾಕಾನಾ ಜಂಕ್ಷನ್ ಕಡೆಗೆ ಚಲಿಸುತ್ತಿದ್ದಾಗ ಅದರ ಚಾಲಕ ಕುಮಾರ್ ಎಂಜಿನ್‌ನ ಒಳಗೆ ಹಾವನ್ನು ಗಮನಿಸಿ ರೈಲನ್ನು ನಿಲ್ಲಿಸಿದ್ದಾನೆ. ತಕ್ಷಣ ರೈಲಿನಿಂದ ಕೆಳಗೆ ಇಳಿದು ಪ್ರಕರಣದ ಬಗ್ಗೆ ಹತ್ತಿರದ ಠಾಣೆಗೆ ಮಾಹಿತಿ ನೀಡಿ, ಲೋಕೋ ಪೈಲಟ್ ಸಹಾಯಕ್ಕಾಗಿ ತರೆಗ್ನಾ ನಿಲ್ದಾಣದ ಅಧಿಕಾರಿಗಳನ್ನು ಸಂಪರ್ಕಿಸಿದ್ದಾನೆ. ಹಾವನ್ನು ರೈಲಿನಿಂದ ಹೊರಗೆ ಎಳೆಯಲು ಸುಮಾರು ಎರಡು ಗಂಟೆಗಳು ಬೇಕಾಯಿತು. ಆ ವೇಳೆ ವಿಷಯ ತಿಳಿದ ಪ್ರಯಾಣಿಕರೂ ರೈಲಿನಿಂದ ಹೊರ ಇಳಿದಿದ್ದು, ರೈಲು ತರೆಗ್ನಾ ನಿಲ್ದಾಣದಲ್ಲೇ ನಿಂತಿತ್ತು ಎಂದು ವರದಿಯಾಗಿದೆ.

ಅದಾನಿ ಸಮೂಹದ ಷೇರು ಮೌಲ್ಯ ಕುಸಿತ

ಮುಂಬೈ: ಲಂಚ ನೀಡಿಕೆ ಆರೋಪದಡಿ ಭಾರತದ ಉಧ್ಯಮಿ ಗೌತಮ್ ಅದಾನಿ ವಿರುದ್ಧ ಅಮೆರಿಕದಲ್ಲಿ ದೋಷಾರೋಪಣೆಯಾದ ಬೆನ್ನಲ್ಲೇ ಇತ್ತ ಭಾರತೀಯ ಷೇರುಮಾರುಕಟ್ಟೆಯಲ್ಲಿ ಅದಾನಿ ಸಮೂಹದ ಷೇರುಗಳ ಮೌಲ್ಯ ಭಾರಿ ಪ್ರಮಾಣದಲ್ಲಿ ಕುಸಿತವಾಗಿದೆ. ಅದಾನಿ ಗ್ರೂಪ್‌ನ ಷೇರುಗಳು ಗುರುವಾರ ಶೇ.23%ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಕುಸಿದಿದ್ದು, ಸಂಸ್ಥೆಯ ಮಾರುಕಟ್ಟೆ ಬಂಡವಾಳದ ಪೈಕಿ 2.8 ಲಕ್ಷ ಕೋಟಿ ರೂಪಾಯಿ ನಷ್ಟವಾಗಿದೆ. ಅದಾನಿ ಎಂಟರ್‌ಪ್ರೈಸಸ್‌ನ ಷೇರುಗಳು ಬಿಎಸ್‌ಇ ಸೆನ್ಸೆಕ್ಸ್ ಸೂಚ್ಯಂಕದಲ್ಲಿ ಬರೋಬ್ಬರಿ 23.44%ರಷ್ಟು ಕುಸಿದು 2,159 ರೂ.ಗೆ ಮೌಲ್ಯ ಇಳಿಕೆಯಾಗಿದೆ. ಅದಾನಿ ಗ್ರೂಪ್ ಕಂಪನಿಗಳಿಗೆ ಮಾನ್ಯತೆ ಹೊಂದಿರುವ ಬ್ಯಾಂಕಿಂಗ್ ಸಂಸ್ಥೆಗಳ ಷೇರುಗಳು ಸಹ ತೀವ್ರ ಕುಸಿದಿವೆ. ಈ ಪೈಕಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಬ್ಯಾಂಕ್ ಆಫ್ ಬರೋಡಾ (ಬಿಒಬಿ), ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ಗುರುವಾರ ಇಂಟ್ರಾಡೇ ವಹಿವಾಟಿನಲ್ಲಿ ಶೇ. 7% ಕ್ಕಿಂತ ಹೆಚ್ಚು ಕುಸಿದವು. ಭಾರತದ ಈಕ್ವಿಟಿ ಮಾರುಕಟ್ಟೆ ಮಾನದಂಡವಾದ ಎನ್‌ಎಸ್‌ಇ ನಿಫ್ಟಿ ಗುರುವಾರ 0.71%ರಷ್ಟು ಕಸಿದಿದ್ದು, ಬಿಎಸ್‌ಇ ಸೆನ್ಸೆಕ್ಸ್ ಶೇ.0.51% ರಷ್ಟು ಸೂಚ್ಯಂಕ ಕುಸಿದಿದೆ.

ರಾಬರ್ಟ್ ಬಾಷ್: 5,500 ಉದ್ಯೋಗ ಕಡಿತ

ಬರ್ಲಿನ್: ಚೀನಾದ ಅಗ್ಗದ ಬೆಲೆಯ ಕಾರುಗಳ ಸ್ಪರ್ಧೆಯಿಂದ ಬೇಡಿಕೆಯ ಕೊರತೆ ಎದುರಿಸುತ್ತಿರುವ ಜರ್ಮನಿಯ ವಾಹನ ಕ್ಷೇತ್ರವು ತೀವ್ರವಾಗಿ ನಲುಗಿದ್ದು, ರಾಬರ್ಟ್ ಬಾಷ್ ಕಂಪನಿಯು 5,500 ಉದ್ಯೋಗಗಳ ಕಡಿತಕ್ಕೆ ಸಿದ್ಧತೆ ನಡೆಸಿದೆ ಎಂದು ವರದಿಯಾಗಿದೆ. ಕಾರುಗಳ ಬಿಡಿಭಾಗಗಳ ಪೂರೈಕೆದಾರ ಕಂಪನಿಯಾಗಿರುವ ಬಾಷ್, 2027ರ ಹೊತ್ತಿಗೆ ಕಂಪ್ಯೂಟರ್ ತಂತ್ರಾಂಶ ನೆರವು ನೀಡುವ ಕ್ರಾಸ್ ಡೊಮೈನ್ ವಿಭಾಗದಿಂದ 3,500 ಉದ್ಯೋಗಗಳ ಕತ್ತರಿಗೆ ಯೋಜನೆ ರೂಪಿಸಿದೆ. ಇವರಲ್ಲಿ ಅರ್ಧದಷ್ಟು ನೌಕರರು ಜರ್ಮನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಚಾಲಕ ರಹಿತ ವಾಹನ ವ್ಯವಸ್ಥೆಯುಳ್ಳ ಕಾರುಗಳಿಗೆ ಬೇಡಿಕೆ ಕ್ಷೀಣವಾಗಿರುವುದೇ ಕಂಪನಿಯ ಈ ಕ್ರಮಕ್ಕೆ ಕಾರಣ ಎಂದೆನ್ನಲಾಗಿದೆ. 2026ರ ಹೊತ್ತಿಗೆ ಹಿಲ್ಡ್‌ಮೈಮ್ ಘಟಕದಿಂದ 600 ಉದ್ಯೋಗಿಗಳನ್ನು ಹಾಗೂ 2032ರ ಹೊತ್ತಿಗೆ 750 ಉದ್ಯೋಗಗಳನ್ನು ವಜಾಗೊಳಿಸಲು ಕಂಪನಿ ಯೋಜನೆ ರೂಪಿಸಿದೆ. 2017ರಿಂದ 2030ರೊಳಗೆ ಸ್ಟಟ್‌ಗಾರ್ಟ್ ಬಳಿಯ ಷ್ಯೂಬಿಷ್ ಮ್ಯೂಂಡ್ ಘಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ 1,300 ಉದ್ಯೋಗಿಗಳನ್ನು ವಜಾಗೊಳಿಸಲು ಕಂಪನಿ ನಿರ್ಧರಿಸಿದೆ.

ಮ್ಯಾಟ್ ಗೇಟ್ಜ್ ಅಟಾರ್ನಿ ಜನರಲ್

ವಾಷಿಂಗ್ಟನ್: 2024ರ ಯು.ಎಸ್ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಅಭ್ಯರ್ಥಿ ಕಮಲಾ ಹ್ಯಾರಿಸ್ ವಿರುದ್ಧ ಜಯ ಗಳಿಸಿದ ನಂತರ ನೂತನ ಚುನಾಯಿತ ಅಧ್ಯಕ್ಷ ಡೊನಾಲ್ ಟ್ರಂಪ್ ಕಾಂಗ್ರೆಸ್‌ನ ಮ್ಯಾಟ್ ಗೇಟ್ಜ್ ಅವರನ್ನು ಯುನೈಟೆಡ್ ಸ್ಟೇಟ್ಸ್‌ನ ಅಟಾರ್ನಿ ಜನರಲ್ ಆಗಿ ನೇಮಕ ಮಾಡಿದ್ದಾರೆ. ಮಾಜಿ ಕಾಂಗ್ರೆಸ್ ಮಹಿಳಾ ಲೆಫ್ಟಿನೆಂಟ್ ಕರ್ನಲ್ ತುಳಸಿ ಗಬ್ಬಾರ್ಡ್ ಅವರನ್ನು ರಾಷ್ಟ್ರೀಯ ಗುಪ್ತಚರ ನಿರ್ದೇಶಕರಾಗಿ ಟ್ರಂಪ್ ನೇಮಕ ಮಾಡಿದ್ದಾರೆ. ಫ್ಲೋರಿಡಾದ ಕಾಂಗ್ರೆಸ್‌ನ ಮ್ಯಾಟ್ ಗೇಟ್ಜ್ ಅವರನ್ನು ಯುನೈಟೆಡ್ ಸ್ಟೇಟ್ಸ್‌ನ ಅಟಾರ್ನಿ ಜನರಲ್ ಆಗಿ ನಾಮನಿರ್ದೇಶನ ಮಾಡಲಾಗಿದೆ ಎಂದು ಘೋಷಿಸಲು ಇದು ನನ್ನ ದೊಡ್ಡ ಗೌರವವಾಗಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಮ್ಯಾಟ್ ಅವರು ತುಂಬಾ ಪ್ರತಿಭಾನ್ವಿತ ಮತ್ತು ದೃಢವಾದ ವಕೀಲರಾಗಿದ್ದು, ವಿಲಿಯಂ ಮತ್ತು ಮೇರಿ ಕಾಲೇಜ್ ಆಫ್ ಲಾದಲ್ಲಿ ತರಬೇತಿ ಪಡೆದಿದ್ದಾರೆ, ಅವರು ನ್ಯಾಯಾಂಗ ಇಲಾ ಖೆಯಲ್ಲಿ ತೀರಾ ಅಗತ್ಯವಿರುವ ಸುಧಾ ರಣೆಯನ್ನು ಸಾಧಿಸುವ ಮೂಲಕ ಕಾಂಗ್ರೆಸ್‌ನಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ ಎಂದು ಟ್ರಂಪ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ನ.16ರ ಲೂಟಿ ಶಂಕಿತರ ಪತ್ತೆ; ಶೀಘ್ರ ಕ್ರಮ

ಇಂಫಾಲ: ನ.16ರಂದು ನಡೆದ ಪ್ರತಿಭಟನೆ ವೇಳೆ ಶಾಸಕರು, ಸಚಿವರ ಮನೆ ಲೂಟಿ ಮಾಡಿದ ಶಂಕಿತರನ್ನು ಪತ್ತೆ ಮಾಡಿದ್ದು, ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ತಿಳಿಸಿದರು. ಸಚಿವರೊಬ್ಬರ ಮನೆಗೆ ನುಗ್ಗಿ ಅವರ ತಂದೆಯ ಭಾವಚಿತ್ರವನ್ನು ಸುಟ್ಟುಹಾಕಿ, ದರೋಡೆ ಮಾಡಿದ್ದನ್ನು ಖಂಡಿಸಿದ ಅವರು, ಈ ರೀತಿ ನಡೆಗಳು ಯಾವುದೇ ಪ್ರತಿಭಟನೆಗಳಲ್ಲಿ ನಡೆಯಲು ಸಾಧ್ಯವೇ ಎಂದು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಕೆಲವು ಗುಂಪುಗಳು ಸಚಿವರು, ಶಾಸಕರ ಮನೆಗೆ ನುಗ್ಗಿ ಬೆಂಕಿ ಹಚ್ಚಿ ಲೂಟಿ ಮಾಡಿದೆ. ಸಿಸಿಟಿವಿ ದೃಶ್ಯಾವಳಿ ಆಧರಿಸಿ, ಅಂತಹವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು. ರಾಜ್ಯದಲ್ಲಿ ನಡೆಯುತ್ತಿರುವ ಇಂತಹ ಘಟನೆಗಳು ನಿಜಕ್ಕೂ ನಾಚಿಕೆಯಾಗುತ್ತಿದೆ ಎಂದು ಮಾಧ್ಯಮಗಳಿಗೆ ತಿಳಿಸಿದರು. ಜಿರೀಬಾಮ್‌ನಲ್ಲಿ ಮಹಿಳೆಯರು ಹಾಗೂ ಮಕ್ಕಳನ್ನು ಕೊಂದ ಘಟನೆ ಖಂಡಿಸಿ ನೈಜ ಪ್ರತಿಭಟನೆ ನಡೆಸುವವರಿಗೆ ಯಾವುದೇ ವಿರೋಧವಿಲ್ಲ. ಇದನ್ನೇ ದುರುಪಯೋಗಪಡಿಸಿಕೊಂಡು ಕೆಲವು ರಾಜಕೀಯ ಪ್ರೇರಿತವಾಗಿ ನಡೆಸುವ ಪ್ರತಿಭಟನಕಾರರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಪರಿಸ್ಥಿತಿ ಸುಧಾರಿಸಿದ ಬಳಿಕ ಮೊಬೈಲ್ ಇಂಟರ್ನೆಟ್ ಮೇಲೆ ಹೇರಿದ ನಿಷೇಧ ಹಿಂದಕ್ಕೆ ಪಡೆಯಲಾಗುವುದು ಎಂದರು.

ಸಂಸತ್‌ನ ನಿರ್ಧಾರ ಅನೂರ್ಜಿತವಲ್ಲ

ದೆಹಲಿ: ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಂವಿಧಾನ ತಿದ್ದುಪಡಿ ಸೇರಿದಂತೆ ಸಂಸತ್ ಕೈಗೊಂಡಿರುವ ನಿರ್ಧಾರಗಳೆಲ್ಲವೂ ಅನೂರ್ಜಿತ ಎಂಬುದಾಗಿ ತಾನು ಹೇಳುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ. 1976ರಲ್ಲಿ ತಿದ್ದುಪಡಿ ಮೂಲಕ ಸಂವಿಧಾನದ ಪೀಠಿಕೆಯಲ್ಲಿ ಸಮಾಜವಾದಿ, ಜಾತ್ಯತೀತ ಹಾಗೂ ಸಮಗ್ರತೆ ಎಂಬ ಪದಗಳನ್ನು ಸೇರಿಸಲಾಯಿತು. ಸಂಸತ್‌ನ ಈ ನಿರ್ಧಾರವನ್ನು ನ್ಯಾಯಾಂಗವು ವಿಮರ್ಶೆಗೆ ಒಳಪಡಿಸಿದೆ. ಈ ಪದಗಳ ಸೇರ್ಪಡೆಯೂ ಸೇರಿದಂತೆ ತುರ್ತು ಪರಿಸ್ಥಿತಿ ವೇಳೆ ಸಂಸತ್ ಕೈಗೊಂಡ ಎಲ್ಲ ನಿರ್ಧಾರಗಳು ಅನೂರ್ಜಿತ ಎಂಬುದಾಗಿ ಸುಪ್ರೀಂ ಕೋರ್ಟ್ ಹೇಳುವುದಿಲ್ಲ ಎಂದು ಮುಖ್ಯನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯಕುಮಾರ್ ಅವರಿದ್ದ ನ್ಯಾಯಪೀಠ ಹೇಳಿದೆ. ಸಂವಿಧಾನದ ಪೀಠಿಕೆಯಲ್ಲಿ ಸಮಾಜವಾದಿ, ಜಾತ್ಯತೀತ ಹಾಗೂ ಸಮಗ್ರತೆ ಎಂಬ ಪದಗಳನ್ನು ಸೇರ್ಪಡೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ವೇಳೆ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ನ್ಯಾಯಪೀಠವು, ನ.25ಕ್ಕೆ ತನ್ನ ತೀರ್ಪನ್ನು ಕಾಯ್ದಿರಿಸಿತು. ರಾಜ್ಯಸಭಾ ಮಾಜಿ ಸಂಸದ ಸುಬ್ರಮಣಿಯನ್ ಸ್ವಾಮಿ, ವಕೀಲ ವಿಷ್ಣುಶಂಕರ ಜೈನ್ ಹಾಗೂ ಇತರರು ಈ ಕುರಿತು ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಸುಧಾರಿಸದ ದೆಹಲಿ ವಾಯು ಗುಣಮಟ್ಟ

ದೆಹಲಿ: ದೇಶದ ರಾಜಧಾನಿ ದೆಹಲಿಯಲ್ಲಿ ವಾಯು ಗುಣಮಟ್ಟ ತೀವ್ರ ಕಳಪೆ ಹಂತದಲ್ಲಿಯೇ ಮುಂದುವರಿದಿದ್ದು, ಶುಕ್ರವಾರ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯೂಐ) 373 ದಾಖಲಾಗಿತ್ತು. ಅದರ ಜತೆಗೆ ದೆಹಲಿಯಲ್ಲಿ ಕನಿಷ್ಠ ತಾಪಮಾನ 11.3 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ದೆಹಲಿಯಲ್ಲಿ 38 ಮೇಲ್ವಿಚಾರಣಾ ಕೇಂದ್ರಗಳಲ್ಲಿ ಒಂಬತ್ತರಲ್ಲಿ ಎಕ್ಯೂಐ ತೀವ್ರ ಕಳಪೆ ಹಂತದ ವ್ಯಾಪ್ತಿಯಲ್ಲಿದೆ. ಆನಂದ ವಿಹಾರ್, ಬವಾನಾ, ಜಹಾಂಗಿರ್‌ಪುರಿ, ಮುಂಡ್ಕಾ, ನೆಹರೂ ನಗರ, ಶಾದಿಪುರ, ಸೋನಿಯಾ ವಿಹಾರ್, ವಿವೇಕ್ ವಿಹಾರ್, ವರ್ಜೀಪುರ ತೀವ್ರ ಕಳಪೆ ಹಂತದ ವ್ಯಾಪ್ತಿಯಲ್ಲಿರುವ ಪ್ರದೇಶಗಳಾಗಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಂಕಿ ಅಂಶಗಳು ತಿಳಿಸಿವೆ. ದೆಹಲಿಯಲ್ಲಿ ಭಾನುವಾರದಿಂದ ಗಾಳಿಯ ಗುಣಮಟ್ಟ ತೀವ್ರ ಅಪಾಯಕಾರಿ ಹಂತಕ್ಕೆ ಕುಸಿದಿತ್ತು. ಇದರ ಬೆನ್ನಲ್ಲೇ ಸೋಮವಾರ ಬೆಳಗ್ಗೆಯಿಂದ ಜಿಆರ್ ಎಪಿ -4 (ಗ್ರೇಡೆಡ್ ರೆಸ್ಪಾನ್ಸ್ ಆ್ಯಕ್ಷನ್ ಪ್ಲ್ಯಾನ್) ನಿರ್ಬಂಧಗಳನ್ನು ದೆಹಲಿ ಸರಕಾರ ಜಾರಿಗೊಳಿಸಿದೆ.

ಅದಾನಿ ಆರೋಪಗಳ ಬಗ್ಗೆ ತಿಳಿದಿದೆ: ಅಮೆರಿಕ

ವಾಷಿಂಗ್ಟನ್: ಭಾರತ ಮತ್ತು ಅಮೆರಿಕ ನಡುವಿನ ಸಂಬಂಧ ಬಲವಾದ ತಳಹದಿಯ ಮೇಲೆ ನಿರ್ಮಿಸಲ್ಪಟ್ಟಿದೆ ಎಂದು ಪ್ರತಿಪಾದಿಸಿರುವ ಶ್ವೇತಭವನ, ಭಾರತದ ಉದ್ಯಮಿ ಗೌತಮ್ ಅದಾನಿ ವಿರುದ್ಧದ ಲಂಚದ ಆರೋಪದಿಂದ ಎದುರಾಗಿರುವ ಬಿಕ್ಕಟ್ಟನ್ನು ಸರಿ ದಿಕ್ಕಿನಲ್ಲಿ ನಿರ್ವಹಿಸಬಹುದು ಎಂದು ವಿಶ್ವಾಸ ವ್ಯಕ್ತಪಡಿಸಿದೆ. ಅದಾನಿ ವಿರುದ್ಧ ಇರುವ ಆರೋಪಗಳ ಬಗ್ಗೆ ಸರಕಾರಕ್ಕೆ ತಿಳಿದಿದೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೀನ್ ಜೀನ್ ಪಿಯರ್ ತಮ್ಮ ದೈನಂದಿನ ಸುದ್ದಿಗೋಷ್ಠಿಯಲ್ಲಿ ಗುರುವಾರ ತಿಳಿಸಿದರು. ಅಮೆರಿಕ ಪ್ರಾಸಿಕ್ಯೂಟರ್‌ಗಳು ಅದಾನಿ ವಿರುದ್ಧ ಆರೋಪಪಟ್ಟಿ ಸಲ್ಲಿಸಿದ್ದಾರೆ. ಇದರ ಬೆನ್ನಲ್ಲೇ, ಅವರ ಬಂಧನಕ್ಕೆ ಕೋರ್ಟ್ ವಾರಂಟ್ ಹೊರಡಿಸಿದೆ.

{ಎನ್.ಚಂದ್ರಬಾಬು ನಾಯ್ಡು} ಆಂಧ್ರ ಪ್ರದೇಶ ಸಿಎಂ

ಈ ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ನೇತೃತ್ವದ ಸರಕಾರ ಹಾಗೂ ಅದಾನಿ ಸಮೂಹದ ವಿರುದ್ಧ ಕೇಳಿಬಂದಿರುವ ಲಂಚದ ಆರೋಪಕ್ಕೆ ಸಂಬಂಧಿಸಿ ಅಮೆರಿಕದ ಕೋರ್ಟ್‌ಗೆ ಸಲ್ಲಿಕೆಯಾಗಿರುವ ಆರೋಪಪಟ್ಟಿ ಕುರಿತು ಸರಕಾರ ಅಧ್ಯಯನ ನಡೆಸಲಿದೆ. ವಿದ್ಯುತ್ ಖರೀದಿ ಒಪ್ಪಂದದಲ್ಲಿ ಅಕ್ರಮವಾಗಿದ್ದು ಕಂಡುಬಂದಲ್ಲಿ ಕ್ರಮ ಜರುಗಿಸಲಾಗುವುದು.



ಕೆಆರ್‌ಎಸ್ ಜಲಾಶಯದ ಸುತ್ತ ಗಣಿಗಾರಿಕೆಯ ವರದಿ | ಜಲಾಶಯ ಸುರಕ್ಷತಾ ಸಮಿತಿಗೆ ನೀಡಿದ್ದ ಗಡುವು ಮತ್ತೆ ವಿಸ್ತರಿಸಿದ ಹೈಕೋರ್ಟ್

ವರದಿ ನೀಡಲು 6 ತಿಂಗಳ ಗಡುವು

ಬೆಂಗಳೂರು: ಕೆಆರ್‌ಎಸ್ ಜಲಾಶಯದ ಸುತ್ತ 20 ಕಿಮೀ ವ್ಯಾಪ್ತಿಯಲ್ಲಿ ಕಲ್ಲುಕ್ವಾರಿ ಜತೆಗೆ ಸ್ಫೋಟಕ ಚಟುವಟಿಕೆ ನಡೆಸುತ್ತಿರುವ ಘಟಕಗಳನ್ನು ಪರಿಶೀಲಿಸಿ ಸಮಗ್ರ ವರದಿ ಸಲ್ಲಿಸಲು ಹೈಕೋರ್ಟ್, ಜಲಾಶಯ ಸುರಕ್ಷತಾ ಸಮಿತಿಗೆ ಆರು ತಿಂಗಳ ಕಾಲಾವಕಾಶ ನೀಡಿದೆ.

ಕಲ್ಲು ಗಣಿಗಾರಿಕೆ ಕುರಿತಂತೆ ಸಿಜಿ ಕುಮಾರ್ ಸಲ್ಲಿಸಿರುವ ಮೂಲ ಅರ್ಜಿಯಲ್ಲಿ ಸಲ್ಲಿಕೆಯಾಗಿರುವ ಹಲವು ಮಧ್ಯಂತರ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎಎನ್ ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆವಿ ಅರವಿಂದ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ.

ಜಲಾಶಯದ ಸುತ್ತ 20 ಕಿಮೀ ವ್ಯಾಪ್ತಿಯಲ್ಲಿ ಕಲ್ಲುಕ್ವಾರಿ ಜತೆಗೆ ಸ್ಫೋಟಕ ಚಟುವಟಿಕೆ ನಡೆಸುತ್ತಿರುವ ಘಟಕಗಳನ್ನು ಪರಿಶೀಲಿಸಿ ನಾಲ್ಕು ತಿಂಗಳಲ್ಲಿ ಸಮಗ್ರ ವರದಿ ಸಲ್ಲಿಸಬೇಕೆಂದು 2024ರ ಮಾರ್ಚ್ 5ರಂದು ಸರಕಾರಕ್ಕೆ ಆದೇಶ ನೀಡಿತ್ತು. ಆದರೆ, ಆ ಸಮಯಾವಕಾಶ ಸಾಕಾಗುತ್ತಿಲ್ಲ, ಮತ್ತೆ ಸಮಯ ನೀಡಬೇಕೆಂದು ಅಡ್ವೋಕೇಟ್ ಜನರಲ್ ಮನವಿ ಮಾಡಿದ್ದಾರೆ. ಅವರ ಮನವಿ ಪುರಸ್ಕರಿಸಿ ಜಲಾಶಯ ಸುರಕ್ಷತಾ ಸಮಿತಿಗೆ ಮತ್ತೆ ಆರು ತಿಂಗಳ ಕಾಲಾವಕಾಶ ನೀಡಲಾಗುತ್ತಿದೆ. ಅಷ್ಟರಲ್ಲಿ ಪರಿಶೀಲನೆ ಕಾರ್ಯ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು, ಎಂದು ನ್ಯಾಯಪೀಠ ಆದೇಶ ನೀಡಿದೆ.

ಆದ್ದರಿಂದ ಗಣಿಗಾರಿಕೆ ಪುನಾರಂಭಿಸಲು ಅನುಮತಿ ಕೋರಿರುವ ಎಲ್ಲ ಅರ್ಜಿಗಳನ್ನು ಪರಿಶೀಲಿಸಲಾಗುವುದು. ಅರ್ಜಿದಾರರು ಯಾವುದೇ ಸ್ಫೋಟಕ ಚಟುವಟಿಕೆ ನಡೆಸುವುದಿಲ್ಲವೆಂದು ಮುಚ್ಚಳಿಕೆ ನೀಡಬೇಕು. ಸಮಿತಿ ಗಣಿಗಾರಿಕೆ ಇಲಾಖೆಯ ತಜ್ಞರನ್ನೂ ಸೇರಿಸಿಕೊಂಡು ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಿದೆ ಎಂದು ಅಡ್ವೋಕೇಟ್ ಜನರಲ್ ತಿಳಿಸಿದ್ದಾರೆ. ಅದು ನ್ಯಾಯಯುತ ಹೇಳಿಕೆಯಾಗಿದೆ. ಹಾಗಾಗಿ, ಗಣಿಗಾರಿಕೆ ಪುನಾರಂಭಿಸಲು ಅನುಮತಿ ಕೋರಿರುವ ಅರ್ಜಿದಾರರು ಸಮಿತಿ ಮುಂದೆ ಹಾಜರಾಗಿ ವಿವರಣೆ ನೀಡಬೇಕು. ಸಮಿತಿ ಎಲ್ಲಾ

ಅಂಶಗಳನ್ನು ಪರಿಶೀಲಿಸಿದ ಬಳಿಕ ಕಾನೂನು ರೀತಿಯಲ್ಲಿ ನಿರ್ಧಾರ ಕೈಗೊಳ್ಳಬೇಕು. ಕೈಗೊಂಡ ನಿರ್ಧಾರವನ್ನು ಅರ್ಜಿದಾರರಿಗೆ ತಿಳಿಸಬೇಕು ಎಂದು ನ್ಯಾಯಪೀಠ ಸೂಚನೆ ನೀಡಿದೆ.

ಈ ಮಧ್ಯೆ, ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸಹಕರಿಸಲು ನೇಮಕಗೊಂಡಿದ್ದ ಅಮಿಕಸ್ ಕ್ಯೂರಿ, ಒಟ್ಟು ಜಲಾಶಯದ ಸುತ್ತ 20 ಕಿಮೀ ವ್ಯಾಪ್ತಿಯಲ್ಲಿ ಕಲ್ಲುಗಣಿಕಾರಿಕೆ ಲೈಸೆನ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದವು. ಆದರೆ, ಅವುಗಳಲ್ಲಿ 38 ಕ್ವಾರಿಗಳ ಗುತ್ತಿಗೆ ಅವಧಿ ಮುಗಿದಿದೆ. ಹಾಗಾಗಿ, ಕೇವಲ 12 ಘಟಕಗಳು ಮಾತ್ರ ಕಾರ್ಯಾಚರಣೆ ನಡೆಸುತ್ತಿದ್ದು, ಅದರಲ್ಲಿ 4 ಕ್ವಾರಿಗಳು ಸ್ಫೋಟಕ ಚಟುವಟಿಕೆಗಳನ್ನು ನಡೆಸುತ್ತಿವೆ. ಉಳಿದ 8 ಘಟಕಗಳು ಯಾವುದೇ ರೀತಿಯ ಸ್ಫೋಟಕ ಚಟುವಟಿಕೆ ನಡೆಸುತ್ತಿಲ್ಲ ಎಂದು ವಿವರಿಸಿದ್ದಾರೆ.

ಅರ್ಜಿ ತಿರಸ್ಕಾರ

ಜಲಾಶಯ ಸುರಕ್ಷತೆ ಕುರಿತಂತೆ ಮೂರನೇ ಶೆಡ್ಯೂಲ್‌ನ ಸೆಕ್ಷನ್ 12ರಲ್ಲಿ ಉಲ್ಲೇಖಿಸಿರುವಂತೆ ಯಾವುದೇ ರೀತಿಯ ವಿಪತ್ತುಗಳನ್ನು ತಡೆಯಲು ಮತ್ತು ಅಣೆಕಟ್ಟೆಯಿಂದ ಸುರಕ್ಷತೆ ದೃಷ್ಟಿಯಿಂದ ರಾಜ್ಯ ಮಟ್ಟದ ಸಮಿತಿ ನಿರ್ಧಾರಗಳನ್ನು ಕೈಗೊಳ್ಳಬಹುದಾಗಿದೆ. ಹಾಗಾಗಿ, ನ್ಯಾಯಾಲಯ ನಿರ್ದೇಶನ ನೀಡಿದ್ದರೂ ಸಮಿತಿ ಗಣಿಗಾರಿಕೆ ಪುನಾರಂಭ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸಲು ನಿರಾಕರಿಸಿದೆ ಎಂದು ನ್ಯಾಯಾಲಯ ಹೇಳಿದೆ.

ಪರಿಸರ ಸಂರಕ್ಷಣೆಗೆ ರಿಕ್ಲೇಮ್ ಬೆಂಗಳೂರು

ಪೀಪಲ್ಸ್ ಪ್ಲಾನೆಟ್‌ನ್ನು ಎನ್.ಎ. ಹ್ಯಾರಿಸ್, ಅಮಿತ್ ಹೆಗ್ಡೆ, ಶ್ರೇಯಸ್ ಸೂರಿ ಉದ್ಘಾಟಿಸಿದರು.

ಬೆಂಗಳೂರು: ಪರಿಸರ ಸಂರಕ್ಷಣೆಗೆ ಸಮರ್ಪಿತ ಎನ್‌ಜಿಒ ಪೀಪಲ್ಸ್ ಪ್ಲಾನೆಟ್, ನವೆಂಬರ್ 16 ರಂದು ಅಧಿಕೃತವಾಗಿ ಪ್ರಾರಂಭವಾಯಿತು. ಈ ಉದ್ಘಾಟನಾ ಸಮಾರಂಭವು ಬೆಂಗಳೂರು ಸೈಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ಜರುಗಿದ್ದು, ಬಿಡಿಎ ಅಧ್ಯಕ್ಷರು ಮತ್ತು ಶಾಸಕರಾದ ಎನ್.ಎ. ಹ್ಯಾರಿಸ್, ಪರಿಸರ ಆಸಕ್ತ ಅಮಿತ್ ಹೆಗ್ಡೆ ಮತ್ತು ನಟ ಶ್ರೇಯಸ್ ಸೂರಿ ಅವರಿಂದ ನಡೆಯಿತು.

ಎನ್.ಎ. ಹ್ಯಾರಿಸ್ ಫೌಂಡೇಶನ್ ಸಹಯೋಗದಲ್ಲಿ ಶುರುವಾಗಿರುವ ಈ ಸಂಘಟನೆಯೂ, ಅರಣ್ಯ ಪುನಶ್ಚೇತನ ಮತ್ತು ಶಿಕ್ಷಣ ವಲಯದ ಮೇಲೆ ಕೆಲಸವನ್ನು ಮಾಡುತ್ತಿದೆ.

ಇಂದು ನಾವು ಹಸಿರು ಭವಿಷ್ಯವನ್ನು ಗಟ್ಟಿಯಾಗಿ ಸ್ಥಾಪಿಸುವ ದಿಶೆಯಲ್ಲಿ ಒಂದು ದೊಡ್ಡ ಹೆಜ್ಜೆ ಹಾಕಿದ್ದೇವೆ. ಮರಗಳನ್ನು ನೆಡುವುದು ಕೇವಲ ಪ್ರಕೃತಿಯನ್ನು ಉಳಿಸುವುದರಲ್ಲ. ಇದು ನಮ್ಮ ಸಮುದಾಯಗಳು, ನಮ್ಮ ಆರೋಗ್ಯ ಮತ್ತು ನಮ್ಮ ಗ್ರಹವನ್ನು ಉಳಿಸುವತ್ತ ಹೆಜ್ಜೆ ಎಂದು ಶಾಸಕ ಎನ್.ಎ. ಹ್ಯಾರಿಸ್ ಅಭಿಪ್ರಾಯಪಟ್ಟರು.

ಈ ಅಭಿಯಾನವು ಜಯನಗರ, ಅಂಜನಾಪುರ, ಇಂದಿರಾನಗರ, ಸದಾಶಿವನಗರ, ಎಚ್‌ಆರ್‌ಬಿಆರ್ ಲೇಔಟ್, ವಿಶ್ವೇಶ್ವರಯ್ಯ ಲೇಔಟ್ ಮತ್ತು ಕೊರಮಂಗಲ ಸೇರಿದಂತೆ ನಗರಾದ್ಯಂತ ಹಲವೆಡೆಗಳಲ್ಲಿ ನಡೆಯಲಿದೆ. 2025ರ ವೇಳೆಗೆ ಭಾರತಾದ್ಯಂತ ಒಂದು ಮಿಲಿಯನ್ ಮರಗಳನ್ನು ನೆಡುವ ಗುರಿಯನ್ನು ಹೊಂದಿರುವ ಈ ಅಭಿಯಾನ, ಬೆಂಗಳೂರಿನ ಹಸಿರು ತೋಟಗಳ ಪರಂಪರೆಯನ್ನು ಪುನಃ ಸ್ಥಾಪಿಸಲು ಮತ್ತು ಶಾಶ್ವತ ಪರಿಸರಪ್ರಿಯತೆಯತ್ತ ಎಲ್ಲರನ್ನು ಪ್ರೇರಿಸಲು ಸಂಕಲ್ಪಗೊಂಡಿದೆ ಎಂದು ಹೇಳಿದರು.

ಸೆನ್ಸೆಕ್ಸ್: ಒಂದೇ ದಿನ 2000 ಅಂಕ ಜಿಗಿತ

ಷೇರು ಮಾರುಕಟ್ಟೆಯಲ್ಲಿ ಗೂಳಿಯ ಓಟ | ನಿಫ್ಟಿ 557 ಅಂಕ ಏರಿಕೆ

ಮುಂಬೈ: ದೇಶದ ಷೇರುಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಗೂಳಿಯ ನಾಗಾಲೋಟದಿಂದಾಗಿ ಸೂಚ್ಯಂಕಗಳು ಏರಿಕೆ ಕಂಡಿವೆ.

ದೇಶೀಯ ಸಾಂಸ್ಥಿಕ ಹೂಡಿಕೆದಾರರು ಹೆಚ್ಚು ಷೇರುಗಳನ್ನು ಖರೀದಿಸಿದ್ದರಿಂದ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು. ಹೂಡಿಕೆದಾರರ ಸಂಪತ್ತು ₹7.32 ಲಕ್ಷ ಕೋಟಿ ಏರಿಕೆಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,961 ಅಂಶ ಏರಿಕೆ ಕಂಡು, 79,117 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 2,062 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 557 ಅಂಶ ಏರಿಕೆ ಕಂಡು, 23,907 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಎಲ್ಲ ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟಿಸಿಎಸ್, ಟೈಟನ್, ಐಟಿಸಿ, ಇನ್ಫೋಸಿಸ್, ಎಲ್ ಆ್ಯಂಡ್ ಟಿ, ರಿಲಯನ್ಸ್ ಇಂಡಸ್ಟ್ರಿಸ್, ಬಜಾಜ್ ಫೈನಾನ್ಸ್ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹5,320 ಕೋಟಿ ಮೌಲ್ಯ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹4,200 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

6 ಅದಾನಿ ಕಂಪನಿ ಚೇತರಿಕೆ

ಅದಾನಿ ಸಮೂಹದ 10 ಕಂಪನಿಗಳ ಪೈಕಿ ಆರು ಕಂಪನಿಗಳ ಷೇರಿನ ಮೌಲ್ಯವು ಶುಕ್ರವಾರ ಚೇತರಿಕೆ ಕಂಡಿದೆ. ಅಂಬುಜಾ ಸಿಮೆಂಟ್ಸ್ ಶೇ. 3.50, ಎಸಿಸಿ ಶೇ. 3.17, ಅದಾನಿ ಎಂಟರ್‌ಪ್ರೈಸಸ್ ಶೇ. 2.16, ಅದಾನಿ ಪೋರ್ಟ್ಸ್ ಶೇ. 2.05, ಅದಾನಿ ಟೋಟಲ್ ಗ್ಯಾಸ್ ಶೇ. 1.18 ಹಾಗೂ ಎನ್‌ಡಿಟಿವಿ ಷೇರಿನ ಮೌಲ್ಯದಲ್ಲಿ ಶೇ 0.65ರಷ್ಟು ಏರಿಕೆಯಾಗಿದೆ. ಅದಾನಿ ಗ್ರೀನ್ ಎನರ್ಜಿ ಶೇ 8.20, ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ. 6.92, ಅದಾನಿ ಪವರ್ ಶೇ. 3.23 ಹಾಗೂ ಅದಾನಿ ವಿಲ್ಮರ್ ಷೇರಿನ ಮೌಲ್ಯದಲ್ಲಿ ಶೇ 0.73ರಷ್ಟು ಇಳಿಕೆಯಾಗಿದೆ.

8ನೇ ವೇತನ ಆಯೋಗದ ಬಗ್ಗೆ ಕೇಂದ್ರ ನೌಕರರಿಗೆ ಭಾರೀ ನಿರೀಕ್ಷೆ

ಕನಿಷ್ಠ ವೇತನದಲ್ಲಿ ಶೇ.186ರಷ್ಟು ಏರಿಕೆ ಸಾಧ್ಯತೆ

ದೆಹಲಿ: 8ನೇ ವೇತನ ಆಯೋಗದ ಅಧಿಕೃತ ಘೋಷಣೆಗಾಗಿ ಕೇಂದ್ರ ಸರಕಾರಿ ನೌಕರರು ಕಾಯುತ್ತಿರುವಾಗಲೇ, ತಮ್ಮ ಕನಿಷ್ಠ ವೇತನದಲ್ಲಿ ಶೇ.186ರಷ್ಟು ಜಿಗಿತವನ್ನು ಕಾಣುವ ನಿರೀಕ್ಷೆಯಿದೆ ಎಂದು ವರದಿಗಳು ಹೊರ ಬಿದ್ದಿವೆ. ಕೇಂದ್ರ ಸರಕಾರಿ ನೌಕರರು ಪ್ರಸ್ತುತ 7ನೇ ವೇತನ ಆಯೋಗದ ಅಡಿಯಲ್ಲಿ ತಿಂಗಳಿಗೆ ಕನಿಷ್ಠ 18,000 ರು. ಮೂಲ ವೇತನವನ್ನು ಪಡೆಯುತ್ತಿದ್ದಾರೆ.

ನ್ಯಾಷನಲ್ ಕೌನ್ಸಿಲ್ ಆಫ್ ಜಾಯಿಂಟ್ ಕನ್ಸಲ್ಟೇಟಿವ್ ಮೆಷಿನರಿಯ (ಜೆಸಿಎಂ) ಕಾರ್ಯದರ್ಶಿ (ಸಿಬ್ಬಂದಿ ವಿಭಾಗ) ಶಿವ ಗೋಪಾಲ್ ಮಿಶ್ರಾ, ಅವರು ಕನಿಷ್ಠ 2.86 ಫಿಟ್‌ಮೆಂಟ್ ಅಂಶವನ್ನು ನಿರೀಕ್ಷಿಸುತ್ತಿದ್ದಾರೆ ಎಂದು ಹೇಳಿದ್ದಾರೆ. 7ನೇ ವೇತನ ಆಯೋಗದ ಅಡಿಯಲ್ಲಿ 2.57 ಫಿಟ್‌ಮೆಂಟ್ ಅಂಶಕ್ಕೆ ಹೋಲಿಸಿದರೆ ಇದು 29 ಬೇಸಿಸ್ ಪಾಯಿಂಟ್‌ಗಳು ಹೆಚ್ಚಾಗಿದೆ. 2.86ರ ಫಿಟ್‌ಮೆಂಟ್ ಅಂಶವನ್ನು ಸರ್ಕಾರ ಅನುಮೋದಿಸಿದರೆ, ಸರಕಾರಿ ನೌಕರರ ಕನಿಷ್ಠ ವೇತನವು 18,000 ರು.ಗೆ ಹೋಲಿಸಿದರೆ 186 ಪ್ರತಿಶತದಷ್ಟು ಏರಿಕೆಯಾಗಿ 51,480 ರು.ಗಳಿಗೆ ಏರಲಿದೆ.

10ವರ್ಷಕ್ಕೊಮ್ಮೆ ಫಿಟ್‌ಮೆಂಟ್ ಪರಿಗಣನೆ: ಕೇಂದ್ರ ಸರ್ಕಾರಿ ನೌಕರರ ಕನಿಷ್ಠ ವೇತನ, ಪಿಂಚಣಿ ಹೆಚ್ಚಳದ ಫಿಟ್‌ಮೆಂಟ್ ಅಂಶವನ್ನು ಹತ್ತು ವರ್ಷಕ್ಕೆ ಒಮ್ಮೆ ಮಾತ್ರವೇ ಲೆಕ್ಕ ಹಾಕಲಾಗುತ್ತದೆ. ಹೀಗಾಗಿ ಈ ಭಾರಿಯು ಇದರ ಮೇಲೆಯೂ ನೌಕರರ ಗಮನ ಕೇಂದ್ರೀಕೃತವಾಗಿದೆ. ಮಿಶ್ರಾ ಅವರು ಇತ್ತೀಚೆಗೆ ಕೇಂದ್ರ ಹಣಕಾಸು ಕಾರ್ಯದರ್ಶಿ ತುಹಿನ್ ಕಾಂತಾ ಪಾಂಡೆ ಅವರ ಜೊತೆಗೆ ನಡೆಸಿದ ಸಭೆಯ ಬಳಿಕ ಈ 2.86 ಫಿಟ್‌ಮೆಂಟ್ ಅಂಶ ಹೆಚ್ಚು ಮುನ್ನೆಲೆಗೆ ಬಂದಿದೆ. ಇದರ ಆಧಾರದಲ್ಲಿ 8ನೇ ವೇತನ ಆಯೋಗದಡಿ ಮಹತ್ವದ ಪರಿಷ್ಕರಣೆ ಆಗಲಿದೆ ಎಂದು ನೌಕರರ ನಿರೀಕ್ಷೆ ಹೊಂದಿದ್ದಾರೆ.

8ನೇ ವೇತನ ಆಯೋಗ ಯಾವಾಗ?: ಹೊಸ ವೇತನ ಆಯೋಗದ ರಚನೆಯ ನಿರೀಕ್ಷಿತ ದಿನಾಂಕದ ಬಗ್ಗೆ ಯಾವುದೇ ಅಧಿಕೃತ ಪ್ರಕಟಣೆ ಇಲ್ಲವಾದರೂ, ಮುಂದಿನ 2025-26 ರ ಬಜೆಟ್‌ನಲ್ಲಿ ಇದನ್ನು ಘೋಷಿಸಬಹುದು ಎಂಬ ನಿರೀಕ್ಷೆ ಇದೆ. ಆದಾಗ್ಯೂ, ಕಳೆದ ಬಜೆಟ್ ವೇಳೆ ನೌಕರರ ಸಂಘಗಳು ತಮ್ಮ ಬೇಡಿಕೆಗಳೊಂದಿಗೆ ಕ್ಯಾಬಿನೆಟ್ ಕಾರ್ಯದರ್ಶಿ ಮತ್ತು ಹಣಕಾಸು ಸಚಿವಾಲಯವನ್ನು ಸಂಪರ್ಕಿಸಿತ್ತು. ಜಂಟಿ ಸಲಹಾ ಯಂತ್ರೋಪಕರಣಗಳ ರಾಷ್ಟ್ರೀಯ ಮಂಡಳಿಯ ಸಭೆಯ ನಂತರ ಡಿಸೆಂಬರ್‌ನಲ್ಲಿ 8ನೇ ವೇತನ ಆಯೋಗದ ರಚನೆಯ ಬಗ್ಗೆ ಸ್ಪಷ್ಟತೆ ಬರುವ ಸಾಧ್ಯತೆಯಿದೆ. ಸಭೆಯು ಈ ತಿಂಗಳಿನಲ್ಲಿ ನಡೆಯಲಿದೆ ಎಂದು ನಿರೀಕ್ಷಿಸಲಾಗಿತ್ತು, ಆದರೆ ಈಗ ಡಿಸೆಂಬರ್‌ಗೆ ಅದನ್ನು ಮುಂದೂಡಲಾಗಿದೆ.

2014ರಲ್ಲಿ ರಚನೆಯಾದ 7ನೇ ವೇತನ ಆಯೋಗ: ಸರ್ಕಾರಿ ನೌಕರರ ಸಂಬಳದಲ್ಲಿ ಗಣನೀಯ ಏರಿಕೆಗೆ ಕಾರಣವಾದ 7ನೇ ವೇತನ ಆಯೋಗವು ಫೆಬ್ರವರಿ 2014ರಲ್ಲಿ ರೂಪುಗೊಂಡಿತು. ಅದರ ಶಿಫಾರಸುಗಳನ್ನು ಜನವರಿ 1, 2016ರಿಂದ ಜಾರಿಗೆ ತರಲಾಯಿತು. ಪ್ರಮುಖ ಶಿಫಾರಸುಗಳಲ್ಲಿ ಕನಿಷ್ಠ ಮೂಲ ವೇತನವನ್ನು ರೂ 7,000 ರಿಂದ ರೂ 18,000 ಕ್ಕೆ ಹೆಚ್ಚಿಸುವುದಾಗಿತ್ತು

ಕೋವಿಡ್ ವರದಿ ಬಗ್ಗೆ ಹೇಳಿದ್ದ ಮಾತಿಗೆ ಪತ್ರ ಬರೆದು ನ್ಯಾಯಾಧೀಶರಲ್ಲಿ ಕ್ಷಮೆ ಕೋರಿದ ಸಚಿವ ಪ್ರಹ್ಲಾದ್ ಜೋಶಿ

ನ್ಯಾ.ಡಿ.ಕುನ್ಹಾ ಬಳಿ ಕ್ಷಮೆ ಕೋರಿದ ಜೋಶಿ

ದೆಹಲಿ: ಕೋವಿಡ್ ಚಿಕಿತ್ಸೆಗೆ ಸಂಬಂಧಪಟ್ಟ ವರದಿ ಬಗ್ಗೆ ನೀಡಿದ ಹೇಳಿಕೆ ವಿವಾದ ಸೃಷ್ಟಿಸಿದ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ನ್ಯಾಯಮೂರ್ತಿ ಮೈಕೆಲ್ ಡಿ.ಕುನ್ಹಾ ಅವರಿಗೆ ನೇರವಾಗಿ ಪತ್ರ ಬರೆದು ಕ್ಷಮೆ ಕೋರಿದ್ದಾರೆ. ಈ ಹಿಂದೆ ರಾಜ್ಯ ವಿಧಾನಸಭೆ ಉಪ ಚುನಾವಣೆ ವೇಳೆ ಸಚಿವರು ಪ್ರಚಾರ ಭಾಷಣದಲ್ಲಿ ಬಿಜೆಪಿ ಸರಕಾರದ ಅವಧಿಯಲ್ಲಿ ಕೋವಿಡ್ ಹಗರಣ ನಡೆದಿದೆ ಎಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸುವಾಗ ನ್ಯಾಯಮೂರ್ತಿ ಮೈಕೆಲ್ ಡಿ.ಕುನ್ಹಾ ವರದಿ ಬಗ್ಗೆ ಪ್ರಸ್ತಾಪಿಸಿದ್ದು ವಿವಾದ ಹುಟ್ಟು ಹಾಕಿತ್ತು.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಇದಕ್ಕೆ ಸ್ಪಷ್ಟನೆ ನೀಡಿದ್ದಲ್ಲದೆ, ವಾಸ್ತವದಲ್ಲಿ ತಾವೇನು ಮಾತನಾಡಿದ್ದೇನೆ ಎಂಬುದರ ಬಗ್ಗೆ ವಿವರಿಸಿ ನ್ಯಾಯಮೂರ್ತಿ ಕುನ್ಹಾ ಅವರಿಗೆ ಪತ್ರ ಬರೆದಿ ದ್ದಾರೆ. ಅಲ್ಲದೇ, ವಿವಾದಾತ್ಮಕ ಹೇಳಿಕೆಯಿಂದ ತಮ್ಮ ಮನಸ್ಸಿಗೆ ನೋವುಂಟು ಮಾಡಿದ್ದರೆ ಅದಕ್ಕಾಗಿ ಪ್ರಾಮಾಣಿಕವಾಗಿ ಕ್ಷಮೆಯಾಚಿಸುವೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ನನ್ನ ಸುದೀರ್ಘ ವರ್ಷಗಳ ರಾಜಕೀಯ ಮತ್ತು ಸಾರ್ವಜನಿಕ ಜೀವನದಲ್ಲಿ ಯಾವತ್ತೂ ಪ್ರತ್ಯಕ್ಷ-ಪರೋಕ್ಷವಾಗಿ ನ್ಯಾಯಾಂಗದ ಸದಸ್ಯರ ಖ್ಯಾತಿಗೆ ಚ್ಯುತಿ ಬರುವಂತೆ ನಡೆದು ಕೊಂಡಿಲ್ಲ ಮತ್ತು ಹೇಳಿಕೆಯನ್ನೂ ನೀಡಿಲ್ಲ ಎಂದು ರಾಜ್ಯ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಡಿಕುನ್ಹಾ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ನಾನು ಇತ್ತೀಚೆಗೆ ನೀಡಿದ ಹೇಳಿಕೆ ಮೇಲ್ನೋಟಕ್ಕೆ ವಿವಾದ ಹುಟ್ಟುಹಾಕಿದೆ. ಆದರೆ, ಯಾವತ್ತೂ ನ್ಯಾಯಾಂಗದ ಸದಸ್ಯರ ಖ್ಯಾತಿ ತಗ್ಗಿಸುವ ಪ್ರವೃತ್ತಿ ತೋರಿಲ್ಲ. ನ್ಯಾಯಾಂಗ ಮತ್ತು ತಮ್ಮ ಬಗ್ಗೆ ಈಗಲೂ ಗೌರವವಿದೆ ಎಂದು ಜೋಶಿ ಪ್ರತಿಪಾದಿಸಿ ದ್ದಾರೆ. ನ್ಯಾಯಾಂಗ ಮತ್ತು ಗೌರವಾನ್ವಿತ ನ್ಯಾಯಾಧೀಶರು ಸಂವಿಧಾನದ ಕವಚವಾ ಗಿದ್ದಾರೆ. ನ್ಯಾಯದಾನದ ಪವಿತ್ರ ಕರ್ತವ್ಯದಲ್ಲಿ ಪ್ರಮುಖ ಪಾತ್ರ ಹೊಂದಿದವರೆಂದು ನಂಬಿದವನಾಗಿದ್ದೇನೆ. ಆದರೆ, ತಮ್ಮ ನೇತೃತ್ವದ ಸಮಿತಿ ವರದಿ ಉಲ್ಲೇಖಿಸಿ ಇತ್ತೀಚೆಗೆ ನೀಡಿದ ಹೇಳಿಕೆ ಅವಹೇಳನದಿಂದ ಕೂಡಿದೆ ಎಂಬ ಆರೋಪ ಕೇಳಿಬಂದಿದ್ದು, ಇದಕ್ಕಾಗಿ ತಮ್ಮಲ್ಲಿ ಪ್ರಾಮಾಣಿಕವಾಗಿ ಕ್ಷಮೆ ಕೇಳುತ್ತೇನೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಆಯೋಗದ ಸದಸ್ಯರಾಗಿ ತಮ್ಮ ಕರ್ತವ್ಯ ನಿರ್ವಹಣೆ ಮತ್ತು ನಿಷ್ಪಕ್ಷಪಾತವನ್ನು ಅನುಮಾನಿಸಲು ನನಗೆ ಯಾವುದೇ ಕಾರಣವಿಲ್ಲ ಎಂಬುದನ್ನು ಈ ಮೂಲಕ ನೇರವಾಗಿ ತಮ್ಮ ಗಮನಕ್ಕೆ ತರಬಯಸಿದ್ದೇನೆ. ನನ್ನ ಹೇಳಿಕೆಗಳು ತಮಗೆ ಯಾವುದೇ ನೋವು ಅಥವಾ ಅನುಮಾನ ಉಂಟುಮಾಡಿದ್ದರೆ ಅದಕ್ಕೆ ವಿಷಾದಿಸುತ್ತೇನೆ ಮತ್ತು ಪ್ರಾಮಾಣಿಕ ವಾಗಿ ಕ್ಷಮೆಯಾಚಿಸುತ್ತೇನೆ ಎಂದು ಸಚಿವ ಜೋಶಿ ಅವರು ನ್ಯಾಯಮೂರ್ತಿ ಮೈಕಲ್ ಡಿ ಕುನ್ಹಾ ಅವರಲ್ಲಿ ಕೋರಿದ್ದಾರೆ.

ಖ್ಯಾತಿ ಕುಗ್ಗಿಸುವ ಯತ್ನ ನನ್ನದಾಗಿರಲಿಲ್ಲ

ಸಿಎಂ ಸಿದ್ದರಾಮಯ್ಯ ಅವರ ಕಾಂಗ್ರೆಸ್ ಸರಕಾರ ತರಾತುರಿಯಲ್ಲಿ ನ್ಯಾಯ ಮೂರ್ತಿ ಮೈಕೆಲ್ ಡಿ ಕುನ್ಹಾ ಅವರಿಂದ ವರದಿ ತರಿಸಿಕೊಂಡಿದೆ ಎಂದು ಹೇಳಿದ್ದೇನೆ ಹೊರತು ತಮ್ಮ ಮೇಲೆ ಯಾವುದೇ ವೈಯಕ್ತಿಕ ಹೇಳಿಕೆ ನೀಡಿಲ್ಲ. ತಮಗೆ ಮತ್ತು ಆಯೋಗಕ್ಕೆ ಅಪಕೀರ್ತಿ ತರಲು ಅಥವಾ ಜನರ ಮನಸ್ಸಿನಲ್ಲಿ ನಿಮ್ಮ ಇಮೇ ಜ್ ಕಡಿಮೆ ಮಾಡುವ ಉದ್ದೇ ಶದ್ದೂ ಅಲ್ಲ ಎಂದು ಸಚಿವ ಜೋಶಿ ನ್ಯಾಯ ಮೂರ್ತಿ ಕುನ್ಹಾ ಅವರಿಗೆ ತಿಳಿಸಿದ್ದಾರೆ.

ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ 10 ಮಂದಿ ನಕ್ಸಲರ ಎನ್‌ಕೌಂಟರ್

ನಕ್ಸಲರ ಕೊಂದು ಡ್ಯಾನ್ಸ್ ಮಾಡಿದ ಸೈನಿಕರು

ದೆಹಲಿ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಕನಿಷ್ಠ 10 ಮಂದಿ ನಕ್ಸಲರನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ ಬಳಿಕ ಸೈನಿಕರು ಒಟ್ಟಾಗಿ ನೃತ್ಯ ಮಾಡಿದ ಘಟನೆ ವೈರಲ್ ಆಗಿದೆ.

ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯ ಭೆಜ್ಜಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭದ್ರತಾ ಪಡೆಗಳು ಮತ್ತು ನಕ್ಸಲೀಯರ ನಡುವೆ ಎನ್‌ಕೌಂಟರ್ ನಡೆದಿತ್ತು. ಈ ವೇಳೆ ನಡೆದಿದ್ದ ಎನ್‌ಕೌಂಟರ್‌ನಲ್ಲಿ 10 ಮಂದಿ ನಕ್ಸಲೀಯರನ್ನು ಹತ್ಯೆ ಮಾಡಲಾಗಿತ್ತು. ಸ್ಥಳದಿಂದ ಮೂರು ಸ್ವಯಂಚಾಲಿತ ರೈಫಲ್‌ಗಳು ಮತ್ತು ಇತರ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಒಡಿಶಾ ಮೂಲಕ ಹಲವು ನಕ್ಸಲೀಯರು ಛತ್ತೀಸ್‌ಗಢ ಪ್ರವೇಶಿಸುತ್ತಿದ್ದಾರೆ ಎಂಬ ಮಾಹಿತಿ ಯೋಧರಿಗೆ ಸಿಕ್ಕಿತ್ತು. ನಕ್ಸಲೀಯ ರನ್ನು ಸುತ್ತುವರಿಯಲು ಡಿಆರ್‌ಜಿ ತಂಡ ಹೊರಟಿತ್ತು. ಎರಡೂ ಕಡೆಯಿಂದ ನೂರಾರು ಸುತ್ತಿನ ಗುಂಡಿನ ಚಕಮಕಿ ನಡೆದಿತ್ತು ಹಾಗೂ ಹಲವು ಸ್ವಯಂಚಾಲಿತ ಶಸ್ತ್ರಾಸ್ತ್ರಗಳೂ ಪತ್ತೆಯಾಗಿವೆ. ಈ ಎನ್‌ಕೌಂಟರ್ ಕೊರಾಜುಗುಡ, ದಾಂಟೆಸ್‌ಪುರಂ, ನಗರಂ, ಭಂಡಾರ್‌ಪದರ್‌ನ ಅರಣ್ಯ-ಗುಡ್ಡಗಳಲ್ಲಿ ನಡೆದಿದೆ. ಈ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ವೇಳೆ ನಕ್ಸಲೀಯರು ಯೋಧರ ಮೇಲೆ ದಾಳಿ ನಡೆಸಿದ್ದರು, ಗುಂಡಿನ ಚಕಮಕಿ ನಡೆದಿತ್ತು ಎಂದು ಐಜಿಪಿ ಸುಂದರರಾಜ್ ಮಾಹಿತಿ ನೀಡಿದ್ದಾರೆ.

ಸೈನಿಕರ ಈ ಯಶಸ್ಸು ಶ್ಲಾಘನೀಯ: ಮುಖ್ಯಮಂತ್ರಿ

ನಮ್ಮ ಸರಕಾರವು ನಕ್ಸಲೀಯರ ವಿರುದ್ಧ ಶೂನ್ಯ ಸಹಿಷ್ಣುತೆಯ ನೀತಿಯಲ್ಲಿ ಕೆಲಸ ಮಾಡುತ್ತಿದೆ. ತಮ್ಮ ಅದಮ್ಯ ಧೈರ್ಯವನ್ನು ಪ್ರದರ್ಶಿಸಿದ ಭದ್ರತಾ ಪಡೆಗಳು ಸುಕ್ಮಾ ಜಿಲ್ಲೆಯಲ್ಲಿ ನಕ್ಸಲೀಯರ ವಿರುದ್ಧ ಪ್ರಮುಖ ಕ್ರಮ ಕೈಗೊಂಡು ಎನ್ ಕೌಂಟರ್‌ನಲ್ಲಿ 10 ನಕ್ಸಲೀಯರನ್ನು ಕೊಂದಿದ್ದಾರೆ ಎಂದು ಛತ್ತೀಸಗಢ ಮುಖ್ಯಮಂತ್ರಿ ವಿಷ್ಣುದೇವ್ ಸಾಯಿ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಅದಾನಿಯನ್ನು ಕೇಂದ್ರ ಬಂಧಿಸಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರಕಾರ ಇಷ್ಟು ದಿನಗಳ ಕಾಲ ಅದಾನಿ ಅವರನ್ನು ರಕ್ಷಣೆ ಮಾಡಿಕೊಂಡು ಬಂದಿದೆ. ಈಗಲಾದರೂ ದೇಶದ ಗೌರವ ಉಳಿಸಲು ಅವರನ್ನು ಬಂಧಿಸಿ, ಕಾನೂನು ಚೌಕಟ್ಟಿಗೆ ಒಳಪಡಿಸಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಪಕ್ಷದ ಪರವಾಗಿ ಆಗ್ರಹಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಮ್ಮ ನಾಯಕ ರಾಹುಲ್ ಗಾಂಧಿ ಅವರು ಕಳೆದ ಏಳೆಂಟು ವರ್ಷಗಳಿಂದ ನಿರಂತರವಾಗಿ ಅದಾನಿ ಅವರ ಕಂಪನಿಗಳ ಬಗ್ಗೆ ಆರೋಪ ಮಾಡಿ ಜನರ ಗಮನ ಸೆಳೆಯುತ್ತಿದ್ದರು. ಕೇಂದ್ರ ತನಿಖಾ ಸಂಸ್ಥೆಗಳು ಈ ವಿಚಾರವಾಗಿ ಕ್ರಮ ಕೈಗೊಂಡಿಲ್ಲ. ಈ ವಿಚಾರ ಸಂಸತ್ತಿನಿಂದ ಬೀದಿಗಳ ವರೆಗೂ ಚರ್ಚೆಯಾಯಿತು. ಗ್ರೀನ್ ಎನರ್ಜಿ ಯೋಜನೆಯಲ್ಲಿ ಆಗಿರುವ ಅಕ್ರಮದ ಬಗ್ಗೆ ಅಮೆರಿಕದ ನ್ಯಾಯಾಲಯ ಆದೇಶ ನೀಡಿದ್ದು, ಈ ವಿಚಾರವನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇದರಲ್ಲಿ ಭಾಗಿಯಾದವರನ್ನು ಕಾನೂನು ಚೌಕಟ್ಟಿನಲ್ಲಿ ತರಬೇಕು. ನಿಮ್ಮ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಗಳು ಸೇರಿದಂತೆ ವಿರೋಧ ಪಕ್ಷಗಳ ನಾಯಕರನ್ನು ಬಂಧಿಸಿದ್ದೀರಿ. ಹೀಗಾಗಿ ಅದಾನಿ ಅವರನ್ನು ಕಾನೂನು ಚೌಕಟ್ಟಿನಲ್ಲಿ ತಂದು ಬಂಧಿಸಬೇಕು ಎಂದು ಆಗ್ರಹಿಸಿದರು.

ಹೂಡಿಕೆದಾರರನ್ನು ರಕ್ಷಿಸಿ: ಕೇಂದ್ರ ಸರಕಾರ ಅದಾನಿ ಅವರ ರಕ್ಷಣೆ ಮಾಡಿ ಪ್ರಯೋಜನವಿಲ್ಲ. ದೇಶದ ಜನಸಾಮಾನ್ಯರು ಅವರ ಕಂಪನಿಗಳ ಮೇಲೆ ಸಾವಿರಾರು ಕೋಟಿ ಹೂಡಿಕೆ ಮಾಡಿದ್ದು, ಅವರ ಕಂಪನಿ ಷೇರುಗಳು ಬಿದ್ದು ಹೋಗುತ್ತಿದೆ. ಕೇಂದ್ರ ಸರ್ಕಾರ ಅವರ ರಕ್ಷಣೆ ಮಾಡಬೇಕು ಎಂದು ಆಗ್ರಹಿಸಿದರು.

ನನ್ನ ಪ್ರಕಾರ ರೆಸಾರ್ಟ್ ರಾಜಕಾರಣ ಹೊರತಾಗಿ ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಸಾಧ್ಯತೆ ಇದೆ. ಈ ಬಗ್ಗೆ ನಮ್ಮಲ್ಲಿ ಚರ್ಚೆಯಾಗಿಲ್ಲ. ಅಲ್ಲಿನ ಶಾಸಕರು, ಪ್ರಜ್ಞಾವಂತರಿದ್ದಾರೆ. ಸಮಸ್ಯೆಯಾಗುವುದಿಲ್ಲ. ಜನ ನಮಗೆ ಮತ ನೀಡಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ವಿಶ್ವಾಸವಿದೆ.

ಡಿ.ಕೆ.ಶಿವಕುಮಾರ್, ಡಿಸಿಎಂ

ಸರಕಾರಿ ಆಸ್ಪತ್ರೆ ದರ ಹೆಚ್ಚಳ ಆದೇಶ ವಾಪಸ್‌ಗೆ ಆಪ್ ಆಗ್ರಹ

ಬೆಂಗಳೂರು: ವಕ್ಫ್ ಹೆಸರಿನಲ್ಲಿ ಬಡವರ ಜಮೀನು ಮನೆ ಕಿತ್ತುಕೊಳ್ಳಲು ಹೊರಟ ಸರಕಾರ, ಬಿಪಿಎಲ್ ಕಾರ್ಡ್ ಪರಿಷ್ಕರಣೆ ಹೆಸರಿನಲ್ಲಿ ಬಡವರ ಅನ್ನ ಕಿತ್ತುಕೊಳ್ಳಲು ಮುಂದಾಗಿತ್ತು, ಇದೀಗ ಸರಕಾರಿ ಆಸ್ಪತ್ರೆಗಳಲ್ಲಿ ದರ ಏರಿಕೆ ಮಾಡುವ ಮೂಲಕ ಆರೋಗ್ಯ ಸೇವೆಯನ್ನು ಕೈಗೆಟುಕದಂತೆ ಮಾಡಲು ಮುಂದಾಗಿದೆ. ಬಡವರ ಬಗ್ಗೆ ಕಾಳಜಿಯಿದ್ದರೆ ಕೂಡಲೇ ಸರಕಾರ ದರ ಏರಿಕೆ ಆದೇಶ ಹಿಂಪಡೆಯಬೇಕು ಎಂದು ಎಎಪಿ ರಾಜ್ಯ ವೈದ್ಯರ ಘಟಕದ ಅಧ್ಯಕ್ಷ ಡಾ.ಕೇಶವಕುಮಾರ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸರಕಾರಿ ಆಸ್ಪತ್ರೆಯಲ್ಲಿ ಪ್ರವೇಶಕ್ಕೆ ಮೊದಲು 10 ರು.ಇದ್ದ ದರ 20ರು.ಗೆ ಏರಿಕೆ ಮಾಡಲಾಗಿದೆ. ಒಳರೋಗಿಗಳಿಗೆ 25 ರು. ಇದ್ದ ದರ 50.ರುಗೆ ಏರಿಕೆ ಮಾಡಿದ್ದು, ರಕ್ತ ಪರೀಕ್ಷೆ ಶುಲ್ಕ 70 ರು.ಗಳಿಂದ 120 ರು.ಗೆ ಏರಿಕೆ ಮಾಡುವ ಮೂಲಕ ಬಡವರ ಮೇಲೆ ಮತ್ತಷ್ಟು ಹೊರೆಯಾಗಿದೆ ಎಂದರು.

ಅಭಿವೃದ್ಧಿಗೆ ಹಣ ಅಗತ್ಯ

ಈ ಮೊದಲು ಆಸ್ಪತ್ರೆಯಲ್ಲಿ ಪಡೆಯುವ ಶುಲ್ಕದಿಂದ ಸರಕಾರಕ್ಕೆ ಆದಾಯ ಬರುತ್ತಿರಲಿಲ್ಲ, ಅಭಿವೃದ್ಧಿಗೆ ಆ ಹಣ ನಂಬಿಕೊಂಡಿರಲಿಲ್ಲ. ಒಂದು ದರ ಇರಬೇಕು ಎನ್ನುವ ಕಾರಣಕ್ಕೆ ಕನಿಷ್ಠ ಶುಲ್ಕ ನಿಗದಿ ಮಾಡಲಾಗಿತ್ತು. ಆದರೆ ಆರೋಗ್ಯ ಮಂತ್ರಿಗಳು ಬಹಳ ವರ್ಷದಿಂದ ಶುಲ್ಕ ಏರಿಕೆ ಮಾಡಿಲ್ಲ, ಹಣದುಬ್ಬರ ಜಾಸ್ತಿಯಾಗಿದೆ, ನಿರ್ವಹಣೆ ಕಷ್ಟ ಆಗುತ್ತಿದೆ ಆಸ್ಪತ್ರೆ ಅಭಿವೃದ್ಧಿಗೆ ಹಣ ಬೇಕಾಗಿದೆ ಅದಕ್ಕಾಗಿ ದರ ಹೆಚ್ಚಳ ಮಾಡುತ್ತಿರುವುದಾಗಿ ಸಮರ್ಥನೆ ಮಾಡಿಕೊಂಡಿರುವುದು ನಾಚಿಕೆಗೇಡಿನ ಸಂಗತಿ ಎಂದರು.

ಸಾವಿರಾರು ಕೋಟಿ ರು.ಬಜೆಟ್ ಮಂಡಿಸುವ ಸರಕಾರಕ್ಕೆ ಜನರಿಗೆ ಆರೋಗ್ಯ ಸೇವೆ ಕೊಡಲು ಮಾತ್ರ ಹಣ ಇಲ್ಲವಾಗಿದೆ. ಸರಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ವೈದ್ಯರಿಲ್ಲ, ಲ್ಯಾಬ್‌ಗಳಲ್ಲಿ ಸರಿಯಾದ ಟೆಕ್ನಿಷಿಯನ್‌ಗಳಿಲ್ಲ, ವೈದ್ಯಕೀಯ ಉಪಕರಣಗಳಿಲ್ಲ, ಸಮಯಕ್ಕೆ ಸರಿಯಾಗಿ ವೈದ್ಯಕೀಯ ಚಿಕಿತ್ಸೆ ಸಿಗದೆ ಬಡವರು ಕಷ್ಟ ಅನುಭವಿಸುತ್ತಿದ್ದಾರೆ, ಮೊದಲು ಆ ಸಮಸ್ಯೆಗಳನ್ನು ಸರಿಪಡಿಸಿ. ಬಡವರ ಬಗ್ಗೆ ಕಾಳಜಿ ಇದೆ ಎಂದು ಹೇಳುವ ಸರಕಾರಕ್ಕೆ ಬಡವರ ಆರೋಗ್ಯದ ಬಗ್ಗೆ ಯಾವ ಕಾಳಜಿಯೂ ಇಲ್ಲ. ಈ ಕೂಡಲೇ ದರ ಏರಿಕೆ ಮಾಡಿರುವುದನ್ನು ಹಿಂಪಡೆಯಬೇಕು, ಆಸ್ಪತ್ರೆಯಲ್ಲಿ ಮೂಲ ಸೌಕರ್ಯಗಳ ಕೊರತೆಯಿದ್ದು ಅದನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಬಿ ಪಾಸಿಟಿವ್

ವ್ಯರ್ಥ ಚರ್ಚೆಗಳಿಂದ ದೂರವಿರಿ

ನಮ್ಮ ಮನಸ್ಸಿರುವುದೇ ಹಾಗೆ - ಅದು ಸುಲಭವಾಗಿ ಯಾವುದನ್ನೂ ಒಪ್ಪಿಕೊಳ್ಳುವುದಿಲ್ಲ. ತನ್ನದೇ ಆದ ವಾದ-ವಿವಾದಗಳಿಗೆ ಸಿದ್ಧವಾಗುತ್ತದೆ. ನೂರೆಂಟು ತರ್ಕಗಳನ್ನು ಮಂಡಿಸುತ್ತದೆ. ತನ್ನನ್ನು ತಾನು ಸಮರ್ಥಿಸಿಕೊಳ್ಳುವತ್ತ ಮುಂದಾಗುತ್ತದೆ. ಇದರಿಂದ ನಮ್ಮ ಸಮಯ ಮತ್ತು ಶ್ರಮ ವ್ಯರ್ಥವಾಗುವುದಲ್ಲದೇ ಇನ್ನೇನೂ ಆಗದು. ಹಾಗಾಗಿಯೇ ನಾವು ಸಾಧ್ಯವಾದಷ್ಟು ನಮ್ಮ ಬದುಕಿಗೆ ಅಗತ್ಯವೆನಿಸದ ಚರ್ಚೆಗಳಲ್ಲಿ, ವಾದ ವಿವಾದಗಳಲ್ಲಿ ತೊಡಗಿಕೊಳ್ಳುವುದನ್ನು ತೊರೆಯಬೇಕು. ಮುಲ್ಲಾ ನಸ್ರುದ್ದೀನ ಪ್ರಯಾಣಿಸುತ್ತಿದ್ದ ರೈಲಿನಲ್ಲಿ ಹೊಸ ಪ್ರಯಾಣಿಕನೊಬ್ಬ ಅವನಿದ್ದ ಸ್ಥಳಕ್ಕೆ ಬಂದ. ಪರಿಚಿತನಂತೆ ಮಾತುಕತೆಗೆ ಮುಂದಾದ. ಆತ್ಮೀಯತೆಯ ನಗೆ ಬೀರಿದ. ತೀರ ಆಪ್ತತೆಯಿಂದ ಕೈ-ಹಿಡಿದು ಮಾತನಾಡತೊಡಗಿದ. ಮುಲ್ಲಾ ನಸ್ರುದ್ದೀನ ಕೂಡ ಅವನ ಉತ್ಸುಕತೆಯಿಂದಲೇ ಮಾತನಾಡಲು ಮುಂದಾದ. ಪ್ರಯಾಣಿಕ ಹೇಗಿದ್ದೀಯಾ ನಸ್ರುದ್ದೀನ? ಎಂದು ಪ್ರಶ್ನಿಸಿದ. ಚೆನ್ನಾಗಿದ್ದೇನೆ. ಎಲ್ಲವೂ ಕ್ಷೇಮಕರವಾಗಿದೆ ಎಂದ. ಮತ್ತೆ ಪ್ರಯಾಣಿಕ ನಿನ್ನ ಪತ್ನಿ ಹೇಗಿದ್ದಾರೆ? ಎಂದು ಕೇಳಿದ. ಅವಳು ತುಂಬ ಚೆನ್ನಾಗಿದ್ದಾಳೆ ಎಂದ. ಹಾಗೆಯೇ ನಿನ್ನ ಮಕ್ಕಳು ಹೇಗಿದ್ದಾರೆ ಎಂಬ ಪ್ರಯಾಣಿಕನ ಮತ್ತೊಂದು ಪ್ರಶ್ನೆಗೆ ಅವರೂ ಕೂಡ ತುಂಬ ಚೆನ್ನಾಗಿಯೇ ಇದ್ದಾರೆ ಎಂದು ನಗುತ್ತಲೇ ಉತ್ತರಿಸಿದ. ಸ್ವಲ್ಪ ಸಮಯದ ನಂತರ ಅವನು ಅಲ್ಲಿಂದ ಹೊರಟು ಹೋದ. ಅಲ್ಲಿಯೇ ಇದ್ದ ಮುಲ್ಲಾ ನಸ್ರುದ್ದೀನನ ಸ್ನೇಹಿತ ತೀರ ಆಶ್ಚರ್ಯದಿಂದ ಇದೇನು ನಿನಗೆ ಸತಿ-ಸುತರು ಇಲ್ಲವೆಂದರೂ ಅದೇಕೆ ಹಾಗೆ ಹೇಳಿದೆ ಎಂದು ಕೇಳಿದ. ಮುಲ್ಲಾ ನಸ್ರುದ್ದೀನ 'ನನಗೆ ಅವನೊಂದಿಗೆ ಅನಗತ್ಯವಾಗಿ ಚರ್ಚಿಸುವ ಅಗತ್ಯವಿರಲಿಲ್ಲ. ನಾನು ಇರುವುದನ್ನು ಹೇಳಿದರೆ ಅವನು ಅದಕ್ಕೆ ಪ್ರತಿಯಾಗಿ ಮತ್ತಷ್ಟು ಪ್ರಶ್ನೆಗಳನ್ನು ಕೇಳುತ್ತಿದ್ದ. ಮತ್ತೆ ಮತ್ತೆ ಉತ್ತರಿಸುವುದರಿಂದ ನನ್ನ ಸಮಯ ಮತ್ತು ಶ್ರಮ ವ್ಯರ್ಥವಾಗುತ್ತಿತ್ತು, ವಿನಃ ಯಾವುದೇ ಪ್ರಯೋಜನವಾಗುತ್ತಿರಲಿಲ್ಲ. ಸುಖಾಸುಮ್ಮನೆ ವ್ಯರ್ಥವೆನಿಸುವ ಸಣ್ಣ ಸಣ್ಣ ಸಂಗತಿಗಳಲ್ಲಿ ಸಮಯ ಹರಣ ಮಾಡುವುದು ಅರ್ಥಹೀನ ಅಲ್ಲವೇ?' ಎಂದ. ನಿಜ, ಅನಗತ್ಯ ಚರ್ಚೆ, ವಾದ-ವಿವಾದಗಳಲ್ಲಿ ವ್ಯರ್ಥ ಸಮಯ ಕಳೆಯುವದರಲ್ಲಿ ಯಾವುದೇ ಅರ್ಥವಿಲ್ಲ. ಅದರಿಂದ ನಮ್ಮ ಅಮೂಲ್ಯ ಸಮಯ ವ್ಯರ್ಥವಾಗುತ್ತದೆ. ಪ್ರಶಾಂತವಾದ ಕೊಳವೊಂದನ್ನು ಕದಡಿದ ಹಾಗೆ ಮನಸ್ಸು ತಲ್ಲಣಗೊಳ್ಳುತ್ತದೆ. ಇಂತಹ ಸಂಗತಿಗಳಿಂದ ಸಾಧ್ಯವಾದಷ್ಟು ದೂರವಿದ್ದು ನಮ್ಮ ಬದುಕನ್ನು ಕೈಗೆತ್ತಿಕೊಳ್ಳಬೇಕು. ಇಲ್ಲ ಸಲ್ಲದ ಸಂಗತಿಗಳತ್ತ ನಮ್ಮ ಮನಸ್ಸನ್ನು ವಿಕೇಂದ್ರಿಕರಣಗೊಳಿಸದೇ ನಮ್ಮ ಅಗತ್ಯತೆಗಳತ್ತ ಕೇಂದ್ರೀಕರಿಸಬೇಕು.

● ಮಹಾದೇವ ಬಸರಕೋಡ

ಮೌಲ್ಯ ಮರೆತರೇ?

ಯಾವುದೇ ಸರಕಾರ ಬಂದರೂ
ಒಂದಿಲ್ಲೊಂದು ಹಗರಣ
ಮೌಲ್ಯ ಮರೆತರೇ ಎಲ್ಲರೂ?
ಇದಕ್ಕೆಲ್ಲ ಕಾರಣ
ನಮ್ಮ ಧುರೀಣರ ರಾಜಕಾರಣ

● ಬಿ.ನಾಗರಾಜು

ಸಂಕಷ್ಟಗಳಿಗೆ ಹೆದರದಿರಿ!

ಸಮಸ್ಯೆಗಳು ಬಂದಾಗಲೇ ಜೀವನ ಎಂದರೆ ಏನೆಂಬುದು ಅರಿವಾಗುತ್ತದೆ. ಸಮಸ್ಯೆಗಳೆಂಬುದೆ ಇಲ್ಲದಿದ್ದರೆ ಜೀವನಕ್ಕೆ ಅಷ್ಟೊಂದು ಮಹತ್ವ ಬರುತ್ತಿರಲಿಲ್ಲ. ತಂಪಾದ ಅನುಭವ ಬರುವ ಮೊದಲು ನಮಗೆ ಬಿಸಿಯ ಅನುಭವ ಬರಬೇಕು. ಕಹಿ ಅನುಭವ ಇದ್ದಾಗಲೆ ಸಿಹಿಯಾವುದೆಂದು ಅರ್ಥವಾಗುತ್ತದೆ. ದೀಪ ಸುಡುತ್ತದೆಂದು ಅರಿವಿರದ ಮಗು ಮಾತ್ರ ಮುಟ್ಟಲು ಹವಣಿಸುತ್ತದೆ, ಅದು ಸುಡುತ್ತದೆಂದು ಯಾವಾಗ ಅರಿವಿಗೆ ಬರುತ್ತದೆಯೋ ಅಲ್ಲಿಂದ ಅದು ಮತ್ತೆಂದು ಮುಟ್ಟಲು ಹೋಗುವುದಿಲ್ಲ. ಜೀವ ಜಗತ್ತಿನಲ್ಲಿ ಯಾವುದು ಹಿತ ಯಾವುದು ವಿಹಿತ ಎಂಬುದರ ಅರಿವಾಗಲು ಆಗಾಗ ಭಗವಂತ ನಮಗೆಲ್ಲ ಸಂಕಷ್ಟಗಳೆಂಬ ಪರೀಕ್ಷೆಗೆ ಒಳಪಡಿಸುತ್ತ, ನಮ್ಮ ಅರಿವಿನ ಕ್ಷಿತಿಜವನ್ನು ವಿಸ್ತರಿಸುತ್ತ,

ಕೊನೆಗೆ ಪರಿಹಾರವೆಂಬ ದಿವ್ಯೌಷಧಿಯನ್ನು ನೀಡಿ ಕಾಪಾಡುತ್ತಾನೆ. ರಕ್ಕಸ ತೆರೆಗಳೆದ್ದು ಗುಲ್ಲೆಬ್ಬಿಸಿ ಕೊನೆಗೆ ಶಾಂತವಾಗುವ ಸಾಗರದಂತೆ ಪ್ರತಿ ಸಂಕಷ್ಟಗಳ ಹಿಂದೆ ಒಂದು ಸುಖಾನುಭವ ಇದ್ದೆ ಇರುತ್ತದೆ. ಇತ್ತಿಚಿನ ದಿನಗಳಲ್ಲಿ ಸಂಕಷ್ಟಗಳನ್ನು ಎದುರಿಸಲಾಗದೆ, ಹೆದರಿ, ಆತ್ಮಹತ್ಯೆಗೆ ಶರಣಾಗುತ್ತಿರುವವರು ಇಲ್ಲವೇ ಅನೈತಿಕ ಕಾರ್ಯಗಳಲ್ಲಿ ತೊಡಗಿಕೊಂಡವರ ವಿಚಾರ ತಿಳಿದುಕೊಂಡಾಗ 'ಬೇರೆಯವರು ಮಾಡುವ ತಪ್ಪುಗಳಿಂದ ಪಾಠ ಕಲಿತುಕೊಳ್ಳಿ, ಎಲ್ಲ ತಪ್ಪುಗಳನ್ನು ನೀವೆ ಮಾಡುವಷ್ಟು ಜೀವನದ ಆಯಸ್ಸು ನಿಮಗಿಲ್ಲ' ಎಂಬ ಚಾಣಕ್ಯನ ಮಾತು ನೆನಪಾಗುತ್ತದೆ. ನಮಗೆ ಬಂದಿರುವ ಸಂಕಷ್ಟಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ನಿರಂತರ ಪ್ರಯತ್ನಿಸಬೇಕು. ಅಸಹಾಯಕ ಸಂದರ್ಭಗಳಲ್ಲೆಲ್ಲ ನಾವು ನಮ್ಮಲ್ಲಿನ ಅಹಮಿಕೆಯನ್ನು ಬದಿಗೊತ್ತಿ ಸಹೃದಯರಲ್ಲಿ ಸಹಾಯಕ್ಕಾಗಿ ಯಾಚಿಸಬೇಕು. ಮುಖದಲ್ಲಿ ಯಾವಾಗಲೂ ನಗುವೊಂದಿದ್ದರೆ ಸಾಕು, ಹೆಚ್ಚಿನ ಸಮಸ್ಯೆಗಳು ವಿಳಾಸ ತಪ್ಪಿ ಬಂದಿದ್ದೇವೆಂದುಕೊಂಡು ಹೇಳದೆ ಹೊರಟು ಹೋಗುತ್ತವಂತೆ. ಜೀವನದಲ್ಲಿ ಬರುವ ಎಲ್ಲ ಸಂಕಷ್ಟಗಳು ನಮಗೊಂದು ಹಿರಿದಾದ ಪಾಠ ಕಲಿಸಿ ಜೀವನದ ಬದಲಾವಣೆಗೆ ಮಾರ್ಗ ತೋರುತ್ತವೆ. ಹಾಗಾಗಿ ಸಂಕಷ್ಟಗಳು ಬಂದೆರಗಿದಾಗ ಎಲ್ಲವೂ ಮುಗಿಯಿತೆಂದು ಕೈಚೆಲ್ಲಿ ಕೂಡದೆ, ಹೊಸ ಭರವಸೆಯ ಬೆಳಕೊಂದು ಗೋಚರಿಸುವವರೆಗೂ ಕಾಯಬೇಕು.

ನೀವೂ ಬರೆಯಬಹುದು

ನಮ್ಮ ವಿಳಾಸ:

ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ವಿಶ್ವವಾಣಿ ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

@vishwavaninews
ಬೆಂಗಳೂರು
ಶನಿವಾರ
23 | 11 | 2024

ಶೇಕಡಾ ಎಂಭತ್ತರಷ್ಟು ಗ್ರಾಹಕ ಸಂಬಂಧಿ ದೂರುಗಳು ಶೇಕಡಾ ಇಪ್ಪತ್ತರಷ್ಟು ಮಂದಿಯಿಂದಲೇ ಬರುವುವು ಎಂದು ಇಂದಿನ ತಂತ್ರಜ್ಞಾನಾಧರಿತ ಸರ್ವೇಗಳಿಂದ ಕಂಡುಬಂದಿವೆ. ಇದನ್ನು ಗಮನದಲ್ಲಿಟ್ಟುಕೊಂಡು, ಕಾರ್ಯನಿರ್ವಹಣೆ ನಡೆದರೆ, ಯಶಸ್ಸು ಬೇಗನೆ ಲಭ್ಯವಾದೀತು.

ಗೊತ್ತೇ ನಿಮಗೆ 80:20 ನಿಯಮ

● ಡಾ. ಎನ್ ಜಯರಾಮ ಶೆಟ್ಟಿ

ಇಟಾಲಿಯನ್ ಅರ್ಥ ಶಾಸ್ತ್ರಜ್ಞ ವಿಲ್‌ಫ್ರೆಡ್ ಪೆರೆಟೊರವರು ವೈಯಕ್ತಿಕ ಉತ್ಕೃಷ್ಟತೆ ಮತ್ತು ಸಮಯ ಪರಿಪಾಲನೆಗೆ ಪೂರಕವಾಗಿರುವ ಸರಳ ಸೂತ್ರ 'ಪೆರೆಟೊ ಪ್ರಿನ್ಸಿಫಲ್' ಅನ್ನು ಯಶಸ್ವಿಯಾಗಿ ಪ್ರತಿಪಾದಿಸಿ ಅಳವಡಿಕೆ ಕುರಿತಾಗಿ ಮಾರ್ಗದರ್ಶನ ನೀಡಿದವರು. ಇದನ್ನು 80:20 ನಿಯಮವೆಂತಲೂ ಕರೆದಿದ್ದಾರೆ. ವ್ಯವಸ್ಥಾಪನಾ ಶಾಸ್ತ್ರದ ಒಂದು ಭಾಗವಾಗಿ ಈ ನಿಯಮ ಬಳಕೆಯಲ್ಲಿದೆ.

ಪ್ರತಿಯೋರ್ವ ತನ್ನ ದಿನನಿತ್ಯದ ಕೆಲಸ ನಿರ್ವಹಣೆಯಲ್ಲಿ ಈ ಸೂತ್ರವನ್ನು ಪಾಲಿಸಬಹುದು. ಸಂಸ್ಥೆಗಳ ಯೋಜನೆ ನಿಭಾವಣೆ, ಸಂಪನ್ಮೂಲಗಳ ಮಿತ ಬಳಕೆ, ದುಂದು ವೆಚ್ಚವನ್ನು ತಡೆಗಟ್ಟುವುದು, ಗರಿಷ್ಠ ಉತ್ಪನ್ನ ನೀಡುವ ಯೋಜನೆಗಳ ಆಯ್ಕೆ ಹೀಗೆ ಹತ್ತು ಹಲವಾರು ವಿಭಾಗಗಳಲ್ಲಿ ಪೆರೆಟೊ ಪ್ರಿನ್ಸಿಫಲ್ ಅನ್ನು ಅನುಸರಿಸಬಹುದು. ವಿದ್ಯಾರ್ಥಿಗಳ ತಯಾರಿಯಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ತಯಾರಿ ಮತ್ತು ಸಂಶೋಧಕರ ಕಾಲಮಿತಿ ಫಲಿತಾಂಶ ಈಡೇರುವಿಕೆಯಲ್ಲೂ ಪರಿಣಾಮಕಾರಿಯಾಗಿ ಈ ನಿಯಮವನ್ನು ಕಾರ್ಯರೂಪಕ್ಕೆ ತರಬಹುದು. ಪೆರೆಟೊ ನಿಯಮ ಒಂದು ಶಿಸ್ತಿನ ನಡವಳಿಕೆ ಮತ್ತು ಒಡಂಬಡಿಕೆ. ಇದಕ್ಕೆ ಯಾವುದೇ ಖರ್ಚಿಲ್ಲ, ಪ್ರಶಿಕ್ಷಣ ಬೇಕಿಲ್ಲ.

ಮೂಲಸಿದ್ಧಾಂತ

ನೂರಕ್ಕೆ ಎಂಭತ್ತರಷ್ಟು ಫಲಿತಾಂಶವನ್ನು ಇಪ್ಪತ್ತರಷ್ಟು ಶ್ರಮ ಮತ್ತು ಕ್ರಮಗಳಿಂದ ಸಾಧ್ಯವೆನ್ನುವುದನ್ನು ಪೆರೆಟೊರವರು ತೋರಿಸಿಕೊಟ್ಟರು. ಪ್ರತಿಯೊಂದು ಕೆಲಸದಲ್ಲಿ, ಗರಿಷ್ಠ ಫಲವನ್ನು ಕನಿಷ್ಠ ಸಮಯದ ವ್ಯಯ ಮತ್ತು ಸಂಪನ್ಮೂಲದ ಬಳಕೆಯಿಂದ ಹೇಗೆ ಸಾಧ್ಯವೆನ್ನುವುದು ಹೆಚ್ಚಿನವರಿಗೆ ತಿಳಿದಿಲ್ಲ. ಸೂಜಿಯಲ್ಲಿ ತೆಗೆಯಬಹುದಾದನ್ನು ಮಚ್ಚಿನಿಂದ ಕೊಚ್ಚುವ ನಿರ್ಧಾರವೇ ಖರ್ಚಿಗೆ ದಾರಿ ಮತ್ತು ಸೋಲಿಗೆ ಮೂಲ. ಬ್ಯಾಂಕ್ ಶಾಖೆಯೊಂದಕ್ಕೆ ಸಾವಿರಾರು ಗ್ರಾಹಕರಿದ್ದಿರಬಹುದು.



ಕೇವಲ ಸಂಖ್ಯೆಯಿಂದ ಏನೂ ಆಗದು. ಅಧ್ಯಯನ ಹೇಳುವಂತೆ ಶೇಕಡಾ ಎಂಭತ್ತರಷ್ಟು ಆದಾಯ ಶೇಕಡಾ ಇಪ್ಪತ್ತರಷ್ಟು ಗ್ರಾಹಕರಿಂದ ಬರುವುದಂತೆ. ಪೆರೆಟೊ ನಿಯಮ ಈ 80:20 ನಿಯಮವನ್ನು ಎತ್ತಿಹೇಳುತ್ತದೆ. ನಿಮ್ಮ ಕಾರ್ ಅಥವಾ ಸ್ಕೂಟರ್‌ನ ಮೇಲಿನ ಖರ್ಚುವೆಚ್ಚ, ಆಪತ್ತು-ವಿಪತ್ತು ನಿಭಾವಣಾ ಶುಲ್ಕ ಈ ನಿಯಮದಂತೆಯೇ ಇದೆ ನೋಡಿ. ಶೇಕಡಾ ಎಂಭತ್ತರಷ್ಟು ಟಯರ್ ಪಂಕ್ಚರ್, ಭಾಗಗಳ ಸವೆಯುವಿಕೆ ವಾಹನದ ಇಪ್ಪತ್ತರಷ್ಟು ಉಳಿದ ಕಾಲಾವಧಿಯಲ್ಲೇ ಆಗುವುದನ್ನು ನಾವು ನೋಡಬಹುದು. ಮುಂದುವರಿದು ಹೀಗೂ ಹೇಳಬಹುದು:- ಶೇಕಡಾ ಎಂಭತ್ತರಷ್ಟು ಗ್ರಾಹಕ ಸಂಬಂಧಿ ದೂರುಗಳು ಶೇಕಡಾ ಇಪ್ಪತ್ತರಷ್ಟು ಮಂದಿಯಿಂದಲೇ ಬರುವುವು ಎಂದು ಇಂದಿನ ತಂತ್ರಜ್ಞಾನಾಧರಿತ ಸರ್ವೇಗಳಿಂದ ಕಂಡುಬಂದಿವೆ. ಯಾವುದೇ ವಿದ್ಯಮಾನ, ವಿಭಾಗ ಗಳಲ್ಲಿ ಕೆಳಗಿನ ವಿಷಯಗಳಲ್ಲಿ ಈ ನಿಯಮವನ್ನು ಪರಿಣಾಮಕಾರಿಯಾಗಿ ಬಳಸಬಹುದು.

ಗುರಿಗಳ ಆಯ್ಕೆ

ಉತ್ತಮ ಬದುಕಿಗೆ ಗುರು ಮತ್ತು ಗುರಿ ಬೇಕಲ್ಲ? ಪ್ರತಿಯೊಂದು ಗುರಿಯಿಂದ ಸಿಗಬಹುದಾದ ಫಲ ಮತ್ತು ತಗಲುವ ವೆಚ್ಚ, ಸಮಯ, ಎದುರಾಗುವ ವಿಪತ್ತು ಈ ಎಲ್ಲವನ್ನು 80:20ರ ರೂಲ್ ಬಳಸಿ ನಾವು ನಿಷ್ಕರ್ಷಿಸಬಹುದು. ಬೆಳಿಗ್ಗೆ ನಾಲ್ಕು ಘಂಟೆಗೆ ಎದ್ದಿದ್ದೇನೊ ನಿಜ, ಮುಂದಿನ ಎರಡು ತಾಸುಗಳಲ್ಲಿ ಆದದ್ದು ಏನು, ತಲುಪಿದ್ದು ಎಲ್ಲಿ ಇದರ ಪರಿಜ್ಞಾನ ಮತ್ತು ವಿವೇಚನೆ ಈ ರೂಲ್ ಪಾಲನೆ ಮೂಲಕ ಸಾಧ್ಯವಾಗಬಹುದು. ಪೆರೆಟೊ ರೂಲ್ ಎಲ್ಲವನ್ನು ಬೆಳಕಿಗೆ ತಂದು ನಮ್ಮನ್ನು ಕೊನೆಗೆ 80:20 ರ ಆಯ್ಕೆಗೆ ಅಣಿಗೊಳಿಸುತ್ತದೆ.. ಕೇವಲ ಇಪ್ಪತ್ತರಷ್ಟಿನ ಫಲಿತಾಂಶಕ್ಕೆ, ಚಟುವಟಿಕೆ, ಓಡಾಟ ನಮ್ಮ ಎಂಭತ್ತರಷ್ಟು ಸಮಯ ತೆಗೆದುಕೊಂಡರೆ, 'ತಲೆನೋವು' ತಂದರೆ ಏನು ಮಾಡಿದ ಹಾಗಾಯಿತು? ಶೇ. ಎಂಭತ್ತರಷ್ಟು ರಿಪೇರಿ ಕೊನೆಯ ಶೇ. ಇಪ್ಪತ್ತರ ಅವಧಿಯಲ್ಲಿ ಯಾತಕ್ಕಾದರೂ ಮಾಡಿಸಬೇಕು?

ಪರಿಣಾಮ ವಿಶ್ಲೇಷಣೆ

ಯಾವ ವಿನಿಯೋಗದಲ್ಲಿ ಎಷ್ಟು ಅನುಕೂಲ, ಯಾರ ಸಂಪರ್ಕದಲ್ಲಿ ಎಷ್ಟು ಕಿರಿಕಿರಿ-ನಿಷ್ಠುರ, ಯಾವ ಖರೀದಿಯಿಂದ ಎಷ್ಟು ಅನಾವಶ್ಯತ ಭಾರ, ಸ್ಥಳದ ಬಳಕೆ ಹೀಗೆ ಪ್ರತಿಯೊಂದು ನಿರ್ಧಾರದಲ್ಲಿ ಪೆರೆಟೊ ರೂಲ್ ಪ್ರಸ್ತುತವಾಗುತ್ತದೆ. ಒಂದು 'ಹೌದು' ಯಾ 'ಇಲ್ಲ/ಅಲ್ಲ' ಶಬ್ದಗಳ ಇಂಪ್ಯಾಕ್ಟ್ ಅನ್ನು ನಾವು ಈ ನಿಯಮದಡಿ ವಿಶ್ಲೇಷಿಸಬಹುದು. ಇದಕ್ಕೆ ಬೇಕಾಗುವುದು ಕಾಗದ, ಪೆನ್, ವಿವರಗಳನ್ನು ಬರೆಯುವ ವ್ಯವಧಾನ, ಸಾಮಾನ್ಯ ಜ್ಞಾನ ಮತ್ತು ಅಪರಿಮಿತ ವಿಶ್ವಾಸ ಮತ್ತು ತುಸು ತಾಳ್ಮೆ. ಇಂದಿನ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಯುಗದಲ್ಲಿ, ಇದೇ ಕೆಲಸವನ್ನು ಕಂಪ್ಯೂಟರ್ ಮೂಲಕ ಮಾಡಿ, ಒಟ್ಟಾರೆ ವಿಶ್ಲೇಷಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದು.

ಈ ನಿಯಮದ ಪ್ರತಿಪಾದಕ ಒಬ್ಬ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಎನ್ನುವುದು ವಿಶೇಷ ಎನಿಸಿದೆ. ಆತನ ಗಮನ ವ್ಯವಸ್ಥೆಯ ಸ್ಥೂಲ ಮತ್ತು ಸೂಕ್ಷ್ಮಾಂಶಗಳ ಮೇಲಿದ್ದಿರಬಹುದು. ಆತನ ಹೆಸರಿನ ಮೇಲಿರುವ ಈ ನಿಯಮವನ್ನು ವ್ಯಕ್ತಿಯೊಬ್ಬನ ವೈಯಕ್ತಿಕ ಹಣಕಾಸಿನ ನಿರ್ವಹಣೆಯಿಂದ ಮೊದಲ್ಗೊಂಡು ಉನ್ನತ ಸ್ಥರದ ಆಡಳಿತ ಮಜಲುಗಳಲ್ಲೂ ವ್ಯವಸ್ಥಿತವಾಗಿ ಬಳಸಬಹುದು.

ನಿತ್ಯ ಜೀವನದಲ್ಲಿ ಭಗವದ್ಗೀತೆ



ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಶತ್ರು ಹಾಗೂ ಮಿತ್ರರನ್ನೂ ಗುರುತಿಸುವದು

ನಾವೇ ನಮ್ಮ ಶತೃವು ಹೌದು ಮಿತ್ರರೂ ಹೌದು ಎಂದು ಶ್ರೀಕೃಷ್ಣ ಗೀತೆಯಲ್ಲಿ ಹೇಳಿದ್ದಾನೆ. ಬೋನಿಗೆ ಬಿದ್ದ ಮಂಗನ ಈ ಕೆಳಗಿನ ಕಥೆಯು ಈ ಮಾತನ್ನು ಸ್ಪಷ್ಟಪಡಿಸುತ್ತದೆ. ಒಂದು ಮಂಗನ ಕೈ ಹೋಗಲಾರದಷ್ಟು ಚಿಕ್ಕ ಬಾಯಿ ಇರುವ ಒಂದು ಮಡಿಕೆಯಲ್ಲಿ ಕೆಲವು ಕಾಯಿಗಳನ್ನು ಇಡಲಾಗಿತ್ತು. ಮಂಗವು ತನ್ನ ಕೈಯ್ಯನ್ನು ಆ ಮಡಿಕೆಯೊಳಗೆ ತೂರಿಸಿ ಅಲ್ಲಿರುವ ಕಾಯಿಗಳನ್ನು ಹಿಡಿದುಕೊಳ್ಳುತ್ತದೆ. ಕೈಯ್ಯಲ್ಲಿ ಕಾಯಿಗಳು ತುಂಬಿರುವದರಿಂದ ಕೈಯ ಗಾತ್ರ ದೊಡ್ಡದಾಗುತ್ತದೆ ಹಾಗಾಗಿ ಅದು ಕೈಯ್ಯನ್ನು ಹೊರಗೆ ತೆಗೆಯಲಾರದು. ಮಂಗವು ತನ್ನ ಕೈ ಹೊರತೆಗೆಯುವ ಎಲ್ಲ ಪ್ರಯತ್ನವನ್ನೂ ಮಾಡುತ್ತದೆ. ಯಾರೊ ಒಬ್ಬರು ತನ್ನ ಕೈಯ್ಯನ್ನು ಅಲ್ಲಿ ಹಿಡಿದುಕೊಂಡಿದ್ದಾರೆಂದು ಅದು ಭಾವಿಸುತ್ತದೆ. ಆದರೆ ತನ್ನ ಕೈ ತಾನಾಗಿಯೇ ಹಿಡಿದುಕೊಂಡಿದೆ ಎಂದು ಅದು ತಿಳಿಯದು. ಎಷ್ಟೇ ಹೇಳಿದರೂ ಮಂಗವು ತನ್ನ ಕೈಯ್ಯಲ್ಲಿರುವ ಕಾಯಿಗಳನ್ನು ಬಿಟ್ಟುಕೊಡುವದಿಲ್ಲ ಬದಲಾಗಿ ನಾವು ಆ ಕಾಯಿಗಳನ್ನು ಕಸಿಯಲು ಪ್ರಯತ್ನಿಸುತ್ತಿದ್ದೇವೆ ಎಂದು ಅದು ತಿಳಿಯುತ್ತದೆ. ಹೊರಗಿನಿಂದ ನೋಡಿದರೆ ಮಂಗವು ತನ್ನ ಕೈಯಲ್ಲಿ ಇರುವ ಕೆಲವು ಕಾಯಿಗಳನ್ನು ಕೆಳಕ್ಕೆ ಹಾಕಿ ತನ್ನ ಕೈಯನ್ನು ಸಡಿಲಗೊಳಿಸಿದರೆ ಕೈ ಹೊರಗೆ ಬರುತ್ತದೆ ಎಂಬುದು ಸರಳವಾಗಿ ತೋರುತ್ತದೆ. ಆದರೆ ನಾವೇ ಇಂಥ ಸಂಕಷ್ಟದಲ್ಲಿದ್ದಾಗ ಅದನ್ನು ತಿಳಿದುಕೊಳ್ಳುವುದೇ ಒಂದು ಸವಾಲು. ಮುಚ್ಚಿದಕೈ ನಮ್ಮ ಶತ್ರು ತೆರೆದ ಕೈ ನಮ್ಮ ಮಿತ್ರ. ಕೈಯನ್ನು ಮುಚ್ಚುವದು ಅಥವಾ ತೆರೆಯುವದು ನಮಗೆ ಬಿಟ್ಟಿದ್ದು. ಹೀಗೆ ನಮಗೆ ನಾವೇ ಮಿತ್ರರಾಗಲೂ ಬಹುದು ಶತ್ರುವಾಗಲೂಬ ಹುದು. ಜೀವನದಲ್ಲಿ ಎಷ್ಟೋ ಸಂಕಷ್ಟಗಳನ್ನು ನಾವು ಎದುರಿಸು ತ್ತೇವೆ. ಆ ಕಾಯಿಗಳನ್ನು ನಾನು, ನನ್ನದು, ನನಗೆ ಹಾಗೆ ಅಹಂಕಾರ ನಮ್ಮನ್ನು ಅದಕ್ಕೆ ಬಂಧಿಸುತ್ತದೆ. ನಾವು ನಮ್ಮ ಅಹಂಕಾರವನ್ನು ಬಿಡಬೇಕೆಂದು ಗೀತೆಯು ಹಲವುರೀತಿಯಲ್ಲಿ ಪುನಃ ಪುನಃ ನಮಗೆ ತಿಳಿಸುತ್ತದೆ. ಇದರಿಂದ ನಾವು ಅಂಥ ಜಾಲದಿಂದ ಮುಕ್ತವಾಗಿ ಅಂತಿಮ ಸ್ವಾತಂತ್ರ್ಯದೆಡೆಗೆ ಹೋಗಲು ಸಾಧ್ಯವಾಗುತ್ತದೆ. ಗೊಂದಲಗಳಿಂದ ತುಂಬಿದ ಈ ಜಗತ್ತಿನಲ್ಲಿ ತೀವ್ರಗತಿ ಯಲ್ಲಿ ಸಾಗದೇ ನಿಧಾನವಾಗಿ ಸಾಗಿದರೆ ಅಂಥ ಜಾಲಗಳ ಬಗ್ಗೆ ತಿಳಿದುಕೊಳ್ಳುವದು ನಮಗೆ ಸುಲಭವಾಗುತ್ತದೆ. ಕೋವಿಡ್ ಅವಧಿಯಲ್ಲಿ ಸಿಕ್ಕ ಸಮಯವು ಅಂಥ ತಿಳುವಳಿಕೆ ಹೊಂದಲು ಸವರ್ಣಾವಕಾಶವಾಗಿದೆ.

● ಮಂಜುನಾಥ್ ಸ್ವಾಮಿ. ಎಸ್. ಶಿವಮೊಗ್ಗ

ಜರ್ಮನಿಯಲ್ಲಿ ಪ್ರದರ್ಶನಗೊಂಡ ಭೋದಾಯಾನ ರಚಿತ ಕೆ.ವಿ.ಸುಬಣ್ಣ ಕನ್ನಡಕ್ಕೆ ತಂದ 'ಭಗವದುಜುಕೀಯ' ನಾಟಕ ಸುಂದರವಾಗಿ ಮೂಡಿಬಂದಿತು.

ವಿದೇಶೀ ನೆಲದಲ್ಲಿ ಕನ್ನಡದ ರಂಗಕಂಪು

ನವೆಂಬರ್ ಕನ್ನಡ ರಾಜ್ಯೋತ್ಸವ ಎಂದರೆ ಎಲ್ಲಾ ನನ್ನದು ಎಂಬ ಭಾವನೆ ಹೊತ್ತು ಆ ತಿಂಗಳೆಲ್ಲ ಸಂಭ್ರಮ ಪಡುವ ಹೊರದೇಶದ ಅಪ್ಪಟ ಕನ್ನಡ ಮನಸ್ಸುಗಳ ಯಶೋಗಾಥೆ ಈ ಲೇಖನ.

ನೃತ್ಯ, ಸಂಗೀತ, ಸಾಹಿತ್ಯ, ರಂಗಭೂಮಿ, ಶಿಕ್ಷಣ ಎಲ್ಲಾ ಕ್ಷೇತ್ರದಲ್ಲಿ ತಮ್ಮ ಛಾಪು ಮೂಡಿಸಿದವರು, ವಿಭಾ ಮೇಡಂ. ರಂಗಭೂಮಿಯಲ್ಲಿ ತನ್ನದೇ ಛಾಪು ಮೂಡಿಸಿದ ಜೀವನ್ ರಾಂ ಸುಳ್ಯ ಮತ್ತು ದಾಕ್ಷಾಯಿಣಿ ಭಟ್ ಅವರ ಪಟ್ಟ ಶಿಷ್ಯೆ. ಆಳ್ವಾಸ್ ರಂಗ ಅಧ್ಯಯನ ಕೇಂದ್ರ, ಬೆಂಗಳೂರಿನ ದೃಶ್ಯ ಮತ್ತು ಇತರೆ ಹತ್ತು ಹಲವು ತಂಡಗಳಲ್ಲಿ ಕಲಾವಿದೆಯಾಗಿ ಸೇವೆ ಸಲ್ಲಿಸಿದ್ದಾರೆ. ಶಿವಮೊಗ್ಗ ರಂಗಾಯಣ, ಕಟೀಲ್ ಅಶೋಕ ಪೈ ಕಾಲೇಜು, ನಮ್ಮ ಹಳ್ಳಿ ಥಿಯೇಟರ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮೂರು ತಿಂಗಳ ಸರ್ಟಿಫಿಕೇಟ್ ಕೋರ್ಸ್ ಅನ್ನು ಮುನ್ನಡೆಸಿದ ಕೀರ್ತಿ ಇವರದ್ದು. ಸಾಫ್ಟ್‌ವೇರ್ ಇಂಜಿನಿಯರ್ ಹಾಗೂ ರಂಗ ಕಲಾವಿದ ಹರ್ಷವರ್ಧನ್ ಅವರನ್ನು ಮದುವೆ ಆಗಿ ಜರ್ಮನಿಯಲ್ಲಿ ನೆಲೆಸಿದ್ದಾರೆ. ತಮ್ಮ ವೃತ್ತಿ ಜೀವನದ ನಡುವೆಯೂ ರಂಗಭೂಮಿ ನಂಟನ್ನು ಕಳೆದುಕೊಳ್ಳದೆ ಪ್ರಥಮ ಬಾರಿಗೆ ವಿದೇಶಿ ನೆಲದಲ್ಲಿ ಪ್ರದರ್ಶನ ನೀಡಿದ್ದಾರೆ.

ವಿದೇಶಗಳಲ್ಲಿ ನಾಟಕಗಳನ್ನು ಮಾಡವುದು ಕಷ್ಟದ ಕೆಲಸ - ಅಲ್ಲಿ ವ್ಯವಸ್ಥಿತವಾಗಿರುವ ರಂಗಮಂದಿರಗಳು ಸಿಗುವುದು ಒಂದು ಸವಾಲೇ ಸರಿ. ಅಲ್ಲಿ ಹತ್ತಾರು ಕಮ್ಯೂನಿಟಿ ಹಾಲ್‌ಗಳು ಲಭ್ಯವಿದ್ದರೂ, ತುಸು ದುಬಾರಿ ಮತ್ತು ಮುಂಚಿತವಾಗಿ ಬುಕ್ ಆಗಿರುತ್ತದೆ. ದಿನಕ್ಕೊಂದು ಕಮ್ಯುನಿಟಿ ಹಾಲ್ ಬುಕ್ ಮಾಡಿ ತಮ್ಮ ಪರಿಕರಗಳನ್ನು ಹೊತ್ತು ಸಾಗಬೇಕು. ಚಳಿಯಿಂದಾಗಿ, ಹೀಟರ್ ಇರುವ ಕಮ್ಯುನಿಟಿ ಹಾಲ್‌ನಲ್ಲಿ ಮಾತ್ರ ತಾಲೀಮು ಮಾಡಲು ಸಾಧ್ಯ. ಜರ್ಮನಿಯಲ್ಲಿ ಕನ್ನಡ ಕಾರ್ಯಕ್ರಮ ನಡೆಯುವ ಕಾಲವೇ ಕಡು ಕಪ್ಪನ್ನುಹೊದ್ದು, ವಿಪರೀತ ಮಂಜು ಬೀಳುವ, ಸಂಜೆ ಐದಕ್ಕೆ ಕತ್ತಲಾಗುವ ನವೆಂಬರ್ ತಿಂಗಳು. ಜತೆಗೆ ಅಗತ್ಯ ರಂಗಪರಿಕರಗಳ ಒಟ್ಟುಗೂಡಿಸುವ ಕೆಲಸವೂ ದೊಡ್ಡದೇ. ಬೇಕೆನಿಸಿದ ವಸ್ತುಗಳು ಸಿಗುತ್ತಿರಲಿಲ್ಲ, ಅರ್ಧ ಮೀಟರ್ ಕಪ್ಪು ಬಟ್ಟೆಗೆ ಎರಡು ದಿನಗಳ ಕಾಲ ಹುಡುಕಬೇಕಾದ ದುಃಸ್ಥಿತಿ! ಒಂದು ಸಣ್ಣ ಮರದ ಡಯಾಸ್ ಗಾಗಿ ವಾರಗಟ್ಟಲೆ ಅಲೆದು ತರುವ ಪರಿಸ್ಥಿತಿ!

ರಂಗ ಸಂಗೀತದ್ದು ಮತ್ತೊಂದು ಸಮಸ್ಯೆ. ಚಳಿ ತಡೆಯಲು, ಮರದ ಮತ್ತು ಚರ್ಮದ ವಾದ್ಯಗಳನ್ನು ಹೀಟರ್ ರೂಂನಲ್ಲಿ ಭದ್ರವಾಗಿಡುತ್ತಾರೆ; ಅದು ಹೊರಬರುವುದು ಬೇಸಿಗೆಯಲ್ಲಿ ಮಾತ್ರ. ಶಿವಮೊಗ್ಗದ ನಮ್ಮ ಹಳ್ಳಿ ಥಿಯೇಟರ್, ತೀರ್ಥಹಳ್ಳಿಯ ಸಂಗೀತ ನಿರ್ದೇಶಕ ಶ್ರೀ ಪಾದ್ ಮತ್ತು ಇನ್ನಾಸ್ಫ್ ಅವರು, ಸಂಗೀತವನ್ನು ಹುಬ್ಬಳ್ಳಿಗೆ ಹೋಗಿ ರೆಕಾರ್ಡ್ ಮಾಡಿಸಿ ಕಳಿಸದಿದ್ದರೆ ನಮ್ಮ ನಾಟಕ ಮೂಕವಾಗುತ್ತಿತ್ತು ಎಂದು ವಿಭಾ ಮೇಡಂ ಸ್ಮರಿಸಿಕೊಂಡರು.

ಅಲ್ಲಿ ಅದು ವೀಕೆಂಡ್ ಮನರಂಜನೆ

ವಿಭಾ ಮೇಡಂ ತಿಳಿಸಿದ ಒಂದು ವಿಷಯವನ್ನು ಪ್ರಸ್ತಾಪಿಸಲೇಬೇಕು. ನಮಗೆ ರಂಗ ಚಟುವಟಿಕೆ ಅಂದರೆ ಎರಡು ಅಥವಾ ಮೂರು ತಿಂಗಳ ಪ್ರತಿನಿತ್ಯದ ತಾಲೀಮು; ಆದರೆ ವಿದೇಶದಲ್ಲಿ ಅದು ವೀಕೆಂಡ್ ಮನರಂಜನೆ ಅಷ್ಟೇ. ಮ್ಯೂನಿಕ್ (ಜರ್ಮನಿಯ ಒಂದು ನಗರ) ನಲ್ಲಿ ಇರುವ ಕನ್ನಡ ಸಂಘ ಕನ್ನಡ ರಾಜ್ಯೋತ್ಸವ ಆಚರಣೆ ಸಂದರ್ಭದಲ್ಲಿ ರಂಗ ತರಬೇತಿ ಶಿಬಿರ ಆಯೋಜಿಸಲಾಗಿತ್ತು. ನಲವತ್ತಕ್ಕೂ ಹೆಚ್ಚು ಜನರು ಶಿಬಿರದಲ್ಲಿ ಭಾಗವಹಿಸಿದ್ದರೂ, ನಾಟಕಕ್ಕೆ ಅಂತ ಬಂದಿದ್ದು ಕೇವಲ ಐದು ಜನ ಮಾತ್ರ. ವಾರದಲ್ಲಿ ನಾಲ್ಕುದಿನ ತಾಲೀಮು ಎಂದು ಕೇಳಿದ ಕೂಡಲೇ ಎಲ್ಲಾ ಗಾಬರಿಗೊಂಡರು.

ಉಳಿದೆಲ್ಲಾರಿಗೂ ಕಲೆ ಎಂದರೆ ಅದು ವೀಕೆಂಡ್ ಮನರಂಜನೆ ಮಾತ್ರ!

ಸಂತೋಷದ ವಿಚಾರ ಎಂದರೆ, ಈ ಸವಾಲುಗಳ ನಡುವೆಯೇ, ಭೋದಾಯಾನ ರಚಿತ ಕೆ.ವಿ.ಸುಬಣ್ಣ ಕನ್ನಡಕ್ಕೆ ತಂದ ನಾಟಕ 'ಭಗವದುಜುಕೀಯ' ನಾಟಕ ಸುಂದರವಾಗಿ ಮೂಡಿ ಬಂದಿತು. ಸೀತಾರಾಮ ಶರ್ಮ ಅವರ ನಿರ್ದೇಶನ ಮತ್ತು ಅನುಷಾ ಶಾಸ್ತ್ರಿ ಅವರ ನೃತ್ಯ ಸಂಯೋಜನೆಯಲ್ಲಿ, ನಾಟಕದವು ಪ್ರೇಕ್ಷಕರ ಮನಸ್ಸು ಗೆದ್ದಿದ್ದು ಒಂದು ಅವಿಸ್ಮರಣೀಯ ಕ್ಷಣ.

● ಪುರುಷೋತ್ತಮ್ ವೆಂಕಿ, ಚಿತ್ರದುರ್ಗ

ಕೋಡಿ ಹರಿದೀತೆ ವೇದಾ ಜಲಾಶಯ?



ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ವಾಣಿವಿಲಾಸ ಸಾಗರ ಜಲಾಶಯ ಮೈದುಂಬಿದ್ದು, ದಶಕಗಳ ಬಳಿಕ ಮೂರನೇ ಬಾರಿ ನೀರು ಕೋಡಿ ಹರಿಯವುದನ್ನು ಕೆಲವೇ ದಿನಗಳಲ್ಲಿ ನೋಡಲಿದ್ದಾರೆ. 30 ಟಿಎಂಸಿ ನೀರಿನ ಸಾಮರ್ಥ್ಯ ಹೊಂದಿರುವ ಈ ವಾಣಿ ವಿಲಾಸ ಸಾಗರ ಡ್ಯಾಂ ಭರ್ತಿಯಾಗಿ ಕೋಡಿ ಹರಿಯಲು ಕೇವಲ ಇನ್ನೊಂದೆರಡು ಅಡಿಗಳು ಮಾತ್ರ ಬಾಕಿ ಇದೆ.

ವಾಣಿವಿಲಾಸ ಸಾಗರ ಮೇಲ್ಭಾಗದಲ್ಲಿ, ಚಿಕ್ಕಮಗಳೂರು, ಡ್ಯಾಂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿರಂತರವಾಗಿ ಸುರಿದ ಮಳೆಯ ಜೊತೆಗೆ ಭದ್ರಾ ಮೇಲ್ದಂಡೆ ಯೋಜನೆಯ ನೀರು ಸಹ ಹರಿದುಬರುತ್ತಿದ್ದು ಡ್ಯಾಂಗೆ ನೀರಿನ ಪ್ರಮಾಣ ಹೆಚ್ಚಾಗಿದೆ. ಈ ಹಿಂದೆ 1935ರಲ್ಲಿ ಜಲಾಶಯ ಮೊದಲ ಬಾರಿಗೆ ಮೈದುಂಬಿ ಹರಿದು ಕೋಡಿ ಬಿದ್ದಿತ್ತು. ನಂತರ, 2022ರಲ್ಲಿ ಕೋಡಿ ಹರಿದಿತ್ತು. ಈ ವರ್ಷ ಕೋಡಿ ಹರಿಯುವ ಸಾಧ್ಯತೆ ಇದೆ. ಈ ಅಣೆಕಟ್ಟನ್ನು 1897ರಲ್ಲಿ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿ ಕೆಂಪರಾಜಮ್ಮಣಿ ಆದೇಶದ ಮೇರೆಗೆ ನಿರ್ಮಿಸಲಾಗಿತ್ತು. 'ತಾರಾ ಚಾಂದ್ ದಲಾಲ್' ಎಂಬ ಇಂಜಿನಿಯರ್ ನೇತೃತ್ವದ ತಂಡವು ಆಗಿನ ಮೈಸೂರು ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಅವರ ಮುಂದಾಳತ್ವದಲ್ಲಿ ಡ್ಯಾಂ ನಿರ್ಮಿಸಿ 1907 ರಲ್ಲಿ ಕಾಮಗಾರಿ ಪೂರ್ಣಗೊಳಿಸಿದರು. ವಾಣಿ ವಿಲಾಸ ಸಾಗರ ಜಲಾಶಯದ ನೀರಿನ ಹರಿವು ಗಮನಿಸಿದಾಗ ಹಿಂಗಾರು ಮಳೆಗೆ ಹೆಚ್ಚಾಗಿ ನೀರು ಸಂಗ್ರಹಣೆ ಆಗುತ್ತಿರುವುದು ವಿಶೇಷವಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಬಾಬ ಬುಡನನ್‌ಗಿರಿ ಕಂದಕಗ ಳಲ್ಲಿ ಜನಿಸುವ ವೇದಾ ಎಂಬ ನದಿ ಕಡೂರಿನ ಬಳಿ ಅವತಿ ಎಂಬ ನದಿಯನ್ನು ಸೇರಿ ಅವು ಮುಂದೆ 'ವೇದಾವತಿ' ನದಿಯಾಗಿ ಹರಿಯುತ್ತದೆ. ಚಿತ್ರದುರ್ಗದ ಹಿರಿಯೂರು ತಾಲೂಕಿನ ವಾಣಿವಿಲಾಸಪುರ ಬಳಿ ಎರಡು ಗುಡ್ಡಗಳ ಮಧ್ಯೆ ನಿರ್ಮಿಸಿರುವ ಜಲಾಶಯವೇ ಮಾರಿಕಣಿವೆ ಡ್ಯಾಂ. ಜಲಾಶಯದ ನಿರ್ಮಾಣದ ಕಾಲದಲ್ಲಿ ಸಂಪನ್ಮೂಲದ ಕೊರತೆ ಉಂಟಾಗಿದ್ದರಿಂದ ಮಹಾರಾಣಿಯವರ ಒಡವೆ ಅಡವಿಟ್ಟು ಹಣ ಹೊಂದಿಸಿ ಜಲಾಶಯ ನಿರ್ಮಾಣ ಕಾರ್ಯ ಪೂರ್ಣಗೊಳಿಸಿದರು ಎನ್ನಲಾಗಿದೆ. ಬಯಲು ಸೀಮೆಯ ಜನರ ಕೃಷಿಗೆ ಇದರ ನೀರು ಬಳಕೆ; ಜತೆಗೆ, ಜನರಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರನ್ನು ಒದಗಿಸಲು, ಭೂಗರ್ಭದ ಅಂತರ್ಜ ಲವನ್ನು ಹೆಚ್ಚಿಸಲು ಈ ಅಣೆಕಟ್ಟಿನ ಕೊಡುಗೆ ಅಪಾರ.

Free Entry

ಬೆಂಗಳೂರು
ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಮೇಳ
Bangalore
Arts and Crafts Mela
Enrich your Shopping Excellence
Art, Craft & Handlooms Exhibition
22nd Nov to 1st Dec 2024
Timings: 10:30 AM - 7:00 PM – 10 Days Exhibition
Contact : 6364685716 / 9036658774
Organized By Grand Flea Market
Karnataka Chitrakala Parishath
Kumara Krupa Road, Near Shivananda Circle
Bengaluru -560 001.
HANDLOOMS | HOME DECOR | HANDICRAFTS | CLOTHING | JEWELLERY | 100+ STALLS | LIVE PERFORMANCE & MORE



ದಿನ ದರ್ಶಿಕೆ

ಕಾರ್ತಿಕ ಮಾಸ, ಸಪ್ತಮಿ ತಿಥಿ, ಅಶ್ಲೇಷ ನಕ್ಷತ್ರ, ಬ್ರಹ್ಮ ಯೋಗ, ಭವ ಕರಣ, ಕರ್ಕ ಲಗ್ನ, ವೃಶ್ಚಿಕ ರಾಶಿ, ಹೇಮಂತ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಕರಿಬೇವಿನ ಸೊಪ್ಪಿನಲ್ಲಿ ವಾಯುಕಾರಕವನ್ನು ತೆಗೆದುಹಾಕುವ ಮತ್ತು ನಾರಿನಂಶ ಇದ್ದು, ಇದು ಜೀರ್ಣಕ್ರಿಯೆಯನ್ನು ಹೆಚ್ಚಿಸಿ, ಅನಗತ್ಯ ವಿಷ ಪದಾರ್ಥವನ್ನು ದೇಹದಿಂದ ಹೊರ ಹಾಕಲು ಸಹಾಯ ಮಾಡುತ್ತದೆ. ದಿನಾ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಸ್ವಲ್ಪ ಕರಿಬೇವು ತಿಂದರೆ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗುವುದು, ಮೈ ತೂಕವೂ ಇಳಿಯುವುದು.

ಸೌಂದರ್ಯ ಸೂತ್ರ

ಒಂದು ಲೋಟ ಬೆಚ್ಚಗಿನ ನೀರಿಗೆ ಸ್ವಲ್ಪ ನಿಂಬೆ ರಸವನ್ನು ಹಿಂಡಿ ಅದನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯಿರಿ. ಇದರಿಂದ ಆರೋಗ್ಯಕರ ಚರ್ಮವನ್ನು ಹೊಂದಬಹುದು. ಸಿಹಿಗಾಗಿ ನೀವು ಇದಕ್ಕೆ ಸ್ವಲ್ಪ ಜೇನುತುಪ್ಪವನ್ನು ಸಹ ಸೇರಿಸಬಹುದು. ಯಾಕೆಂದರೆ ಜೇನುತುಪ್ಪ ಕೂಡ ಚರ್ಮದ ಆರೋಗ್ಯಕ್ಕೆ ಒಳ್ಳೆಯದು.

ದಿನ ಭವಿಷ್ಯ

ಮೇಷ ಧ್ಯಾನ, ಯೋಗವನ್ನು ಆಧ್ಯಾತ್ಮಿಕ, ಭೌತಿಕ ಲಾಭಗಳಿಗೆ ಆಚರಿಸ ಬೇಕು. ಇಂದು ಸಾಲ ಗಾರನು ಹೇಳದೇ ಹಣ ವಾಪಾಸ್ ಮಾಡ ಬಹುದು.

ವೃಷಭ ಹಣದ ಉಪಯೋಗ ಪಡೆಯುವ ಸಾಧ್ಯತೆ ಇದೆ. ಆದರೆ ಕೋಪದ ಕೈಗೆ ಬುದ್ಧಿ ಕೊಟ್ಟು, ಹಣ ಗಳಿಸುವಲ್ಲಿ ಹಿನ್ನಡೆ ಹೊಂದಬಹುದು.

ಮಿಥುನ ಧಾರ್ಮಿಕ ಭಾವನೆ ಗಳನ್ನು ಉದ್ಭವಿಸಿ ಒಬ್ಬ ಪವಿತ್ರ ವ್ಯಕ್ತಿಯಿಂದ ದೈವಿಕ ಜ್ಞಾನ ಪಡೆ ಯಲು ಧಾರ್ಮಿಕ ಸ್ಥಳಕ್ಕೆ ಭೇಟಿ ನೀಡುವಂತೆ ಮಾಡುತ್ತವೆ.

ಕಟಕ ಸಂಗಾತಿಯ ಅದ್ಭುತ ಚೈತನ್ಯ ನಿಮಗೆ ಸಂತೋಷ ನೀಡ ಬಹುದು. ಜೀವನದ ಕೆಟ್ಟ ಕಾಲದಲ್ಲಿ ಹಣ ಕೆಲಸಕ್ಕೆ ಬರುತ್ತದೆ.

ಸಿಂಹ ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ, ಅಹಂ ಭಾವ, ಅಸೂಯೆಯಂಥ ಅನೇಕ ದುರ್ಗುಣಗ ಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ.

ಕನ್ಯಾ ದೃಢವಾಗಿರಿ ಮತ್ತು ಧೈರ್ಯಶಾಲಿಗಳಾಗಿರಿ, ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ ಹಾಗೂ ಫಲಿತಾಂಶಗಳಿಗೆ ಸಿದ್ಧವಾಗಿರಿ.

ತುಲಾ ನಿಮ್ಮ ಸಂಗಾತಿಯ ಅಹ್ಲಾದಕರ ಮನಸ್ಥಿತಿ ನಿಮ್ಮ ದಿನವನ್ನು ಉಜ್ವಲ ವಾಗಿಸಬಹುದು. ಉಳಿಸ ಲಾಗಿರುವ ಹಣ ಕೆಲಸಕ್ಕೆ ಬರಬಹುದು

ವೃಶ್ಚಿಕ ಇಂದು ಆರಾಮವಾಗಿ ವಿಶ್ರಾಂತಿ ಪಡೆಯ ಬೇಕು, ಆಸಕ್ತಿದಾಯಕ ವಿಷಯ ಗಳಲ್ಲಿ ತೊಡಗಿಕೊಳ್ಳಿ. ಹಣ ಮಾಡುತ್ತೀರಿ.

ಧನು ಹಿಂದೆ ತಮ್ಮ ಹಣ ಹೂಡಿಕೆ ಮಾಡಿದ ಜನರು ಇಂದು ಆ ಹಣ ದಿಂದ ಲಾಭ ಪಡೆಯುವ ಸಾಧ್ಯತೆಯಿದೆ. ಸ್ನೇಹಿತರ ಸಹಾಯ ಇರುತ್ತದೆ.

ಮಕರ ಇತರರ ವಿರುದ್ಧ ದ್ವೇಷ ಕಾರುವುದು ಮಾನಸಿಕ ಒತ್ತಡವನ್ನು ನೀಡುತ್ತದೆ. ಈ ರೀತಿಯ ಆಲೋಚನೆ ಗಳನ್ನು ತಪ್ಪಿಸಿ, ಆರಾಮ ವಾಗಿರಿ.

ಕುಂಭ ಕೆಲಸದ ಒತ್ತಡ ಇರಬ ಹುದು. ಭಾವನಾತ್ಮಕ ಭರವಸೆಗಳನ್ನು ಬಯಸು ವವರು ಹಿರಿಯರು ಅವರ ನೆರವಿಗೆ ಬರುವು ದನ್ನು ನೋಡಬಹುದು.

ಮೀನ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಇಂದು ಎಷ್ಟೇ ಒತ್ತಡ ಬಂದರೂ, ಮನೆಯವರ ವಿರುದ್ಧ ಮಾತನಾಡದಿರಿ. ಸುಖೀ ಜೀವನಕ್ಕೆ ಅದೇ ದಾರಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ರಾಷ್ಟ್ರೀಯ ದತ್ತು ದಿನ
- 1937: ಖ್ಯಾತ ವಿಜ್ಞಾನಿ ಜಗದೀಶ ಚಂದ್ರ ಬೋಸ್ ಅವರ ಹುಟ್ಟುಹಬ್ಬ
- 1963: ಅಮೆರಿಕದ 35 ನೇ ಅಧ್ಯಕ್ಷ ಜಾನ್ ಎಫ್. ಕೆನಡಿ ಅವರು ಡಲ್ಲಾಸ್‌ನಲ್ಲಿ ಗುಂಡಿನ ಏಟಿಗೆ ಬಲಿಯಾದರು.

ಚಿತ್ರಸ್ಫೂರ್ತಿ

ಹೆತ್ತವರ ಆಶೀರ್ವಾದ ಮಕ್ಕಳಿಗೆ ಶ್ರೀರಕ್ಷೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಮ್ಮೆ ಅಪ್ಪ ಮತ್ತು ಅವರ ಹರೆಯದ ಮಗ ಸಮುದ್ರಯಾನ ಮಾಡುತ್ತಾ ಇದ್ದರು. ದೋಣಿ ಮುಳುಗೋ ಪರಿಸ್ಥಿತಿ ಬಂತು ಹಾಗೂ ಹೀಗೂ ಒಂದು ಸಣ್ಣ ದ್ವೀಪ ತಲುಪುತ್ತಾರೆ. ಈ ಪರಿಸ್ಥಿತಿಯಲ್ಲಿ ದೇವರೇ ನಮ್ಮನ್ನು ಕಾಪಾಡಬೇಕು ಎಂದು ತಂದೆ ಧೈರ್ಯ ತಂದುಕೊಳ್ಳುತ್ತಾ ಮಗನಿಗೆ, 'ನೀನು ಇಲ್ಲೇ ಎಲ್ಲಾದರೂ ಕುಳಿತುಕೊಂಡು ದೇವರ ಪ್ರಾರ್ಥನೆ ಮಾಡು, ನಾನು ಕೂಡ ಪ್ರಾರ್ಥನೆ ಮಾಡ್ತೀನಿ' ಅಂದರು.

ಮಗ ದ್ವೀಪದ ಸುತ್ತ ನೋಡಿದ ಅಲ್ಲಿ ನರಪಿಳ್ಳೆ ಇರಲಿ, ಒಂದು ಪ್ರಾಣಿ, ಪಕ್ಷಿಯೂ ಕಾಣಲಿಲ್ಲ. ಅವನಿಗೆ ಹಸಿವಾಗುತ್ತಿತ್ತು. ಕಣ್ಣು ಮುಚ್ಚಿ ಕೈಮುಗಿದು ಆಕಾಶ ನೋಡುತ್ತಾ, 'ಭಗವಂತ ತಿನ್ನೋದಿಕ್ಕೆ ಒಂದೆರಡು ಹಣ್ಣುಗಳನ್ನಾದರೂ ಕೊಡು' ಎಂದು ಪ್ರಾರ್ಥಿಸಿ ಕಣ್ಣು ಬಿಟ್ಟು ನೋಡುತ್ತಾನೆ.

ಏನಾಶ್ಚರ್ಯ ಅವನ ಮುಂದೆ ದೊಡ್ಡ ಹಣ್ಣಿನ ಮರ ಕಂಡಿತು. ಹಣ್ಣು ಕಿತ್ತುಕೊಂಡು ತಿಂದ ಸ್ವಲ್ಪ ಸಮಾಧಾನವಾಯಿತು. ಮತ್ತೆ ಕೈ ಮುಗಿದು ಆಕಾಶ ದತ್ತ ನೋಡಿ, 'ದೇವಾ ಚಳಿ ಆಗ್ತಾ ಇದೆ. ನನಗೊಂದು ಮಲಗೋದಕ್ಕೆ ಗುಡಿಸಲಾದರು ಕೊಡು' ಎಂದ.

ಕಣ್ಣು ಬಿಟ್ಟ ನೋಡಿದರೆ ಅಚ್ಚುಕಟ್ಟಾದ ಗುಡಿಸಲು ಕಂಡಿತು. ಅವನ ಆನಂದಕ್ಕೆ ಸಾಟಿಯೇ ಇಲ್ಲ. ಈಗ ಆ ಹುಡುಗನಿಗೆ, 'ನನ್ನ ಜತೆ ಒಬ್ಬ ಹುಡುಗಿ ಇದ್ದರೆ ಎಷ್ಟು ಚೆನ್ನಾಗಿರುತ್ತೆ' ಅಂತ ಅನ್ನಿಸಿತ್ತು. ಮತ್ತೆ ಆಕಾಶದತ್ತ ನೋಡಿ 'ಹೇ ಭಗವಂತ ಒಳಗಿರಲು ಗುಡಿಸಲು ಕೊಟ್ಟೆ. ಒಂದು ಸುಂದರವಾದ ಗೆಳತಿಯನ್ನು ಕೊಡು' ಎಂದ, ಇದೇನು ಆಶ್ಚರ್ಯ ಎನ್ನುವಂತೆ, ಸುಂದರ ವಾದ ಹುಡುಗಿಯೂ ಬಂದಳು.

ಅವನಿಗೆ ಖುಷಿಯಾಯಿತು. ಮತ್ತೆ ಕಣ್ಣು ಮುಚ್ಚಿ, 'ಭಗವಂತ ಇಷ್ಟೆಲ್ಲ ಕೊಟ್ಟಿರುವೆ ಒಂದು ಪುಟ್ಟ ದೋಣಿಯನ್ನು ಕೊಟ್ಟುಬಿಡು, ನನ್ನ ಹೆಂಡತಿ ಜತೆ ನಮ್ಮ ಊರು ಸೇರಿಕೊಳ್ಳುತ್ತೇನೆ' ಎಂದ. ಹೀಗಂದಿದ್ದೆ ತಡ ನೋಡುತ್ತಾನೆ, ಗಟ್ಟಿಮುಟ್ಟಾದ ಪುಟ್ಟ ದೋಣಿ ಕಂಡಿತು. ಸರಿ, ಹೆಂಡತಿಯನ್ನು ಕರೆದುಕೊಂಡು ದೋಣಿಯಲ್ಲಿ ಹೊರಡಲು ತಯಾರಾದ ಆಗ ಒಂದು ಧ್ವನಿ ಕೇಳಿಸಿತು. 'ಏನಪ್ಪಾ ಎಲ್ಲಾ ನಿನಗೆ ಸಿಕ್ಕಿತು. ನಿನ್ನ ತಂದೆಯನ್ನೇ ಬಿಟ್ಟು ಹೊರಟೆಯಾ?' ಎಂದು. ಮಗ ಹೇಳಿದ, 'ನಮ್ಮಪ್ಪ ಪ್ರಾರ್ಥನೆ ಮಾಡಲು ನನಗೆ ಹೇಳಿದ. ಅವನೇನು ಮಾಡಲೇ ಇಲ್ಲ. ಇವೆಲ್ಲಾ ನನ್ನ ಪ್ರಾರ್ಥನೆಯ ಪುಣ್ಯದಿಂದ ಬಂದಿದ್ದು. ಇದರಲ್ಲಿ ನಮ್ಮ ಅಪ್ಪನ ಪುಣ್ಯ ಏನೂ ಇಲ್ಲ. ದೇವರು ನನ್ನ ಪ್ರಾರ್ಥನೆಯನ್ನು ಮಾತ್ರ ಕೇಳಿದ್ದು' ಎಂದನು.

ಅಶರೀರವಾಣಿ ನುಡಿಯಿತು. 'ನಿನ್ನ ತಂದೆ ಪ್ರಾರ್ಥನೆ ಮಾಡಿ, ದೇವರನ್ನು ಕೇಳಿದ್ದು ಏನೆಂದು ನಿನಗೆ ಗೊತ್ತಾ? ಅವರು, ಭಗವಂತ, ನನ್ನ ಮಗ ಕೇಳಿದ್ದೆಲ್ಲವನ್ನೂ ಕೊಡು ಎಂದು ಪ್ರಾರ್ಥನೆ ಮಾಡಿದ್ದರು.'

ಪ್ರತಿಯೊಬ್ಬ ತಂದೆ ತಾಯಿ, ತಮಗಿಲ್ಲದಿದ್ದರೂ ಪರವಾಗಿಲ್ಲ, ನಮ್ಮ ಮಕ್ಕಳು ಚೆನ್ನಾಗಿರಲಿ ಎಂದು ಆಸೆ ಪಡುತ್ತಾರೆ ಎಂಬುದು ಇದರ ತಾತ್ಪರ್ಯ.

ಕತೆ ಕಾಲ್ಪನಿಕವಾದರು ನಮ್ಮ ನಿಜ ಜೀವನಕ್ಕೆ ಹಿಡಿದ ಕೈಗನ್ನಡಿ ಎಂದು ಅನಿಸುವುದಿಲ್ಲವೇ. ನಾವು ಬೆಳೆದು ದೊಡ್ಡವರಾಗಿ ಬದುಕಿನಲ್ಲಿ ನಮ್ಮ ಕಾಲ ಮೇಲೆ ನಾವು ನಿಂತುಕೊಳ್ಳುವವರೆಗೂ ತಂದೆ ತಾಯಿಗಳ ನಿರಂತರ ಶ್ರಮವಿರುತ್ತದೆ. ಆದರೆ ಒಮ್ಮೆ ನಾವು ಹಣ ದುಡಿಯುವಂತಾಗಿ ಬಿಟ್ಟರೆ ನನ್ನದೇ ಮರ್ಜಿ ನನ್ನದೇ ಜೀವನ, ಎಂದು ಅಹಂಕಾರದಿಂದ ಬದುಕಲು ಆರಂಭಿಸುತ್ತೇವೆ. ನಾನು ಇಷ್ಟ ಪಟ್ಟವರನ್ನೇ ಮದುವೆಯಾಗುವುದು, ಇದು ನನ್ನ ಜೀವನ, ನನ್ನ ತಂದೆ ತಾಯಿಗಳಿಗೂ ನನಗೂ ಸಂಬಂಧವಿಲ್ಲ ಎನ್ನುವ ಮಟ್ಟಿಗೆ ಸ್ವಾರ್ಥಕ್ಕಾಗಿ ಅವರು ಮಾಡಿದ್ದೆಲ್ಲವನ್ನು ಮರೆತು ಬದುಕು ನಡೆಸಿಕೊಂಡು ಹೋಗಲು ಸಿದ್ಧರಾಗಿ ಬಿಡುತ್ತೇವೆ. ಒಮ್ಮೆ ಹಿಂತಿರುಗಿ ನೋಡಿದಾಗ ನಮ್ಮ ಜೀವನ ನಮ್ಮದಲ್ಲ, ತಂದೆ-ತಾಯಿ ಕೊಟ್ಟ ಭಿಕ್ಷೆ ಎಂದು ಅರಿವಾಗುತ್ತದೆ. ತಂದೆ ತಾಯಿಗಳನ್ನು ಎಂದಿಗೂ ಉಪೇಕ್ಷಿಸಬೇಡಿ. ಇದರಿಂದ ಖಂಡಿತ ಒಳ್ಳೆಯದಾಗುವುದಿಲ್ಲ.

ಪದಬಂಧ

1	■	2			■	3	■	■
4			■	■	5			6
	■	7	8			■	■	
■	9	■		■	10		11	
■		■	■	■	■	■		■
12			13	■	14	■		■
	■	■	15			16	■	17
18		19		■	■	20		
■	■		■	21			■	

ಎಡದಿಂದ ಬಲಕ್ಕೆ

2. ಅದೇನೋ ಗದ್ದಲ (3)
4. ಲಂಗದೊಂದಿಗೆ ಬರುವ ಮೇಲುಹೊದಿಕೆ (3)
5. ವೇದಗಳನ್ನು ಕದ್ದೊಯ್ದ ರಾಕ್ಷಸನೊಬ್ಬನ ಹೆಸರು (4)
7. ತರಕಾರಿ ತರುವಾಗಿನ ಆತುರ (4)
10. ತಿರುಗಿ ಬಂದ ಅಳತೆ (4)
12. ಶಿವನಿಗೆ ಹೀಗೂ ಒಂದು ಹೆಸರಿದೆ (4)
15. ಪ್ರೀತಿಯ ಅಥವಾ ಸರಸವಾದ ನುಡಿ (4)
18. ಎಳ್ಳು ನೀರು ಬಿಡುವಿಕೆ (4)
20. ಖರೀದಿ ಮಾಡಿದಾಗ ನೀಡುವ ಪಾವತಿ ಪತ್ರ (3)
21. ಭೂಮಿಯನ್ನು ಕೊರೆದು ಮಾಡಿದ ದಾರಿ (3)

ಮೇಲಿನಿಂದಕೆಳಕ್ಕೆ

1. ಸರಕು ಸಂಗ್ರಹಿಸಿಡುವ ಉಗ್ರಾಣ (3)
2. ಕಬ್ಬಿಣದ ಕಡಲೆಯಾದ ಪಠ್ಯವಿಷಯ (3)
3. ಮೈಮೇಲಾದ ವ್ರಣ (2)
5. ಹಣದ ಮಧ್ಯೆ ಸಿಲುಕಿದೆ ಜಿಂಕೆ (3)
6. ಮರಗಿಡದ ಚಿಗುರು (3)
8. ನೀರು ಮಿಶ್ರಿತ ಕೆಸರು (2)
9. ಪಶುವಿಗೆ ತೋರಿಸಿದ ಕೊಡಲಿ (3)
11. ರೀತಿಯೊಂದಿಗೆ ಬರುವ ಜೋಡಿಪದ (3)
12. ಚತುರಂಗ ಸೈನ್ಯದಲ್ಲಿರುವ ಕಾಲಾಳು (3)
13. ಹಣೆಗಿಟ್ಟುಕೊಳ್ಳುವ ಬೊಟ್ಟು (3)
14. ವೈದ್ಯರು ಕೊಟ್ಟ ಗುಳಿಗೆ ತಲೆಕೆಳಗಾಗಿದೆ (2)
16. ಕುದುರೆಗೆ ಮತ್ತೊಂದು ಹೆಸರು (3)
17. ಮನೆಯೂ ದೇವಾಲಯವೂ (3)
19. ಹೂವಿನ ಎಸಳು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಗೋಲಕ 5.ಮಹಾರಾಜ 6. ಮೋದಕ 8. ಲಟಿಕೆ 10. ಪವನ 12. ರಜೀವ 14. ಸರೋಜ 16. ನಕರ 18. ಅಂಧಕಾರ 20. ವಣಿಕ

ಮೇಲಿನಿಂದ ಕೆಳಕ್ಕೆ: 1. ಪ್ರಮಾದ 2. ಗೋಲಿ 3. ಕಮಲ 4. ಪರಾಭವ 6. ಮೋಸಗಾರ 7. ಕಲರವ 9. ಕೆಲಸ 10. ಪರಿಜನ 11. ನಮಸ್ಕಾರ 13. ಜೀವಧನ 15. ಆರವ 17. ಕರ್ಕಶ 19. ನಾಕ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ವೇಗದ ಹಾದಿ ಹಿಡಿವ ಇರುವೆ

ಬೆಳಕಿನಂತೆ ಇರುವೆಗಳು ಕೂಡಾ ಹತ್ತಿರದ ಹಾದಿಗೆ ಬದಲಾಗಿ ದೂರವಾಗಿದ್ದರೂ ವೇಗದ ಹಾದಿಯನ್ನು ಅರಿಸುತ್ತವೆ ಎಂಬುದು ಜರ್ಮನಿ, ಫ್ರಾನ್ಸ್ ಮತ್ತು ಚೀನಾಗಳ ವಿಜ್ಞಾನಿಗಳು, ಕಂಪಿ ರುವೆಗಳ ಮೇಲೆ ನಡೆಸಲಾದ ಇತ್ತೀಚಿನ ಸಂಶೋಧನೆಯಿಂದ ತಿಳಿದು ಬಂದಿದೆ. ಇರುವೆಗಳು ಹೊರಡುವಾಗ ಮುಂದಿನ ಇರುವೆಗಳು ಬಿಡುವ ರಾಸಾ ಯನಿಕಗಳ ಜಾಡು ಹಿಡಿದು ಹೊರಡುತ್ತವೆ. ಹೀಗಾಗಿ ಮೊದ ಮೊದಲು ಇರುವೆಗಳು ಹಲವಾರು ಹಾದಿಗಳಲ್ಲಿ ಸಾಗುತ್ತವೆ. ಆದರೆ ಮುಂದೆ ಸಾಗಿದಂತೆ ಎಲ್ಲ ಇರುವೆಗಳು ಬೇಗನೆ ತಲಪಬಹುದಾದಂತ ಹಾದಿಯ ಮೇಲೆಯೆ ಒಗ್ಗೂಡುತ್ತವೆ. ಇದು ಅವುಗಳ ಚುರುಕುತನ ಮತ್ತು ಅಚ್ಚುಕಟ್ಟಿನ ಬದುಕಿಗೂ ಕನ್ನಡಿಯಾಗಿದೆ.

ಪುಸ್ತಕ ಲೋಕ

ಫಾಚರ್ ಫೋಚರ್



ಕನ್ನಡದ ಖ್ಯಾತ ಲೇಖಕ ವಿವೇಕ ಶಾನಭಾಗ ಅವರು ಕಳೆದ ಕೆಲವು ವರ್ಷಗಳಲ್ಲಿ ರಚಿಸಿದ ಆರು ಕಥೆಗಳು ಫಾರ್ಚರ್ ಫೋಚರ್ ಕಥಾ ಸಂಕಲನದಲ್ಲಿದೆ. ಈ ಕೃತಿಯಲ್ಲಿ ಆಧುನಿಕ ಬೆಂಗಳೂರು ನಗರದ ಜೀವನವನ್ನು ಸಂವೇದನಾಶೀಲವಾಗಿ, ಸೂಕ್ಷ್ಮವಾಗಿ, ಹೃದಯಂಗಮವಾಗಿ ವಿವೇಚಿಸಲಾಗಿದೆ. ಇಲ್ಲಿ ಕೇವಲ ಸಾಂಸಾರಿಕ ರಗಳೆಯಾಗಬಹುದಾಗಿದ್ದ ಕಥನವೊಂದು ಮನುಷ್ಯ ಸ್ವಭಾವ ಮತ್ತು ವರ್ತನೆಗಳ ಹಿಂದಿನ ನಿಗೂಢತೆಗೆ ಹಿಡಿದ ಕನ್ನಡಿಯಾಗಿ ಬಿಡುತ್ತದೆ. ಒಂದಿಡೀ ತಲೆಮಾರಿನ ತಲ್ಲಣವನ್ನೂ ಇದು ಕುತೂಹಲಕಾರಿಯಾಗಿ ಕಾದಿಟ್ಟುಕೊಂಡಿದೆ.

ಟ್ವೀಟ್‌ಮೆಂಟ್

ಇಫ್ತಿಶಾಂ ಉಲ್ ಹಕ್: ಏನಾದ್ರೂ ನಮ್ಮ ಶೆಹನ್ ಶಾ ಶಾಹಿದ್ ಆಫ್ರೀದಿ ಐಪಿಎಲ್ ಹರಾಜಿಗೆ ಬಂದರೆ, ಅವರು 200 ಕೋಟಿಗೂ ಅಧಿಕ ಮೊತ್ತಕ್ಕೆ ಬಿಕರಿಯಾಗುತ್ತಿದ್ದರು.

ನೀಚೆಸೇ ಟಾಪರ್: ಹಾಗಾದರೆ, ನಿಮ್ಮ ಶೆಹನ್ ಶಾ ಆಫ್ರೀದಿ ಆ ಮೊತ್ತವನ್ನು ವರ್ಲ್ಡ್ ಬ್ಯಾಂಕ್‌ಗೆ ಕೊಟ್ಟರೆ ನಿಮ್ಮ ದೇಶದ ಸಾಲ ಸ್ವಲ್ಪ ಕಮ್ಮಿಯಾಗುತ್ತಿತ್ತು.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● 'ಕವಚ್-2023' ರಾಷ್ಟ್ರೀಯ ಮಟ್ಟದ ಹ್ಯಾಕಥಾನ್ ಅನ್ನು ಯಾವ ಕೇಂದ್ರ ಸಚಿವಾಲಯ ಆಯೋಜಿಸಿದೆ?

- ಎ. ಕೌಶಲ್ಯ ಅಭಿವೃದ್ಧಿ ಸಚಿವಾಲಯ
- ಬಿ. ರಕ್ಷಣಾ ಸಚಿವಾಲಯ
- ಸಿ. ಶಿಕ್ಷಣ ಸಚಿವಾಲಯ
- ಡಿ. ಆರೋಗ್ಯ ಸಚಿವಾಲಯ

ಉತ್ತರ: ಸಿ. ಶಿಕ್ಷಣ ಸಚಿವಾಲಯ

ಮಾಹಿತಿ

ಕವಚ್-2023 ರಾಷ್ಟ್ರೀಯ ಮಟ್ಟದ ಹ್ಯಾಕಥಾನ್ ಆಗಿದ್ದು, ಸೈಬರ್ ಭದ್ರತಾ ಸವಾಲುಗಳನ್ನು ಎದುರಿಸಲು ನವೀನ ಆಲೋಚನೆಗಳು ಮತ್ತು ತಾಂತ್ರಿಕ ಪರಿಹಾರಗಳನ್ನು ಕಂಡುಹಿಡಿಯಲು ಪ್ರಾರಂಭಿಸಲಾಗಿದೆ. ಇದನ್ನು ಕೇಂದ್ರ ಶಿಕ್ಷಣ ಸಚಿವಾಲಯದ ಇನ್ನೋವೇಶನ್ ಸೆಲ್, ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಶನ್ (AICTE), ಬ್ಯೂರೋ ಆಫ್ ಪೊಲೀಸ್ ರಿಸರ್ಚ್ ಅಂಡ್ ಡೆವಲಪ್ಮೆಂಟ್ (BPRD, MHA)ಮತ್ತು ಇಂಡಿಯನ್ ಸೈಬರ್ ಕ್ರೈಮ್ ಕೋಆರ್ಡಿನೇಶನ್ ಸೆಂಟರ್ (I4C, MHA)ಆಯೋಜಿಸಿದೆ.

ಜೀವನ ಎಂದೂ ಬೋರಿಂಗ್ ಅಲ್ಲ!

ರೇಷ್ಮಾ ಶೆಟ್ಟಿ

ಸಾಮಾನ್ಯವಾಗಿ ಈಗ ಎಲ್ಲರ ಬಾಯಲ್ಲಿ ಬರುವ ಶಬ್ದವೆಂದರೆ ಬೋರ್. ಹೇಗೆ ಇದೀಯಾ ಕೇಳಿದರೆ ಸಾಕು ಅಯ್ಯೋ ಲೈಫ್ ಫುಲ್ ಬೋರ್ ಅಂತಾರೆ ಒಂಥರಾ ಟ್ರೆಂಡಿಂಗ್‌ನಲ್ಲಿ ಇರುವ ಪದ ಅದು. ಬಹುಷ ಥ್ಯಾಂಕ್ ಹಾಗೂ ಸಾರಿ ಪದಗಳು ಕೂಡ ಇಷ್ಟು ಪ್ರಚಲಿತದಲ್ಲಿಲ್ಲ. ಹಿಂದಿನ ಕಾಲದಲ್ಲಿ ಮನುಷ್ಯರು ಮತ್ತು ಪ್ರಕೃತಿಯ ನಡುವೆ ಅವಿನಾಭಾವ ಸಂಬಂಧವಿತ್ತು. ಮಕ್ಕಳು ಪ್ರಕೃತಿಯೊಂದಿಗೆ ಬೆಳೆಯುತ್ತಿದ್ದರು. ಕಾಡುಗಳಲ್ಲಿ ಅಲೆಯುತ್ತಿದ್ದರು ಮೈದಾನಗಳಲ್ಲಿ ಅನೇಕ ಆಟಗಳನ್ನು ಆಡುತ್ತಿದ್ದರು. ಹಿರಿಯರು ಸಂಬಂಧಗಳಿಗೆ ಪ್ರಾಮುಖ್ಯತೆ ನೀಡುತ್ತಿದ್ದರು ಆದ್ದರಿಂದ ಹಿಂದಿನವರು ಆರೋಗ್ಯವಾಗಿ ಇರುತ್ತಿದ್ದರು ಜೀವನದ ಬಗ್ಗೆ ಅತೀವ ಆಸಕ್ತಿ ಹಾಗೂ ಒಲವನ್ನು ಕಾಣಬಹುದು.

ಈವಾಗೀನವರು ಲೈಫ್ ಫುಲ್ ಬೋರ್ ಅನ್ನೋದನ್ನೇ ತುಂಬಾ ಎಂಜಾಯ್ ಮಾಡುತ್ತಾರೆ ಅನಸತ್ತೇ ಇದಕ್ಕೆ ಮುಖ್ಯ ಕಾರಣ ಹವ್ಯಾಸಗಳ ಕೊರತೆ, ಹವ್ಯಾಸಗಳು ಅಂದರೆ ಬೀಡಿ ಸಿಗರೇಟುಗಳನ್ನು ಸೇದುವುದು ಕುಡಿಯುವುದು ಅನವಶ್ಯಕ ಹರಟೆ ಹೊಡೆಯುವುದು ಇಂತಹ ಕೆಟ್ಟ ಚಟಗಳಲ್ಲ. ಇಂದಿನ ಯುವ ಪೀಳಿಗೆಯವರು ಬೇಸರ ದುಗುಡಗಳು ಕಾಡುವುದು ಹೆಚ್ಚು ಇದು ಕಾಡಲು ಮುಖ್ಯ ಕಾರಣವೆಂದರೆ ಸೋಷಿಯಲ್ ಮೀಡಿಯಾ, ದೂರದರ್ಶನಗಳು ಆಯಸ್ಕಾಂತದಂತೆ ಅವರನ್ನ ಸೆಳೆಯುತ್ತಿದೆ. ಪ್ರಸಿದ್ಧ ಲೇಖಕರಾದ ಯಂಡಮೂರಿ ವೀರೇಂದ್ರನಾಥ್ ಹವ್ಯಾಸಗಳ ಹೀಗೆ ಹೇಳುತ್ತಾರೆ, 'ಪ್ರಾಣವಿರುವ ವ್ಯಕ್ತಿಗಳಿಗಿಂತಲೂ ಪ್ರಾಣವಿಲ್ಲದವನ್ನು ಪ್ರೀತಿಸುವುದರಲ್ಲಿ ಹೆಚ್ಚು ಆಹ್ಲಾದವಿದೆ. ವ್ಯಕ್ತಿಗಳನ್ನು ಪ್ರೀತಿಸಿದರೆ ಅವರಿಂದ ದೂರವಾದಾಗ ನೋವು ಅವರಿಗೆ ಕೋಪ ಬಂದರೆ ವಿರಹ ಅವರು ಬೇರೆಯವರೆಡೆಗೆ ಸ್ವಲ್ಪ ಹೆಚ್ಚು ಶ್ರದ್ಧೆ ತೋರಿಸಿದರೆ ಅಸೂಯೆ ಅದೇ ಪ್ರಾಣವಿಲ್ಲದ ಹವ್ಯಾಸಗಳಾದ ಸಂಗೀತ ಪೈಂಟಿಂಗ್ ಕರಕುಶಲ ತಯಾರಿಕೆ ಸಾಹಿತ್ಯದ ಕಡೆ ಅಭಿರುಚಿ ಬೆಳೆಸಿಕೊಂಡರೆ ಅವುಗಳ ಜೊತೆಗೆ ರಮಿಸಬಹುದು' ಎಂದಿದ್ದಾರೆ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ. ಬೆಲ್ಲ-ಸಕ್ಕರೆಯಾಗು ದೀನ ದುರ್ಬಲರಿಂಗೆ, ಎಲ್ಲರೊಳಗೊಂದಾಗು ಮಂಕುತಿಮ್ಮ ಇಲ್ಲಿ ಎಲ್ಲರೊಳ ಗೊಂದಾಗಿ

ಬದುಕುವುದು ಎಂದರೆ ನಮ್ಮ ಅಸ್ತಿತ್ವವು ಇತರರಿಗೆ ಪ್ರಯೋಜನವಾಗುವಂತಿರಬೇಕು ಎಂದು. ನಮ್ಮ ಬದುಕು ನಮಗೆ ಆಸಕ್ತಿದಾಯಕವಾಗಿರಬೇಕು ಉತ್ಸಾಹ ಇರಬೇಕು ಕಲಿಯುವ ಕುತೂಹಲ ಇರಬೇಕು. ನಾವು ಲೈಫ್ ಬೋರ್ ಅನ್ನೋದಕ್ಕೆ ಸಾವಿರಾರು ವರ್ಷ ಇಲ್ಲಿ ಬದುಕುವುದಿಲ್ಲ ನಮ್ಮ ಬದುಕನ್ನ ನಾವು ತುಂಬಾ ಪ್ರೀತಿಸಬೇಕು. ಒಂದು ಕ್ಷಣ ಕಳೆದರೂ ಮರಳಿ ನಮಗೆ ಸಿಗುವುದಿಲ್ಲ ಕ್ಷಣಗಳು ಅತ್ಯ ಅಮೂಲ್ಯ ಈ ಕ್ಷಣವನ್ನು ಅನುಭವಿಸುವುದೇ ಬದುಕು.ನಮಗೆ ಬದುಕಲು ಒಂದೇ ಅವಕಾಶವಿರುವುದು ನಮ್ಮ ಬದುಕನ್ನು ನಾವು ಸುಂದರವಾಗಿಟ್ಟುಕೊಳ್ಳುವುದು ನಮ್ಮ ಕರ್ತವ್ಯ.

ವಯಸ್ಸು 47 ರಕ್ತದಾನ ಮಾಡಿದ್ದು 77!

ಈರಣ್ಣ ಬೆಂಗಾಲಿ

ರಕ್ತದಾನ ಜೀವದಾನ ಎಂದು ನಮಗೆಲ್ಲ ತಿಳಿದ ವಿಷಯ. ಅನಾರೋಗ್ಯ ಮತ್ತು ಅಪಘಾತದ ತುರ್ತು ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಇರುತ್ತದೆ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ರಕ್ತದಾನ ಮಾಡುವುದು ಮನುಷ್ಯತ್ವವಾಗಿರುತ್ತದೆ. ಆದರೆ ಅನೇಕ ಜನರು ರಕ್ತ ಕೊಡಲು ಯೋಗ್ಯರಾಗಿದ್ದರೂ ರಕ್ತದಾನ ಮಾಡಲು ಮುಂದಾಗದೇ ರಕ್ತದಾನ ಮಾಡಲು ಹಿಂಜರಿಯುತ್ತಾರೆ.

ದೇಹದಿಂದ ಸಾಕಷ್ಟು ರಕ್ತ ಹೋಗುತ್ತದೆ ಎಂಬ ಅನವಶ್ಯಕ ಭಯದಿಂದಲೋ, ರಕ್ತ ಕೊಟ್ಟರೆ ಅನಾರೋಗ್ಯಕ್ಕೆ ಈಡಾಗುತ್ತೇವೆ ಎಂಬ ಆತಂಕದಿಂದಲೋ ರಕ್ತದಾನ ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಅಸಲಿಗೆ ಅರ್ಹ ವ್ಯಕ್ತಿ ರಕ್ತದಾನ ಮಾಡುವುದರಿಂದ ಹೃದಯಾಘಾತ, ಕ್ಯಾನ್ಸರ್ ಇನ್ನಿತರ ಖಾಯಿಲೆಗಳಿಗೆ ತುತ್ತಾಗುವುದನ್ನು ತಪ್ಪಿಸಿಕೊಳ್ಳಬಹುದು. ವರ್ಷಕ್ಕೆ ಮೂರು ಬಾರಿ ಅಂದರೆ ರಕ್ತದ ಅವಶ್ಯಕತೆ ಬಹಳ ಇದೆ. ರಕ್ತನಿಧಿಗಳಲ್ಲಿ ರಕ್ತದ ಪೂರೈಕೆಗಿಂತ ಬೇಡಿಕೆ ಹೆಚ್ಚಿದೆ ಆದ್ದರಿಂದ ರಕ್ತವನ್ನು ಅರ್ಹ ವ್ಯಕ್ತಿಗಳಿಂದ ಪಡೆಯುತ್ತಾರೆ. ಆದರೆ ಸ್ವಯಂಪ್ರೇರಿತವಾಗಿ ರಕ್ತವನ್ನು ದಾನ ಮಾಡುವವರ ಸಂಖ್ಯೆ ಅತ್ಯಲ್ಪ. ಜೀವಗಳನ್ನು ಕಾಪಾಡುವ ಮಹಾ ರಕ್ತದಾನಿ ಅಯ್ಯಪ್ಪ ಅವರು ನಮಗೆಲ್ಲ ಮಾದರಿಯಾಗಿದ್ದಾರೆ. ವೃತ್ತಿಯಲ್ಲಿ ಪತ್ರಕರ್ತ ಮತ್ತು ಛಾಯಗ್ರಾಹಕರಾದ ಇವರು ಪುಟ್ಟ ಮಕ್ಕಳಿಂದ ಹಿಡಿದು ವೃದ್ಧರಿಗೆ ರಕ್ತದಾನ ಮಾಡಿದ್ದಾರೆ.

ರಕ್ತವನ್ನು ಉತ್ಪಾದಿಸಲು ಆಗುವುದಿಲ್ಲ, ರಕ್ತಕ್ಕೆ ಬೇರೆ ಪರ್ಯಾಯ ವ್ಯವಸ್ಥೆಯಿಲ್ಲ. ರಕ್ತದ ಅವಶ್ಯಕತೆ ಇದ್ದಾಗ ರಕ್ತವೇ ಬೇಕು. ಇದನ್ನು ಮನಗಂಡ ಅಯ್ಯಪ್ಪ ಅವರು ತಮ್ಮ ಬಳಿ ರಕ್ತಬೇಕೆಂದು ಯಾರೇ ಬರಲಿ ಅವರಿಗೆ ಮುಕ್ತವಾಗಿ ರಕ್ತ ನೀಡುತ್ತಾರೆ. ಆದರೆ ಕೆಲವು ಬಾರಿ ರಕ್ತನೀಡಿ ಮೂರು ತಿಂಗಳುಗಳು ಆಗಿರುವುದಿಲ್ಲ. ಆಗ ಇವರಿಗೆ ಬೇಸರವಾಗುತ್ತದೆ. ನನ್ನಂತೆ ಜನರು ರಕ್ತದಾನ ಮಾಡಲು ಯಾಕೆ ಮುಂದೆ ಬರುತ್ತಿಲ್ಲ ಎಂದು ವ್ಯಥೆ ಪಡುತ್ತಾರೆ.

ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಿದರೆ ರಕ್ತದಾನಿಗಳ ಆರೋಗ್ಯ ಸುಧಾರಿಸುತ್ತದೆ.

ರಕ್ತದಾನ ಮಾಡಿದರೆ ಇಷ್ಟೆಲ್ಲ ಅನುಕೂಲತೆಗಳಿದ್ದರೂ ಹಲವರು ರಕ್ತದಾನಕ್ಕೆ ಒಪ್ಪುವುದಿಲ್ಲ! ಐತಿಹಾಸಿಕ ಊರು ರಾಯಚೂರಿನ ಪಿಕಳಿಹಾಳ ಅಯ್ಯಪ್ಪ ಸ್ವಾಮಿ ಹಿರೇಮಠ ಅವರು ನಿರಂತರವಾಗಿ ಅವಶ್ಯಕತೆ ಇರುವವರಿಗೆ ರಕ್ತದಾನ ಮಾಡುತ್ತಾ ಪ್ರಾಣದಾತ ಎನಿಸಿಕೊಂಡಿದ್ದಾರೆ. ಇವರ ವಯಸ್ಸು 47. ಇದುವರೆಗೆ ರಕ್ತದಾನ ಮಾಡಿದ್ದು ಬರೋಬ್ಬರಿ 77 ಬಾರಿ!

1997ರಲ್ಲಿ ಅಯ್ಯಪ್ಪ ಅವರ ಸಹೋದರ ಮಾವ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ ರಕ್ತದ ಅವಶ್ಯಕತೆ ಬಿತ್ತು. ಅಲ್ಲಿ ಇಲ್ಲಿ ರಕ್ತದ ಬಗ್ಗೆ ವಿಚಾರಿಸಿದರು. ರಕ್ತದ ವ್ಯವಸ್ಥೆ ಆಗಲಿಲ್ಲ. ಕೊನೆಗೆ ಅಯ್ಯಪ್ಪ ಅವರೇ ಮೊದಲ ಬಾರಿಗೆ ಧೈರ್ಯ ಮಾಡಿ ರಕ್ತದಾನ ಮಾಡಿದರು. ಈ ಘಟನೆಯಿಂದ ರಕ್ತದ ಮಹತ್ವ ತಿಳಿಯುತ್ತದೆ ಮತ್ತು ರಕ್ತದ ಬೇಡಿಕೆ ಎಷ್ಟು ಇದೆ ಎಂಬುದು ಅವರ ಗಮನಕ್ಕೆ ಬರುತ್ತದೆ. ಅಂದಿನಿಂದ ಮೂರು ತಿಂಗಳಿಗೊಮ್ಮೆ ಹಂತ ಹಂತವಾಗಿ ಅವಶ್ಯಕತೆ ಇರುವವರಿಗೆ ರಕ್ತ ನೀಡುತ್ತಾ ಬಂದಿದ್ದಾರೆ.

ಇಂದಿನ ದಿನಮಾನಗಳಲ್ಲಿ ವಿವಿಧ ಆಪರೇಷನ್‌ಗಳಲ್ಲಿ ರಕ್ತದಾನಕ್ಕೆ ಎಲ್ಲರೂ ಮುಂದೆ ಬರಬೇಕು. ರಕ್ತದ ದಾನದ ಮಹತ್ವನ್ನು ಅರಿಯಬೇಕು ಎಂಬ ಉದ್ದೇಶಗಳನ್ನು ಹೊತ್ತು ಜನರಲ್ಲಿ ರಕ್ತದ ಅರಿವನ್ನು ಮೂಡಿಸಲು ಜೂನ್ 14ನ್ನು ವಿಶ್ವ ರಕ್ತದಾನಿಗಳ ದಿನವನ್ನಾಗಿ ಆಚರಿಸಲಾಗುತ್ತದೆ. ರಕ್ತದಾನದ ವಿವಿಧ ಶಿಬಿರಗಳಲ್ಲಿ ರಕ್ತದಾನ ಮಾಡಬೇಕು ಇಲ್ಲವೆ ರಕ್ತದ ಅವಶ್ಯಕತೆ ಇರುವ ಆಸ್ಪತ್ರೆಗಳಲ್ಲಿ ಹೋಗಿ ರಕ್ತದಾನ ಮಾಡಬೇಕು. ಆಗ ನಾವು ದೇವರಾಗುತ್ತೇವೆ! ಅಂದರೆ ವ್ಯಕ್ತಿಗಳ ಪ್ರಾಣ ಉಳಿಸುತ್ತೇವೆ. ಇದರಂತೆ ಅಯ್ಯಪ್ಪ ಅವರಿಂದ ರಕ್ತಪಡೆದ ಅದೆಷ್ಟೋ ಜನರು, ಅವರ ಕುಟುಂಬ ವರ್ಗದವರು ಅಯ್ಯಪ್ಪ ಅವರನ್ನು ದೇವರಂತೆ ಕಾಣುತ್ತಾರೆ. ಕೃತಜ್ಞತೆಯನ್ನು ತಿಳಿಸುತ್ತಾರೆ. ಹೊಗಳುತ್ತಾರೆ. ಆದರೆ ಅಯ್ಯಪ್ಪ ಅವರು ನೀವೂ ದೇವರಾಗಿ ಎಂದು ಮನವಿ ಮಾಡುತ್ತಾರೆ. 'ಆಧುನಿಕ ಜೀವನ ಶೈಲಿಯಿಂದ ಅನೇಕ ರೋಗಗಳು ನಮಗೆ ಬರುತ್ತಿವೆ. ಶಸ್ತ್ರಚಿಕಿತ್ಸೆಯಲ್ಲಿ ರಕ್ತದ ಅವಶ್ಯಕತೆ ಬೀಳುತ್ತದೆ ಅಂತವರಿಗೆ ರಕ್ತದಾನ ಮಾಡಬೇಕು. ಅಲ್ಲದೆ ಇತ್ತೀಚೆಗೆ ಅಪಘಾತಗಳು ಹೆಚ್ಚಾಗುತಲಿದ್ದು, ಅವರ ಚಿಕಿತ್ಸೆಗೆ ರಕ್ತ ಬೇಕೇ ಬೇಕು. ಅಂತಹ ಸಂದರ್ಭಗಳಲ್ಲಿ ನೀವು ರಕ್ತದಾನ ಮಾಡಿ ದೇವರಾಗಿ' ಎಂದು ಜನರಲ್ಲಿ ಕೇಳಿಕೊಳ್ಳುತ್ತಾರೆ.

ಸಮಾಚಾರ ಸಣ್ಣದಲ್ಲ

ಕೂಚ್ ಬಿಹಾರ್ ಟ್ರೋಫಿ: ಸೆಹ್ವಾಗ್ ಪುತ್ರನ ದ್ವಿಶತಕ

ಶಿಲ್ಲಾಂಗ್: ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಅವರ ಪುತ್ರ ಆರ್ಯವೀರ್ ಅವರು ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಅಜೇಯ ದ್ವಿಶತಕ ಸಿಡಿಸಿದರು. ದೆಹಲಿ ತಂಡವನ್ನು ಪ್ರತಿನಿಧಿಸುತ್ತಿರುವ ಆರ್ಯವೀರ್ ಮೇಘಾಲಯ ವಿರುದ್ಧದ ಪಂದ್ಯದಲ್ಲಿ 229 ಎಸೆತಗಳಲ್ಲಿ ಔಟಾಗದೇ 200 ರನ್ ಗಳಿಸಿದರು. ಆರ್ಯವೀರ್ ಮತ್ತು ಅರ್ಣವ್ ಎಸ್. ಬಗ್ಗಾ (114;108) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 180 ರನ್ ಸೇರಿಸಿದರು. ಹೀಗಾಗಿ ದೆಹಲಿ ತಂಡವು ಎರಡೇ ದಿನದಾಟದ ಅಂತ್ಯಕ್ಕೆ 81 ಓವರ್‌ಗಳಲ್ಲಿ ಎರಡು ವಿಕೆಟ್‌ಗೆ 468 ರನ್ ಸೇರಿಸಿ 208 ರನ್‌ಗಳ ಮುನ್ನಡೆ ಪಡೆದಿದೆ. ಮೇಘಾಲಯ ಮೊದಲ ಇನ್ನಿಂಗ್ಸ್‌ನಲ್ಲಿ 260 ರನ್ ಗಳಿಸಿತ್ತು.

ಚಂಡೀಗಢ ವಿರುದ್ಧ ಕರ್ನಾಟಕ ಚೇತರಿಕೆಯ ಆಟ

ಬೆಂಗಳೂರು: ಮೊದಲ ಇನ್ನಿಂಗ್ಸ್‌ನಲ್ಲಿ ಫಾಲೊ ಆನ್‌ಗೆ ಒಳಗಾದ ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ (19 ವರ್ಷದೊಳಗಿನವರ) ಟೂರ್ನಿಯ ಪಂದ್ಯದಲ್ಲಿ ಎರಡನೇ ಇನ್ನಿಂಗ್ಸ್‌ನಲ್ಲಿ ಚೇತರಿಕೆಯ ಆಟ ಪ್ರದರ್ಶಿಸಿದೆ. ಆತಿಥೇಯ ಚಂಡೀಗಢ ಮೊದಲ ಇನ್ನಿಂಗ್ಸ್‌ನಲ್ಲಿ 272 ರನ್ ಗಳಿಸಿತ್ತು. ಇದಕ್ಕೆ ಉತ್ತರವಾಗಿ ಕರ್ನಾಟಕ ತಂಡವು 99 ರನ್‌ಗೆ ಕುಸಿದು ಫಾಲೊ ಆನ್‌ಗೆ ಒಳಗಾಯಿತು. ಮತ್ತೆ ಬ್ಯಾಟಿಂಗ್ ನಡೆಸಿದ ಧೀರಜ್ ಗೌಡ ನಾಯಕತ್ವದ ಕರ್ನಾಟಕ 70 ಓವರ್‌ಗಳಲ್ಲಿ ಎಂಟು ವಿಕೆಟ್‌ಗೆ 312 ರನ್ ಗಳಿಸಿ, 139 ರನ್‌ಗಳ ಮುನ್ನಡೆ ಪಡೆದಿದೆ. ಕರ್ನಾಟಕದ ಮಣಿಕಾಂತ್ ಶಿವಾನಂದ್ (65;104ಎ), ಧೀರಜ್ ಗೌಡ (75;79ಎ), ಕಾರ್ತಿಕೇಯ ಕೆ.ಪಿ. (41;67ಎ) ಮತ್ತು ಹಾರ್ದಿಕ್ ರಾಜ್ (ಔಟಾಗದೇ 43; 41ಎ) ಉಪಯುಕ್ತ ಕಾಣಿಕೆ ನೀಡಿದರು. ಚಂಡೀಗಢದ ಮಾರ್ಕಂಡೆ ಪಾಂಚಾಲ್ ನಾಲ್ಕು ವಿಕೆಟ್ ಪಡೆದು ಮಿಂಚಿದರು.

3 ವರ್ಷಗಳ ಐಪಿಎಲ್ ದಿನಾಂಕ ಪ್ರಕಟ

ದೆಹಲಿ: ಪ್ರಸಕ್ತ ಸಾಲಿನ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯು ಸೇರಿದಂತೆ 2026 ಮತ್ತು 2027ರ ದಿನಾಂಕಗಳನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಪ್ರಕಟಿಸಿದೆ. 2025ರ ಐಪಿಎಲ್ ಟೂರ್ನಿಯು ಮಾರ್ಚ್ 14ರಿಂದ ಮೇ 25ರ ವರೆಗೆ ನಡೆಯಲಿದೆ. ಆದೇ ರೀತಿ 2026ರ ಐಪಿಎಲ್ ಟೂರ್ನಿಯು ಮಾರ್ಚ್ 15 ರಿಂದ ಮೇ 31 ಮತ್ತು 2027ರ ಐಪಿಎಲ್ ಟೂರ್ನಿಯು ಮಾರ್ಚ್ 14ರಿಂದ ಮೇ 30 ವರೆಗೆ ನಡೆಯಲಿದೆ ಎಂದು ಬಿಸಿಸಿಐ ತಿಳಿಸಿದೆ.

ಸೆಮಿಸ್ ಪ್ರವೇಶಿಸಲು ಭಾರತೀಯ ಆಟಗಾರರ ವಿಫಲ | ಚಾಪೆಲ್ ಆಟಕ್ಕೆ ಮಣಿದ ಕರಣ್ ಸಿಂಗ್ | ದೇವ್ ಜಾವಿಯಾ ಸೆಮಿ ಫೈನಲ್‌ಗೆ ಲಗ್ಗೆ

ಡಬಲ್ಸ್ ಫೈನಲ್ ಇಂದು, ಕಣದಲ್ಲಿ ಏಕೈಕ ಭಾರತೀಯ ಸಿನ್ಹಾ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಕಲಬುರಗಿ ಓಪನ್ ಪಂದ್ಯಾವಳಿಯ ಡಬಲ್ಸ್ ವಿಭಾಗದಲ್ಲಿ ನಿಕ್ ಚಾಪೆಲ್ (ಎಡ) ಮತ್ತು ಸಹ ಆಟಗಾರ ನಿತಿನ್ ಕುಮಾರ್ ಸಿನ್ಹಾ ಜೋಡಿ ಫೈನಲ್ ಪ್ರವೇಶಪಡೆದರು.

ಇಲ್ಲಿನ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್ ಕಲಬುರಗಿ ಪುರುಷರ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಬಹುತೇಕ ಭಾರತೀಯ ಆಟಗಾರರು ಸೆಮಿಸ್ ಎಂಟ್ರಿ ಪಡೆಯಲು ವಿಫಲವಾದರೆ, ದೇವ್ ಜಾವಿಯಾ ಮಾತ್ರ ಸೆಮಿಸ್ ಗೆ ಲಗ್ಗೆ ಇಟ್ಟ ಏಕೈಕ ಭಾರತೀಯ ಎನಿಸಿಕೊಂಡರು.

ಶುಕ್ರವಾರ ಆರಂಭಗೊಂಡ ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಇಬ್ಬರು ಭಾರತೀಯರ ನಡುವೆ ಕಾದಾಟ ನಡೆಯಿತು. ದೇವ್ ಜಾವಿಯಾ ಹಾಗೂ ಸಿದ್ದಾರ್ಥ್ ರಾವತ್ ಮಧ್ಯ ಕೇವಲ ಒಂದು ಪಂದ್ಯ ಮಾತ್ರ ನಡೆದು ನಿರಾಸೆ ಮೂಡಿಸಿತು. ಪಂದ್ಯದ ನಡುವೆ ಸಿದ್ದಾರ್ಥ್ ರಾವತ್ ತಲೆತಿರುಗುವಿಕೆ ಸಮಸ್ಯೆಯಿಂದ ವೈದ್ಯರ ಸಲಹೆ ಪಡೆದು ಆಟದಿಂದ ನಿರ್ಗಮಿಸಿದರು. ಇದರಿಂದಾಗಿ, ದೇವ್ ಜಾವಿಯಾಗೆ ಸುಲಭದ ಗೆಲುವು ಪಡೆದು, ಸೆಮಿಸ್‌ಗೆ ಲಗ್ಗೆ ಇಟ್ಟ ಏಕೈಕ ಭಾರತೀಯ ಎನಿಸಿಕೊಂಡರು.

ಇನ್ನೂ, ಅಮೆರಿಕನ್ ಆಟಗಾರ ನಿಕ್ ಚಾಪೆಲ್ ಕಳೆದ ವಾರ ನಡೆದ ಮುಂಬೈ ಐಟಿಎಫ್‌ನಲ್ಲಿ ಮೊದಲ ಸುತ್ತಿನಲ್ಲೇ ಕರಣ್ ಸಿಂಗ್ ವಿರುದ್ಧದ ಸೋಲಿಗೆ ಕಲಬುರಗಿ ಐಟಿಎಫ್‌ನಲ್ಲಿ ಪ್ರತಿಕಾರ ತೀರಿಸಿಕೊಂಡರು. 32 ವರ್ಷದ ಎಡಗೈ ಆಟಗಾರ ನಿಕ್ ಚಾಪೆಲ್ ತಮ್ಮ ರಾಕೆಟ್ ಪ್ರಭಾವ ಬಳಸಿ ಭಾರತೀಯ ಆಟಗಾರ ಕರಣ್ ಸಿಂಗ್ ವಿರುದ್ಧ 7–5, 6– 2 ಅಂಕಗಳ ಮೂಲಕ ಗೆಲುವು ಸಾಧಿಸಿ, ಸೆಮಿಫೈನಲ್ ಗೆ ಹೆಜ್ಜೆ ಹಾಕಿದರು.

ನಿಕ್ ಚಾಪೆಲ್ ಹಾಗೂ ಕರಣ್ ಸಿಂಗ್ ಪಂದ್ಯದಲ್ಲಿ ಚಾಪೆಲ್ ಉತ್ತಮ ಆರಂಭವನ್ನೇ ಪ್ರದರ್ಶಿಸಿದರು, ಆದರೆ ಕರಣ್ ಸಿಂಗ್ ಆಕ್ರಮಣಕಾರಿ ಹೊಡೆತಗಳನ್ನು ಸ್ವಾಗತಿಸುತ್ತಲೇ ಚಾಪೆಲ್ ವಿರುದ್ಧ ಆರ್ಭಟಿಸಿದರು. ಪಂದ್ಯದ ವಿವಿಧ ಹಂತಗಳಲ್ಲಿ ತಪ್ಪುಗಳ ಸುಳಿಗೆ ಸಿಲುಕಿದ ಕರಣ್ ಸುಲಭದ ಸರ್ವ್ ಮೂಲಕ ಚಾಪೆಲ್ ಗೆಲುವಿಗೆ ದಾರಿ ಮಾಡಿಕೊಟ್ಟರು. ಬೇಗ ಪಾಯಿಂಟ್ ಪಡೆಯಲು ಯತ್ನಿಸಿದ ಇಬ್ಬರ ಪೈಕಿ ನಾಲ್ಕನೇ ಪಂದ್ಯದಲ್ಲಿ ಚಾಪೆಲ್‌ಗೆ ಬ್ರೇಕ್ ಮಾಡಲು ಅವಕಾಶ ಮಾಡಿಕೊಡಲು ಡ್ರಾಪ್ ಶಾಟ್ ಗಳನ್ನು ಆಡಿದರು, ನಿಪುಣ ಚಾಪೆಲ್ ಕರಣ್ ಎಲ್ಲ ದೋಷಗಳನ್ನು ಬಳಸಿಕೊಂಡು ಮುನ್ನುಗ್ಗಿದರು.

ಕರಣ್ ಮೊದಲ ಸೆಟ್ ಸೋಲು ಯಾವುದೇ ಪರಿಣಾಮ ಬೀರದಂತೆ ಚಾಪೆಲ್ ಆರನೇ ಗೇಮ್‌ನಲ್ಲಿ ಡಬಲ್ ಫಾಲ್ಟ್‌ಗಳು ಮತ್ತು ಬ್ಯಾಕ್ ಹ್ಯಾಂಡ್ ಮೂಲಕ ಚಾಪೆಲ್ 4–2 ಮುನ್ನಡೆ ಸಾಧಿಸಿದರು. ಎರಡೂ ಪಾರ್ಶ್ವಗಳಿಂದ ಹೊಡೆತ ನೀಡಿ, ಏಳನೇ ಗೇಮ್‌ನಲ್ಲಿ ಫೋರ್ ಹ್ಯಾಂಡ್ ಡೌನ್ ವಿಜೇತರನ್ನು ಆಯ್ಕೆ ಮಾಡಲಾಯಿತು, ನಿಕ್ ಚಾಪೆಲ್ ಎಂಟನೇ ಗೇಮ್‌ನಲ್ಲಿ ಕರಣ್ ಮಣಿಸಿ ತಮ್ಮ ಸೆಮೀಸ್ ಸ್ಥಾನವನ್ನು ಗಟ್ಟಿಮಾಡಿಕೊಂಡರು.

ಮತ್ತೊಂದು ಕೋರ್ಟ್‌ನಲ್ಲಿ ರಷ್ಯಾದ ಬೊಗ್ಡಾನ್ ಬೊಬ್ರೋವ್ ತಮ್ಮ ಎದುರಾಳಿ ಭಾರತೀಯ ಆರ್ಯನ್ ಷಾ ವಿರುದ್ಧ ನಿರಾಯಾಸದ ಗೆಲುವು ಸಾಧಿಸಿದರು. ಷಾ ವಿರುದ್ಧ 7–5, 6–3 ಅಂತರದ ವಿಜಯ ಘೋಷಿಸಿ, ಅಗ್ರ ಶ್ರೇಯಾಂಕ ಪಡೆದುಕೊಂಡರು. ಸೆಮಿಫೈನಲ್ ಪ್ರವೇಶಕ್ಕಾಗಿ ರಾಕೆಟ್ ಗಳ ಕದನದಲ್ಲಿ ಅಗ್ರ ಶ್ರೇಯಾಂಕ್ ಖುಮೊಯುನ್ ಸುಲ್ತಾನೋವ್ ರಷ್ಯಾದ ಮ್ಯಾಕ್ಸಿಮ್ ಝುಕೋವ್ ವಿರುದ್ಧ ಜಯ ದಾಖಲಿಸಿದರು. ಉಜ್ಬೇಕಿಸ್ಥಾನದ ಪಟು ರಷ್ಯಾದ ಮ್ಯಾಕ್ಸಿಮ್ ಝುಕೋವ್ ವಿರುದ್ಧ ನೇರ ಸೆಟ್ ಗಳಲ್ಲಿ (6–2, 6–3) ಅಂತರದಲ್ಲಿ ಜಯಗಳಿಸಿದರು.

ಸಿಂಗಲ್ಸ್ (ಕ್ವಾರ್ಟರ್ ಫೈನಲ್)

- ನಿಕ್ ಚಾಪೆಲ್ (ಅಮೆರಿಕ), ಕರಣ್ ಸಿಂಗ್ ಅವರ ವಿರುದ್ಧ 7–5, 6–2 ಅಂತರದಲ್ಲಿ ಗೆಲುವು ಸಾಧಿಸಿದರು.
- ದೇವ್ ಜಾವಿಯಾ ತಮ್ಮ ಎದುರಾಳಿ ಸಿದ್ದಾರ್ಥ್ ರಾವತ್ ನಿರ್ಗಮನದೊಂದಿಗೆ 1–0 ಅಂತರದಲ್ಲಿ ಗೆಲವು ದಾಖಲಿಸಿದರು.
- ರಷ್ಯನ್ ಆಟಗಾರ ಬೊಗ್ಡಾನ್ ಬೊಬ್ರೋವ್ ಆರ್ಯನ್ ಷಾ ಅವರನ್ನು 7–5, 6–3 ಅಂತರದಲ್ಲಿ ಮಣಿಸಿದರು.
- ಖುಮೊಯುನ್ ಸುಲ್ತಾನೋವ್ (ಉಜ್ಬೇಕಿಸ್ಥಾನ) ಅವರು ರಷ್ಯದ ಮ್ಯಾಕ್ಸಿಮ್ ಝುಕೋವ್ ವಿರುದ್ಧ 6–2, 6–3 ರ ಗೆಲುವು ಘೋಷಿಸಿದರು.

ಸೆಮಿಫೈನಲ್ ಲೈನ್ ಅಪ್

ಅಮೆರಿಕದ ನಿಕ್ ಚಾಪೆಲ್ ಮತ್ತು ರಷ್ಯಾದ ಬೊಗ್ಡಾನ್ ಬೊಬ್ರೋವ್, ಉಜ್ಬೇಕಿಸ್ಥಾನದ ಖುಮೊಯುನ್ ಸುಲ್ತಾನೋವ್ ಮತ್ತು ದೇವ್ ಜಾವಿಯಾ.

ಡಬಲ್ಸ್ (ಸೆಮಿಫೈನಲ್)

- ಎಗೋರ್ ಅಗಾಫೊನೋವ್ ಮತ್ತು ಬೊಗ್ಡಾನ್ ಬೊಬ್ರೋವ್ ಎದುರಾಳಿ ಜೋಡಿ ಸಿದ್ಧಾಂತ್ ಬಂಥಿಯಾ ಹಾಗೂ ವಿಷ್ಣುವರ್ಧನ್ ಅವರನ್ನು 2–6, 6–3, 11–9 ಅಂತರದಲ್ಲಿ ಮಣಿಸಿದರು.
- ನಿಕ್ ಚಾಪೆಲ್ ಮತ್ತು ನಿತಿನ್ ಕುಮಾರ್ ಸಿನ್ಹಾ ಜೋಡಿ ಎದುರಾಳಿ ರಿಷಬ್ ಅಗರ್ವಾಲ್ ಹಾಗೂ ಕಬೀರ್ ಹನ್ಸ್ ವಿರುದ್ಧ 6–2, 6–3 ಅಂತರದ ಗೆಲುವು ಸಾಧಿಸಿದರು.

ಬುಮ್ರಾ ವಿಕ್ರಮ: ಭಾರತ ಮೇಲುಗೈ

ಒಂದೇ ದಿನ 17 ವಿಕೆಟ್ ಪತನ | ಭಾರತ 150 ರನ್, ಆಸ್ಟ್ರೇಲಿಯಾ ದಿನದಂತ್ಯಕ್ಕೆ 67 ರನ್

ಪರ್ತ್: ಆತಿಥೇಯ ಆಸ್ಟ್ರೇಲಿಯಾ ವೇಗಿಗಳ ಅಮೋಘ ದಾಳಿ ಎದುರು ಮೊದಲ ಇನ್ನಿಂಗ್ಸ್‌ನಲ್ಲಿ ಬ್ಯಾಟಿಂಗ್ ವೇಳೆ ಹೀನಾಯ ಪ್ರದರ್ಶನ ತೋರಿರುವ ಭಾರತ ತಂಡ, ಬೌಲಿಂಗ್‌ನಲ್ಲಿ ತಿರುಗೇಟು ನೀಡಿದೆ. ನಾಯಕ ಜಸ್ಪ್ರಿತ್ ಬೂಮ್ರಾ ನೇತೃತ್ವದಲ್ಲಿ ಶಿಸ್ತಿನ ದಾಳಿ ಸಂಘಟಿಸಿದ ವೇಗಿಗಳು, ಕಾಂಗರೂ ಪಡೆಯ ಬ್ಯಾಟರ್‌ಗಳನ್ನು ತಿಣುಕಾಡುವಂತೆ ಮಾಡಿದ್ದಾರೆ.

ಭಾರತ ಗಳಿಸಿದ ಅಲ್ಪ ಮೊತ್ತದೆದುರು ಇನ್ನಿಂಗ್ಸ್ ಆರಂಭಿಸಿದ ಪ್ಯಾಟ್ ಕಮಿನ್ಸ್ ಪಡೆ, ಮೊದಲ ದಿನದಾಟದ ಅಂತ್ಯಕ್ಕೆ ಕೇವಲ 67 ರನ್ ಗಳಿಸಿ ಪ್ರಮುಖ 7 ವಿಕೆಟ್‌ಗಳನ್ನು ಕಳೆದುಕೊಂಡಿದೆ.

ಆಸಿಸ್ ಬ್ಯಾಟರ್‌ಗಳೆದುರು ಬಿರುಗಾಳಿಯಂತೆ ಎರಗಿದ ಬೂಮ್ರಾ, ಮೊದಲ ಮೂರೂ ವಿಕೆಟ್‌ಗಳನ್ನು ಪಡೆಯುವ ಮೂಲಕ ಟೀಂ ಇಂಡಿಯಾ ಪಡೆಗೆ ವಿಶ್ವಾಸ ತುಂಬಿದರು. ಒಟ್ಟು ನಾಲ್ಕು ವಿಕೆಟ್ ಬುಟ್ಟಿಗೆ ಹಾಕಿಕೊಂಡ ಅವರಿಗೆ ಮೊಹಮ್ಮದ್ ಸಿರಾಜ್ (2 ವಿಕೆಟ್) ಮತ್ತು ಹರ್ಷಿತ್ ರಾಣಾ (1 ವಿಕೆಟ್) ಉತ್ತಮ ಸಹಕಾರ ನೀಡಿದರು.

ಇನಿಂಗ್ಸ್ ಹಿನ್ನಡೆ ತಪ್ಪಿಸಿಕೊಳ್ಳಲು ಆಸ್ಟ್ರೇಲಿಯಾ, ಉಳಿದಿರುವ ಮೂರು ವಿಕೆಟ್‌ಳಿಂದ ಇನ್ನೂ 83 ರನ್ ಗಳಿಸಬೇಕಿದೆ.

ಅಲೆಕ್ಸ್ ಕಾರಿ (19 ರನ್) ಹಾಗೂ ನಾಯಕ ಪ್ಯಾಟ್ ಕಮಿನ್ಸ್ (6 ರನ್) ಕ್ರೀಸ್‌ನಲ್ಲಿದ್ದಾರೆ.

ತಲೆಕೆಳಗಾದ ಲೆಕ್ಕಾಚಾರ: ಪರ್ತ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದ ಬೂಮ್ರಾ ಬ್ಯಾಟಿಂಗ್ ಆಯ್ದುಕೊಂಡರು. ಆದರೆ, ಅವರ ಲೆಕ್ಕಾಚಾರ ತಲೆಕೆಳಗಾಯಿತು. ಟೀಂ ಇಂಡಿಯಾ 49.4 ಓವರ್‌ಗಳಲ್ಲಿ ಕೇವಲ 150 ರನ್‌ಗಳಿಸಿ ಸರ್ವಪತನ ಕಂಡಿತು.

ತಂಡದ ಮೊತ್ತ 73 ರನ್‌ಗಳಿಗೆ 6 ವಿಕೆಟ್ ಆಗಿತ್ತು. ಈ ವೇಳೆ ಜೊತೆಯಾದ ವಿಕೆಟ್ ಕೀಪರ್ ಬ್ಯಾಟರ್ ರಿಷಭ್ ಪಂತ್ ಹಾಗೂ ನಿತೀಶ್ ರೆಡ್ಡಿ 7ನೇ ವಿಕೆಟ್‌ಗೆ 48 ರನ್ ಕೂಡಿಸಿದರು. ಪಂತ್ 37 ರನ್ ಗಳಿಸಿದರೆ, ಪದಾರ್ಪಣೆ ಪಂದ್ಯವಾಡಿದ ರೆಡ್ಡಿ 42 ರನ್ ಬಾರಿಸಿದರು. ಇವರಿಬ್ಬರ ಆಟದ ಬಲದಿಂದಾಗಿ, ಟೀಂ ಇಂಡಿಯಾ 150 ರನ್ ಗಳಿಸಲು ಸಾಧ್ಯವಾಯಿತು.

ಆಸಿಸ್ ಪರ ಮಿಂಚಿದ ವೇಗಿ ಜೋಶ್ ಹ್ಯಾಷಲ್ವುಡ್ 4 ವಿಕೆಟ್ ಪಡೆದರು. ಮಿಚೇಲ್ ಸ್ಟಾರ್ಕ್, ಪ್ಯಾಟ್ ಕಮಿನ್ಸ್ ಮತ್ತು ಮಿಚೇಲ್ ಮಾರ್ಷ್ ತಲಾ ಎರಡು ವಿಕೆಟ್ ಹಂಚಿಕೊಂಡರು.

ಮೊದಲ ದಿನದಾಟದಲ್ಲಿ ಪತನಗೊಂಡ 17 ವಿಕೆಟ್‌ಗಳನ್ನೂ ವೇಗಿಗಳೇ ಪಡೆದದ್ದು ವಿಶೇಷ.

ಕಿಂಗ್ ಕೊಹ್ಲಿ ಮತ್ತೆ ವಿಫಲ

ಭಾರತ ತಂಡವು 32 ರನ್ ಗಳಿಸುವಷ್ಟರಲ್ಲಿ ಪ್ರಮುಖ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ಯಶಸ್ವಿ ಜೈಸ್ವಾಲ್ ಹಾಗೂ ದೇವದತ್ತ ಪಡಿಕ್ಕಲ್ ಶೂನ್ಯಕ್ಕೆ ಔಟ್ ಆದರು.

ಕನ್ನಡಿಗ ಕೆ.ಎಲ್.ರಾಹುಲ್ ಜೊತೆ ಇನಿಂಗ್ಸ್ ಆರಂಭಿಸಿದ ಯಶಸ್ವಿ ಜೈಸ್ವಾಲ್ ಹಾಗೂ 3ನೇ ಕ್ರಮಾಂಕದಲ್ಲಿ ಕ್ರೀಸ್‌ಗಿಳಿದ ದೇವದತ್ತ ಪಡಿಕ್ಕಲ್ ಸೊನ್ನೆ ಸುತ್ತಿದರು. ನಂತರ ಬಂದ ಅನುಭವಿ ವಿರಾಟ್ ಕೊಹ್ಲಿ ಆಟ 5 ರನ್‌ಗೆ ಅಂತ್ಯವಾಯಿತು. ರಕ್ಷಣಾತ್ಮಕವಾಗಿ ಆಡುತ್ತಿದ್ದ ರಾಹುಲ್ (26 ರನ್), ಯುವ ಬ್ಯಾಟರ್ ಧ್ರುವ್ ಜುರೇಲ್ (11 ರನ್), ವಾಷಿಂಗ್ಟನ್ ಸುಂದರ್ (4 ರನ್) ಸಹ ಕೊಹ್ಲಿ ಹಿಂದೆಯೇ ಹೊರಟರು.

ಭಾರತೀಯ ಅಗ್ರ ಕ್ರಮಾಂಕದ ಬ್ಯಾಟರ್‌ಗಳ ರಕ್ಷಣಾತ್ಮಕ ಆಟವು ತಂಡಕ್ಕೆ ಹಿನ್ನಡೆಯಾಗಿ ಪರಿಣಮಿಸುತ್ತಿದೆ. ಬ್ಯಾಟ್ ಮೂಲಕ ಮೊದಲ ರನ್ ಇನ್ನಿಂಗ್ಸ್‌ನ 24ನೇ ಎಸೆತದಲ್ಲಿ ದಾಖಲಾಯಿತು. ಈ ಹಿಂದೆ 2001ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಪಂದ್ಯದಲ್ಲೂ ನಾಲ್ಕನೇ ಓವರ್‌ನ ಕೊನೆಯ ಎಸೆತದಲ್ಲಿ ಬ್ಯಾಟ್ ಮೂಲಕ ಮೊದಲ ರನ್ ದಾಖಲಾಗಿತ್ತು.

ವಿಸ್ಮಯಕಾರಿ ಅಂಕಣ ಸಂಗ್ರಹ

ಶ.ಹಾ.

ಇಂದಿಗೆ ಹದಿನೇಳು ವರ್ಷಗಳ ಹಿಂದಿನ ಮಾತು. ಇಸವಿ 2007. ನಾನಾಗ ಶಿವಮೊಗ್ಗದಲ್ಲಿದ್ದೆ; ಪುಸ್ತಕ ಪ್ರದರ್ಶನವೊಂದರಲ್ಲಿ, 'ಕ್ಷಣ ಹೊತ್ತು ಆಣಿ ಮುತ್ತು' ಎಂಬ ಆಕರ್ಷಕ ಮುಖಪುಟ ಹೊತ್ತ ಪುಸ್ತಕವನ್ನು ಕಂಡೆ; ಬರೆದವರ ಹೆಸರು ಎಸ್. ಷಡಕ್ಷರಿ. ಆ ದಿನಗಳಲ್ಲಿ ನನಗೆ ಎಸ್. ಷಡಕ್ಷರಿ ಎಂದರೆ ಯಾರು ಎಂದು ಗೊತ್ತಿರಲಿಲ್ಲ; ಆದರೆ, 'ಕ್ಷಣ ಹೊತ್ತು ಆಣಿ ಮುತ್ತು' ಹೆಸರು ಸ್ವಲ್ಪ ಪರಿಚಿತ ಎನಿಸಿತ್ತು; ಕಾರಣ, 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಬರುತ್ತಿದ್ದ ಅಂಕಣದ ಹೆಸರು ಅದು. 'ದಿನಪತ್ರಿಕೆಯಲ್ಲೇ ಈಗಾಗಲೇ ಓದಿದ ಅಂಕಣ, ಈಗ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ, ನೋಡೋಣ ಹೇಗಿದೆ' ಎಂದು ಅರೆಮನಸ್ಸಿನಲ್ಲೇ ಆ ಪುಸ್ತಕವನ್ನು ಖರೀದಿಸಿದೆ.

ಒಂದೂವರೆ ಪುಟ ವ್ಯಾಪ್ತಿಯ 75 ಲೇಖನಗಳು ಆ ಮೊದಲ ಆವೃತ್ತಿಯಲ್ಲಿವೆ; ಒಂದೊಂದಾಗಿ ಪುಟ ತಿರುವಿ ಹಾಕುತ್ತಾ ಹೋದೆ; ಪುಸ್ತಕವನ್ನು ಕೆಳಗಿಡಲು ಆಗಲಿಲ್ಲ – ಆಸಕ್ತಿಯಿಂದ ಓದಿಸಿಕೊಂಡು ಹೋಯಿತು; ಎಂಥವರ ಮನದಲ್ಲೇ ಆಗಲಿ ಸ್ಫೂರ್ತಿ ತುಂಬುವ ಬರಹಗಳು ಅವು. ಪ್ರತಿ ದಿನ ಅಂಕಣ ರೂಪದಲ್ಲಿ ಓದಿದ್ದಕ್ಕೂ, ಸಮಗ್ರವಾಗಿ ಪುಸ್ತಕ ರೂಪದಲ್ಲಿ ಓದಿದ್ದಕ್ಕೂ ಸಾಕಷ್ಟು ವ್ಯತ್ಯಾಸ; ಒಂದು ಬರಹವನ್ನೋದಿ ಮುಂದಿನ ಬರಹಕ್ಕೆ ಹೋದಂತೆ, ಇನ್ನಷ್ಟು ಸ್ಫೂತಿ, ಇನ್ನಷ್ಟು ಉತ್ಸಾಹ ತುಂಬಿತು. ಈ ಅಂಕಣದಲ್ಲಿ ಬಂದ ಘಟನೆಗಳನ್ನು, ಅವುಗಳನ್ನು ಪ್ರಸ್ತುತ ಪಡಿಸಿದ ರೀತಿಯನ್ನು ನಮ್ಮ ಬದುಕಿನ ವಿವಿಧ ಹಂತಗಳಿಗೆ ಹೋಲಿಸಿಕೊಳ್ಳುತ್ತಾ, ಮನನ ಮಾಡುತ್ತಾ, ಇನ್ನಷ್ಟು ಸಾಧಿಸಲು ಏನು ಮಾಡಬಹುದು ಎಂದು ಯೋಚಿಸುತ್ತಾ, ಪುಟ ತಿರುವಿ ತಿರುವಿ, ಇಡೀ ಪುಸ್ತಕವನ್ನೋದಿ ಮುಗಿಸಿದೆ. ನನ್ನ ಬದುಕಿನ ಮೇಲೆ ಸಾಕಷ್ಟು ಸಕಾರಾತ್ಮಕ ಪರಿಣಾಮ ಬೀರಿದ ಪುಸ್ತಕ ಇದು.

'ಕ್ಷಣ ಹೊತ್ತು ಆಣಿ ಮುತ್ತು' ಪುಸ್ತಕದ ಮೊದಲ ಆವೃತ್ತಿಯನ್ನು ಓದಿದ ತಕ್ಷಣ, ಅದರಿಂದ ಅದೆಷ್ಟು ಪ್ರಭಾವಿತನಾದೆನೆಂದರೆ, ಆ ಪುಸ್ತಕದ ಮೊದಲ ಪುಟದಲ್ಲಿ ನಾನು ಹೀಗೆ ಬರೆದೆ : 'ನಾವು ಯೋಚಿಸುವ ಕ್ರಮವನ್ನೇ ಬದಲು ಮಾಡಿ, ಸಂತಸ ತುಂಬಬಲ್ಲ ಪುಸ್ತಕ ಇದು!' ಕೆಲವು ದಿನಗಳ ನಂತರ ಮತ್ತೊಮ್ಮೆ ಓದಿದೆ; ಮಗದೊಮ್ಮೆ ಓದಿದೆ. ವಿಶೇಷವೆಂದರೆ, ಈ ಅಂಕಣ ಬರಹಗಳ ಸಂಗ್ರಹವನ್ನು ಓದಲು ಹೆಚ್ಚು ಸಮಯ ಬೇಕಾಗಿಲ್ಲ, ಅಂದರೆ, ಇಡಿಯಾಗಿ ಒಮ್ಮೆಗೇ ಓದಬೇಕೆಂದಿಲ್ಲ, ಬಿಡಿ ಬಿಡಿಯಾಗಿಯೂ ಓದಬಹುದು. ಕೆಲಸ, ಕೆಲಸ ಎಂದು ಬಿಡುವಿಲ್ಲದ ಕೆಲಸವನ್ನು ಮೈಮೇಲೆ ಎಳೆದುಕೊಂಡವರು ಸಹ, ಒಂದೂವರೆ ಪುಟದ ಒಂದು ಲೇಖನವನ್ನು ಓದಿ, ತಮ್ಮ ಕೆಲಸದಲ್ಲಿ 'ಮುಳುಗಬಹುದು'; ಮತ್ತೊಮ್ಮೆ ಬಿಡುವಾದಾಗ, ಎರಡೇ ನಿಮಿಷದಲ್ಲಿ ಇನ್ನೊಂದು ಲೇಖನ ಓದಿ, ಮತ್ತೊಮ್ಮೆ ಕೆಲಸದಲ್ಲಿ 'ಮುಳುಗಿಹೋಗಬಹುದು'.

'ಮುಳುಗಿ ಹೋಗಬಹುದು' ಎಂದು ಇಲ್ಲಿ ನಾನು ತುಸು ತಮಾಷೆಯ ಧಾಟಿಯಲ್ಲಿ ಬರೆದೆ! ಏಕೆಂದರೆ, 'ಸ್ವಲ್ಪವೂ ಸಮಯವಿಲ್ಲ, ತುಂಬಾ ಕೆಲಸ, ಓದಲಿಕ್ಕೆ ಎಲ್ಲಿದೆ ಸಮಯ!' ಎಂದು ಹೇಳುವವರಿಗೆ ಈ ಪುಸ್ತಕದಲ್ಲಿ ಸೂಕ್ತ ಉತ್ತರವಿದೆ. 'ನಿಮಗೆ ಬಿಡಿ, ಪುರಸೊತ್ತು ಇದೆ, ಪುಸ್ತಕ ಓದುತ್ತೀರಿ, ನಮಗೆಲ್ಲಿದ ವ್ಯವಧಾನ; ನಮಗೆ ಕೆಲಸವೇ ಮುಖ್ಯ' ಎನ್ನುತ್ತಾ, ಓದುವ ಹವ್ಯಾಸವನ್ನೇ ಸಣ್ಣಗೆ ವ್ಯಂಗ್ಯಕ್ಕೆ ಗುರಿಮಾಡುವವರಿಗೂ, ಈ ಪುಸ್ತಕದಲ್ಲಿ ಪರಿಹಾರವಿದೆ. ಅತಿ ಎನಿಸುವಷ್ಟು ಬ್ಯುಸಿಯಾಗಿರುವವರೂ ಸಮಯವನ್ನು ಹೇಗೆ ಹೊಂದಿಸಿಕೊಳ್ಳಬಹುದು ಮತ್ತು ಹೊಸ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದು ಎಂಬುದನ್ನು ಈ ಪುಸ್ತಕದಲ್ಲಿರುವ ಪುಟ್ಟ ಪುಟ್ಟ ಕಥೆಗಳು ಹೇಳುತ್ತವೆ. ಕೆಲವೇ ನಿಮಿಷ ಬಿಡುವಿದ್ದಾಗಲೂ ಈ ಪುಸ್ತಕದ ಯಾವುದಾದರೂ ಒಂದು ಬರಹವನ್ನು ಓದಿ, ಮನಸ್ಸನ್ನು ಪ್ರಫುಲ್ಲಗೊಳಿಸಿಕೊಳ್ಳಬಹುದು. ಮೊದಲ ಸಂಪುಟದ ನಂತರ, ಇದೇ ಮಾಲಿಕೆಯಲ್ಲಿ ಹಲವು ಸಂಪುಟಗಳು ಹೊರಬಂದಿವೆ, ಎಸ್. ಷಡಕ್ಷರಿಯವರು ಉತ್ತಮ ಮತ್ತು ಯಶಸ್ವಿ ಲೇಖಕರು ಎಂದು ತೋರಿಸಿಕೊಟ್ಟಿವೆ.

ಇಲ್ಲಿನ ಸ್ಫೂರ್ತಿ ತುಂಬುವ ಕಥೆಗಳಲ್ಲಿ ವೈವಿಧ್ಯವಿದೆ; ವಿದೇಶದಲ್ಲಿ ನಡೆದ ಯಶಸ್ಸಿನ ಉದಾಹರಣೆಗಳನ್ನು ತಳಹದಿಯನ್ನಾಗಿ ಮಾಡಿಕೊಂಡ ಲೇಖನಗಳಿವೆ; ಜತೆಯಲ್ಲೇ, ನಮ್ಮ ದೇಶದ ಹಲವು ವ್ಯಕ್ತಿ ಮತ್ತು ಸಂಸ್ಥೆಗಳ ಯಶೋಗಾಥೆಗಳೂ ಇವೆ. ರಾಧಾಕೃಷ್ಣನ್, ಪಂಚಶೀಲ ನಿಯಮ ಅನುಸರಿಸಿ ಯಶಸ್ಸು ಗಳಿಸಿದ ಗುಜರಾತಿನ ದಂಪತಿ, ಜೋಗ ಜಲಪಾತ ಮೊದಲಾದ ಹಿನ್ನೆಲೆಯ ಸುಂದರ ಕಥೆಗಳೂ ಇಲ್ಲಿವೆ.

ಇಲ್ಲಿನ ಅಂಕಣಗಳ ಎದ್ದು ಕಾಣುವ ಗುಣವೆಂದರೆ ಸರಳ ವಾಕ್ಯಗಳು; ಜತೆಗೆ ಜನಸಾಮಾನ್ಯರೂ ಸುಲಭವಾಗಿ ಗ್ರಹಿಸಬಲ್ಲ ರೀತಿಯಲ್ಲಿ ಈ ಬರಹಗಳನ್ನು ಪ್ರಸ್ತುತಪಡಿಸಲಾಗಿದೆ. ಸಕಾರಾತ್ಮಕವಾಗಿ ಯೋಚಿಸುವುದನ್ನು ಕಲಿಯಬೇಕೆನಿಸುವವರು 'ಕ್ಷಣ ಹೊತ್ತು ಆಣಿ ಮುತ್ತು' ಪುಸ್ತಕವನ್ನು ಖಂಡಿತವಾಗಿಯೂ ಓದಬಹುದು. ಕನ್ನಡ ಪುಸ್ತಕಗಳನ್ನು ಓದಲು ಮೊದಮೊದಲು ಅಭ್ಯಾಸ ಮಾಡಬಯಸುವವರು, 'ಯಾವ ಪುಸ್ತಕವನ್ನು ಮೊದಲು ಓದಬೇಕು?' ಎಂದು ಸಲಹೆ ಕೇಳಿದಾಗ, ನಾನು ಶಿಫಾರಸು ಮಾಡುವ ಪುಸ್ತಕಗಳಲ್ಲಿ ಇದೂ ಒಂದು.

ವಿಟಾಕೀಸ್

ಮನಸಿಗೆ ಹಿಡಿಸುವ ಮಧ್ಯಮ ವರ್ಗದ ಕಥನ

ಎಲ್ಲರಿಗೂ ಮರ್ಯಾದೆ ಬಲು ಮುಖ್ಯ, ಸಮಾಜದಲ್ಲಿ ಮರ್ಯಾದೆಗೆ ಅಂಜಿ ಜೀವನ ಸಾಗಿಸುತ್ತೇವೆ. ಅದರಲ್ಲಿಯೂ ಮಧ್ಯಮ ವರ್ಗದ ಜೀವನ ಹೇಗಿರುತ್ತದೆ ಎಂಬುದನ್ನು ಮರ್ಯಾದೆ ಪ್ರಶ್ನೆ ಚಿತ್ರದಲ್ಲಿ ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ. ಮಂಜು, ಸೂರಿ, ಸತೀಶ್ ಬಾಲ್ಯದ ಗೆಳೆಯರು. ಒಳ್ಳೆಯ ಜೀವನ ಕಟ್ಟಿಕೊಳ್ಳಬೇಕು ಎಂಬುದು ಈ ಮೂವರ ಕನಸು. ಅದಕ್ಕಾಗಿ ಉದ್ಯೋಗ ಅರಸಿ ಹಣ ಸಂಪಾದಿಸಲು ನಿರ್ಧರಿಸುತ್ತಾರೆ. ಒಳ್ಳೆಯ ದಾರಿಯಲ್ಲಿಯೇ ಹಣ ಸಂಪಾದಿಸಬೇಕು ಎಂಬುದು ಇವರ ಆಸೆ. ಯಾಕೆಂದರೆ ಇವರಿಗೆ ಹಣಕ್ಕಿಂತ ಮರ್ಯಾದೆಯೇ ಮುಖ್ಯವಾಗಿರುತ್ತದೆ. ಹೀಗಿರುವಾಗಲೇ ಮೂವರ ಜೀವನದಲ್ಲಿ ದೊಡ್ಡ ತಿರುವುದು ಬರುತ್ತದೆ, ಅಲ್ಲಿಂದ ಇವರ ಜೀವನದ ದಿಕ್ಕು ಬದಲಾಗುತ್ತದೆ. ಹಾಗಾದರೆ ಈ ಮೂವರು ಅಂದುಕೊಂಡಂತೆ ಹಣ ಸಂಪಾದಿಸಿದರೆ ಉತ್ತಮ ಜೀವ ಕಟ್ಟಿಕೊಂಡರೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಮರ್ಯಾದೆ ಪ್ರಶ್ನೆ ಮಧ್ಯಮ ವರ್ಗದ ಜೀವನದ ನೈಜತೆಯನ್ನು ತೆರೆಯಲ್ಲಿ ತೆರೆದಿಡುತ್ತದೆ. ಹಾಗಾಗಿ ಮಧ್ಯಮ ವರ್ಗದವರಿಗೆ ಬಲು ಬೇಗ ಸಿನಿಮಾದ ಕಥೆ ಕನೆಕ್ಟ್ ಆಗುತ್ತದೆ. ಸಿನಿಮಾ ನೋಡುತ್ತಾ ನಮ್ಮ ಜೀವನದಲ್ಲಿ ನಡೆದ ಘಟನೆಗಳು ಕಣ್ಣಮುಂದೆ ಸಾಗುತ್ತವೆ. ನಮಗೆ ಅರಿವಿಲ್ಲದಂತೆ ಸಿನಿಮಾದ ಜತೆಗೆ ನಾವು ಸಾಗುತ್ತೇವೆ. ನಿರ್ದೇಶಕ ನಾಗರಾಜು ಸೋಮಯಾಜಿ ಒಳ್ಳೆಯ ಕಥೆಯನ್ನು ಆಯ್ದುಕೊಂಡು ಅದನ್ನು ಎಲ್ಲರಿಗೂ ಹಿಡಿಸುವಂತೆ ಕಟ್ಟಿಕೊಟ್ಟಿದ್ದಾರೆ. ಮರ್ಯಾದೆ ಪ್ರಶ್ನೆ ಕೇವಲ ಮಧ್ಯಮ ವರ್ಗದವರಿಗೆ ಸೀಮಿತವಾದ ಸಿನಿಮಾವಲ್ಲ, ಎಲ್ಲರಿಗೂ ಮೆಚ್ಚುಗೆಯಾಗುವ ಚಿತ್ರವಾಗಿದೆ. ಲವ್, ಸೆಂಟಿಮೆಂಟ್, ಕಾಮಿಡಿ ಕಥೆ ಬೆರೆಸಿ ಅದನ್ನು ಎಲ್ಲರಿಗೂ ರುಚಿಸುವಂತೆ ತೆರೆಗೆ ತಂದಿದ್ದಾರೆ. ಕಥೆಗೆ ತಕ್ಕಂತ ಪಾತ್ರಧಾರಿಗಳನ್ನು ಆಯ್ದುಕೊಂಡಿರುವ ನಿರ್ದೇಶಕರ ಜಾಣ್ಮೆಯನ್ನು ಮೆಚ್ಚಲೇಬೇಕು.

ಮಂಜು ಪಾತ್ರದಲ್ಲಿ ಪೂರ್ಣ, ಸೂರಿ ಪಾತ್ರದಲ್ಲಿ ರಾಕೇಶ್ ಅಡಿಗ, ಸತೀಶನ ಪಾತ್ರಕ್ಕೆ ಸುನೀಲ್ ರಾವ್ ಜೀವ ತುಂಬಿ ನಟಿಸಿದ್ದಾರೆ. ತೇಜು ಬೆಳವಾಡಿ ಸಿಂಪಲ್ ಲುಕ್‌ನಲ್ಲಿ ಗಮನಸೆಳೆಯುತ್ತಾರೆ. ಪ್ರಭು ಖಳನ ಪಾತ್ರದಲ್ಲಿ ನಟಿಸಿದ್ದು, ಅಕ್ಷರಶಃ ಮನಗೆಲ್ಲುತ್ತಾರೆ. ಉಳಿದಂತೆ ಶೈನ್ ಶೆಟ್ಟಿ, ನಾಗೇಂದ್ರ ಶಾ, ರೇಖಾ ಕೂಡ್ಲಿಗಿ ಹೀಗೆ ಎಲ್ಲರೂ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಹಾಗಾಗಿ ಸ್ಟಾರ್ ನಟರು ಚಿತ್ರದಲ್ಲಿ ಇಲ್ಲದಿದ್ದರು, ಎಲ್ಲರ ಅದ್ಭುತ ಅಭಿನಯ ಮೆಚ್ಚುಗೆಯಾಗುತ್ತದೆ. ಚಿತ್ರದ ಛಾಯಾಗ್ರಹಣ, ಹಿನ್ನೆಲೆ ಸಂಗೀತಕ್ಕೆ ಫುಲ್ ಮಾರ್ಕ್ಸ್ ನೀಡಬಹುದು.

ಚಿತ್ರ : ಮರ್ಯಾದೆ ಪ್ರಶ್ನೆ
ನಿರ್ದೇಶನ : ನಾಗರಾಜು ಸೋಮಯಾಜಿ
ತಾರಾಗಣ: ಸುನೀಲ್ ರಾವ್, ಪೂರ್ಣ, ರಾಕೇಶ್, ನಾಗೇಂದ್ರ ಶಾ, ತೇಜು ಬೆಳವಾಡಿ, ರೇಖಾ ಕೂಡ್ಲಿಗಿ ಮುಂತಾದವರು.
ರೇಟಿಂಗ್ : 3.5

ಹಣದ ಹಿಂದೆ ಕಣ್ಣಮುಚ್ಚಾಲೆ ಆಟ

ಹಣ ಎಂದರೆ ಯಾರಿಗೆ ತಾನೇ ಇಷ್ಟವಿಲ್ಲ. ಎಲ್ಲರಿಗೂ ಹಣ ಸಂಪಾದಿಸಬೇಕು ಎಂಬ ಆಸೆ ಇದ್ದೇ ಇರುತ್ತದೆ. ಅದರಲ್ಲಿಯೂ ಕೆಲವರಿಗೆ ಅಡ್ಡ ದಾರಿ ಹಿಡಿದಾದರೂ ಹಣ ಮಾಡಬೇಕು ಎಂಬ ದುರಾಸೆ. ಅಂತಹದ್ದೇ ಕಥೆ ಜೀಬ್ರಾ ಚಿತ್ರದಲ್ಲಿದೆ. ಬ್ಯಾಂಕ್‌ನಲ್ಲಿ ಹಣ ಲಪಟಾಯಿಸುವ ಗುಂಪಿನ ಸುತ್ತ ಚಿತ್ರದ ಕಥೆ ಸಾಗುತ್ತದೆ. ಬ್ಯಾಂಕ್‌ನಲ್ಲಿ ನಮ್ಮ ಹಣ ಸುರಕ್ಷಿತ ಎಂದುಕೊಳ್ಳುತ್ತೇವೆ, ಅಲ್ಲಿನ ನೌಕರರು ಹಣವನ್ನು ಸುರಕ್ಷಿತವಾಗಿಡಲು ಹೇಗೆಲಾ ಶ.ಮಿಸುತ್ತಾರೆ, ಅವರ ನಡುವೆಯೂ ಕೆಲವು ನರಿ ಬುದ್ಧಿಯ ವ್ಯಕ್ತಿಗಳಿರುತ್ತಾರೆ ಎಂಬುದನ್ನು ಜೀಬ್ರಾದಲ್ಲಿ ರೋಚಕವಾಗಿ ಕಟ್ಟಿಕೊಡಲಾಗಿದೆ. ನಿರ್ದೇಶಕ ಈಶ್ವರ್ ಕಾರ್ತಿಕ್ ಸಸ್ಪೆನ್ಸ್, ಥ್ರಿಲ್ಲಿಂಗ್, ಆ್ಯಕ್ಷನ್ ಜತೆಗೆ ಕಾಮಿಡಿ ಅಂಶಗಳನ್ನು ಬೆರೆಸಿ ಕುತೂಹಲಭರಿತವಾಗಿ ತೆರೆಗೆ ತಂದಿದ್ದಾರೆ.

ಡಾಲಿ ಧನಂಜಯ ಗ್ಯಾಂಗ್‌ಸ್ಟರ್ ಆಗಿ ಅದ್ಭುತವಾಗಿ ನಟಿಸಿದ್ದಾರೆ. ಇಲ್ಲಿಯೂ ಅಮೃತಾ ಅಯ್ಯಂಗಾರ್, ಡಾಲಿಗೆ ಜತೆಯಾಗಿ ಅಭಿನಯಿಸಿದ್ದಾರೆ. ಸತ್ಯ ದೇವ್ ಬ್ಯಾಂಕ್ ಉದ್ಯೋಗಿಯಾಗಿ ಕಾಣಿಸಿಕೊಂಡಿದ್ದು ತಮ್ಮ ಪಾತ್ರಕ್ಕೆ ಜೀವ ತುಂಬಿದ್ದಾರೆ. ಪ್ರಿಯಾ ಭವಾನಿ ಕೂಡ ಬ್ಯಾಂಕ್ ನೌಕರರಾಗಿ ಪಾತ್ರದ ನಿರ್ವಹಿಸಿದ್ದು ಮೆಚ್ಚುವ ಅಭಿನಯ ತೋರಿದ್ದಾರೆ. ಕಟ್ಟಪ್ಪ ಖ್ಯಾತಿಯ ಸತ್ಯರಾಜ್ ವಿಶೇಷ ಪಾತ್ರದಲ್ಲಿ ನಟಿಸಿದ್ದು ಮನಸೂರೆಗೊಳ್ಳುತ್ತಾರೆ. ಗರುಡ ರಾಮ್, ಸುನೀಲ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಚಿತ್ರದ ಹಿನ್ನೆಲೆ ಸಂಗೀತ ಕಥೆಗೆ ಪೂರಕವಾಗಿದೆ. ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಮಾಸ್ ಕ್ಲಾಸ್ ಪ್ರಿಯರಿಗೆ ಜೀಬ್ರಾ ಖಂಡಿತಾ ಹಿಡಿಸಲಿದೆ.

ಚಿತ್ರ : ಜೀಬ್ರಾ
ನಿರ್ದೇಶನ : ಈಶ್ವರ್ ಕಾರ್ತಿಕ್
ನಿರ್ಮಾಣ : ಓಲ್ಡ್ ಟೌನ್ ಪಿಕ್ಚರ್, ಪದ್ಮಜಾ ಫಿಲಂಸ್
ತಾರಾಗಣ : ಡಾಲಿ ಧನಂಜಯ, ಸತ್ಯರಾಜ್, ಸತ್ಯದೇವ್, ಪ್ರಿಯಾ, ಅಮೃತಾ ಗರುಡರಾಮ್, ಸುನೀಲ್ ಮುಂತಾದವರು.
ರೇಟಿಂಗ್ : 3

ಪ್ರೀತಿಯ ತೊಳಲಾಟ

ಚಿತ್ರ : ಆರಾಮ್ ಅರವಿಂದ ಸ್ವಾಮಿ
ನಿರ್ದೇಶನ : ಅಭಿಷೇಕ್ ಶೆಟ್ಟಿ
ತಾರಾಗಣ : ಅನೀಶ್, ಮಿಲನಾ, ಹೃತಿಕಾ, ಗೌರವ್ ಶೆಟ್ಟಿ, ಅಚ್ಯುತ್ ಕುಮಾರ್, ಗೌರವ್ ಶೆಟ್ಟಿ ಮುಂತಾದವರು
ರೇಟಿಂಗ್ : 3.5

ಜೀವನ ಆರಾಮಾಗಿದ್ದರೆ ಅದೇ ಭಾಗ್ಯ, ಅದೇ ಜೀವನದಲ್ಲಿ ನೂರಾರು ನೋವು ಸವಾಲುಗಳು ಬಂದರೆ ಹೇಗೆ ನಮ್ಮ ಜೀವನದ ದಿಕ್ಕು ಬದಲಾಗುತ್ತದೆ ಎಂಬುದನ್ನು ಆರಾಮ್ ಅರವಿಂದ ಸ್ವಾಮಿ ಚಿತ್ರದಲ್ಲಿ ಹೇಳಲಾಗಿದೆ. ನಾಯಕ ಹಳ್ಳಿಯ ಮುಗ್ಧ ಯುವಕ. ವ್ಯಾಸಂಗಕ್ಕೆಂದು ನಗರಕ್ಕೆ ಬರುವ ನಾಯಕ, ಪ್ರೀತಿಯಲ್ಲಿ ಬೀಳುತ್ತಾನೆ. ಅಲ್ಲಿಂದ ಪಜೀತಿ ಶುರುವಾಗುತ್ತದೆ. ತನ್ನ ಹಿನ್ನೆಲೆಯನ್ನು ಹೇಳಿಕೊಳ್ಳಲಾಗದೆ ಸಂಕಟಕ್ಕೆ ಸಿಲುಕಿ ತೊಳಲಾಡುತ್ತಾನೆ. ಆದರೂ ಆರಾಮಾಗೆ ಇರುತ್ತಾನೆ. ಇತ್ತ ಮೆಚ್ಚಿದ ಹುಡುಗಿಯನ್ನು ಕೈ ಬಿಡುವಂತಿಲ್ಲ. ಅಂತು ಹಾಗೋ ಹೀಗೋ ಮನಸಿಗೆ ಒಪ್ಪಿದಾಕೆಯನ್ನು ಮದುವೆಯಾಗಲು ನಿರ್ಧರಿಸಿರುತ್ತಾನೆ. ಅಲ್ಲಿಂದ ಸಿನಿಮಾ ಹೊಸ ತಿರುವು ಪಡೆದುಕೊಳ್ಳುತ್ತದೆ. ಮೊದಲಾರ್ಧ ಕೊಂಚ ಬೋರ್ ಹೊಡೆಸಿದರು, ದ್ವಿತಿಯಾರ್ಧದಲ್ಲಿ ಚಿತ್ರ ಟ್ವಿಸ್ಟ್ ಮೇಲೆ ಟ್ವಿಸ್ಟ್ ಪಡೆಯುತ್ತಾ ಸಾಗುತ್ತಾ, ಪ್ರೇಕ್ಷಕರನ್ನು ಹಿಡಿದು ಕೂರಿಸುತ್ತದೆ. ಹಾಗಾದರೆ ನಾಯಕ ಪ್ರೀತಿಸಿದವಳನ್ನೇ ವರಿಸುತ್ತಾನಾ, ಈ ನಡುವೆ ಆತನಿಗೆ ಯಾವೆಲ್ಲಾ ವಿಘ್ನಗಳು ಎದುರಾಗುತ್ತವೆ ಎಂಬುದನ್ನು ಸಿನಿಮಾ ನೋಡಿ ತಿಳಿದರೆ ಚೆಂದ. ಇಲ್ಲಿ ಲವ್, ಇದೆ, ಸೆಂಟಿಮೆಂಟ್ ಇದೆ, ಹೊಟ್ಟೆ ಹುಣ್ಣಾಗಿಸುವಂತೆ ನಗಿಸುವ ಕಾಮಿಡಿ ಸನ್ನಿವೇಶಗಳೂ ಇವೆ ಅದೆಲ್ಲವನ್ನೂ ಹದವಾಗಿ ಬೆರೆಸಿರುವ ನಿರ್ದೇಶಕ ಅಭಿಷೇಕ್ ಶೆಟ್ಟಿ ಎಲ್ಲರಿಗೂ ಒಪ್ಪಿಗೆಯಾಗುವಂತೆ ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿ ಸಂದೇಶಕ್ಕಿಂತ ಮನರಂಜನೆಯೇ ಮುಖ್ಯವಾಗಿದೆ.

ಇಷ್ಟು ದಿನ ಮಾಸ್ ಸಿನಿಮಾಗಳಲ್ಲಿ ಮಿಂಚಿದ್ದ ಅನೀಶ್ ತೇಜೇಶ್ವರ್ ಈ ಚಿತ್ರದಲ್ಲಿ ಲವ್ವರ್ ಬಾಯ್ ಆಗಿ ಮಿಂಚಿದ್ದಾರೆ. ತಮಗೆ ವಹಿಸಿದ ಜವಾಬ್ದಾರಿಯನ್ನು ಬಲು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಮಿಲನಾ ನಾಗರಾಜ್ ಇಲ್ಲಿಯೂ ವಿಭಿನ್ನ ಪಾತ್ರದಲ್ಲಿ ನಟಿಸಿ ಮನಸೂರೆಗೊಂಡಿದ್ದಾರೆ. ಪ್ರೀತಿಸಿದವನನ್ನು ಮದುವೆಯಾಗಲಾಗದೆ ಕೊರಗುವ ಯುವತಿಯ ಪಾತ್ರದಲ್ಲಿ ಅದ್ಭುತವಾಗಿ ಅಭಿನಯಿಸಿದ್ದಾರೆ. ಹೃತಿಕಾ ಶ್ರೀನಿವಾಸ್ ಕೂಡ ತಮ್ಮ ಪಾತ್ರಕ್ಕೆ ಜೀವತುಂಬಿದ್ದಾರೆ. ಅಚ್ಯುತ್ ಕುಮಾರ್ ಅವರನ್ನು ತೆರೆಯಲ್ಲಿ ನೋಡುವುದೇ ಆನಂದ. ಇನ್ನು ಗೌರವ್ ಶೆಟ್ಟಿ, ವಿಕ್ಕಿ ಕಾಮಿಡಿ ಕಮಾಲ್ ಮಾಡಿದ್ದಾರೆ. ಚಿತ್ರದ ಹಾಡುಗಳು ಸಿನಿಮಾ ನೋಡಿ ಬಂದ ಮೇಲೂ ಮನದಲ್ಲಿ ಗುನುಗುತ್ತವೆ. ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕೆ ಶಕ್ತಿ ತುಂಬಿದೆ. ಶಿವಸಾಗರ್ ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಆರಾಮ್ ಅರವಿಂದ ಸ್ವಾಮಿಯನ್ನು ಮನೆಮಂದಿಯೆಲ್ಲಾ ಕುಳಿತು ನೋಡಿ ಆನಂದಿಸಬಹುದು.